ಬುಧವಾರ, ನವೆಂಬರ್ 16, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 316 | ಪುಟ 14

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ: 800 ಕೋಟಿ ದಾಟಿದ ಜಾಗತಿಕ ಜನಸಂಖ್ಯೆ

ಇಂದು: ತಂತ್ರಜ್ಞಾನ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,872 ▲	18,403 ▲	₹ 54,380 (ಬೆಂಗಳೂರು) ▲	₹ 64,000 (ಬೆಂಗಳೂರು) ▲	80.91 ▲

ಪೋಲೆಂಡ್‌ಗೆ ಅಪ್ಪಳಿಸಿದ ರಷ್ಯಾ ಕ್ಷಿಪಣಿ: 2 ಸಾವು

ಕೀವ್ (ಎಪಿ): ರಷ್ಯಾದ ಕ್ಷಿಪಣಿಯೊಂದು ಮಂಗಳವಾರ ಸಂಜೆ ಉಕ್ರೇನ್ ಗಡಿ ದಾಟಿ ನ್ಯಾಟೊ ಸದಸ್ಯ ರಾಷ್ಟ್ರ ಪೋಲೆಂಡ್‌ನ ಪ್ರೆಜ್ವೆಡೊವ್ ಎಂಬಲ್ಲಿಗೆ ಅಪ್ಪಳಿಸಿದ್ದು, ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ ಎಂದು ಅಮೆರಿಕದ ಗುಪ್ತಚರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒಳ ಪುಟ

ಬಸ್ ನಿಲ್ದಾಣದ 'ಗುಂಬಜ್' ತೆರವಿಗೆ ಸಿದ್ಧ: ಪ್ರತಾಪ್ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಯುದ್ಧದಿಂದಾಗಿ ಪೂರೈಕೆಗೆ ಹಿನ್ನಡೆ: ಜಾಗತಿಕ ನಾಯಕರಿಗೆ ಪ್ರಧಾನಿ ಎಚ್ಚರಿಕೆ

ರಸಗೊಬ್ಬರ ಕೊರತೆಯಿಂದ ಆಹಾರ ಬಿಕ್ಕಟ್ಟು: ಮೋದಿ

ಬಾಲಿ (ಪಿಟಿಐ): ಇಂದು ಜಗತ್ತನ್ನು ಕಾಡುತ್ತಿರುವ ರಸಗೊಬ್ಬರ ಕೊರತೆಯು ನಾಳೆ ಆಹಾರ ಬಿಕ್ಕಟ್ಟಾಗಿ ಪರಿವರ್ತನೆ ಆಗಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಎಚ್ಚರಿಸಿದ್ದಾರೆ.

ಈ ಸಮಸ್ಯೆ ಪರಿಹಾರಕ್ಕಾಗಿ ರಸಗೊಬ್ಬರ ಮತ್ತು ಆಹಾರ ಧಾನ್ಯ ಪೂರೈಕೆಯು ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಅವರು ಸಲಹೆ ಕೊಟ್ಟಿದ್ದಾರೆ.

ಇಂಡೊನೇಷ್ಯಾದ ಬಾಲಿಯಲ್ಲಿ ನಡೆಯುತ್ತಿರುವ ಜಿ–20 ದೇಶಗಳ ಶೃಂಗಸಭೆಯನ್ನು ಉದ್ದೇಶಿಸಿ ಮೋದಿ ಅವರು ಮಾತನಾಡಿದರು.

'ರಸಗೊಬ್ಬರ ಕೊರತೆಯು ಆಹಾರ ಸಮಸ್ಯೆಯಾಗಿ ಪರಿವರ್ತನೆ ಆದರೆ, ಈ ಸಮಸ್ಯೆಗೆ ಜಗತ್ತಿನ ಬಳಿ ಪರಿಹಾರವೇ ಇಲ್ಲ ಎಂದು ಮೋದಿ ಹೇಳಿದ್ದಾರೆ. ರಸಗೊಬ್ಬರ ಮತ್ತು ಆಹಾರ ಧಾನ್ಯಗಳ ಪೂರೈಕೆ ಸರಪಣಿಯು ಸುಗಮವಾಗಿ ಕಾರ್ಯನಿರ್ವಹಿಸುವುದಕ್ಕಾಗಿ ನಾವು ಪರಸ್ಪರ ಒಪ್ಪಂದಗಳನ್ನು ಮಾಡಿಕೊಳ್ಳಬೇಕು. ಭಾರತವು ಆಹಾರ ಭದ್ರತೆಯ ಸುಸ್ಥಿರತೆಗಾಗಿ ಸಹಜ ಕೃಷಿ ಮತ್ತು ಸಾಂಪ್ರದಾಯಿಕವಾದ ಸಿರಿಧಾನ್ಯ ಬಳಕೆಯನ್ನು ಉತ್ತೇಜಿಸುತ್ತಿದೆ' ಎಂದು ಮೋದಿ ವಿವರಿಸಿದ್ದಾರೆ.



ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಜಿ–20 ಶೃಂಗಸಭೆಯಲ್ಲಿ ಮಂಗಳವಾರ ಭೇಟಿಯಾದರು ಪಿಟಿಐ ಚಿತ್ರ

11ನೇ ಪುಟ ನೋಡಿ

ತೊಡಕು ನಿವಾರಿಸಿ: ವಿಶ್ವಸಂಸ್ಥೆ ಪತ್ರ

ರಷ್ಯಾದ ರಸಗೊಬ್ಬರ ಮತ್ತು ಆಹಾರ ಧಾನ್ಯಗಳ ರಫ್ತಿಗೆ ಇರುವ ತೊಡಕುಗಳನ್ನು ನಿವಾರಿಸಬೇಕು ಎಂದು ಅಮೆರಿಕ ಹಾಗೂ ಐರೋಪ್ಯ ಒಕ್ಕೂಟಕ್ಕೆ ಪತ್ರ ಬರೆದಿರುವುದಾಗಿ ವಿಶ್ವಸಂಸ್ಥೆಯು ತಮಗೆ ತಿಳಿಸಿದೆ ಎಂದು ರಷ್ಯಾದ ವಿದೇಶಾಂಗ ಸಚಿವ ಸರ್ಗೈ ಲಾವ್ರೋವ್ ಹೇಳಿದ್ದಾರೆ.

11ನೇ ಪುಟ ನೋಡಿ

ಮೌಲ್ಯಮಾಪನ ಪ್ರಮಾದ: 9 ಉಪನ್ಯಾಸಕರ ಅಮಾನತು

● ರಾಜೇಶ್ ರೈ ಚಟ್ಲ

ಬೆಂಗಳೂರು: ಇದೇ ಏಪ್ರಿಲ್– ಮೇ ತಿಂಗಳಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಯ ಮೌಲ್ಯಮಾಪಕ, ಸಹಾಯಕ ಮೌಲ್ಯಮಾಪಕ, ಉಪ ಮುಖ್ಯಮೌಲ್ಯಮಾಪಕ, ಮರು ಮೌಲ್ಯಮಾಪಕರಾಗಿದ್ದ ಸಂದರ್ಭದಲ್ಲಿ ಕರ್ತವ್ಯಲೋಪ ಎಸಗಿದ ಆರೋಪದಲ್ಲಿ 9 ಉಪನ್ಯಾಸಕರನ್ನು ಪದವಿಪೂರ್ವ ಶಿಕ್ಷಣ ಇಲಾಖೆ ಅಮಾನತು ಮಾಡಿದೆ.

ಅಲ್ಲದೆ, ಖಾಸಗಿ ಅನುದಾನರಹಿತ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರೊಬ್ಬರ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳುವಂತೆ ಆ ಕಾಲೇಜಿನ ಆಡಳಿತ ಮಂಡಳಿಗೆ ಸೂಚಿಸಿದೆ.

ವಿದ್ಯಾರ್ಥಿಯೊಬ್ಬರ ಭೌತವಿಜ್ಞಾನ ವಿಷಯದ ಉತ್ತರ ಪತ್ರಿಕೆಯ ಕೊನೆಯ 7 ಪುಟಗಳನ್ನು ಮರು ಮೌಲ್ಯಮಾಪನ ಮಾಡಿಲ್ಲ ಎಂಬ ಆರೋಪದಲ್ಲಿ, ಆ ವಿಷಯದ ಉಪನ್ಯಾಸಕರಾದ ಕರೂರು ಪ್ರಕಾಶ್, ಬಿ.ಪಿ. ಕಲ್ಲಪ್ಪ, ಎಂ. ಚಂದ್ರಶೇಖರ್, ಉಪಮುಖ್ಯ ಮೌಲ್ಯಮಾಪಕರಾಗಿದ್ದ ಎಂ. ಶಂಕರಪ್ಪ ಎಂಬುವರನ್ನು ಇಲಾಖೆಯ ನಿರ್ದೇಶಕ ಆರ್. ರಾಮಚಂದ್ರನ್ ಅಮಾನತು ಮಾಡಿದ್ದಾರೆ.

ಅದೇ ಉತ್ತರ ಪತ್ರಿಕೆಗೆ ಸಹಾಯಕ ಮೌಲ್ಯಮಾಪಕರಾಗಿದ್ದ ಖಾಸಗಿ ಅನುದಾನರಹಿತ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿ ಎಂ.ಪಿ. ಶ್ರುತಿ ವಿರುದ್ಧ ಶಿಸ್ತುಕ್ರಮ ತೆಗೆದುಕೊಂಡು, ಆ ಬಗ್ಗೆ 15 ದಿನಗಳ ಒಳಗೆ ವರದಿ ನೀಡುವಂತೆ ಆಡಳಿತ ಮಂಡಳಿಗೆ ನಿರ್ದೇಶನ ನೀಡಿದ್ದಾರೆ.

ಮತ್ತೊಬ್ಬ ವಿದ್ಯಾರ್ಥಿಯ ಇಂಗ್ಲಿಷ್ ವಿಷಯದ ಉತ್ತರ ಪತ್ರಿಕೆಯ ಕೊನೆಯ ಒಂಬತ್ತು ಪುಟಗಳನ್ನು ಮೌಲ್ಯಮಾಪನ ಮಾಡಿಲ್ಲ ಎಂಬ ಆರೋಪದಲ್ಲಿ ಮೌಲ್ಯಮಾಪಕರಾಗಿದ್ದ ಬಸವರಾಜು ನಾಗನಾಥ, ಉಪ ಮುಖ್ಯ ಮೌಲ್ಯಮಾಪಕರಾಗಿದ್ದ ಪೋಲಾರ್ ಸಿದ್ಧರಾಮ್ ಚಂದ್ರಮ್, ಮರು ಮೌಲ್ಯಮಾಪಕರಾಗಿದ್ದ ಡಿ.ಎ. ಯಾಸ್ಮಿನ್ ಜಹಾ, ಪಿ. ಕರೇಗೌಡ, ಎಸ್.ಸಿ. ದಯಾನಂದ ಎಂಬ ಐವರು ಉಪನ್ಯಾಸಕರನ್ನು ಆರ್. ರಾಮಚಂದ್ರನ್ ಅವರು ಅಮಾನತು ಮಾಡಿದ್ದಾರೆ.

'ಸರ್ಕಾರಿ ಮತ್ತು ಅನುದಾನಿತ ಪದವಿಪೂರ್ವ ಕಾಲೇಜುಗಳಿಗೆ ಇಲಾಖೆಯ ನಿರ್ದೇಶಕರೇ ಶಿಸ್ತು ಪ್ರಾಧಿಕಾರಿ. ಹೀಗಾಗಿ, ಅವರು ಕರ್ತವ್ಯಲೋಪ ಎಸಗಿದ ಆರೋಪದಲ್ಲಿ ಈ ಕಾಲೇಜುಗಳ ಉಪನ್ಯಾಸಕರಿಗೆ ಕಾರಣ ಕೇಳಿ ನೋಟಿಸ್ ನೀಡಿದ್ದರು. ಅದಕ್ಕೆ ಉಪನ್ಯಾಸಕರು ಲಿಖಿತ ಸಮಜಾಯಿಷಿಯನ್ನೂ ನೀಡಿದ್ದರು. ಆದರೆ, ಅದನ್ನು ಒಪ್ಪದೆ, ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ. ಇದೇ ಆರೋಪ ಎದುರಿಸುತ್ತಿರುವ ಶ್ರುತಿ ಅವರು ಖಾಸಗಿ ಅನುದಾನರಹಿತ ಕಾಲೇಜಿನ ಉಪನ್ಯಾಸಕಿ. ಹೀಗಾಗಿ, ಸಂಸ್ಥೆಯ ಆಡಳಿತ ಮಂಡಳಿಗೆ ನೋಟಿಸ್ ನೀಡಲಾಗಿದೆ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಉಪನ್ಯಾಸಕರ ಮಾಡಿದ ತಪ್ಪೇನು?: ಉತ್ತರಪತ್ರಿಕೆಯು ಒಟ್ಟು 44 ಪುಟಗಳನ್ನು ಹೊಂದಿದೆ.

5ನೇ ಪುಟ ನೋಡಿ

ವಾಕ್ ಸ್ವಾತಂತ್ರ್ಯ ನಿರ್ಬಂಧಿಸಬಹುದೇ?

ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್‌ನ ಪೀಠ

ನವದೆಹಲಿ (ಪಿಟಿಐ): ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕ ಜೀವನದಲ್ಲಿರುವ ಪ್ರಮುಖರ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯದ ಮೇಲೆ ನಿರ್ಬಂಧ ಹೇರಬಹುದೇ ಎಂಬುದಕ್ಕೆ ಸಂಬಂಧಿಸಿದ ತೀರ್ಪನ್ನು ಸುಪ್ರೀಂ ಕೋರ್ಟ್ ಮಂಗಳವಾರ ಕಾಯ್ದಿರಿಸಿತು.

ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠವು ಈ ವಿಷಯಕ್ಕೆ ಸಂಬಂಧಿಸಿದಂತೆ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹಾಗೂ ಅರ್ಜಿದಾರರ ಪರ ವಕೀಲರ ವಾದಗಳನ್ನು ಆಲಿಸಿತು.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಎ.ಎಸ್.ಬೋಪಣ್ಣ, ವಿ. ರಾಮಸುಬ್ರಹ್ಮಣಿಯನ್ ಮತ್ತು ಬಿ.ವಿ. ನಾಗರತ್ನ ಅವರು ಪೀಠದ ಇತರ ಸದಸ್ಯರಾಗಿದ್ದರು.

'ಜನಪ್ರತಿನಿಧಿಗಳಿಗೆ ನಾವು ಹೇಗೆ ತಾನೇ ನೀತಿ ಸಂಹಿತೆ ರೂಪಿಸಲು ಸಾಧ್ಯ? ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರ ವ್ಯಾಪ್ತಿ ಕುರಿತಂತೆ ನಾವು ಹಸ್ತಕ್ಷೇಪ ಮಾಡಿದಂತಾಗುವುದಿಲ್ಲವೇ?' ಎಂದು ನ್ಯಾಯಮೂರ್ತಿ ಗವಾಯಿ ಅವರು ವಿಚಾರಣೆ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು.

ಸಂವಿಧಾನದ ತತ್ವಗಳ ಅನುಸಾರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಯಾವುದೇ ಸೇರ್ಪಡೆ ಅಥವಾ ನಿಬಂಧನೆಗಳ ಪರಿಷ್ಕರಣೆ ಕುರಿತ ಪ್ರಸ್ತಾವ ಸಂಸತ್ತಿನಿಂದಲೇ ಬರಬೇಕಾಗಿದೆ ಎಂದು ಅಟಾರ್ನಿ ಜನರಲ್ ಅವರು ಪೀಠದ ಗಮನಕ್ಕೆ ತಂದರು.

ಸಂವಿಧಾನದ 21ನೇ ವಿಧಿಯನ್ನು ಉಲ್ಲೇಖಿಸಿ ನಿರ್ದಿಷ್ಟ ಹೇಳಿಕೆಗೆ ಸಂಬಂಧಿಸಿದಂತೆ ಕ್ರಮವನ್ನು ಕೋರಿ ರಿಟ್ ಅರ್ಜಿಯನ್ನು ಸಲ್ಲಿಸಲು ಅವಕಾಶವಿದೆಯೇ ಎಂಬುದು ಸಹಜ ಚರ್ಚೆಯನ್ನು ಮೀರಿದ ಅಂಶವಾಗಿದೆ ಎಂದು ಮೆಹ್ತಾ ಅಭಿಪ್ರಾಯಪಟ್ಟರು.

ಸಚಿವ ಶ್ರೀರಾಮುಲುಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ವಾಲ್ಮೀಕಿ ಸಮಾಜದಲ್ಲದವರಿಗೂ ಪರಿಶಿಷ್ಟ ಪಂಗಡ ಪ್ರಮಾಣಪತ್ರ ನೀಡುವುದನ್ನು ಖಂಡಿಸಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ಮುಖಂಡರು ಮಂಗಳವಾರ ಸಚಿವ ಶ್ರೀರಾಮುಲು ಅವರಿಗೆ ಮುತ್ತಿಗೆ ಹಾಕಿದರು.

ಬಿಜೆಪಿ ಹಮ್ಮಿಕೊಳ್ಳಲಿರುವ ಎಸ್‌ಟಿ ಸಮಾವೇಶದ ಪೂರ್ವಭಾವಿ ಸಭೆಗೆ ಬಂದಿದ್ದ ಅವರಿಗೆ, ಕೂಡಲೇ ರಾಜ್ಯದಲ್ಲಿ ಆಗಿರುವ ಗೊಂದಲವನ್ನು ಸರಿಪಡಿಸಬೇಕು ಎಂದು ಆಗ್ರಹಪಡಿಸಿದರು.

ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಇಲ್ಲದ ಕೋಲಿ ಸಮುದಾಯದವರಿಗೂ ಎಸ್.ಟಿ. ಪ್ರಮಾಣಪತ್ರವನ್ನು ತಹಶೀಲ್ದಾರ್‌ಗಳು ನೀಡುತ್ತಿದ್ದಾರೆ. ಅದನ್ನು ಕೂಡಲೇ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಕೂಡಲೇ ಸ್ಪಂದಿಸಿದ ಸಚಿವ ಶ್ರೀರಾಮುಲು, 'ಜಿಲ್ಲಾಧಿಕಾರಿಗೆ ಮೊಬೈಲ್ ಕರೆ ಮಾಡಿ, ಪ್ರಮಾಣಪತ್ರ ನೀಡುವುದನ್ನು ನಿಲ್ಲಿಸಲು ಸೂಚಿಸಿ. ಮುಖ್ಯಮಂತ್ರಿ ಅವರೊಂದಿಗೆ ಮಾತನಾಡುವೆ' ಎಂದರು. ಹಾಗೆಯೇ ಮೀಸಲಾತಿ ಹೆಚ್ಚಳ ಮಾಡಿದರೂ ತಮಗೆ ಸನ್ಮಾನಿಸದ್ದಕ್ಕೆ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಅನರ್ಹರಿಗೆ ಎಸ್‌ಟಿ ಪ್ರಮಾಣಪತ್ರ: ಕಲಬುರಗಿ, ಬೀದರ್‌ನಲ್ಲಿ ಪ್ರತಿಭಟನೆ

ಕಲಬುರಗಿ: 'ವಾಲ್ಮೀಕಿ ಸಮುದಾಯಕ್ಕೆ ದಕ್ಕಬೇಕಾದ ಪರಿಶಿಷ್ಟ ಪಂಗಡ (ಎಸ್‌ಟಿ) ಪ್ರಮಾಣಪತ್ರವನ್ನು ಪ್ರವರ್ಗ–1ರಲ್ಲಿ ಬರುವ ಕೆಲ ಜಾತಿಯವರು ಮತ್ತು ಮೇಲ್ವರ್ಗದವರಿಗೆ ಕೊಡುವುದನ್ನು ತಡೆಯಬೇಕು' ಎಂದು ಒತ್ತಾಯಿಸಿ ರಾಜ್ಯ ಎಸ್‌ಸಿ, ಎಸ್‌ಟಿ ನಕಲಿ ಜಾತಿ ಪ್ರಮಾಣಪತ್ರಗಳ ತಡೆ ಸಮಿತಿಯ ಕಾರ್ಯಕರ್ತರು ಕಲಬುರಗಿ ಹಾಗೂ ಬೀದರ್‌ನಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

'ವಾಲ್ಮೀಕಿ ಜನಾಂಗದ ಪರ್ಯಾಯ ಪದಗಳಾದ ತಳವಾರ ಮತ್ತು ಪರಿವಾರ ಜನಾಂಗದವರಿಗೆ ಎಸ್‌ಟಿ ಜಾತಿ ಪ್ರಮಾಣಪತ್ರಕ್ಕೆ ಬದಲು ಪ್ರವರ್ಗ–1ರ ಹಿಂದುಳಿದ ಜಾತಿಯಲ್ಲಿ ಬರುವ ಕೋಲಿ, ಕಬ್ಬಲಿಗ ತಳವಾರ ಜಾತಿಯವರಿಗೆ ತಹಶೀಲ್ದಾರ್‌ಗಳು ಎಸ್‌ಟಿ ಪ್ರಮಾಣಪತ್ರ ನೀಡುತ್ತಿದ್ದಾರೆ.

11ನೇ ಪುಟ ನೋಡಿ

ಆರು ಸಾಧಕರಿಗೆ ಇನ್ಫೊಸಿಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರೊ. ಮಹೇಶ್ ಕಾಕಡೆ ಹಾಗೂ ಪ್ರೊ.ಸುಧೀರ್ ಕೃಷ್ಣಸ್ವಾಮಿ ಸೇರಿ ಆರು ಸಾಧಕರಿಗೆ 'ಇನ್ಫೊಸಿಸ್ ಪ್ರಶಸ್ತಿ–2022' ಪ್ರಕಟಿಸಲಾಗಿದೆ.

ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಟ್ರಸ್ಟಿಗಳಾದ ಕ್ರಿಸ್ ಗೋಪಾಲಕೃಷ್ಣನ್, ನಾರಾಯಣ ಮೂರ್ತಿ ಅವರು ಪತ್ರಿಕಾಗೋಷ್ಠಿಯಲ್ಲಿ ಎಂಜಿನಿಯರಿಂಗ್– ಗಣಕ ವಿಜ್ಞಾನ, ಮಾನವಿಕ, ಜೀವ ವಿಜ್ಞಾನ, ಗಣಿತ ವಿಜ್ಞಾನ, ಭೌತ ವಿಜ್ಞಾನ, ಸಮಾಜ ವಿಜ್ಞಾನ ವಿಭಾಗದ ಪ್ರಶಸ್ತಿ ಪುರಸ್ಕೃತರ ಹೆಸರನ್ನು ಮಂಗಳವಾರ ಪ್ರಕಟಿಸಿದರು.

ಪ್ರಶಸ್ತಿಯು ಚಿನ್ನದ ಪದಕ, ಸ್ಮರಣಿಕೆ ಹಾಗೂ ಸುಮಾರು ₹ 81 ಲಕ್ಷ (ಒಂದು ಲಕ್ಷ ಡಾಲರ್) ನಗದು ಬಹುಮಾನ ಒಳಗೊಂಡಿದೆ. ಮಹೇಶ್ ಕಾಕಡೆ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರೊಫೆಸರ್ ಆಗಿದ್ದು, ಬೀಜಗಣಿತ ಸಂಖ್ಯಾಸೂತ್ರದಲ್ಲಿನ ಸಾಧನೆಗೆ ಗಣಿತ ವಿಜ್ಞಾನ ವಿಭಾಗದಲ್ಲಿ ಅವರಿಗೆ ಪ್ರಶಸ್ತಿ ಸಂದಿದೆ.

ಮಹೇಶ್ ಕಾಕಡೆ

ಸುಧೀರ್ ಕೃಷ್ಣಸ್ವಾಮಿ

ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಕುಲಪತಿ ಸುಧೀರ್ ಕೃಷ್ಣಸ್ವಾಮಿ ಅವರು, ಸುಪ್ರೀಂ ಕೋರ್ಟ್ 1973ರಲ್ಲಿ ರೂಪಿಸಿದ 'ಸಂವಿಧಾನದ ಮೂಲ ಸ್ವರೂಪ'ದ ತಾತ್ವಿಕತೆ ಬಗ್ಗೆ ಮಾಡಿರುವ ಬರವಣಿಗೆಗೆ ಮಾನವಿಕ ವಿಭಾಗದಲ್ಲಿ ಪ್ರಶಸ್ತಿ ನೀಡಲಾಗಿದೆ.

5ನೇ ಪುಟ ನೋಡಿ

ಲಂಚ: ಕೆಎಎಸ್ ಅಧಿಕಾರಿ ವರ್ಷಾ ಒಡೆಯರ್ ಬಂಧನ

ವರ್ಷಾ

ಬೆಂಗಳೂರು: ಜಮೀನಿನ ಖಾತೆ ಬದಲಾವಣೆಗೆ ₹ 5 ಲಕ್ಷ ಲಂಚ ಪಡೆಯುತ್ತಿದ್ದ ಕೆಎಎಸ್ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕಿನ ವಿಶೇಷ ತಹಶೀಲ್ದಾರ್ ವರ್ಷಾ ಒಡೆಯರ್ ಹಾಗೂ ಮಧ್ಯವರ್ತಿ ರಮೇಶ್ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಸಂಜೆ ಬಂಧಿಸಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿ ವ್ಯಾಪ್ತಿಯ ಕೆಂಗನಹಳ್ಳಿ ಗ್ರಾಮದಲ್ಲಿ ಲಲಿತ್ ಕುಮಾರ್ ಎಂಬುವವರಿಂದ 2 ಎಕರೆ ಜಮೀನು ಖರೀದಿಸಿದ್ದರು. ಆದರೆ, ಲಲಿತ್ ಅವರ ಹೆಸರೇ ಪಹಣಿಯಲ್ಲಿ ನಮೂದಾಗಿರಲಿಲ್ಲ. ಅವರ ಪರವಾಗಿ ಕಾಂತರಾಜು ಉಪ ವಿಭಾಗಾಧಿಕಾರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಪಹಣಿಯಲ್ಲಿ ಲಲಿತ್ ಹೆಸರು ನಮೂದಿಸುವಂತೆ ಉಪ ವಿಭಾಗಾಧಿಕಾರಿ ನ್ಯಾಯಾಲಯ ಅ.22ರಂದು ಆದೇಶ ಹೊರಡಿಸಿತ್ತು.

ಉಪ ವಿಭಾಗಾಧಿಕಾರಿ ಆದೇಶದಂತೆ ಪಹಣಿ ತಿದ್ದುಪಡಿಗೆ ಕಾಂತರಾಜು ಅರ್ಜಿ ಸಲ್ಲಿಸಿದ್ದರು. ಪ್ರತಿ ಎಕರೆಗೆ ₹ 5 ಲಕ್ಷದಂತೆ ₹ 10 ಲಕ್ಷ ಲಂಚ ನೀಡುವಂತೆ ವಿಶೇಷ ತಹಶೀಲ್ದಾರ್ ಮಧ್ಯವರ್ತಿ ರಮೇಶ್ ಮೂಲಕ ಅರ್ಜಿದಾರರಿಗೆ ಬೇಡಿಕೆ ಇಟ್ಟಿದ್ದರು.

10ನೇ ಪುಟ ನೋಡಿ

ಖರ್ಗೆ–ಡಿಕೆಶಿ ಭೇಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ನವದೆಹಲಿಯ ನಿವಾಸದಲ್ಲಿ ಮಂಗಳವಾರ ಭೇಟಿ ಮಾಡಿ, ಪಕ್ಷ ಸಂಘಟನೆ ಬಗ್ಗೆ ಸಮಾಲೋಚನೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಶಿವಕುಮಾರ್, 'ರಾಜ್ಯದಲ್ಲಿ ಪಕ್ಷ ಸಂಘಟನೆ ಬಗ್ಗೆ ಅಧ್ಯಕ್ಷರು ಕೆಲವು ಹಿತ-ವಚನಗಳನ್ನು ಹೇಳಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲೇಬೇಕು ಎಂದು ಹೇಳಿದ್ದಾರೆ. ಈ ಸಂಬಂಧ ಮಾರ್ಗದರ್ಶನ ನೀಡಿದ್ದಾರೆ' ಎಂದರು.

'ಟಿಕೆಟ್ ಆಕಾಂಕ್ಷಿಗಳಿಂದ ಒತ್ತಡ ಹೆಚ್ಚಿದೆ. ಹೀಗಾಗಿ, ಅರ್ಜಿ ಸಲ್ಲಿಕೆ ಅವಧಿಯನ್ನು ನಾಲ್ಕು ದಿನ ವಿಸ್ತರಣೆ ಮಾಡಲಾಗಿದೆ' ಎಂದರು.

ನಿಗದಿಯಂತೆ ಆ್ಯಪ್ ಆಟೊ ಪ್ರಯಾಣದರ: ಒತ್ತಾಯ

ಬೆಂಗಳೂರು: ಓಲಾ, ಉಬರ್ ಆಟೊಗಳ ಪ್ರಯಾಣದ ದರವು ಸಾರಿಗೆ ಇಲಾಖೆ ನಿಗದಿಪಡಿಸಿದ ದರದಂತೆಯೇ ಇರಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಹೈಕೋರ್ಟ್ ಸೂಚನೆಯಂತೆ ಸಾರಿಗೆ ಇಲಾಖೆ ದರ ನಿಗದಿ ಕುರಿತಂತೆ ನಾಗರಿಕರ ವೇದಿಕೆಯ ಸದಸ್ಯರೊಂದಿಗೆ ಮಂಗಳವಾರ ಸಭೆ ನಡೆಸಿದಾಗ, ಈ ಒತ್ತಾಯ ಕೇಳಿಬಂತು.

ಓಲಾ, ಉಬರ್ ಹಾಗೂ ರ್‍ಯಾಪಿಡ್ ಆ್ಯಪ್‌ಗಳು ಅತಿಹೆಚ್ಚಿನ ದರ ವಸೂಲಿ ಮಾಡುತ್ತಿರುವುದನ್ನು ನಾಗರಿಕರು ಖಂಡಿಸಿದರು.

ಮಳೆ ಹಾಗೂ ಸಂಚಾರ ದಟ್ಟಣೆ ಸಂದರ್ಭದಲ್ಲಿ ಮೂರು ಪಟ್ಟು ಹೆಚ್ಚು ದರವನ್ನು ಆ್ಯಪ್‌ಗಳು ವಸೂಲಿ ಮಾಡುತ್ತಿವೆ ಎಂದೂ ದೂರಿದರು.

ಸಾರಿಗೆ ಇಲಾಖೆಯಿಂದಲೇ ಆ್ಯಪ್ ಸೇವೆ ಆರಂಭಿಸಬೇಕು ಎಂದು ಒತ್ತಾಯಿಸಿದಾಗ, ಇದಕ್ಕೆ ಇಲಾಖೆಯಲ್ಲಿ ಅವಕಾಶ ಇಲ್ಲ ಎಂದು ಅಧಿಕಾರಿಗಳು ತಿಳಿಸಿದರು.

ಆ್ಯಪ್ ಕಂಪನಿಗಳು ಹಾಗೂ ಆಟೊ ಚಾಲಕರ ಸಂಘಗಳೊಂದಿಗೆ ಸೋಮವಾರ ಸಾರಿಗೆ ಇಲಾಖೆ ಸಭೆ ನಡೆಸಿತ್ತು. ಇದೀಗ ನಾಗರಿಕರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಎಲ್ಲವನ್ನೂ ಒಗ್ಗೂಡಿಸಿ ಬುಧವಾರ ಹೈಕೋರ್ಟ್‌ಗೆ ಸಲ್ಲಿಸಲಾಗುವುದು ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದರು.

ನಗರದ ಎಂ.ಜಿ. ರಸ್ತೆಯಲ್ಲಿರುವ ವಿಜಯಾ ಟವರ್‌ನಲ್ಲಿ ಬ್ಯಾಂಕ್ ಆಫ್ ಬರೋಡಾ ಮಿಡ್ ಕಾರ್ಪೊರೇಟ್ ಶಾಖೆಯನ್ನು ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ದೇವದತ್ತ ಚಾಂದ್ ಅವರು ಉದ್ಘಾಟಿಸಿದರು. ಬ್ಯಾಂಕ್‌ನ ಹಿರಿಯ ಅಧಿಕಾರಿಗಳಾದ ರಂಗರಾಜನ್, ಸುಧಾಕರ ಡಿ. ನಾಯಕ್, ಶಿವರಾಮ್ ಬಿ., ರಿತೇಶ್ ಕುಮಾರ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

25ನೇ ಬೆಂಗಳೂರು ಟೆಕ್ ಸಮ್ಮಿಟ್ ಉದ್ಘಾಟನೆ: ನರೇಂದ್ರ ಮೋದಿ, ಉಪಸ್ಥಿತಿ: ಬಸವರಾಜ ಬೊಮ್ಮಾಯಿ, ಪೆಟ್ರಿ ಹೊನ್‌ಕೊನೆನ್ ಒಮರ್ ಬಿನ್ ಸುಲ್ತಾನ್ ಅಲ್ ಒಲಾಮ್, ಟಿಮ್ ವ್ಯಾಟ್ಸ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಮುರುಗೇಶ ನಿರಾಣಿ, ಸ್ಥಳ: ಬೆಂಗಳೂರು ಅರಮನೆ, ಬೆಳಿಗ್ಗೆ 10

ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಅಂಗವಾಗಿ ವಿಚಾರಸಂಕಿರಣ: ವಿಷಯ: ರಾಷ್ಟ್ರ ನಿರ್ಮಾಣದಲ್ಲಿ ಮಾಧ್ಯಮಗಳ ಪಾತ್ರ: ಉದ್ಘಾಟನೆ: ಜೆ.ಸಿ. ಮಾಧುಸ್ವಾಮಿ, ಅಧ್ಯಕ್ಷತೆ: ಸದಾಶಿವ ಶೆಣೈ ಕೆ., ಭಾಷಣ: ಅನಂತ್‌ನಾಗ್, ರಾಜಾ ಶೈಲೇಶ್ಚಂದ್ರ ಗುಪ್ತ, ಆರ್. ಪೂರ್ಣಿಮಾ, ಉಪಸ್ಥಿತಿ: ಪಿ.ಎಸ್ ಹರ್ಷ, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕಬ್ಬನ್ ಉದ್ಯಾನ, ಮಧ್ಯಾಹ್ನ 12

ಅನಂತ್‌ನಾಗ್

ಕನ್ನಡ ಕಲಿಕಾ ತರಗತಿಗಳ ಉದ್ಘಾಟನೆ: ಸಂತೋಷ ಹಾನಗಲ್ಲ, ಉಪಸ್ಥಿತಿ: ಮಹೇಶ ಅಂಗಡಿ, ಎಚ್. ಲಿಂಗರಾಜ, ಆರ್. ರಾಮಸ್ವಾಮಿ, ಅಧ್ಯಕ್ಷತೆ: ರವಿ ಕೆ., ಆಯೋಜನೆ: ತೇಜಸ್ ಕನ್ನಡ ಸಂಘ, ತೇಜಸ್ ಸಭಾಂಗಣ, ಎಚ್‌ಎಎಲ್, ಮಾರತ್ತಹಳ್ಳಿ, ಮಧ್ಯಾಹ್ನ 12.15

ಸರ್ ಸಿ.ವಿ. ರಾಮನ್ ವಿಜ್ಞಾನ ದತ್ತಿ ಉಪನ್ಯಾಸ: ವಿಷಯ: ಭಾರತರತ್ನ ಸರ್ ಸಿ.ವಿ. ರಾಮನ್ ಒಂದು ವಿಹಂಗಮ ನೋಟ, ಉಪನ್ಯಾಸಕರು: ಪ್ರಭಾಕರ ಬೆಲವಾಡಿ, ಅಧ್ಯಕ್ಷತೆ: ಪಿ.ವಿ. ನಾರಾಯಣ, ಆಯೋಜನೆ: ಬಿಎಂಶ್ರೀ ಪ್ರತಿಷ್ಠಾನ, ಎಂ.ವಿ.ಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಸಂಜೆ 5

51ನೇ ಹಿರಿಯ ಸಂಗೀತ ವಿದ್ವಾಂಸರ, 33ನೇ ಯುವ ಸಂಗೀತ ವಿದ್ವಾಂಸರ ರಾಜ್ಯಮಟ್ಟದ ಸಮ್ಮೇಳನ: ಉದ್ಘಾಟನೆ: ಡಾ. ಪ್ರತಿಮಾ ಮೂರ್ತಿ, ರವಿ ಸುಬ್ರಹ್ಮಣ್ಯ, ಕಟ್ಟೆ ಸತ್ಯನಾರಾಯಣ, ಆಯೋಜನೆ: ಕರ್ನಾಟಕ ಗಾನಕಲಾ ಪರಿಷತ್ತು, ಸ್ಥಳ: ಪತ್ತಿ ಸಭಾಂಗಣ, ಸಭಾ ಕಾರ್ಯಕ್ರಮ ಬೆಳಿಗ್ಗೆ 10.30, ಮಧ್ಯಾಹ್ನ 3ರಿಂದ ಸಂಗೀತ ಕಾರ್ಯಕ್ರಮಗಳು

ಪಂಚವಕ್ತ್ರಂ: ಅತಿಥಿಗಳು: ವಿ. ಸುನಿಲ್ ಕುಮಾರ್, ಶಾಲಿನಿ ರಜನೀಶ್, ಡಿ. ಮಹೇಂದ್ರ, ಅಧ್ಯಕ್ಷತೆ: ಪಿ. ಶ್ಯಾಮರಾಜು, ಆಯೋಜನೆ ಮತ್ತು ಸ್ಥಳ: ಕುವೆಂಪು ಸಭಾಂಗಣ, ರೇವಾ ವಿಶ್ವವಿದ್ಯಾಲಯ, ಕಟ್ಟಿಗೇನಹಳ್ಳಿ, ಯಲಹಂಕ, ಸಂಜೆ 5.30

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು – 94.
ದೂ: (080)22172614, ಇ–ಮೇಲ್ ಐಡಿ: alagarsamy-hsfc@isro.gov.in

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ, ಈ ಕೆಳಕಂಡ ಕಾಮಗಾರಿಗೆ ಆನ್‌ಲೈನ್ ಐಟಂ ದರ ಟೆಂಡರ್‌ಗಳನ್ನು ಇ–ಟೆಂಡರಿಂಗ್ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ಎನ್ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.	ಪೂರ್ಣಗೊಳಿಸುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ ರೂ.ಗಳಲ್ಲಿ
01	ಬೆಂಗಳೂರು ಮಾರತ್‌ಹಳ್ಳಿ, ಹೆಚ್‌ಎಸ್‌ಎಫ್‌ಸಿ ತರಬೇತಿ ಸೌಲಭ್ಯದಲ್ಲಿ ವಿದ್ಯುತ್ ಬೇಲಿ ಒದಗಿಸಲು ಕಾಂಪೌಂಡ್ ಗೋಡೆ ಎತ್ತರಿಸುವುದ ಮತ್ತು ಇತರೆ ಭದ್ರತೆಗೆ ಸಂಬಂಧಿಸಿದ ಕಾಮಗಾರಿಗಳು (ಸಿವಿಲ್ ಕಾಮಗಾರಿಗಳು) **HSFC/CMG/2(3)/C/48/2022-23** ಮತ್ತು ದಿನಾಂಕ: 15.11.2022	21.21 ಲಕ್ಷಗಳು	02 ತಿಂಗಳು	16.11.2022 ರ (11.00 ಗಂಟೆ) ಇಂದ 29.11.2022 (23.30 ಗಂಟೆ)ವರೆಗೆ	01.12.2022 23.00 ಗಂಟೆವರೆಗೆ	02.12.2022 11.30 ಗಂಟೆಗೆ	42,420/–
02	ಬೆಂಗಳೂರು, ಮಾರತಹಳ್ಳಿ, ಹೆಚ್‌ಎಸ್‌ಎಫ್‌ಸಿ ತರಬೇತಿ ಸೌಲಭ್ಯದಲ್ಲಿ ವಿದ್ಯುತ್ ಬೇಲಿ ವ್ಯವಸ್ಥೆಯ ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಕಾರ್ಯಾಚರಣೆ (ವಿದ್ಯುತ್ ಕಾಮಗಾರಿಗಳು) **HSFC/CMG/2(3)/E/49/2022-23** ಮತ್ತು ದಿನಾಂಕ: 15.11.2022	24.44 ಲಕ್ಷಗಳು	02 ತಿಂಗಳು				48,880/–
03	ಬೆಂಗಳೂರು, ಮಾರತಹಳ್ಳಿ, ಹೆಚ್‌ಎಸ್‌ಎಫ್‌ಸಿ ತರಬೇತಿ ಸೌಲಭ್ಯದಲ್ಲಿ ಹಾಲಿ ಇರುವ ಅಡುಗೆ ಮನೆಯ ನವೀಕರಣ (ಎಕ್ಸಾಸ್ಟ್ ಡಕ್ಟ್, ಕಿಚನ್ ಬ್ಲೋವರ್ ಇತ್ಯಾದಿ)(ಯಾಂತ್ರಿಕ ಕಾಮಗಾರಿಗಳು) **HSFC/CMG/MM/HVAC/50/2022-23** ಮತ್ತು ದಿನಾಂಕ: 15.11.2022	6.62 ಲಕ್ಷಗಳು	02 ತಿಂಗಳು				13,240/–

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕ ಪಾವತಿಸಿ ಟೆಂಡರ್ ವೆಬ್‌ಸೈಟ್: **www.tenderwizard.com/ISRO**ಮೂಲಕ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಆಸಕ್ತಿಯುಳ್ಳ ಟೆಂಡರ್‌ದಾರರು ವೆಬ್‌ಸೈಟ್: **www.isro.gov.in**ನಲ್ಲಿ ಟೆಂಡರ್ ಆಹ್ವಾನ ಪ್ರಕಟಣೆಯ ಸಂಪೂರ್ಣ ವಿವರಗಳನ್ನು ಪರಿವೀಕ್ಷಿಸಬಹುದು ಮತ್ತು ಟೆಂಡರ್ ಹೆಚ್ಚಿನ ವಿವರಗಳಿಗೆ ಹಾಗೂ ಟೆಂಡರ್ ದಸ್ತಾವೇಜು ಖರೀದಿಗೆ **www.tenderwizard.com/ISRO**ಗೆ ಭೇಟಿ ನೀಡಿ. ಟೆಂಡರ್‌ದಾರರು ಶ್ರೀ ತನ್‌ರಾಜ್ (ಮೆ. ಐಟಿಐ ಲಿ.ನ ಪ್ರತಿನಿಧಿ), ಮೊಬೈಲ್ ಸಂ.9686115308 ಅವರನ್ನು ಭೇಟಿಮಾಡಿ.

ಸಹಿ/– ಸಮೂಹ ನಿರ್ದೇಶಕರು, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

SOBHA LIMITED

SOBHA
PASSION AT WORK

CIN : L45201KA1995PLC018475
Regd. Office: 'SOBHA', Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103.
Ph: +91-80-49320000, Fax: +91-80-49320444
email: investors@sobha.com
website: www.sobha.com

Extract of the unaudited consolidated financial results for the quarter and six months ended 30 September 2022

(₹. in Million)

Particulars	Quarter ended			Six months ended		Previous year ended
	30.09.2022 [Unaudited]	30.06.2022* [Unaudited]	30.09.2021* [Unaudited]	30.09.2022 [Unaudited]	30.09.2021* [Unaudited]	31.03.2022* [Audited]
Total income from operations	6,906	5,763	7,804	12,669	13,046	27,118
Profit before tax	344	84	836	428	978	2,219
Profit after tax	192	45	631	237	736	1,668
Total comprehensive income for the period (comprising profit for the period (after tax) and other comprehensive income (after tax))	159	53	602	212	713	1,659
Paid-up Equity Share Capital	948	948	948	948	948	948
Reserves (excluding revaluation reserve)	-	-	-	-	-	23,222
Earnings per Share (of ₹ 10/- each) (for continuing and discontinued operations)						
Basic and diluted EPS	2.03	0.47	6.65	2.50	7.76	17.59

*refer note 3

Notes :
(1) The key data of standalone financial results is as under:

(₹. in Million)

Particulars	Quarter ended			Six months ended		Previous year ended
	30.09.2022 [Unaudited]	30.06.2022* [Unaudited]	30.09.2021* [Unaudited]	30.09.2022 [Unaudited]	30.09.2021* [Unaudited]	31.03.2022* [Audited]
Income from operations	6,694	5,849	7,779	12,543	12,223	26,210
Profit before tax	250	20	799	270	1,021	2,141
Profit after tax	138	8	589	146	767	1,588
Total comprehensive income	**105**	**16**	**560**	**121**	**744**	**1,579**

*refer note 3

(2) The unaudited consolidated financial results for the half year ended 30 September 2022 have been reviewed by the Audit Committee and taken on record by the Board of Directors of the Group at its meeting held on 14 November 2022. The figures for the quarter and half year ended 30 September 2022 was subject to 'Limited Review' by Statutory Auditors of the Company who have expressed an unqualified review conclusion. The information presented above is prepared in accordance with the Indian Accounting Standards (Ind AS) as prescribed under Section 133 of the Companies Act, 2013 read with Rule 3 of the Companies (Indian Accounting Standards) Rules, 2015 and Companies (Indian Accounting Standards) Amendment Rules, 2016. The above unaudited consolidated financial results are filed with Stock Exchanges under Regulation 33 of the SEBI (Listing and Other Disclosure Requirements) Regulations, 2015 and are available on the Stock Exchange websites, www.nseindia.com and www.bseindia.com and on the Company's website, www.sobha.com

(3) The financial information for the previous reporting periods were restated for correction of certain items in accordance with Ind AS 8, Accounting Policies, Changes in Accounting Estimates and Errors which are described in more detailed as below:

(i) Sobha Limited ('the Company') and the subsidiaries ('the Group') had accrued for notional interest on advance from customers involving sale of real estate unit and had capitalised such interest to project cost. However, the Company received such consideration in accordance with the terms of the contract in proportion to the completion of such real estate project and accordingly does not involve any significant financing element.

(ii) The Group has restated the accounting for revenue from the development and transfer of constructed area/revenue sharing arrangement in exchange of such development rights acquired under Joint Development Arrangement (JDAs) [not being jointly controlled operations] on gross basis in accordance with guidance on 'non-cash consideration' under Ind AS 115, Revenue from Contract with Customer.

(iii) The Group has restated the capitalisation of borrowing cost on lands and land advances wherein no significant development activity had commenced and projects wherein substantially all activities necessary for their sale had been completed to capitalise appropriate borrowing cost and other directly attributable project cost to projects under construction.

(iv) Rectification of certain other items pertaining to (a) accounting of construction contracts, other operating income and expense (b) Right of use asset (c) discounting of retention money and (d) reclassification of borrowings. Consequential impact of deferred tax has been recorded on these adjustments.

The effect of restatement on consolidated financial statement line items for the previous years is as follows:

Impact on Statement of financial results

(₹. in Million)

Particulars	Note	3 months ended		Six months ended	Previous Year ended
		30.06.2022 (unaudited)	30.09.2021 (unaudited)	30.09.2021 (unaudited)	31.03.2022 (audited)
Revenue from operations	(ii), (i)	(170)	(392)	(400)	(1,108)
Other income		-	(154)	(154)	64
Finance income	(iv)	(19)	27	27	(54)
Total income		**(188)**	**(519)**	**(527)**	**(1,099)**
Changes in inventories	(iii), (ii), (i)	1,228	323	323	1,729
Employee benefits expense	(iv)	59	-	-	-
Depreciation and amortization expense	(iv)	(12)	(9)	(9)	(33)
Finance expenses	(i), (iii)	(1,283)	(1,075)	(1,098)	(3,462)
Other expenses	(iv)	(49)	55	55	31
Total expenses		**(57)**	**(707)**	**(730)**	**(1,735)**
Profit before tax	(i), (ii), (iii), (iv)	(131)	188	203	637
Total tax expense		**(40)**	**39**	**57**	**137**
Total comprehensive income for the period before OCI		**(90)**	**149**	**146**	**499**

Impact on Consolidated Balance sheet

(₹. in Million)

Particulars	Note	As at 31. 03.2022* [Audited]	As at 01. 04.2021* [Audited]
Property, plant and equipment	(iv)	118	165
Right of use assets	(iv)	30	32
Trade receivables	(iv)	91	97
Other non-current financial assets	(iv)	(169)	(151)
Other non-current assets	(i), (iii)	(639)	(658)
Inventories	(i), (ii), (iii)	2,790	4,249
Other current financial assets	(iii)	314	204
Other current assets	(ii)	(1,547)	(1,397)
Other equity	(i), (ii), (iv)	(913)	(1,373)
Borrowings	(iv)	(3,629)	-
Lease liabilities	(iv)	140	150
Deferred tax liabilities (net)	(iv)	(321)	(475)
Borrowings	(iv)	4,052	420
Lease liabilities	(iv)	12	1
Total outstanding dues of creditors other than micro enterprises and small enterprises	(iv)	(2,274)	(2,331)
Other current financial liabilities	(iv)	(240)	(169)
Other current liabilities	(iv)	4,359	6,653

Restatement in the earning per share

Particulars	Quarter ended			Six months ended		Previous year ended
	30.09.2022 [Unaudited]	30.06.2022* [Unaudited]	30.09.2021* [Unaudited]	30.09.2022 [Unaudited]	30.09.2021* [Unaudited]	31.03.2022* [Audited]
Earning per equity share (face value ₹.10 each)						
Earnings per share (EPS) - (in ₹) -Reported	2.03	1.44	4.99	2.50	6.23	12.32
Earnings per share (EPS) - (in ₹)-Refer Note 3	2.03	0.47	6.65	2.50	7.76	17.59

(4) Previous period's / year's figures have been regrouped or reclassified wherever necessary.

For and on behalf of the Board of Directors of Sobha Limited

Bengaluru, India
14 November 2022

Jagadish Nangineni
Managing Director
DIN: 01871780

ಲಾಲ್‌ಬಾಗ್ ಅವ್ಯವಸ್ಥೆ: ಜನರ ಪ್ರತಿಕ್ರಿಯೆಗಳು

ಸಸ್ಯಕಾಶಿಯಲ್ಲಿ ಸಮಸ್ಯೆಗಳ ರಾಶಿ ಇರುವುದಕ್ಕೆ ಜನರಿಂದ ಬಂದಿರುವ ಪ್ರತಿಕ್ರಿಯೆಗಳೇ ಸಾಕ್ಷಿ. ತೋಟಗಾರಿಕಾ ಸಚಿವ ಮುನಿರತ್ನ ಅವರು ಅಲ್ಲಿ 'ಜನಸ್ಪಂದನ' ನಡೆಸಬೇಕೆಂಬ ವಿನಂತಿಗೆ ಒಪ್ಪಿಗೆ ನೀಡಲಿಲ್ಲ. ಇದರಿಂದ ಜನರಿಗೆ ಅಹವಾಲು ಹೇಳಿಕೊಂಡು, ಅಲ್ಲಿಯೇ ಪರಿಹಾರ ಪಡೆಯುವ ಅವಕಾಶವೊಂದನ್ನು ತಪ್ಪಿಸಿದಂತೆ ಆಗಿದೆ. 'ಪ್ರಜಾವಾಣಿ' ಅಂತಹ ಜನದನಿಗೆ ಈ ಮೂಲಕ ವೇದಿಕೆ ಒದಗಿಸಿದೆ.

ಲಾಲ್‌ಬಾಗ್‌ನಲ್ಲಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚಳವಾಗಿದ್ದು, ಮಕ್ಕಳು ಮತ್ತು ವೃದ್ಧರು ಭಯದಿಂದ ಹೆಜ್ಜೆ ಹಾಕಬೇಕಾದ ವಾತಾವರಣ ನಿರ್ಮಾಣವಾಗಿದೆ. ಕಲ್ಲು ಬಂಡೆಯ ಮೇಲ್ಭಾಗ ಕೆಲವರು ಅನಧಿಕೃತವಾಗಿ ವ್ಯಾಪಾರ ಮಾಡುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು. ಉದ್ಯಾನದಲ್ಲಿನ ಗಿಡ–ಗಂಟಿಗಳನ್ನು ತೆರವು ಮಾಡಬೇಕು. ಕೆಲವರಿಗೆ ಹಾವುಗಳು ಕಾಣಿಸಿಕೊಂಡಿವೆ.

ಎಸ್. ಕುಮಾರ್, ಹನುಮಂತನಗರ

ಲಾಲ್‌ಬಾಗ್ ಕೆರೆಯ ಸುತ್ತ ಕಸದ ಸಮಸ್ಯೆ ಹೆಚ್ಚುತ್ತಿದೆ. ಕೆರೆಗೆ ಕೊಳಚೆ ನೀರು ಬರುತ್ತಿದೆ. ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಕವರ್‌ಗಳನ್ನು ಹಾಕಲಾಗುತ್ತಿದೆ. ಆದ್ದರಿಂದ ಪ್ರವೇಶ ದ್ವಾರಗಳಲ್ಲಿಯೇ ಪರಿಶೀಲಿಸಿ, ಒಳಗಡೆ ಬಿಡಬೇಕು. ಬೀದಿ ನಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಮಕ್ಕಳ ಮೇಲೆ ದಾಳಿ ಮಾಡುವ ಸಾಧ್ಯತೆಯಿದೆ.

ಶ್ರೀಪತಿ, ಜಯನಗರ

ವಾರಾಂತ್ಯದಲ್ಲಿ ಕುಟುಂಬದ ಸದಸ್ಯರೊಂದಿಗೆ ಬರುತ್ತೇವೆ. ವಾಹನಗಳ ಪಾರ್ಕಿಂಗ್ ಸಮಸ್ಯೆಯಾಗಿದೆ. ಮಳೆ ಬಂದಲ್ಲಿ ಹೂವಿನ ಉದ್ಯಾನವು ಕೆಸರುಮಯ ಆಗುತ್ತದೆ. ಇದರಿಂದ ನಡೆದು ಸಾಗುವುದು ಕಷ್ಟವಾಗುತ್ತಿದೆ. ಇನ್ನಷ್ಟು ಹೂವಿನ ಗಿಡಗಳನ್ನು ನೆಟ್ಟು, ಸೂಕ್ತವಾಗಿ ನಿರ್ವಹಣೆ ಮಾಡಬೇಕು.

ಜ್ಯೋತ್ಸ್ನಾ, ಬಸವನಗುಡಿ

ಲಾಲ್‌ಬಾಗ್‌ನಲ್ಲಿನ ಪಾದಚಾರಿ ಮಾರ್ಗಗಳು ಹಾಳಾಗಿವೆ. ಪಶ್ಚಿಮ ದ್ವಾರದ ಬಳಿಯ ಮಣ್ಣಿನ ರಸ್ತೆ ಮಳೆ ಬಂದರೆ ಕೆಸರುಮಯ ಆಗಲಿದೆ. ಗಿಡಗಳ ಎಲೆಗಳು ಪಾದಚಾರಿ ಮಾರ್ಗದಲ್ಲಿ ಬಿದ್ದು, ಕೊಳೆಯುತ್ತಿವೆ. ಸ್ವಚ್ಛತೆಗೆ ಆದ್ಯತೆ ನೀಡಬೇಕು. ಕಸದ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ. ನಾಯಿಗಳ ಹಾವಳಿ ಹೆಚ್ಚುತ್ತಿದೆ.

ಉಮಾಶಂಕರ್, ಬನಶಂಕರಿ ಎರಡನೇ ಹಂತ

ಲಾಲ್‌ಬಾಗ್ ಒಳಗಡೆ ವ್ಯಾಪಾರಕ್ಕೆ ಕಡಿವಾಣ ಹಾಕಬೇಕು

ಸಸ್ಯಕಾಶಿಯಲ್ಲಿನ ಸಮೀಕ್ಷೆ ಒಳಿತಿನ ನಿರೀಕ್ಷೆ

ಹೂತೋಟ... ಸಮಸ್ಯೆಗಳ ನೋಟ

ಲಾಲ್‌ಬಾಗ್ ಅಭಿವೃದ್ಧಿಗೆ ಕ್ರಮ: ಕುಸುಮಾ

ಲಾಲ್‌ಬಾಗ್‌ನ ದಾಸವಾಳ ವನದಲ್ಲಿ ನಿಂತಿರುವ ಕೊಳಚೆ ನೀರು

ಮಳೆ ಬಂದಾಗ ಲಾಲ್‌ಬಾಗ್‌ನಲ್ಲಿ ಓಡಾಡುವುದು ಕಷ್ಟ. ಕೆರೆಯ ಸುತ್ತಮುತ್ತ ಹಾಗೂ ಹೂತೋಟದ ಬಳಿ ಮಣ್ಣಿನ ರಸ್ತೆ ಕೆಸರುಮಯವಾಗಿ, ಜಾರಲಿದೆ. ಆದ್ದರಿಂದ ಸುಸಜ್ಜಿತ ಪಾದಚಾರಿ ಮಾರ್ಗವನ್ನು ನಿರ್ಮಿಸಬೇಕು. ಆಧುನಿಕತೆಯ ಹೆಸರಿನಲ್ಲಿ ಗಿಡ–ಮರಗಳನ್ನು ನಾಶ ಮಾಡಬಾರದು. ಸಹಜ ಸೌಂದರ್ಯಕ್ಕೆ ಆದ್ಯತೆ ನೀಡಬೇಕು.

ಸುಶೀಲಾ, ಜಯನಗರ

ಪ್ರಜಾವಾಣಿ@75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು 'ಪ್ರಜಾವಾಣಿ'ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ಬೀದಿ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದಾಗಿ ಮುಂಜಾನೆ ನಡಿಗೆದಾರರಿಗೆ ಸಮಸ್ಯೆ ಆಗುತ್ತಿದೆ. ಕಸದ ವಿಲೇವಾರಿಯೂ ಸರಿಯಾಗಿ ನಡೆಯುತ್ತಿಲ್ಲ. ಇನ್ನಷ್ಟು ಕಸದ ತೊಟ್ಟಿಗಳನ್ನು ಇರಿಸಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು. ಮಳೆ ಬಂದಲ್ಲಿ ರಸ್ತೆಯಲ್ಲಿಯೇ ನೀರು ನಿಲ್ಲಲಿದೆ.

ಧನರಾಜ್, ಸುಧಾಮನಗರ

ಪ್ಲಾಸ್ಟಿಕ್ ಕವರ್, ಬಾಟಲಿಗಳನ್ನು ಎಲ್ಲೆಂದರಲ್ಲಿ ಎಸೆಯಲಾಗಿದೆ. ಇದು ಲಾಲ್‌ಬಾಗ್‌ನ ಸೌಂದರ್ಯಕ್ಕೆ ಧಕ್ಕೆ ತರುತ್ತಿದೆ. ಆದ್ದರಿಂದ ಹೊರಗಡೆಯ ಆಹಾರದ ಪೊಟ್ಟಣಕ್ಕೆ ಅವಕಾಶ ನೀಡಬಾರದು. ಬಳಸಿ ಬೀಸಾಡುವ ನೀರಿನ ಬಾಟಲಿಗಳಿಗೂ ನಿರ್ಬಂಧ ವಿಧಿಸಬೇಕು. ಲಾಲ್‌ಬಾಗ್ ಒಳಗಡೆ ವ್ಯಾಪಾರಕ್ಕೆ ಕಡಿವಾಣ ಹಾಕಬೇಕು.

ವಾಣಿ, ವಿಜಯನಗರ

ಇನ್ನಷ್ಟು ಕಡೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಶೌಚಾಲಯದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಖಾಲಿ ಪ್ರದೇಶದಲ್ಲಿ ಹೂವು–ಹಣ್ಣಿನ ಗಿಡಗಳನ್ನು ಬೆಳೆಸಬೇಕು. ವ್ಯಾಯಾಮ ಮಾಡಲು ಜಿಮ್ ಪ್ರಾರಂಭಿಸಬೇಕು. ಮಕ್ಕಳಿಗೆ ಆಟವಾಡಲು ಪ್ರತ್ಯೇಕ ಉದ್ಯಾನ ನಿರ್ಮಿಸಬೇಕು.

ಕಾರ್ತಿಕ್, ಬಸವನಗುಡಿ

ಆವರಣದಲ್ಲಿ ಬೀದಿ ದೀಪಕ್ಕೆ ಅಳವಸಿದ ಕೇಬಲ್ ಕಿತ್ತು ಬಿದ್ದಿರುವುದು

ಕಸಾಪ: ಭುವನೇಶ್ವರಿ ಪುತ್ಥಳಿ ಅನಾವರಣ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಆವರಣದಲ್ಲಿ ಗುರುವಾರ ಸಂಜೆ 6.30ಕ್ಕೆ ಭುವನೇಶ್ವರಿಯ ಪುತ್ಥಳಿ ಅನಾವರಣಗೊಳ್ಳಲಿದೆ.

ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪುತ್ಥಳಿಯನ್ನು ಅನಾವರಣ ಮಾಡಲಿದ್ದಾರೆ. ಈ ಪ್ರತಿಮೆಯು 6.5 ಅಡಿ ಎತ್ತರವಿದ್ದು, ಬೆಂಗಳೂರಿನ ಸ್ಥಪತಿ ಕ್ರಿಯೇಷನ್ಸ್‌ನ ಕಲಾವಿದ ಶಿವದತ್ತ ನಿರ್ಮಿಸಿದ್ದಾರೆ.

‘ಪರಂಪರಾಗತವಾಗಿ ಕನ್ನಡಿಗರ ಅಭಿಮಾನದ ಆರಾಧ್ಯ ದೇವತೆಯಾದ ಭುವನೇಶ್ವರಿಯ ಪುತ್ಥಳಿಯನ್ನು ಇದುವರೆಗೂ ಯಾವುದೇ ಕನ್ನಡ ಸಂಘ– ಸಂಸ್ಥೆಗಳಾಗಲಿ, ಸರ್ಕಾರವಾಗಲಿ ಸ್ಥಾಪಿಸಿಲ್ಲ. ಕನ್ನಡದ ಮೊದಲ ರಾಜವಂಶವೆಂದೇ ಖ್ಯಾತಿ ಪಡೆದ ಕದಂಬರು, ತಮ್ಮ ಕುಲ ದೈವವಾದ ಮಧುಕೇಶ್ವರ ಸ್ವಾಮಿಯೊಂದಿಗೆ ತಾಯಿ ಭುವನೇಶ್ವರಿಯನ್ನು ನಿತ್ಯ ಆರಾಧಿಸುತ್ತಿದ್ದರು’ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

‘ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಭುವನಗಿರಿಯ ಭುವನೇಶ್ವರಿಯ ದೇಗುಲದ ನಿರ್ಮಾಣ ಕಾರ್ಯವು ಕದಂಬರ ಕಾಲದಲ್ಲಿ ಆರಂಭವಾಗಿ, ಕ್ರಿ.ಶ. 1692ರಲ್ಲಿ ಬೀಳಗಿ ಅರಸರ ಕೊನೆಯ ದೊರೆ ಬಸವೇಂದ್ರನ ಕಾಲದಲ್ಲಿ ಪೂರ್ಣಗೊಂಡಿತು. ಇದು ಕನ್ನಡ ನಾಡಿನಲ್ಲಿ ಸ್ಥಾಪನೆಗೊಂಡ ಮೊದಲ ಭುವನೇಶ್ವರಿಯ ದೇಗುಲ. ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರು ತಮ್ಮ ‘ಕರ್ನಾಟಕ ಗತ ವೈಭವ’ ಕೃತಿಯಲ್ಲಿ ‘ಭುವನೇಶ್ವರಿ ಕನ್ನಡಿಗರ ತಾಯಿ’ ಎನ್ನುವ ಪರಿಕಲ್ಪನೆ ನೀಡಿದರು. ಅದಕ್ಕೆ ಬಿ.ಎಂ.ಶ್ರೀ., ಕುವೆಂಪು, ಬೇಂದ್ರೆ ಮೊದಲಾದ ಕವಿವರ್ಯರು ಧ್ವನಿಗೂಡಿಸಿದರು’ ಎಂದು ಹೇಳಿದ್ದಾರೆ.

‘ಭುವನೇಶ್ವರಿಯ ಪರಿಕಲ್ಪನೆ ಏಕೀಕರಣದ ಹೋರಾಟದಲ್ಲಿ ಕನ್ನಡಿಗರನ್ನು ಒಗ್ಗೂಡಿಸಿತು. ಇಂದಿಗೂ ಕನ್ನಡ ನುಡಿ ಮತ್ತು ಭುವನೇಶ್ವರಿಯ ಪರಿಕಲ್ಪನೆಯ ನಡುವೆ ಅವಿನಾಭಾವ ಸಂಬಂಧ ಬೆಳೆದು ಬಂದಿದೆ. ಚತುರ್ಭುಜ, ಪದ್ಮ ಪೀಠಾಸೀನ, ಪಾಶಾಂಕುಶ, ಅಭಯ ವರದ ಮುದ್ರೆಯೊಂದಿಗೆ ಕನ್ನಡ ಧ್ವಜ ಹಿಡಿದಿರುವ ಭುವನೇಶ್ವರಿ ಪ್ರತಿಮೆ ನಿರ್ಮಿಸಲಾಗಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನಾವರಣಗೊಳ್ಳಲಿರುವ ಭುವನೇಶ್ವರಿ ಪುತ್ಥಳಿ

ಕೋಸ್ಟ್ ಗಾರ್ಡ್: 9 ಹೆಲಿಕಾಪ್ಟರ್‌ಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಭಾರತೀಯ ಕರಾವಳಿ ಕಾವಲು ಪಡೆಗೆ (ಇಂಡಿಯನ್ ಕೋಸ್ಟ್ ಗಾರ್ಡ್) 16 ಎಎಲ್‌ಎಚ್ (ಎಂಕೆ3) ಹೆಲಿಕಾಪ್ಟರ್‌ಗಳ ಪೂರೈಕೆ ಸರಣಿಯ ಕೊನೆಯ ಹೆಲಿಕಾಪ್ಟರ್ ಅನ್ನು ಮಂಗಳವಾರ ಹಸ್ತಾಂತರಿಸಿತು.

ಬೆಂಗಳೂರಿನಲ್ಲಿ ನಡೆದ ಹಸ್ತಾಂತರ ಕಾರ್ಯಕ್ರಮದಲ್ಲಿ ಕೋಸ್ಟ್ ಗಾರ್ಡ್‌ನ ವ್ಯವಸ್ಥಾಪಕ ನಿರ್ದೇಶಕ ವಿ.ಎಸ್.ಪಠಾನಿಯಾ, ಕೋಸ್ಟ್ ಗಾರ್ಡ್, ಎಚ್‌ಎಎಲ್‌ನ ಹಿರಿಯ ಅಧಿಕಾರಿಗಳು ಇದ್ದರು.

ಸುಧಾರಿತ ಹಗುರ ಹೆಲಿಕಾಪ್ಟರ್ (ಎಎಲ್‌ಎಚ್) ಎಂಕೆ 3 ಅನ್ನು ಎಚ್‌ಎಎಲ್ ದೇಶೀಯವಾಗಿಯೇ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿದೆ. ಕಂಪನಿಯು ಈವರೆಗೆ ಒಟ್ಟು 330 ಎಎಲ್‌ಎಚ್ ಹೆಲಿಕಾಪ್ಟರ್‌ಗಳನ್ನು ತಯಾರಿಸಿದೆ. ಬಹು ಉದ್ದೇಶದ ಈ ಹೆಲಿಕಾಪ್ಟರ್ ಈವರೆಗೆ 3.74 ಲಕ್ಷ ಗಂಟೆಗಳಷ್ಟು ಹಾರಾಟ ನಡೆಸಿದೆ. 16 ಹೆಲಿಕಾಪ್ಟರ್‌ಗಳ ಪೂರೈಕೆಗೆ 2017ರಲ್ಲಿಯೇ ಒಪ್ಪಂದ ಆಗಿತ್ತು ಎಂದು ಎಚ್‌ಎಎಲ್ ಹೇಳಿದೆ.

ಈ ಸಂದರ್ಭದಲ್ಲಿ ಮಾತನಾಡಿದ ವಿ.ಎಸ್.ಪಠಾನಿಯಾ, ಎಚ್‌ಎಎಲ್ ಜತೆ ಸಹಯೋಗ ಹೆಮ್ಮೆಯ ವಿಷಯವಾಗಿದೆ. ಇನ್ನೂ ಒಂಬತ್ತು ಹೆಲಿಕಾಪ್ಟರ್‌ಗಳ ಖರೀದಿಗೆ ಆಶಯ ಪತ್ರವನ್ನು ನೀಡಲಾಗಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲೂ ಅತಿ ಕಡಿಮೆ ಅವಧಿಯಲ್ಲಿ ಹೆಲಿಕಾಪ್ಟರ್‌ಗಳನ್ನು ತಯಾರಿಸಿ ಕೊಟ್ಟಿದ್ದರಿಂದ ದೇಶದ ಸಮುದ್ರ ತೀರದ ರಕ್ಷಣೆಯನ್ನು ಬಲಪಡಿಸಲು ಸಾಧ್ಯವಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಚ್‌ಎಎಲ್‌ನ ವ್ಯವಸ್ಥಾಪಕ ನಿರ್ದೇಶಕ ಸಿ.ಬಿ. ಅನಂತಕೃಷ್ಣನ್, ಹೆಲಿಕಾಪ್ಟರ್ ವಿಭಾಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಅನ್ಬುವೇಲನ್ ಅವರು ಮಾತನಾಡಿದರು.

ಕೋಸ್ಟ್ ಗಾರ್ಡ್‌ಗೆ ಹಸ್ತಾಂತರಗೊಂಡ ಎಎಲ್‌ಎಚ್ ಹೆಲಿಕಾಪ್ಟರ್

ಸಂಕ್ಷಿಪ್ತ ಸುದ್ದಿ

ಮರ ಸ್ಥಳಾಂತರ ವರದಿ ಸಲ್ಲಿಕೆಗೆ ಸೂಚನೆ

ಬೆಂಗಳೂರು: ‘ಬೆಂಗಳೂರಿನ ಯಾವ ಪ್ರದೇಶಗಳಲ್ಲಿ ಎಷ್ಟು ಗಿಡ ನೆಡಲಾಗಿದೆ ಮತ್ತು ಎಷ್ಟು ಮರಗಳನ್ನು ಸ್ಥಳಾಂತರಿಸಲಾಗಿದೆ ಎಂಬ ಬಗ್ಗೆ ವರದಿ ಸಲ್ಲಿಸಿ’ ಎಂದು ಬೆಂಗಳೂರು ಮೆಟ್ರೊ ರೈಲು ಅಭಿವೃದ್ಧಿ ನಿಗಮಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಮರ ಕಡಿಯುವುದನ್ನು ಆಕ್ಷೇಪಿಸಿ ಪರಿಸರವಾದಿ ಟಿ.ದತ್ತಾತ್ರೇಯ ದೇವರೆ ಹಾಗೂ ‘ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್’ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

‘ಗಿಡ ನೆಟ್ಟಿರುವುದನ್ನು ಯಾವ ಪ್ರಾಧಿಕಾರ ಪರಿಶೀಲಿಸಿದೆ. ಅದಕ್ಕೆ ನೀಡಿರುವ ಒಪ್ಪಿಗೆ, ನಿರ್ದಿಷ್ಟ ಪ್ರದೇಶದಲ್ಲಿ ನೆಡಲಾಗಿರುವ ಗಿಡಗಳ ಸಂಖ್ಯೆಯನ್ನು ಒಳಗೊಂಡ ವರದಿಯನ್ನು ಸಲ್ಲಿಸಿ’ ಎಂದು ನ್ಯಾಯಪೀಠ ಹೇಳಿದೆ.

‘ಮೆಟ್ರೊ ಕಾಮಗಾರಿಗೆ ಮಧ್ಯಂತರ ತಡೆ ನೀಡಲಾಗಿಲ್ಲ. ಹೀಗಾಗಿ, ಗಿಡ ನೆಟ್ಟಿರುವುದು, ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಸಮಗ್ರ ವರದಿಯನ್ನು ಇದೇ 18ರೊಳಗೆ ಸಲ್ಲಿಸಬೇಕು’ ಎಂದು ಬಿಎಂಆರ್‌ಸಿಎಲ್‌ಗೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿದೆ.

ವಾಟ್ಸ್‌ಆ್ಯಪ್, ಮೆಟಾ ತೊರೆದ ಅಧಿಕಾರಿಗಳು

ನವದೆಹಲಿ (ರಾಯಿಟರ್ಸ್): ವಾಟ್ಸ್ ಆ್ಯಪ್‌ನ ಭಾರತದ ಮುಖ್ಯಸ್ಥ ಅಭಿಜಿತ್ ಬೋಸ್ ಮತ್ತು ಮೆಟಾ ಪ್ಲಾಟ್‌ಫಾರ್ಮ್ಸ್‌ನ ಭಾರತದ ಸಾರ್ವಜನಿಕ ನೀತಿ ನಿರ್ದೇಶಕ ರಾಜೀವ್ ಅಗರ್ವಾಲ್ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಮೆಟಾ ವಕ್ತಾರರು ತಿಳಿಸಿದ್ದಾರೆ.

ಕಂಪನಿಯ ಭಾರತದ ಮುಖ್ಯಸ್ಥ ಅಜಿತ್ ಮೋಹನ್ ಅವರು ತಮ್ಮ ಸ್ಥಾನ ತೊರೆದ ಬೆನ್ನಲ್ಲೇ ಇವರು ರಾಜೀನಾಮೆ ಸಲ್ಲಿಸಿದ್ದಾರೆ. ಈ ಇಬ್ಬರ ರಾಜೀನಾಮೆಗೂ ಕಂಪನಿಯಲ್ಲಿ ನಡೆದಿರುವ ನೌಕರರ ವಜಾಕ್ಕೂ ಸಂಬಂಧ ಇಲ್ಲ ಎಂದು ವಕ್ತಾರರು ಸ್ಪಷ್ಟಪಡಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು (ಕೆ.ಪಿ.ಟಿ.ಸಿ.ಎಲ್) ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಇದೇ ಗುರುವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ವೀವರ್ಸ್ ಕಾಲೊನಿ 1ರಿಂದ 9 ನೇ ಕ್ರಾಸ್, ಮಾರುತಿ ನಗರ, ಪಿಲ್ಲಗಾನಹಳ್ಳಿ, ಗೊಟ್ಟಿಗೆರೆ, ಎಂಎಲ್ಎ ಲೇಔಟ್, ಭೋರಾ ಲೇಔಟ್, ಆಶ್ರಮ ರಸ್ತೆ, ಹಿಮಗಿರಿ ಮೆಡೋಸ್, ಕಮ್ಮನಹಳ್ಳಿ, ಬಾಲಾಜಿ ಗಾರ್ಡನ್ ಲೇಔಟ್, ಬಸವನಪುರ, ನೊಬೆಲ್ ರೆಸಿಡೆನ್ಸಿ, ನಂದಿವುಡ್ ಅಪಾರ್ಟ್‌ಮೆಂಟ್, ಎಸ್‌ಎನ್‌ಎನ್ ರಾಜ್‌ನಗರ ಲೇಕ್, ವಿಶ್ವಿನಿ ರಾಜ್‌ನಗರ ಲೇಕ್ 2, ಮೈಲಸಂದ್ರ, ಹೊಮ್ಮದೇವನಹಳ್ಳಿ, ವಡ್ಡರಪಾಳ್ಯ, ಪ್ರಭಾಕರ ರೆಡ್ಡಿ ಲೇಔಟ್, ಬೇಟದಾಸಪುರ, ಹುಲ್ಲಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ದೂರುಗಳಿಗೆ 1912ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನವಲಖಾಗೆ ಪರಿಹಾರ

ನವದೆಹಲಿ (ಪಿಟಿಐ): ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ಬಂಧಿಸಲಾಗಿರುವ ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ ಅವರ ಗೃಹಬಂಧನ ಆದೇಶದ ಜಾರಿಗೆ ಇದ್ದ ಅಡ್ಡಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತೊಡೆದುಹಾಕಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy



ROYAL ENFIELD
royalenfield.com

Build on a 121 - year old legacy. Be a part of our team

Royal Enfield, the World's oldest motorcycling company in continuous production, is looking for:

SALES:
Sales Manager (4 yrs. exp.)
Delivery Manager (2 yrs. exp.)
Finance Coordinator (2 yrs. exp.)
Team Leader (2 yrs. exp.)
Showroom Executive (4 Wheeler)
Field Executive (Fresh / Expd.)
Customer Relation Manager (Sales & Service) (2 yrs. exp.)
Back Office Staffs (DMS/Allotment/Insurance/RTO) (2 yrs. exp.)
HR Manager (6yrs. exp.)
Admin Manager (8 yrs exp)
Brand Champs (F)

SERVICE:
Sales Manager (4 yrs. exp.)
Spares Manager (4 yrs. exp.)
Service Advisor (2 yrs. exp.)
Floor Supervisor (2 yrs. exp.)
PDI In-charge (2 yrs. exp.)
Spares Assistant (1 yr. exp.)
CRE (Sales & Service) (2 yrs. exp.)
Cashier (1 yr. exp.)
Certified / Skilled Technician (3 yrs.exp.)
Technician Trainee

Salaries & incentives would be best in the industry

Interested candidates can share CV to email ID: **hr@maverickmotors.co**

Walk-in interviews on Sunday 20th November 2022 Morning 10.00 am - 5.00 pm

Maverick Motors: #26, 2nd Main, 4th Cross, Near VRL, Sudhama Nagar, Bengaluru - 560 027 Mobile no: 9535778067.

Engg/ Production Technical

PEEANYA BASED MSME Manufacturing ELECTRICAL CONTROL PANELS requires ELECTRICAL ENGINEERS. nirmalams153@gmail.com. 8548054584

Marketing & Sales

TELECALLER (FEMALE), BUSINESS EXECUTIVE (Male) with Good English, Computer Skills For Advertising Company Basveswarnagar: 9845411113

General

WANTED BACKEND Staff, good salary, Male /Female Address:- Kamakshi palya, Bangalore-560079. Contact Immediately: 9845209595

WANTED
* Marketing Executives,
* HR personnel,
* Receptionist,
* Tele-marketing,
* Civil Site Engineers
With Real estate background, Retd Legal professional (In and around Ramamurthy Nagar)
Contact: Manjushree Land Developers
Priyanka Apartments yarayana playa Road, Devike Appa Rao layout, Ramamurthnagar, Bengaluru.
Email: manjushreeviptownship@gmail.com
Ph: 96062 00225 / 89716 61779

REQUIRED ADMINISTRATIVE Assistance with Good English and Computer knowledge having experience , for a Pvt Ltd Company near K R Puram , Contact 28530000 , 28532525

WE ARE HIRING ...
An Indo-Italian joint venture operating in India for more than 30 years need the following personnel for the their expansion.
- Product Development & Process Control Engineer
- Engineering & Design Executive
- Sales Executive

PRODUCT DEVELOPMENT & PROCESS CONTROL ENGINEER
- BE or Diploma in mechanical engineering field with 6-8 years of experience.
- Full knowledge of process control, quality control along with understanding of drawings for vendor development.
- Knowledge of castings and forgings required with material science for development of intricate castings.
- Understanding of Indian, British, German, and Italian standards will be an added advantage.
- Work experience in the above areas very essential.
- Result oriented person with great degree of commitment to work.

ENGINEERING & DESIGN EXECUTIVE:
- BE in Mechanical engineering with 6-8 years of experience.
- Complete knowledge of 3D – 2D development of drawings leading to, BOM details along with analysing physical-mechanical-thermal stress for designing and developing parts and products.
- Maintenance of drawing office with release and issuance of drawings through proper documentation for manufacturing and vendor development.
- Full knowledge of new products along with proto samples for self and customer approvals.
- Work experience in the above areas with proven record of accomplishment.

SALES & MARKETING EXECUTIVE
- BE in Mechanical engineering with 3-5 years of experience.
- Experience in Industrial engineering sector and product sales.
- Aptitude for application engineering.
- Complete knowledge of Sales process – B2B.
- Excellent communication & presentation skills.
- A pro-active person with proven record of accomplishments.

Engineers with the relevant experience highlighted only need apply with full details to the e-mail id given below. info050989@gmail.com

Sapna Since 1967
India's Largest Book Mall
Staff required for New Store Shortly Opening at HSR Layout.

Retail sales staff	- 40
Asst Store in charge	- 2
Floor in charge	- 3
Billing & Cashiers	- 4
Data entry operators	- 4
Helpers	- 4

Experienced / Freshers Min. PUC. Fluency in English & Kannada.

WALK IN INTERVIEW with CV and Photo on 18th, 19th & 21st Nov Timing - 5pm to 7pm at Sapna Book House 3rd Main Rd. Gandhinagar. Blr-9. Ph-080 40114455 or email CV to: hr@sapnaretail.com

SELF EMPLOYMENT Opportunity looking for LIC Agent Advisor, Full time/ Part time. Min. Qualification 10th Pass. Age: Above 18 years, training provided. Contact no.: 8310546679/ 8310521214.

WANTED-FOR Clerical Job Trasport Company Qualification PUC.Pass & office-boy Mail Candidate only Wilson Garden Siddaiah Road Near Shanthinagar Bus-stop Call:9845351200 9535218502

REQUIRED CONSULTANTS, Business Heads, Retired, Teachers, Homemakers for Leading MNC Fixed Pay & Income upto 1.5 lac p.m. 8861561347 /9686399918

Teachers/ Professors

WANTED TRAINED LADY TEACHERS: B.Sc. (PCM); B.A. English, S.S.; N.T.T.; D.Ed; P.E. INSTRUCTOR for Higher Primary School. Salary- Depending on experience and efficiency. Contact: 8884440214.

HINDI LANGUAGE Teachers needed for Chitrakoota CBSE School in Nagarbhavi, Kengeri Ring Road, Bangalore with high salary. Immediately or for the academic year. Call: 7829015333

VES INSTITUTIONS Wanted Teachers, Date: 18th and 19th November, Timings: 4.00- 6.00 pm. Contact: 080- 26697027

IMPACT INSTITUTIONS Sahakara Nagar, Bangalore
WANTED **LECTURERS IN CS**
Candidates with first class **BE or M.Tech** in **CS / IT** and interest or experience in teaching.
IMP-22317
Call: 94487 48297 To schedule your interviews

TEACHER'S WE'RE hiring Open positions 1. Math Teacher 2. Computer Science Teacher 3. Nursery Teacher. Walk-in interview (10 am to 2 pm) Sri Vidyaniketan School, 203/1, 1st main, 5th cross K N Ext, Yeshwanthpur, Bangalore- 560022. Ph: 9945201342 / 9900858193

SONA VALLIAPPA PUBLIC SCHOOL (ICSE) Hejjala, Mysore Road requires Primary/ Highschool English, Science, Social, Computer Science Teachers. 9880439138/ 7259322368

Accounts & Finance

SENIOR ACCOUNTANT needed immediately with minimum 5 years of experience for CHITRAKOOTA CBSE School, Bangalore (Kengeri). Age below 45 years. with High Salary. Call: 7829646333

WANTED ACCOUNTANT/ ACCOUNTS ASSISTANT MALE/ FEMALE with well Experience in Tally for Frazer Town, Bangalore. Email: skr299@gmail.com

Architects

WANTED CIVIL ENGG DRAUGHTMEN - One year experience, Preferably Ladies. 'ESSPEE ASSOCIATES' Hanumanthnagar, Bangalore-19. Contact: 26613901/ 98453-01767

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

PUBLIC NOTICE

INVITING EXPRESSION OF INTEREST
We, with **Mr. Kirti K Mehta and Mrs. Jyoti Mehta** are absolute owners and its possession of the property mentioned here under. Apartment No. G-603 on 6th Floor, in "G" Wing-Pegasus, Brigade Gate way Residences, No. 26/1, Dr. Rajkumar Road, Malleshwaram West Bangalore-560055. having super built area of 1640 Sq.Ft. with One Car Park. Base Price Rs.2.00 Crores. The above - mentioned property is for sale under SWISS Challenge method, based on existing offer in hand for Rs.2.00 Crores, interested/eligible buyers having adequate financial capability may offer above the Base Price within in 7 days and the Primary Offeror, has the first right to reject under SWISS Challenge Method.
Contact: Mr. Kirti K Mehta Mobile No. +91 9845026430

PUBLIC NOTICE
My clients have negotiated to purchase the schedule property with its owners (1) **Sri O.S. SURESH,** S/o.Late O.V. Subbiah, aged about 69 years, (2) Smt. Rekha Suresh, W/o. O.S.Suresh, aged about 69 years, both R/a No.75, Vani Vilas Road, Basavanagudi, Bangalore-560 004.
The aforesaid owners have represented that they are in possession and enjoyment of the schedule property having acquired the schedule property through Partition Deed dt. 21.2.2007, Doc. No.6003/2006-07, Book-I, recorded in CD BSGD 90 and registered in the office of Sub-Registrar, Basavanagudi, Bangalore.
Any persons have any objections or claims over the schedule property are hereby notified to lodge their claims along with the claim documents with the undersigned within 15 days from today, failing which my clients with proceed to Purchase the schedule property.
SCHEDULE PROPERTY
All that piece and parcel of commercial Property bearing No.75, bearing PID No: 49-56-75, Vani Vilas Road, Bangalore, (being the ground floor portion of the schedule A building) having a built-up area of 3587 Sq. feet along with 720 Sq. feet of car park area in all having a super built up area of 4307 Sq. feet along with an extent of 1458 Sq. ft. of undivided share in the land out of 5820 Sq. ft., and together bounded onEast by Space Open to sky and thereafter property bearing No. 74, West by Space Open to Sky and Thereafter Property bearing No. 76, North by Space Open to Sky and Vanivilas Road and South by Space Open to Sky and Thereafter Property bearing No.75.
P.D. Surana, *Advocate,* No.9, 2nd Floor, KPKS Bldg, 2nd Main, Gandhinagar, Bangalore-9 M: 98450-81500 Bangalore: Date: 15-11-2022

REAL ESTATE BUYING

General

General

WE DO Agriculture Land Conversions, Change of Land Use,Phodi, Property Documentation Services and Marketable Title.Call Verna Developers, Barton Centre, MG-Road, Bengaluru. 9916310226/ 9620253180. www.vernadevelopers.com

REAL ESTATE SELLING

Flat

Jayanagar

ADARSH PALACE Sale 4 BHK Flat: 2850 sft, Club Facilities, 2 car-parks, Furnished, 5th block Jayanagar. Owner: 9342247637.

AUTOMOTIVE

Four Wheelers Selling

Hyundai

FOR SALE Accident Flood Effected Hyundai Creta With R C KA 03 MY 2311 2016 Model At Trident Hyundai Hosur Road Offers To Be Sent Within 7days 9844124991

BUSINESS

Business to Business

Business

WANTED BUSINESS Partner for Mannadiar Ayurvedic. Monthly income One Lakh. Contact: 9916448195

Business Offers

General

Reputed Real Estate Company in Bangalore, Looking out for **Real Estate consultancies to Market their Villa plots at Basavanapura, K.R.Puram, Bangalore. Interested Personnel**
Contact: Manjushree Land Developers
Priyanka Apartments yarayana playa Road, Devike Appa Rao layout, Ramamurthnagar, Bengaluru.
Email: manjushreeviptownship@gmail.com
Ph: 96062 00225 / 89716 61779

Finance

NRI'S INVESTMENT And Finance Available On Low Interest Against Properties, Land & Building,Sites,Flats, Converted& Agriculture Lands Call:7411265189

EDUCATIONAL

Admission

PASS IN ONE YEAR: LLB (Can Practice, Regular). All Under Graduate and Post Graduate Courses from Govt. Recognised Universities. Also offering BTech/BAMS/ BNYS/BUMS/Pharmacy Courses. Admissions shortly close. Asha Academy: 9448460103/ 7093438248

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

CHANGE OF NAME
I, **SANIDHYA M, SANIDHYA MANJUNATH** and **MANJUNATH SANIDHYA GUJJAR,** R/a No. 34, Sri Gowri Nilaya 2nd floor, 1st main road, Near Siddeshwara Temple, Siddeshwara Layout, Bangalore North, Bengaluru - 560073, declare that all the above names pertain to me only and henceforth I shall be known as **SANIDHYA MANJUNATH** only vide affidavit dated 15.11.2022 before Notary N. Mahesha, Bangalore.

I, SHIVAPUTRA FAKKIRAPPA HADIMANI S/o. Fakkirappa Hadimani, R/of No. 292/42 Sri. Kanaka Nilaya, Venkateshwara Layout Aadarsha Nagar, Arasinakunte, Nelamangala, Karnataka-562123 have changed my name from SHIVAPUTRA FAKKIRAPPA HADIMANI to SHIVAPUTRA HADIMANI vide Affidavit dated 14-11-2022 sworn before Additional Chief Magistrate Bangalore Rural District Bangalore.

CHANGE OF NAME
I, **Abdulla Shahzade,** Residing at No. 2/A, 19/5, 16th Cross, Lakkasandra, Bangalore- 560030, have changed my son's name from **MOHAMMED AYAAN** to **MOHAMMED AYAAN SHAHZADE** vide affidavit dated, 15/11/2022. before notary Mohammed Hussain, Bangalore. Henceforth he shall be called **MOHAMMED AYAAN SHAHZADE** only.

I, VANDANA Dandeen D/o Narayanappa, R/a #2859, 14th D Cross 8th E Main, RPC Layout Attiguppe, Vijayanagar Bangalore-560040 Have Changed My Name to Vandana W/o S Anantha Padmanabha, Vide Affidavit Dated 15-11-2022 Before Notary HS Sakalesh Aradhya, Bangalore

CHANGE OF NAME
I, **Abdulla Shahzade,** Residing at No. 2/A, 19/5, 16th Cross, Lakkasandra, Bangalore- 560030, have changed my son's name from **MOHAMMED AMAAN** to **MOHAMMED AMAAN SHAHZADE** vide affidavit dated, 15/11/2022. before notary Mohammed Hussain, Bangalore. Henceforth he shall be called **MOHAMMED AMAAN SHAHZADE** only.

I, JAYANTH GUNDAPPA REDDY REDDY resident of No. 104, 2nd Cross, Gundappa Reddy Layout, Bengaluru 560032 have changed my name to JAYANTH GUNDAPPA REDDY vide affidavit dated 28-10-2022 sworn before notary B.M. Chandrashekar, Bangalore

I, SOHANA VASANTLAL R/a #.426, Flat No. 102, S.V.Shantha Nilaya, 4th main, Srinagar, Bangalore 560050 Have Changed my Name to SOHANA VASANTLAL JAIN Vide Affidavit Dated 14/11/2022 before Notary S.N. Madhu, Bangalore

I, 14930304Y, NK, Venkatesh S, Unit 9, Mech. Inf. C/o. 56, APO, declare that my son's name is wrongly mentioned in service record as V. SURJEET correct name V. SUJAY, affidavit dated 11/08/2017, notary Sandeep Singh, Jammu.

I, MAHESH ANANTHA RAJU Residing at 55, 21st A main, Marenahalli, J.P,Nagar 2nd phase, Bengaluru-78 have changed my name as MAHESH ANANTHA RAJU YELAVARTHY vide affidavit dated 4/11/2022 before VI Addl-Chief Metropolitan Magistrate Bangalore

PATEL RAMESH KUMAR, 6498820Y, SEP/ASH, Vill - Arjansar, Radhanpur, Patan Gujarat, changed Son's name RAHI KUMAR to RAHIL KUMAR, 14/11/2022, Notary K.V. Mani, Bangalore

14686760X NK/TECH COMN Dinesh Kumar, ASC Center & College, Mother's name Records MANSA DEVI to MANSA, Notary BM Chandrashekar.

JC672464L, SUB/MT, DURAGAPPA GASTI, Vill - Khanagaon, Gokak, Belagavi, Karnataka, changed Son's name KRISHANA GASTI to KRISHNA GASTI, 14/11/2022, Notary K.V. Mani, Bangalore

JC672464L, SUB/MT, DURAGAPPA GASTI, Vill- Khanagaon, Gokak, Belagavi, Karnataka, changed Son's name RAHUL DURGAPPA GASTI to RAHUL GASTI, 14/11/2022, Notary K.V. Mani, Bangalore

JC672464L, SUB/MT, DURAGAPPA GASTI, Vill- Khanagaon, Gokak, Belagavi, Karnataka, changed Son's name ANIL GASTI to ANIL DURAGAPPA GASTI, 14/11/2022, Notary K.V. Mani, Bangalore

RENUKA, WIFE/O JC672464L, SUB/MT, DURAGAPPA GASTI, Vill- Khanagaon, Gokak, Belagavi, Karnataka, changed name RENUKA to RENUKA GASTI, 14/11/2022, Notary K.V. Mani, Bangalore

HEALTH SPECIAL

HHCC
ಹಿಯರಿಂಗ್ ಹೆಲ್ಥ್ ಕೇರ್ ಕ್ಲಿನಿಕ್ ಎಎಸ್

ಅಗೋಚರ ಶ್ರವಣ ಸಾಧನ @ 25% ರಿಯಾಯಿತಿ
ಈ ಋತುವಿನ ಅತ್ಯುತ್ತಮ ವ್ಯವಹಾರಗಳು
ಇತ್ತೀಚಿನ ಶ್ರವಣ ಸಾಧನಗಳ ಪ್ರಯೋಗಗಳು
ಅಪ್‌ಗ್ರೇಡ್‌ಗಾಗಿ ಅತ್ಯಾಕರ್ಷಕ ಕೊಡುಗೆಗಳು
ವಾಟರ್ ಪ್ರೂಫ್ ಶ್ರವಣ ಸಾಧನ
ಇಎಂಐ ಲಭ್ಯವಿದೆ.
ಹಿರಿಯ ನಾಗರಿಕರಿಗೆ ಮನೆ ಭೇಟಿ ಲಭ್ಯವಿದೆ
ಕಳೆದ 2+ ದಶಕಗಳಿಂದ ಶ್ರವಣ ಪರಿಹಾರಗಳನ್ನು ಒದಗಿಸುತ್ತಿದೆ
ಶಾಖೆಗಳು: ಆರ್‌ಟಿ ನಗರ | ವಿಜಯನಗರ | ಯಲಹಂಕ | ಸಹಕಾರ ನಗರ ಶೇಷಾದ್ರಿಪುರಂ | ರಾಜಾಜಿನಗರ | ಗುರುಗುಂಟೆ ಪಾಳ್ಯ
ಇತರ ನಗರಗಳು: ಬಳ್ಳಾರಿ | ಬಾಗಲಕೋಟೆ | ದಾವಣಗೆರೆ | ಹುಬ್ಬಳ್ಳಿ ಶಿವಮೊಗ್ಗ | ಬೆಳಗಾವಿ | ಭಟ್ಕಳ | ಕಲಬುರ್ಗಿ | ಗದಗ
+91 99456 11100
*T&C Apply

TRAVEL CORNER

SOUTH STAR RAIL
ರೈಲು ಪ್ರಯಾಣ ಭಾರತ್ ಗೌರವ್ ರೈಲು ಖಾಸಗಿ ಸೇವೆ ಒದಗಿಸುವವರು ಸೌತ್ ಸ್ಟಾರ್ ರೈಲ್
ಕೊಯಮತ್ತೂರು ⇌ ಶಿರಡಿ
22-11-2022 to 26-11-2022
From Yelahanka

SLEEPER (NON -AC)	₹ 5670/-
3rd AC	₹ 9450 /-

(Including GST)
1st AC & 2nd Ac ಸಹ ಲಭ್ಯವಿದೆ
For Ticket Booking
+91 96867 53181 | +91 99435 68160 | +91 97514 56780 | +91 76397 59149 | +91 87548 49992
For More Details: Tollfree No: 1800 210 2991
www.southstarrail.com

ಸಚಿವ ಬಿ.ಸಿ.ನಾಗೇಶ್ ಮಾಹಿತಿ ● ತಜ್ಞರ ಸಮಿತಿ ನೇಮಕ– ವರದಿ ಆಧರಿಸಿ ಕ್ರಮ

‘ತಿಂಗಳಾಂತ್ಯಕ್ಕೆ ಪಠ್ಯಕ್ರಮ ಚೌಕಟ್ಟು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಪೂರಕವಾಗಿ ರಾಜ್ಯ ಪಠ್ಯಕ್ರಮ ಚೌಕಟ್ಟನ್ನು (ಎಸ್‌ಸಿಎಫ್) ಈ ತಿಂಗಳ ಅಂತ್ಯದೊಳಗೆ ಬಿಡುಗಡೆ ಮಾಡಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಕೇಂದ್ರ ಸರ್ಕಾರವು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಈಗಾಗಲೇ ಬಿಡುಗಡೆ ಮಾಡಿದೆ. ಅದೇ ಮಾದರಿಯಲ್ಲಿ ರಾಜ್ಯ ಪಠ್ಯಕ್ರಮ ಚೌಕಟ್ಟು ರೂಪಿಸಲು ತಜ್ಞರ ಸಮಿತಿ ನೇಮಿಸಲಾಗುವುದು. ಸಮಿತಿಯ ವರದಿ ಆಧರಿಸಿ ಎಸ್‌ಸಿಎಫ್ ಅಂತಿಮಗೊಳಿಸಿ, ಬಿಡುಗಡೆ ಮಾಡುತ್ತೇವೆ’ ಎಂದರು.

ಎನ್‌ಇಪಿ ಅನುಷ್ಠಾನಕ್ಕಾಗಿ ಶಾಲಾ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಸಮಿತಿಯೊಂದನ್ನು ರಚಿಸಲಾಗಿದೆ. ಐಎಎಸ್ ಅಧಿಕಾರಿ ಎಂ.ಟಿ. ರೇಜು ಅವರನ್ನು ಸಮಿತಿಯ ಸಂಚಾಲಕರನ್ನಾಗಿ ನೇಮಿಸಲಾಗಿದೆ. ಡಿಸೆಂಬರ್ 25ರೊಳಗೆ ನೂತನ ಪಠ್ಯಕ್ರಮ ಅಂತಿಮಗೊಳಿಸಲಾಗುವುದು ಎಂದು ಹೇಳಿದರು.

ಮೂಲಸೌಕರ್ಯಕ್ಕೆ ಒತ್ತು: ಶಿಕ್ಷಣ ಕ್ಷೇತ್ರದಲ್ಲಿನ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ಮೂರು ವರ್ಷಗಳಲ್ಲಿ 8,000 ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ. ಮುಂದಿನ ಒಂದು ವರ್ಷದ ಅವಧಿಯಲ್ಲಿ 8,000 ಕೊಠಡಿಗಳನ್ನು ನಿರ್ಮಿಸಲಾಗುವುದು ಎಂದು ನಾಗೇಶ್ ತಿಳಿಸಿದರು.

ಸರ್ಕಾರಿ ಶಾಲೆಗಳಿಗೆ ಸೇರಿದ ಜಮೀನುಗಳ ದಾಖಲೆಗಳಲ್ಲಿನ ದೋಷಗಳು ಹಾಗೂ ಶಾಲಾ ಆಸ್ತಿಗಳ ಒತ್ತುವರಿ ತೆರವಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಅಂತಹ 18,000 ಪ್ರಕರಣಗಳಿದ್ದವು. ಈವರೆಗೆ 3,000 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ಹೇಳಿದರು.

ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಗಳ ವ್ಯಾಪ್ತಿಯಲ್ಲಿರುವ ಸರ್ಕಾರಿ ವಸತಿ ಶಾಲೆಗಳಲ್ಲಿನ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ. ಈ ಕಾರಣಕ್ಕಾಗಿ ಅಂತಹ ವಸತಿ ಶಾಲೆಗಳಲ್ಲಿನ ಶಿಕ್ಷಕರ ನೇಮಕಾತಿ, ಪಠ್ಯಕ್ರಮ, ಬೋಧನಾ ಕ್ರಮ ಸೇರಿದಂತೆ ಶೈಕ್ಷಣಿಕ ವಿಚಾರಗಳ ನಿರ್ವಹಣೆಯನ್ನು ಶಿಕ್ಷಣ ಇಲಾಖೆಗೆ ವಹಿಸುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಪತ್ರ ಬರೆಯಲಾಗಿದೆ ಎಂದರು.

ನಿರ್ಣಯಕ್ಕೆ ಬಂದಿಲ್ಲ: ಶಾಲಾ ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಿಸುವುದಕ್ಕೆ ಸಂಬಂಧಿಸಿದಂತೆ ಇಲಾಖೆಯು ಈವರೆಗೆ ಯಾವುದೇ ನಿರ್ಣಯವನ್ನೂ ಕೈಗೊಂಡಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಡಿಸೆಂಬರ್ ಒಳಗೆ ಶಾಲಾ ಪ್ರವಾಸಕ್ಕೆ ಸಮ್ಮತಿ

ಬೆಂಗಳೂರು: ಕೋವಿಡ್ ಕಾರಣಕ್ಕಾಗಿ ಸ್ಥಗಿತಗೊಂಡಿದ್ದ ಶಾಲಾ ಪ್ರವಾಸಕ್ಕೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಸಿರು ನಿಶಾನೆ ತೋರಿದ್ದು, ಡಿಸೆಂಬರ್ ಒಳಗೆ ಪೂರ್ಣಗೊಳಿಸುವಂತೆ ಸುತ್ತೋಲೆ ಹೊರಡಿಸಿದೆ.

ಪ್ರತಿ ವರ್ಷ ಜೂನ್‌ನಿಂದ ಡಿಸೆಂಬರ್ ಒಳಗೆ ಪ್ರವಾಸ ಪೂರ್ಣಗೊಳಿಸಬೇಕು. ಡಿಸೆಂಬರ್ ನಂತರ ಶೈಕ್ಷಣಿಕ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕು. ಪೋಷಕರು ಒಪ್ಪಿಗೆ ನೀಡಿದ ವಿದ್ಯಾರ್ಥಿಗಳನ್ನಷ್ಟೆ ಶೈಕ್ಷಣಿಕ ಪ್ರವಾಸಕ್ಕೆ ಕರೆದುಕೊಂಡು ಹೋಗಬೇಕು. ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಸ್ಥಳಗಳನ್ನು ಆಯ್ಕೆಮಾಡಿಕೊಳ್ಳಬೇಕು. ಪ್ರವಾಸ ಕೈಗೊಳ್ಳುವ ಖಾಸಗಿ ಶಾಲೆಗಳು ಶಾಲೆಯ ಮಾನ್ಯತೆ ನವೀಕರಣ ಮಾಡಿಕೊಳ್ಳುವುದು ಕಡ್ಡಾಯ. ಪ್ರವಾಸದ ದಿನಗಳನ್ನು ರಜೆಯ ಅವಧಿ ಎಂದು ಪರಿಗಣಿಸಬೇಕು. ಬಳಸಿಕೊಂಡ ದಿನಗಳನ್ನು ಶನಿವಾರ ಮತ್ತು ಭಾನುವಾರ ಹೆಚ್ಚುವರಿ ತರಗತಿಗಳನ್ನು ನಡೆಸುವ ಮೂಲಕ ಪಠ್ಯ ಚಟುವಟಿಕೆ ಪೂರ್ಣಗೊಳಿಸಬೇಕು ಎಂದು ಆಯುಕ್ತರು ಸೂಚಿಸಿದ್ದಾರೆ.

ಪ್ರವಾಸದ ಸಮಯದಲ್ಲಿ ಎದುರಾಗುವ ಸಮಸ್ಯೆಗಳಿಗೆ ಶಾಲಾ ಮುಖ್ಯಸ್ಥರನ್ನೇ ಹೊಣೆ ಮಾಡಲಾಗುವುದು. ಪ್ರವಾಸೋದ್ಯಮ ಇಲಾಖೆ ಮಾನ್ಯತೆ ಪಡೆದ ಅಥವಾ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲೇ ಪ್ರಯಾಣ ಮಾಡಬೇಕು. ಖಾಸಗಿ, ಮಿನಿ ವಾಹನಗಳನ್ನು ಬಳಸುವಂತಿಲ್ಲ. ಮಕ್ಕಳ ಆರೋಗ್ಯ ಸುರಕ್ಷತೆ, ಕೋವಿಡ್ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ವಿದ್ಯಾರ್ಥಿನಿಯರ ಕ್ಷೇಮಕ್ಕೆ ವಿಶೇಷ ಎಚ್ಚರಿಕೆ ವಹಿಸಬೇಕು ಎಂದು ವಿವರಿಸಲಾಗಿದೆ.

ಶಾಲಾ ಪ್ರವೇಶಕ್ಕೆ 6 ವರ್ಷ: 2025–26ನೇ ಸಾಲಿನಿಂದ ಜಾರಿ

ಬೆಂಗಳೂರು: ಒಂದನೇ ತರಗತಿಗೆ ಪ್ರವೇಶ ಪಡೆಯಲು ಮಗುವಿಗೆ 6 ವರ್ಷಗಳು ಪೂರ್ಣಗೊಂಡಿರಬೇಕು ಎಂಬ ನಿಯಮವನ್ನು 2025–26ನೇ ಸಾಲಿನಿಂದ ಕಡ್ಡಾಯಗೊಳಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕಾರ ಶಾಲಾ ಶಿಕ್ಷಣಕ್ಕೆ ಮಗು ಪ್ರವೇಶ ಪಡೆಯಲು 6 ವರ್ಷಗಳು ಪೂರ್ಣಗೊಂಡಿರುವುದು ಕಡ್ಡಾಯ. ಶಿಕ್ಷಣ ತಜ್ಞರ ಸಲಹೆಯೂ ಅದೇ ಆಗಿದೆ. 23 ರಾಜ್ಯಗಳು ಈಗಾಗಲೇ ನಿಯಮ ಅಳವಡಿಸಿಕೊಂಡಿವೆ. ರಾಜ್ಯದಲ್ಲೂ ಮುಂದಿನ ಶೈಕ್ಷಣಿಕ ಸಾಲಿನಿಂದಲೇ ಅಳವಡಿಸಿಕೊಳ್ಳಲು ಸರ್ಕಾರ ನಿರ್ಧರಿಸಿತ್ತು. ಈಗ ಪುನರ್ ಆದೇಶ ಹೊರಡಿಸಿದ್ದು, 2025–26ನೇ ಸಾಲಿನಿಂದ ಅನ್ವಯಿಸಲು ಸೂಚಿಸಿದೆ.

2023–24ನೇ ಶೈಕ್ಷಣಿಕ ಸಾಲಿನಿಂದ 2024–25ರವರೆಗೆ ಎರಡು ವರ್ಷಗಳು ವಯೋಮಿತಿ ಕಡ್ಡಾಯಕ್ಕೆ ವಿನಾಯಿತಿ ನೀಡಲಾಗಿದೆ. ಪೋಷಕರು ತಮ್ಮ ಇಚ್ಛೆಯ ಮೇಲೆ ಮಕ್ಕಳನ್ನು ಶಾಲೆಗೆ ಸೇರಿಸಬಹುದು. 2025 ಜೂನ್ 1ನೇ ತಾರೀಕಿನ ನಂತರ ಶಾಲೆಗೆ ದಾಖಲಾಗುವ ಮಗುವಿಗೆ 6 ವರ್ಷಗಳು ಕಡ್ಡಾಯ. ಉಳಿದಂತೆ ಪ್ರಸಕ್ತ ವರ್ಷದ ಜುಲೈನಲ್ಲಿ ಹೊರಡಿಸಿದ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಬಳ್ಳಾರಿಯಲ್ಲಿ ಬಿಜೆಪಿ ‘ನವಶಕ್ತಿ ಸಮಾವೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಎಸ್‌ಟಿ ಮೋರ್ಚಾದ ‘ನವಶಕ್ತಿ ಸಮಾವೇಶ’ ಇದೇ 20 ರಂದು ಬಳ್ಳಾರಿಯಲ್ಲಿ ನಡೆಯಲಿದೆ ಎಂದು ಎಸ್‌.ಟಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ತಿಪ್ಪರಾಜು ಹವಾಲ್ದಾರ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಈ ಕಾರ್ಯಕ್ರಮವನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಉದ್ಘಾಟಿಸಲಿದ್ದು, ಸಮಾವೇಶದಲ್ಲಿ ಸುಮಾರು 10 ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ ಎಂದು ಹೇಳಿದರು.

ಈ ಸಮಾವೇಶದಲ್ಲಿ ಎಸ್‌ಟಿ ಸಮುದಾಯಗಳ ಜನರು ಭಾಗವಹಿಸಿ ಮೀಸಲಾತಿ ಹೆಚ್ಚಳ ಮಾಡಿದ್ದಕ್ಕೆ ಸಂತಸ ಸೂಚಿಸಿ, ವಿಜಯೋತ್ಸವ ಆಚರಿಸಲಿದ್ದಾರೆ. 68 ಕ್ಕೂ ಹೆಚ್ಚು ಬುಡಕಟ್ಟು ಕಲಾ ತಂಡಗಳು ಪಾಲ್ಗೊಳ್ಳಲಿವೆ. ಕೊಪ್ಪಳ, ರಾಯಚೂರು, ಯಾದಗಿರಿ, ಚಿತ್ರದುರ್ಗ, ಬಳ್ಳಾರಿ, ಹಳೆ ಮೈಸೂರು, ಮಧ್ಯಕರ್ನಾಟಕದ ಸುತ್ತಲಿನ ಪ್ರದೇಶಗಳಿಂದ 6 ಲಕ್ಷ ಜನರನ್ನು ನಿರೀಕ್ಷಿಸಲಾಗಿದೆ. ರಾಜ್ಯದ ಇತರ ಜಿಲ್ಲೆಗಳಿಂದ 4 ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ. ಇದಕ್ಕಾಗಿ 6,200 ಬಸ್‌ಗಳ ವ್ಯವಸ್ಥೆ ಮಾಡಲಾಗಿದ್ದು, 15 ಸಾವಿರದಿಂದ 18 ಸಾವಿರ ಕ್ರೂಸರ್ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಬಳ್ಳಾರಿಯಲ್ಲಿ 28 ಕಡೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಬಿಜೆಪಿಯ ಮುಖಂಡರು ಮತ್ತು ಬಿಜೆಪಿ ಸರ್ಕಾರ ಮೀಸಲಾತಿ ವಿರೋಧಿಗಳು ಎಂದು ಕಾಂಗ್ರೆಸ್ ಪಕ್ಷವು ಸುಳ್ಳು ಮಾಹಿತಿಯನ್ನು ಜನರ ಮನಸ್ಸಿನಲ್ಲಿ ಬಿತ್ತುತ್ತಿದೆ. ಅದನ್ನು ಹೋಗಲಾಡಿಸುವ ಮಾದರಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಮೀಸಲಾತಿ ಹೆಚ್ಚಿಸಿದೆ. ಪರಿಶಿಷ್ಟ ಪಂಗಡದ ಬಗ್ಗೆ ಬಿಜೆಪಿಗಿರುವ ಬದ್ಧತೆಗೆ ಇದು ಸ್ಪಷ್ಟ ನಿದರ್ಶನ ಎಂದರು.

ನವಶಕ್ತಿ ಸಮಾವೇಶದಲ್ಲಿ ಕೇಂದ್ರ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಅರ್ಜುನ್ ಮುಂಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ಭಾಗವಹಿಸಲಿದ್ದಾರೆ ಎಂದು ಅವರು ವಿವರಿಸಿದರು.

‘ಮತಾಂತರಕ್ಕೆ ಅಮೆಜಾನ್ ಹಣ’

ನವದೆಹಲಿ (ಪಿಟಿಐ): ಅಮೆರಿಕ ಮೂಲದ ಇ–ಕಾಮರ್ಸ್ ದೈತ್ಯ ‘ಅಮೆಜಾನ್ ಕಂಪನಿ’ಯು ದೇಶದ ಈಶಾನ್ಯ ರಾಜ್ಯಗಳಲ್ಲಿ ಧಾರ್ಮಿಕ ಮತಾಂತರದಲ್ಲಿ ತೊಡಗಿರುವವರಿಗೆ ಹಣಕಾಸು ನೆರವು ನೀಡುತ್ತಿದೆ. ಅಲ್ಲದೆ, ಹಣ ಅಕ್ರಮ ವರ್ಗಾವಣೆಯಲ್ಲಿ ತೊಡಗಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖವಾಣಿ (ಆರೆಸ್ಸೆಸ್) ‘ಆರ್ಗನೈಸರ್’ ವಾರ ಪತ್ರಿಕೆ ಗಂಭೀರ ಆರೋಪ ಮಾಡಿದೆ.

‘ಅಮೆರಿಕದ ಬ್ಯಾಪ್ಟಿಸ್ಟ್ ಚರ್ಚ್‌ಗೆ (ಎಬಿಎಂ) ಅಮೆಜಾನ್ ಹಣಕಾಸು ನೆರವು ನೀಡುತ್ತಿದೆ’ ಎಂದು ಪತ್ರಿಕೆಯು ಇತ್ತೀಚಿನ ಆವೃತ್ತಿಯ ಮುಖಪುಟ ಲೇಖನದಲ್ಲಿ ಹೇಳಿದೆ.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

BEFORE THE HON'BLE NATIONAL COMPANY LAW TRIBUNAL, BENGALURU
IN THE MATTER OF
Piramal Capital and Housing Finance Limited vs Mangala B Dhammanagi
IN
IA No 346/BB/2022
IN
CP(IB)/59/BB/2021

Whereas IA 346/2022 in CP (IB) /59/BB/2021 was filed by the Resolution Professional before the Hon'ble National Company Law Tribunal, Bengaluru Bench wherein you, **Mangala B Dhammanagi,** erstwhile director of Dhammanagi Developers Private Limited, are arrayed as Respondent, notice which was issued to you as per order dated 06 October 2022 was returned undelivered stating the reason “Addressee left, hence returned to sender”. Therefore, you are hereby directed to appear before the Hon'ble National Company Law Tribunal, Bengaluru Bench on **23 November 2022** failing which the matter will be heard and disposed in your absence.

BEFORE THE HON'BLE NATIONAL COMPANY LAW TRIBUNAL, BENGALURU
IN THE MATTER OF
Piramal Capital and Housing Finance Limited vs Babu A Dhammanagi
IN
IA No 357/BB/2022
IN
CP(IB)/58/BB/2021

Whereas IA 357/2022 in CP (IB) /58/BB/2021 was filed by the Resolution Professional before the Hon'ble National Company Law Tribunal, Bengaluru Bench wherein you, **Babu A Dhammanagi,** erstwhile director of Dhammanagi Developers Private Limited, are arrayed as Respondent, notice which was issued to you as per order dated 06 October 2022 was returned undelivered stating the reason “Addressee left, hence returned to sender”. Therefore, you are hereby directed to appear before the Hon'ble National Company Law Tribunal, Bengaluru Bench on **23 November 2022** failing which the matter will be heard and disposed in your absence.

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ
ನಂ.15, ಸುಬ್ಬರಾಮಚೆಟ್ಟಿ ರಸ್ತೆ, ನೆಟ್ಟಕಲಪ್ಪ ವೃತ್ತ, ಬಸವನಗುಡಿ, ಬೆಂಗಳೂರು–560004

ಪ್ರಕಟಣೆ

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಬೆಂಗಳೂರು ಇದರ 2020–21ನೇ ಸಾಲಿನ 23ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಕರ್ನಾಟಕ ಸರ್ಕಾರದ ಅನುಮತಿಯಂತೆ ವಿಡಿಯೋ ಕಾನ್ಫರೆನ್ಸ್ (ವರ್ಚುಯಲ್) ಮುಖಾಂತರ ದಿನಾಂಕ : 19–11–2022ನೇ ಶನಿವಾರದಂದು ಬೆಳಿಗ್ಗೆ 10.30 ಗಂಟೆಗೆ ನಡೆಸಲು ತೀರ್ಮಾನಿಸಲಾಗಿದೆ. ವಿಡಿಯೋ ಕಾನ್ಫರೆನ್ಸ್ (ವರ್ಚುಯಲ್) ಝೂಮ್ ಲಿಂಕ್ https:// raghavendrabank.com/AGM ನ ಮೂಲಕ ವಾರ್ಷಿಕ ಮಹಾಸಭೆಯ ಪ್ರವೇಶ ಪಡೆಯಬಹುದಾಗಿದ್ದು, ಸದರಿ ಲಿಂಕ್‌ನ್ನು ಸದಸ್ಯರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವುದು ಹಾಗೂ ಬ್ಯಾಂಕಿನ ಜಾಲತಾಣದಲ್ಲಿಯೂ ಪ್ರಕಟಿಸಲಾಗುವುದು.

ವಾರ್ಷಿಕ ಮಹಾಸಭೆಯ ಸೂಚನಾ ಪತ್ರ ಹಾಗೂ 2020–21ನೇ ಸಾಲಿನ ವಾರ್ಷಿಕ ವರದಿಯನ್ನು ಬ್ಯಾಂಕಿನ ಜಾಲತಾಣವಾದ “www.raghavendrabank.com”ನಲ್ಲಿ ಪಡೆಯಬಹುದಾಗಿದೆ.

ಸಹಿ/–
(ಆರ್. ಅಶೋಕನ್)
ಆಡಳಿತಾಧಿಕಾರಿಗಳು

ಸ್ಥಳ : ಬೆಂಗಳೂರು
ದಿನಾಂಕ : 16–11–2022

ರೈಲು ಗಾಲಿ ಕಾರ್ಖಾನೆ ಯಲಹಂಕ, ಬೆಂಗಳೂರು-560064.
ವೆಬ್‌ಸೈಟ್: www.rwf.indianrailways.gov.in ಇ-ಮೇಲ್ : smm.rwfblr@gmail.com
आज़ादी का अमृत महोत्सव

ಟೆಂಡರ್ ಸಂಖ್ಯೆ : ಆರ್‌ಡಬ್ಲ್ಯೂಎಫ್/ಎಸ್/008/2022–23 ದಿನಾಂಕ :14/11/2022

ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಈ ಕೆಳಕಂಡ ಸಾಮಗ್ರಿಗಳನ್ನು ಪೂರೈಸಲು ಆಸಕ್ತ ಅನುಭವಿ OEMಗಳು / ತಯಾರಕರಿಂದ ಅಥವಾ ಅಧಿಕೃತ ಏಜೆಂಟ್ ಗಳಿಂದ ಎಲೆಕ್ಟ್ರಾನಿಕ್/ ಮ್ಯಾನುಯಲ್, ಓಪನ್ / ಜಾಗತಿಕ ಟೆಂಡರ್‌ನ್ನು ಈ ಕೆಳಕಂಡ ವಸ್ತುಗಳ ಪೂರೈಕೆಗಾಗಿ ಆಹ್ವಾನಿಸಿದ್ದಾರೆ.

ಟೆಂಡರ್.ನಂ & ಟೆಂಡರ್‌ನ ಸಂಕ್ಷಿಪ್ತ ವಿವರ
P2225850. ಆರ್‌ಡಬ್ಲ್ಯೂಎಫ್ ಆಡಳಿತ ಕಟ್ಟಡದಲ್ಲಿ ಸಿಸಿಟಿವಿ ಕಣ್ಗಾವಲು ಅಳವಡಿಕೆ, ಪೂರೈಕೆ, ಪರೀಕ್ಷೆ, ಏಕೀಕರಣ ಮತ್ತು ಕಾರ್ಯಾರಂಭ. **ಟೆಂಡರ್ ಕೊನೆಗೊಳ್ಳುವ ದಿನಾಂಕ & ಸಮಯ : 28/11/2022ರ 14.00 ಗಂಟೆಯವರೆಗೆ**
ಮೇಲ್ಕಂಡ ಟೆಂಡರ್‌ನ್ನು **(P2225850)** ಭಾರತೀಯ ರೈಲ್ವೆಯ ಆನ್‌ಲೈನ್ ವೆಬ್‌ಸೈಟ್ **www.ireps.gov.in** ಮೂಲಕ ಆಹ್ವಾನಿಸಿದ್ದಾರೆ. ಟೆಂಡರ್‌ನ ದಾಖಲೆಗಳು ಮತ್ತು ಟೆಂಡರ್‌ಗೆ ಸಂಬಂಧಿಸಿದ ಯಾವುದೇ ತಿದ್ದುಪಡಿಗಳಿದ್ದರೆ, ನಮ್ಮ ಆನ್‌ಲೈನ್ ವೆಬ್‌ಸೈಟ್‌ನಲ್ಲಿ ಮಾತ್ರ ಲಭ್ಯವಿರುತ್ತದೆ.
P3225036. ಗ್ರೈಂಡಿಂಗ್ ವೀಲ್ ಸ್ಪಿಂಡಲ್ ಅಸೆಂಬ್ಲಿ ಬಿಡಿಭಾಗಗಳ ಪೂರೈಕೆ. **ಟೆಂಡರ್ ಕೊನೆಗೊಳ್ಳುವ ದಿನಾಂಕ & ಸಮಯ : 16/12/2022ರ 14.15 ಗಂಟೆಯವರೆಗೆ**
ಮೇಲ್ಕಂಡ ಟೆಂಡರ್ **(P3225036)** ಭೌತಿಕವಾದ ಜಾಗತಿಕ ಟೆಂಡರ್ ಆಗಿರುತ್ತದೆ. ಜಾಗತಿಕ ಟೆಂಡರ್‌ನ ದಾಖಲೆಗಳು ಮತ್ತು ಟೆಂಡರ್‌ಗೆ ಸಂಬಂಧಿಸಿದ ಯಾವುದೇ ರೀತಿಯ ವಿವರಣೆಯನ್ನು ಇ–ಮೇಲ್ ಮೂಲಕ ಈ ಕೆಳಕಂಡ ಕಚೇರಿಯಿಂದ ಪಡೆಯಬಹುದಾಗಿದೆ. ನಿಮ್ಮ ಎಲ್ಲಾ ಟೆಂಡರ್‌ನ ದಾಖಲೆಗಳು **ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು, ರೈಲು ಗಾಲಿ ಕಾರ್ಖಾನೆ, ಭಾರತೀಯ ರೈಲ್ವೆ, ಯಲಹಂಕ, ಬೆಂಗಳೂರು–560064.** ಇಲ್ಲಿಗೆ ನಿಗದಿತ ದಿನಾಂಕ ಮತ್ತು ಸಮಯದ ಒಳಗೆ ತಲುಪಿರಬೇಕು.

ಟೆಂಡರ್ ಸೂಚನೆ ಮತ್ತು ಅರ್ಹತಾ ಮಾನದಂಡಗಳನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ಅಥವಾ www.ireps.gov.in ನಲ್ಲಿ ನೋಡಬಹುದು.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಚಿತ್ರಾವಳಿ

ಜೆ.ಪಿ. ನಗರದ ಮಾರೇನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆ ದತ್ತು ಸ್ವೀಕಾರ ಮತ್ತು ನವೀಕರಣಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಮಂಗಳವಾರ ಚಾಲನೆ ನೀಡಿದರು. ಶಾಸಕಿ ಸೌಮ್ಯಾ ರೆಡ್ಡಿ, ಬಿಬಿಎಂಪಿ ಮಾಜಿ ಸದಸ್ಯ ಎನ್. ನಾಗರಾಜು ಉಪಸ್ಥಿತರಿದ್ದರು.

ಆಸ್ಟ್ರೇಲಿಯಾದ ವಿದೇಶಾಂಗ ವ್ಯವಹಾರಗಳ ಸಹಾಯಕ ಸಚಿವ ಟಿಮ್ ವಾಟ್ಸ್ ಅವರು ಹಲಸೂರಿನ ಸೋಮೇಶ್ವರ ದೇವಸ್ಥಾನಕ್ಕೆ ಮಂಗಳವಾರ ಭೇಟಿ ನೀಡಿದರು. ಮುಜರಾಯಿ ಇಲಾಖೆ ಉಪಾಯುಕ್ತ ಕೆ. ಜಯಪ್ರಕಾಶ್ ಹಾಗೂ ದೇವಸ್ಥಾನದ ಆಡಳಿತ ಮಂಡಳಿಯವರು ಇದ್ದಾರೆ.

ಕಬ್ಬನ್ ಪಾರ್ಕ್‌ನಲ್ಲಿವೆ 16 ನಿಶ್ಶಬ್ದ ವಲಯ ● ತಿಂಗಳವರೆಗೆ ಜಾಗೃತಿ

ಪಾರ್ಕ್‌ನಲ್ಲಿ ಹಾರ್ನ್ ಮಾಡೀರಿ... ಹುಷಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದ ಆವರಣದಲ್ಲಿ ಸಂಚರಿಸುವಾಗ ಹಾರ್ನ್ ಮಾಡದಿರಿ. ಇಲ್ಲದಿದ್ದರೆ ದಂಡ ತೆರಬೇಕಾದೀತು. ಉದ್ಯಾನವನ್ನು 2020ರಲ್ಲಿ ನಿಶ್ಶಬ್ದ ವಲಯವನ್ನಾಗಿ ಘೋಷಿಸಿಲಾಗಿತ್ತು. ಆದರೆ ಕೋವಿಡ್ ಕಾರಣದಿಂದ ಗಂಭೀರವಾಗಿ ಪರಿಗಣಿಸಿರಲಿಲ್ಲ. ತೋಟಗಾರಿಕೆ ಇಲಾಖೆ ಈಗ ಅನುಷ್ಠಾನಗೊಳಿಸುತ್ತಿದೆ.

‘ಕಬ್ಬನ್ ಉದ್ಯಾನದ ಎಂಟು ಪ್ರವೇಶ ದ್ವಾರಗಳು, ಗ್ರಂಥಾಲಯ ಸೇರಿ 16 ನಿಗದಿತ ಸ್ಥಳಗಳಲ್ಲಿ ನಿಶ್ಶಬ್ದ ವಲಯ ಎಂಬ ಫಲಕಗಳನ್ನು ಅಳವಡಿಸುವ ಕಾರ್ಯ ಭರದಿಂದ ಸಾಗಿದೆ. ಒಂದು ತಿಂಗಳವರೆಗೂ ಈ ಬಗ್ಗೆ ಜಾಗೃತಿ ಮೂಡಿಸಲಾಗುವುದು. ನಂತರ ವಾಹನ ಸವಾರರು ಈ ಸ್ಥಳಗಳಲ್ಲಿ ಹಾರ್ನ್ ಮಾಡಿ, ನಿಯಮ ಉಲ್ಲಂಘಿಸಿದರೆ ದಂಡ ಹಾಕಲಾಗುವುದು’ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್‌.ಟಿ. ಬಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಬ್ಬನ್ ಉದ್ಯಾನಕ್ಕೆ ಬರುವ ವಾಯುವಿಹಾರಿಗಳು, ಪ್ರವಾಸಿಗರು, ಕುಟುಂಬ ಸಮೇತರಾಗಿ ಉದ್ಯಾನಕ್ಕೆ ಬರುವವರು ಮತ್ತು ವಿಶೇಷವಾಗಿ ಪಕ್ಷಿಗಳಿಗೆ ಹಾರ್ನ್ ಶಬ್ದದಿಂದ ಕಿರಿಕಿರಿ ಉಂಟಾಗುತ್ತಿತ್ತು. ಸಾರ್ವಜನಿಕರಿಂದಲೂ ಅನೇಕ ದೂರುಗಳು ಬಂದಿದ್ದು, ನಗರ ಸಂಚಾರ ಪೊಲೀಸರೊಂದಿಗೆ ಸಭೆ ನಡೆಸಿ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಮಾಹಿತಿ ನೀಡಿದರು.

‘ಉದ್ಯಾನ ಹಲವು ಬಗೆಯ ಪ್ರಾಣಿ–ಪಕ್ಷಿ ಸಂಕುಲಗಳ ಆಶ್ರಯ ತಾಣವಾಗಿದೆ. ವಾಹನಗಳ ಹಾರ್ನ್‌ನ ಕರ್ಕಶ ಶಬ್ದದಿಂದ ಪಕ್ಷಿಗಳು ಭಯಗೊಂಡು ಹಾರಿ ಹೋಗುತ್ತವೆ. ಆದ್ದರಿಂದ ಉದ್ಯಾನದ ಕೆಲ ಪ್ರದೇಶಗಳಲ್ಲಿ ನಿಶ್ಶಬ್ದ ವಾತಾವರಣ ನಿರ್ಮಿಸಲು ಈ ಕ್ರಮ ಕೈಗೊಳ್ಳಲಾಗುತ್ತಿದೆ. ಉದ್ಯಾನದ 16 ಸ್ಥಳಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಸೂಚನಾ ಫಲಕಗಳನ್ನು ಅಳವಡಿಸುತ್ತಿದ್ದೇವೆ’ ಎಂದರು.

ಕಬ್ಬನ್ ಉದ್ಯಾನದ ಆವರಣದಲ್ಲಿ ‘ನಿಶ್ಶಬ್ದ ವಲಯ’ ಎಂಬ ಫಲಕಗಳನ್ನು ಅಳವಡಿಸುತ್ತಿರುವ ತೋಟಗಾರಿಕೆ ಇಲಾಖೆ ಸಿಬ್ಬಂದಿ

ನಿಶ್ಶಬ್ದ ವಲಯಗಳು

ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯು 2020 ಜೂನ್ 15ರಂದು ನಗರದ 12 ಸ್ಥಳಗಳನ್ನು ನಿಶ್ಶಬ್ದ ವಲಯಗಳೆಂದು ಘೋಷಿಸಿ ಆದೇಶ ಹೊರಡಿಸಿತ್ತು.

ಪ್ಯಾಲೆಸ್ ರಸ್ತೆ (ಮಹಾರಾಣಿ ಜಂಕ್ಷನ್‌ನಿಂದ ಸಿಐಡಿ ಜಂಕ್ಷನ್‌ವರೆಗೆ), ಅಂಬೇಡ್ಕರ್ ರಸ್ತೆ (ಕೆ.ಆರ್. ವೃತ್ತದಿಂದ ಅಂಬೇಡ್ಕರ್ ಜಂಕ್ಷನ್‌ವರೆಗೆ), ಮ್ಯೂಸಿಯಂ ರಸ್ತೆ (ಆಶೀರ್ವಾದಂ ಜಂಕ್ಷನ್‌ನಿಂದ ಎಸ್‌ಬಿಐ ಜಂಕ್ಷನ್‌ವರೆಗೆ), ಸೇಂಟ್ ಮಾರ್ಕ್ಸ್ ರಸ್ತೆ (ಎಸ್‌ಬಿಐ ಜಂಕ್ಷನ್‌ನಿಂದ ಕೋಶಿಸ್ ಹೋಟೆಲ್ ಜಂಕ್ಷನ್‌ವರೆಗೆ ಹಾಗೂ ಬಿಷಪ್ ಕಾಟನ್ ಬಾಲಕಿಯರ ಶಾಲೆಯಿಂದ ಕ್ಯಾಷ್ ಫಾರ್ಮಸಿವರೆಗೆ), ಎಂ.ಎಸ್.ಬಿಲ್ಡಿಂಗ್ ಒಳಭಾಗ (ಎಜಿಎಸ್ ವೃತ್ತದಿಂದ ಡಾ. ಬಿ. ಆರ್. ಅಂಬೇಡ್ಕರ್ ರಸ್ತೆಯವರೆಗೆ), ಶಾಸಕರ ಭವನ (ವಿಧಾನಸೌಧದಿಂದ ಎಲ್‌ಎಚ್ ಒಳಭಾಗದ ಆವರಣ), ಹೈಕೋರ್ಟ್ (ಹೈಕೋರ್ಟ್ ಒಳಭಾಗದ ಎಲ್ಲಾ ರಸ್ತೆಗಳು), ರಾಜಭವನ (ರಾಜಭವನ ಒಳಭಾಗದ ಎಲ್ಲಾ ರಸ್ತೆಗಳು), ವಿಧಾನಸೌಧ (ವಿಧಾನಸೌಧದ ಒಳಭಾಗದ ಎಲ್ಲಾರಸ್ತೆಗಳು) ಮತ್ತು ಕಬ್ಬನ್ ಉದ್ಯಾನದ ಒಳಭಾಗದ ರಸ್ತೆಗಳು (ಕಬ್ಬನ್ ಉದ್ಯಾನ ಸಂಪೂರ್ಣ).

ಬಿಜೆಪಿಯಿಂದ ಜನರಿಗೆ ವಂಚನೆ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಸ್ತೆಗಳ ಕಳಪೆ ಕಾಮಗಾರಿಯಿಂದ ಗುಂಡಿಗಳಿಗೆ ಬಿದ್ದು ಜನ ಸಾವನಪ್ಪುತ್ತಿದ್ದರೆ, ಪ್ರತಿವರ್ಷ ಡಾಂಬರೀಕರಣ ಮತ್ತು ಅಭಿವೃದ್ಧಿ ಹೆಸರಿನಲ್ಲಿ ಬಿಜೆಪಿ ಸರ್ಕಾರ ಶೇ 40ರಷ್ಟು ಕಮಿಷನ್ ಪಡೆದು ಜನರನ್ನು ವಂಚಿಸುತ್ತಿದೆ’ ಎಂದು ಸಂಸದ ಡಿ ಕೆ. ಸುರೇಶ್ ಆರೋಪಿಸಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಉತ್ತರಹಳ್ಳಿ, ಯಲಚೇನಹಳ್ಳಿ, ಕೋಣನಕುಂಟೆ ವ್ಯಾಪ್ತಿಯ ಕಾಂಗ್ರೆಸ್ ಸಮಿತಿ ಮತ್ತು ಆರ್.ಕೆ ರಮೇಶ್ ಅಭಿಮಾನಿ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಉಚಿತ ಸೀರೆ ವಿತರಣೆ, ಆರೋಗ್ಯ ಶಿಬಿರ, ಶಾಲಾ ಮಕ್ಕಳಿಗೆ ನೋಟ್ ಬುಕ್ ಮತ್ತು ಬ್ಯಾಗ್‌ಗಳನ್ನು ವಿತರಣೆ ಮಾಡಿ ಅವರು ಮಾತನಾಡಿದರು.

‘ಬಿಜೆಪಿ ಸರ್ಕಾರ ತೊಲಗುವವರೆಗೂ ಜನತೆಗೆ ನೆಮ್ಮದಿ, ಉತ್ತಮ ಜೀವನ ಸಾಗಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ಅವಧಿಯಲ್ಲಿ ₹450ಕ್ಕೆ ಸಿಗುತ್ತಿದ್ದ ಅಡುಗೆ ಅನಿಲ(ಸಿಲಿಂಡರ್)ಗೆ ಈಗ ₹1,200 ಕೊಡಬೇಕು. ಪೆಟ್ರೋಲ್ ₹70 ರಿಂದ ₹110, ಡೀಸೆಲ್ ₹60ರಿಂದ ₹85ಕ್ಕೆ ಏರಿಕೆಯಾಗಿದೆ. ಅಗತ್ಯ ವಸ್ತುಗಳ ಬೆಲೆ ದುಪ್ಪಟ್ಟು ಮಾಡುವ ಮೂಲಕ ಜನರನ್ನು ಕಷ್ಟಕ್ಕೆ ನೂಕಿರುವ ಈ ಸರ್ಕಾರ ಶೀಘ್ರ ಪತನವಾಗಲಿದೆ’ ಎಂದು ಭವಿಷ್ಯ ನುಡಿದರು.

ಬೆಂಗಳೂರು ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಮಾತನಾಡಿದರು. ಉತ್ತರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಮಾರ್, ಸುಬ್ರಮಣ್ಯಪುರ ಕಾಂಗ್ರೆಸ್ ಆರ್.ಶ್ರೀನಿವಾಸ್, ಯದುಕುಮಾರ್, ಉತ್ತರಹಳ್ಳಿ ಹೋಬಳಿ ಒಕ್ಕಲಿಗರ ಸಂಘದ ಅಧ್ಯಕ್ಷ ಬೈರಪ್ಪ ಇದ್ದರು.

ಆರ್‌ಕೆ ರಮೇಶ್ ಅಭಿಮಾನಿ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನೂರಾರು ಮಹಿಳೆಯರು

ಮೈಕೊ ಕನ್ನಡ ಬಳಗ ಪ್ರಶಸ್ತಿ ಪ್ರಕಟ

ಬೆಂಗಳೂರು: ಬಾಷ್ ಸಂಸ್ಥೆಯ ಮೈಕೊ ಕನ್ನಡ ಬಳಗ–2022ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಬಿಡದಿಯಲ್ಲಿ ನ.17ರಂದು ಮಧ್ಯಾಹ್ನ 1ಕ್ಕೆ ನಡೆಯುವ ಕನ್ನಡ ರಾಜ್ಯೋತ್ಸವದಲ್ಲಿ ಪ್ರದಾನ ಮಾಡಲಾಗುತ್ತಿದೆ.

ದೂರದರ್ಶನದ ಹಿರಿಯ ಕಾರ್ಯಕ್ರಮ ನಿರೂಪಕಿ ಎಚ್.ಎನ್. ಆರತಿ ಅವರಿಗೆ ‘ರಾಷ್ಟ್ರಕವಿ ಕುವೆಂಪು’ ಸಂಶೋಧಕಿ ಎಚ್.ಶಶಿಕಲಾ ಅವರಿಗೆ ‘ರೆ.ಫ. ಕಿಟ್ಟೆಲ್’ ಹಾಗೂ ಸಾಲುಮರದ ನಿಂಗಣ್ಣ ಅವರಿಗೆ ‘ಲಕ್ಷ್ಮೀಧರ ಅಮಾತ್ಯ’ ನೆನಪಿನ ಪ್ರಶಸ್ತಿ ಲಭಿಸಿದೆ. ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಪುರಸ್ಕಾರ ಒಳಗೊಂಡಿವೆ.

17ರಂದು ನಡೆಯುವ ಕಾರ್ಯಕ್ರಮವನ್ನು ಮೈಸೂರು ರಾಜ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸುವರು, ಮೈಕೊ ಕನ್ನಡ ಬಳಗದ ಗೌರವಾಧ್ಯಕ್ಷೆ ಡಾ.ಪದ್ಮಿನಿ ನಾಗರಾಜು ಅಧ್ಯಕ್ಷತೆ ವಹಿಸುವರು. ವಾಣಿಜ್ಯ ಅಧಿಕಾರಿ ಎಚ್.ಜಿ.ತೋಂಟೇಶ್ ಧ್ವಜಾರೋಹಣ ನೆರವೇರಿಸುವರು. ಬಾಷ್ ಕಂಪನಿ ಪ್ರಧಾನ ವ್ಯವಸ್ಥಾಪಕ ಎಂ.ಗೋಪಾಲಕರಷ್ಣ ಜೋಷಿ, ನೌಕರರ ಸಂಘದ ಸಂಸ್ಥಾಪಕ ಉಪಧ್ಯಕ್ಷ ಬಿ.ಆರ್. ಸೋಮಶೇಖರ ರೆಡ್ಡಿ ಪ್ರಶಸ್ತಿ ಪ್ರದಾನ ಮಾಡುವರು.

ಮೈಕೊ ಕನ್ನಡ ಬಳಗದ ಅಧ್ಯಕ್ಷ ಎಸ್.ಮಂಜುನಾಥ್, ಸಂಸ್ಥೆಯ ಪ್ರಮುಖರಾದ ಪಿ.ಸುಭಾಷಿಣಿ, ಗಂಗಣ್ಣ ಉಪಸ್ಥಿತರಿರುವರು.

ಆರತಿ

ಶಶಿಕಲಾ

ನಿಂಗಣ್ಣ

ನಗರಸಭಾ ಕಾರ್ಯಾಲಯ ಚನ್ನಪಟ್ಟಣ
ರಾಮನಗರ ಜಿಲ್ಲೆ – 562 160.
ದೂ.: 080–27251235. ಇಮೇಲ್: itstaff_ulb_channapatna@yahoo.co.in
ವೆಬ್‌ಸೈಟ್: www.channapatnacity.mrc.gov.in

ನಂ. : ನಸಚ/ಕಾ.ವಿ./ಸಿ.ಆರ್./158/2020–21 ದಿನಾಂಕ : 10–11–2022

ಸಾರ್ವಜನಿಕ ಪ್ರಕಟಣೆ

ರಾಮನಗರ ಜಿಲ್ಲೆಯ ಚನ್ನಪಟ್ಟಣ ನಗರಸಭೆ ವ್ಯಾಪ್ತಿಯ ಹೊನ್ನಿಗಾನಹಳ್ಳಿ ಮತ್ತು ಮಂಗಳವಾರಪೇಟೆ ಗ್ರಾಮಗಳಲ್ಲಿ ನಿವೇಶನಗಳನ್ನು ಹಾಗೂ ಫಾರಂ ನಂ. 3ನ್ನು ವಿತರಿಸದೆ ನಿಯಮಬಾಹಿರವಾಗಿ ನಿವೇಶನಗಳನ್ನು ವಿಲೇವಾರಿಗೊಳಿಸಲು ಸಾರ್ವಜನಿಕರಿಗೆ ಉಂಟಾಗಿರುವ ಸಮಸ್ಯೆ ನಿವಾರಿಸಲು ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ದಾಖಲಾಗಿರುವ ರಿಟ್ ಪೆಟಿಷನ್ ನಂ. 22005/2012, 9185/2018, 31048/2019 (LB-TAX) ರ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ : 08–11–2022 ರ ದೈನಂದಿನ ಆದೇಶದಂತೆ ಕ್ರಮವಹಿಸಬೇಕಾಗಿರುತ್ತದೆ.

ಆದುದರಿಂದ ಸಾರ್ವಜನಿಕರು ಹಾಗೂ ಆಸ್ತಿ ಖರೀದಿದಾರರುಗಳಿಗೆ ಈ ಮೂಲಕ ತಿಳಿಪಯಪಡಿಸುವುದೇನೆಂದರೆ, ಮಂಗಳವಾರಪೇಟೆ ಗ್ರಾಮದ ಸರ್ವೆ ನಂ. 16/3 ರಿಂದ 23 ಗಳಲ್ಲಿ ಬಡಾವಣೆ ನಿರ್ಮಿಸಿ (ಸಿಎಂಸಿ ಬಡಾವಣೆ) ನಿವೇಶನಗಳ ಹಂಚಿಕೆಯಾಗಿರುವ ಫಲಾನುಭವಿಗಳು ನಿವೇಶನವನ್ನು ಹೊಂದಿರುವ ಸ್ವತ್ತಿನ ಮಾಲೀಕತ್ವಕ್ಕೆ ಸಂಬಂಧಿಸಿದ ಹಕ್ಕು ಪತ್ರ, ಕ್ರಯ ಪತ್ರ ಹಾಗೂ ಹಣ ಪಾವತಿಸಿರುವ ದಾಖಲೆಗಳು, ಲೇಔಟ್ ನಕ್ಶೆ ಹಾಗೂ ಇತರೆ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಚನ್ನಪಟ್ಟಣ ನಗರಸಭೆ ಕಾರ್ಯಾಲಯಕ್ಕೆ ಖುದ್ದು ಹಾಜರುಪಡಿಸಲು ತಿಳಿಯಪಡಿಸಿದೆ.

ತಪ್ಪಿದ್ದಲ್ಲಿ ನಗರಸಭೆ ದಾಖಲೆಗಳಲ್ಲಿ ಹಾಗೂ ಲಭ್ಯವಿರುವ ದಾಖಲೆಗಳ ಆಧಾರದ ಮೇರೆಗೆ ಮಾನ್ಯ ಸರ್ಕಾರಕ್ಕೆ ಮತ್ತು ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಅಂತಿಮ ವರದಿ ನೀಡಲು ಕ್ರಮವಹಿಸಲಾಗುವುದು. ಅವಧಿ ಮೀರಿ ಬರುವ ಮನವಿ / ದಾಖಲೆಗಳಿಗೆ ನಗರಸಭೆಯು ಜವಾಬ್ದಾರರಾಗಿರುವುದಿಲ್ಲ ತಿಳಿಯುವುದು.

ಸಹಿ/– ಪೌರಾಯುಕ್ತರು,
ನಗರಸಭೆ, ಚನ್ನಪಟ್ಟಣ.

ಡಿಐಪಿಆರ್/ರಾಮನಗರ/332/ಮಣಿಪಾಲ್/2022–23

ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕಾರ್ಯಕ್ಕೆ ಕಿರಣ ಕುಮಾರ್ ಶ್ಲಾಘನೆ

ಹುತಾತ್ಮ ಯೋಧರ ಕುಟುಂಬಕ್ಕೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶಕ್ಕಾಗಿ ಗಡಿಯಲ್ಲಿ ಹೋರಾಡಿ, ಹುತಾತ್ಮರಾದ ವೀರ ಯೋಧರ ಕುಟುಂಬದ ಸದಸ್ಯರಿಗೆ ಇಲ್ಲಿನ ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಗೌರವ ಸಮರ್ಪಿಸಿದರು.

ನಗರದಲ್ಲಿ ವಿಶ್ವವಿದ್ಯಾಲಯ ಮಂಗಳವಾರ ಹಮ್ಮಿಕೊಂಡ ‘ಸಮರ್ಪಣ–2022’ ಕಾರ್ಯಕ್ರಮದಲ್ಲಿ ಅಗಲಿದ ಯೋಧರನ್ನು ಸ್ಮರಿಸಿಕೊಳ್ಳಲಾಯಿತು. ವಿದ್ಯಾರ್ಥಿಗಳು ಚಿತ್ರೀಕರಿಸಿದ ವಿಶೇಷ ಗೀತೆಯನ್ನು ಸೈನಿಕರ ಕುಟುಂಬದ ಸದಸ್ಯರ ಸಮ್ಮುಖದಲ್ಲಿ ಪ್ರಸ್ತುತಪಡಿಸಲಾಯಿತು. ಗೌರವ ಸ್ವೀಕರಿಸಿದ ಯೋಧರ ಕುಟುಂಬದ ಸದಸ್ಯರು, ಭಾವುಕರಾಗಿದ್ದರು. ಅಗಲಿದ ಪತಿ, ಪುತ್ರ, ಸಹೋದರನ ಹೆಸರು ಎಲ್‌ಇಡಿ ಪರದೆಯ ಮೇಲೆ ಮೂಡುತ್ತಿದ್ದಂತೆ ನೆರೆದಿದ್ದ ಕುಟುಂಬಗಳ ಸದಸ್ಯರ ಕಣ್ಣು ಒದ್ದೆಯಾಗಿದ್ದವು.

ಕೆ.ಪಿ. ಬೆಳ್ಳಿಯಪ್ಪ, ಚಾಂದ್ ಪಾಷಾ, ವೀರೇಶ ಕುರಹಟ್ಟಿ, ಉಮೇಶಪ್ಪ ಕೆ., ಹುಸೇನ್ ಸಾಬ್ ಎಫ್., ವರುಣ್ ಮನೋಹರ್, ಸದಾಶಿವ ಪಡಲೆ, ಅಥಾವುಲ್ಲಾ ಪಾರಾ, ಈರಪ್ಪ ನಂದಿಹಳ್ಳಿ, ನಾಗೇಶ್ ಟಿ.ಟಿ., ಉಮೇಶ್ ಎಂ., ಕೆ. ತಿಮ್ಮಯ್ಯ, ಯಶವಂತ್ ಡಿ., ಚಂದ್ರಕಾಂತ್ ಪಾಟೀಲ, ಶಿವಬಸಯ್ಯ ಕುಲಕರ್ಣಿ, ಭರ್ಮಾ ಕುತಾಲೆ, ಸಂದೀಪ್ ನಾಯ್ಕ್, ಮಹಾದೇವ್ ಪಾಟೀಲ, ಪ್ರಶಾಂತ್ ಎ.ಪಿ., ಡಿ. ಡೇವಿಡ್, ಮಲ್ಲಪ್ಪ ಹುಲ್ಲೈ, ಡಿ.ಬಿ. ಗಾಯಕ್ವಾಡ್ ಹಾಗೂ ಅಮೀರ್ ಮಿಯಾನ್ ಅವರ ಕುಟುಂಬದ ಸದಸ್ಯರನ್ನು ಗೌರವಿಸಲಾಯಿತು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ‘ನಾವು ಸಮಾಜದಲ್ಲಿ ಶಾಂತಿಯುತ ಜೀವನ ನಡೆಸಲು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತರಾಗಲು ಯೋಧರು ತಮ್ಮ ಜೀವನವನ್ನು ಸಮರ್ಪಣೆ ಮಾಡುತ್ತಾರೆ. ಕೆಲವು ವೇಳೆ ದೇಶಕ್ಕಾಗಿ ಜೀವವನ್ನೂ ಅರ್ಪಿಸಬೇಕಾಗುತ್ತದೆ. ಇಂತಹ ವೀರ ಯೋಧರ ಕುಟುಂಬದ ದುಃಖವನ್ನು ಯಾರಿಂದಲೂ ನಿವಾರಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ಈ ಮೊದಲು ದೇಶದ ಮೇಲೆ ಹೊರಗಡೆಯವರು ದಾಳಿ ನಡೆಸುವ ಸಾಧ್ಯತೆಗಳಿರುತ್ತಿದ್ದವು. ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿನ ಕೆಲವರು ದೇಶ ವಿರೋಧಿ ಕೃತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು, ವಿವಿಧ ಕಾರ್ಯಚಟುವಟಿಕೆಯಲ್ಲಿ ನಿರತರಾಗುತ್ತಿದ್ದಾರೆ. ಹೀಗಾಗಿ, ದೇಶದ ಒಳಗಡೆಯೂ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನದ ನೆರವಿನಿಂದ ಜಾಗತಿಕ ಹಾಗೂ ದೇಶೀಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಕೃತಕ ಬುದ್ಧಿಮತ್ತೆ ಸೇರಿ ವಿವಿಧ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು’ ಎಂದು ಹೇಳಿದರು.



‘ಸಮರ್ಪಣ – 2022’ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಯೋಧ ಬೆಳ್ಳಿಯಪ್ಪ ಅವರ ಪತ್ನಿ ಕವಿತಾ ಬೆಳ್ಳಿಯಪ್ಪ, ಸಿಪಾಯಿ ಚಾಂದ್ ಪಾಷಾ ಅವರ ತಾಯಿ ಗುಣಸಾಗರಿ ಆರ್. ಮತ್ತು ವಿರೇಶ್ ಕುರಹಟ್ಟಿ ಅವರ ಪತ್ನಿ ಲಲಿತಾ ಕುರಹಟ್ಟಿ ಅವರನ್ನು ಸನ್ಮಾನಿಸಲಾಯಿತು. (ನಿಂತವರು ಎಡದಿಂದ) ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಜೆ. ಸೂರ್ಯಪ್ರಸಾದ್, ಶಕುಂತಲಾ ಭಂಡಾರ್ಕರ್, ಎ.ಎಸ್. ಕಿರಣ್ ಕುಮಾರ್, ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಕೆ.ಎಸ್. ಶ್ರೀಧರ್, ವಿದ್ಯುನ್ಮಾನ ವಿಭಾಗದ ಮುಖ್ಯಸ್ಥ ಕೇಶವ್ ಬಿ.ಕೆ.ಹಾಗೂ ಡೀನ್ ವಿ. ಕೃಷ್ಣ ಇದ್ದಾರೆ. –ಪ್ರಜಾವಾಣಿ ಚಿತ್ರ

ಐತಿಹಾಸಿಕ ಕೆರೆ ಒತ್ತುವರಿ ತೆರವಿಗೆ ಆಗ್ರಹ

ಬೆಂಗಳೂರು: ‘ನಗರದಲ್ಲಿರುವ ಐತಿಹಾಸಿಕ ಕೆರೆಗಳನ್ನು ಒತ್ತುವರಿ ಮಾಡಿ ಬಡಾವಣೆಗಳನ್ನು ನಿರ್ಮಿಸಲಾಗುತ್ತಿದೆ. ಇದಕ್ಕೆ ಕಾರಣರಾಗಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆಯಲಾಗಿದೆ.

‘ಬಿಬಿಎಂಪಿ ವ್ಯಾಪ್ತಿ ಸೇರಿ ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ಕೆರೆಗಳ ಬಗ್ಗೆ ಈಗಾಗಲೇ ಎ. ಟಿ. ರಾಮಸ್ವಾಮಿ ಮತ್ತು ಕೆ. ಬಿ. ಕೋಳಿವಾಡ ಸಮಿತಿಯ ಸದಸ್ಯರು ಖುದ್ದಾಗಿ ಪರಿಶೀಲನೆ ನಡೆಸಿ ವರದಿಗಳನ್ನು ನೀಡಿದ್ದಾರೆ. ಈ ಬಗ್ಗೆ ಒತ್ತುವರಿ ತೆರವಿಗೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ’ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್. ಆರ್. ದೂರಿದ್ದಾರೆ.

‘ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಯಲಹಂಕ ಹೋಬಳಿಯ ಸರ್ವೆ ನಂಬರ್ 102 ರ ಸುಮಾರು 66.18 ಎಕರೆಗಳಷ್ಟು ವಿಸ್ತೀರ್ಣದ ಸಿಂಗಾಪುರ ಕೆರೆ ಸಂಪೂರ್ಣವಾಗಿ ಒತ್ತುವರಿಯಾಗಿದೆ. ಈ ಕೆರೆಯನ್ನು 1528ರಲ್ಲಿ ನಾಲಪ್ಪ ನಾಯಕನು ನಿರ್ಮಿಸಿರುವ ಬಗ್ಗೆ ಸ್ಥಳದಲ್ಲೇ ಇರುವ ಶಾಸನವು ಇಂದಿಗೂ ಸಾರಿ ಹೇಳುತ್ತದೆ. ಸಿಂಗಾಪುರ ಗ್ರಾಮದ ಅಬ್ಬಿಗೆರೆ ಕೆರೆಯ ಸುಮಾರು 75 ಎಕರೆಯಲ್ಲಿ ವಿನಾಯಕ ನಗರ ಎಂಬ ಬಡಾವಣೆಯೂ ತಲೆ ಎತ್ತಿರುತ್ತದೆ’ ಎಂದು ದಾಖಲೆ ಸಹಿತ ವಿವರಿಸಿದ್ದಾರೆ.

‘ಚಿಕ್ಕಬಾಣಾವರ ಕೆರೆ ಸುಮಾರು 170 ಎಕರೆಗಳಷ್ಟು ವಿಸ್ತೀರ್ಣವಿದ್ದು, ಅದರ ಪೈಕಿ ಈಗಾಗಲೇ 20 ಎಕರೆಗಳಿಗೂ ಹೆಚ್ಚು ಕೆರೆ ಪ್ರದೇಶವನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಹೆಬ್ಬಾಳ ಕೆರೆ 1974ರಲ್ಲಿ ಸರ್ವೆ ಮಾಡಿದ ಸಂದರ್ಭದಲ್ಲಿ ಕೆರೆಯ ಒಟ್ಟು ವಿಸ್ತೀರ್ಣ 187.67 ಎಕರೆ. ಆದರೆ 1998-99ರಲ್ಲಿ ಮತ್ತೊಮ್ಮೆ ಸರ್ವೆ ಕಾರ್ಯ ನಡೆಸಿದಾಗ 142.70 ಎಕರೆ ಎಂದಿದೆ’ ಎಂದಿದ್ದಾರೆ.

ಸಿಂಗಾಪುರ ಕೆರೆ ಬಳಿಯಿರುವ ಶಾಸನ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿ–2 (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ
ನಂ. 14/3, ಸಿ.ಎಫ್.ಸಿ.ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು – 560 001.
ಸಂಖ್ಯೆ:ಕೆಐಎಡಿಬಿ/ಎಲ್‌ಎಕ್ಯೂ/676/2022–23 ದಿನಾಂಕ:15.11.2022

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಬಿಲ್ಲಿನ ಕೋಟೆ, ಅವ್ವೇರಹಳ್ಳಿ, ಮಾಚನಹಳ್ಳಿ, ಗೊಟ್ಟಿಗೆರೆ, ಕೆಂಗಲ್ ಕೆಂಪೋಹಳ್ಳಿ, ಕೆ.ಜಿ.ಶ್ರೀನಿವಾಸಪುರ, ಹೊನ್ನೇನಹಳ್ಳಿ, ಬರಗೇನಹಳ್ಳಿ ಮತ್ತು ಗೆದ್ದಲಹಳ್ಳಿ ಗ್ರಾಮಗಳಲ್ಲಿ ಒಟ್ಟು 265–29 1/4 ಎಕರೆ ವಿಸ್ತೀರ್ಣದ ಜಮೀನನ್ನು ಕೆಐಎಡಿ ಕಾಯ್ದೆ 1966 ಕಲಂ 28(4)ರಂತೆ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 72 ಎಸ್‌ಪಿಕ್ಯೂ 2019 ದಿನಾಂಕ 19.05.2021 ರಾಜ್ಯಪತ್ರ ಪ್ರಕಟಿತ ದಿನಾಂಕ 25.05.2021 ರನ್ವಯ ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಈ ಜಮೀನುಗಳಿಗೆ ಕೆ.ಐ.ಎ.ಡಿ.ಕಾಯ್ದೆ ಕಲಂ 29(2)ರನ್ವಯ ಪರಿಹಾರ ನಿಗದಿಪಡಿಸಲು ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು, ಕೆಐಎಡಿಬಿ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ **ದಿನಾಂಕ 16.11.2022 ರಂದು ಬೆಳಿಗ್ಗೆ 11.00 ಘಂಟೆಗೆ** ಈ ಕೆಳಕಂಡ ವಿಳಾಸದಲ್ಲಿ ಸಲಹಾ ಸಮಿತಿ ಸಭೆ ಕರೆಯಲಾಗಿತ್ತು.

"ಸ್ವರ್ಣಾಂ ಪ್ರಾರ್ಥನಾ ಮಂದಿರ"
ಶ್ರೀ ಸದ್ಧರ್ಮ ಸಿಂಹಾಸನ ಸಂಸ್ಥಾನ
ಹೊನ್ನಮ್ಮಗವಿ ಮಠ, ಶಿವಗಂಗಾ ಕ್ಷೇತ್ರ,
ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 111.

ಕಾರಣಾಂತರದಿಂದ ಭೂದರ ಸಲಹಾ ಸಮಿತಿ ಸಭೆಯನ್ನು **ದಿನಾಂಕ: 22.11.2022ರ ಬೆಳಿಗ್ಗೆ 11.00 ಗಂಟೆಗೆ ಮುಂದೂಡಲಾಗಿರುತ್ತದೆ.** ಆದುದರಿಂದ **ದಿನಾಂಕ: 22.11.2022ರಂದು** ನಡೆಯುವ ಸಲಹಾ ಸಮಿತಿ ಸಭೆಗೆ ಭೂಮಾಲೀಕರು ಮಾತ್ರ ಹಾಜರಾಗಲು ತಿಳಿಸಿದೆ.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನೃಪತುಂಗ ರಸ್ತೆ, ಬೆಂಗಳೂರು

ಸಮಾಲೋಚನಾ ಸಭೆಯಲ್ಲಿ ದೇವದಾಸಿಯರು, ಅವರ ಕುಟುಂಬದ ಹೆಣ್ಣುಮಕ್ಕಳ ಆಗ್ರಹ

‘ದಾಖಲೆಗಳಲ್ಲಿ ತಂದೆ ಹೆಸರು ಐಚ್ಛಿಕವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಆಯೋಜಿಸಿದ್ದ ದೇವದಾಸಿ ಮಹಿಳೆಯರು ಮತ್ತು ಮಕ್ಕಳ ಜತೆಗಿನ ಸಮಾಲೋಚನಾ ಸಭೆಯಲ್ಲಿ ಎರ್ಯುಕಲ್ ಕನವಳ್ಳಿ, ನಿರಂಜನ ವಾನಳ್ಳಿ, ವಾಸುದೇವ ಶರ್ಮ, ಕೆ. ನಾಗಣ್ಣಗೌಡ, ಕೆ.ಎಲ್‌. ಎಸ್‌.ರಾಘವೇಂದ್ರ ಶೆಟ್ಟಿಗಾರ್ ಭಿತ್ತಿಪತ್ರ ಬಿಡುಗಡೆ ಮಾಡಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಅಮ್ಮಂದಿರಿಗೆ ದೇವದಾಸಿ ಪಟ್ಟದಿಂದ ಕಾನೂನಾತ್ಮಕವಾಗಿ ಮುಕ್ತಿ ದೊರಕಿರಬಹುದು. ಪುರುಷ ಪ್ರಧಾನ ಸಮಾಜದಲ್ಲಿ ಬದುಕುತ್ತಿರುವ ನಮಗೆ ಅಪ್ಪನ ಹೆಸರಿಲ್ಲದೇ ಬದುಕಿನ ಬಂಡಿ ಸಾಗಿಸಲು ಅಡ್ಡಿ, ಆತಂಕ, ಅವಮಾನಗಳು ನೂರೆಂಟು’

– ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಷನ್ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯಲ್ಲಿ ದೇವದಾಸಿಯರ ಕುಟುಂಬದ ಹೆಣ್ಣು ಮಕ್ಕಳು ತಾವು ಅನುಭವಿಸಿದ ನೋವುಗಳನ್ನು ಹಂಚಿಕೊಂಡಿದ್ದು ಹೀಗೆ...

ಕ್ರೀಡಾ ಭವಿಷ್ಯವನ್ನೇ ಕಿತ್ತುಕೊಂಡ ಅಗೋಚರ ಅಪ್ಪ: ‘ನನಗಾಗ 10ರ ವಯಸ್ಸು. ಬಾಲ್ಯದಿಂದಲೂ ಕ್ರೀಡೆ ಅಂದ್ರೆ ಪ್ರಾಣ. ಓಟದಲ್ಲಿ ಮೊದಲಿದ್ದೆ. ನಾನು ಐದನೇ ತರಗತಿಯಲ್ಲಿದ್ದಾಗ ಓಟದ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದಿದ್ದೆ. ಅಂದು ಕ್ರೀಡಾ ಸಂಘಟಕರು ವಿಳಾಸ ಬರೆದುಕೊಳ್ಳುವಾಗ ಅಪ್ಪನ ಹೆಸರು ಕೇಳಿದರು. ನನಗೆ ಏನು ಹೇಳಬೇಕೆಂದೇ ತೋಚಲಿಲ್ಲ. ಮೌನಿಯಾದೆ. ಅವರಲ್ಲೇ ಗುಸುಗುಸು ಮಾತಾಡಿಕೊಂಡರು. ನನ್ನನ್ನು ಕೈಬಿಟ್ಟು ನನ್ನ ಹಿಂದೆ ಓಡಿದ್ದ ಹುಡುಗಿಗೆ ಮೊದಲ ಪ್ರಶಸ್ತಿ ಕೊಟ್ಟರು. ಅಂದಿನಿಂದ ಇಂದಿನವರೆಗೂ ಕ್ರೀಡೆಯತ್ತ ಮುಖಮಾಡಿಲ್ಲ’ ಎಂದು ಕೊಪ್ಪಳ ಜಿಲ್ಲೆಯ ಡಿಪ್ಲೊಮಾ ವಿದ್ಯಾರ್ಥಿನಿ ಕಣ್ಣೀರಾದರು.

ಬಾಲಕಿಯನ್ನೂ ಬಿಡದ ಪಟ್ಟಭದ್ರರ ಬಯಕೆ: ಅವರು ಬಾಗಲಕೋಟೆ ಜಿಲ್ಲೆಯ ಯುವತಿ. ಈಗಷ್ಟೇ ಪಿಯು ಮುಗಿಸಿ ವಾಣಿಜ್ಯ ಪದವಿಗೆ ಪ್ರವೇಶ ಪಡೆದಿದ್ದಾರೆ. ಲೆಕ್ಕಪರಿಶೋಧಕಿಯಾಗುವ ಗುರಿ ಹೊಂದಿದ್ದಾರೆ. ಕಹಿ ನೆನಪನ್ನು ತಮ್ಮ ನೆನಪಿನ ಬುತ್ತಿಯಿಂದ ತೆಗೆದ ಅವರು ‘ಪ್ರಜಾವಾಣಿ’ ಜತೆ ಹಂಚಿಕೊಂಡರು.

ದೇವದಾಸಿ ತಾಯಿಯ ಮನೆಗೆ ಬರುತ್ತಿದ್ದ ಕಾಮುಕರ ಕಣ್ಣು ಯೌವನಕ್ಕೆ ಕಾಲಿಡುತ್ತಿದ್ದ ಮಗಳ ಮೇಲೂ ಬಿದ್ದಿದೆ. ಮಗಳನ್ನೂ ಬಯಸಿದಾಗ ಕ್ರೋಧಕೊಂಡ ತಾಯಿ ಒಬ್ಬನಿಗೆ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಮೊದಲು ತಾಯಿಯ ಕೃತ್ಯಕ್ಕೆ ಬೇಸರಿಸಿಕೊಳ್ಳುತ್ತಿದ್ದ ಅವರು, ತನ್ನನ್ನು ರಕ್ಷಿಸಿದ ರೀತಿ ಕಂಡು ತಾಯಿಯ ಮೇಲೆ ಪ್ರೀತಿ ಹುಟ್ಟಿದೆ. ಬದುಕಿ ಅನಿವಾರ್ಯತೆ ಹೇಗೆ ಪಾಪದ ಕೂಪಕ್ಕೆ ತಳ್ಳುತ್ತದೆ ಎನ್ನುವುದು ಮನವರಿಕೆಯಾಗಿದೆ.

‘ಮತ್ತೊಂದು ಪ್ರಕರಣದಲ್ಲಿ ಸಾಮಾಜಿಕ ಜಾಲ ತಾಣದಲ್ಲಿ ಯುವತಿಯ ಪೋಟೊ ನೋಡಿದ ಒಬ್ಬ ಅವರ ತಾಯಿಯ ಬಳಿಯೇ ಬಂದು ಈ ಹುಡುಗಿ ನಿಮ್ಮ ಹಟ್ಟಿಯದಂತೆ, ನನಗೆ ಬೇಕು ಎಂದು ರಚ್ಚೆ ಹಿಡಿದಿದ್ದನಂತೆ. ಕುಟುಂಬದವರೆಲ್ಲ ಸೇರಿ ಹೊಡೆತಕೊಟ್ಟ ಮೇಲೆ ಪರಾರಿಯಾದನಂತೆ’

ದೇವದಾಸಿಯರ ಬಳಿ ಬರುವ ಕೆಲವರು ತಮ್ಮ ಕುಡಿತದ ಅಮಲು, ಕೋಪವನ್ನು ಹಿಂಸಾತ್ಮಕವಾಗಿ ತೀರಿಸಿಕೊಂಡಿದ್ದನ್ನೂ ಕಣ್ಣಮುಂದೆ ನೋಡಿದ್ದ ಮಕ್ಕಳು ಎಳೆಎಳೆಯಾಗಿ ಬಿಚ್ಚಿಟ್ಟರು.

‘ನಮ್ಮೂರಲ್ಲಿ ನಾನೆ ಕೊನೆಯ ದೇವದಾಸಿ. ಈಗ ನನಗೆ 45. ಬಾಲ್ಯದಲ್ಲೇ ಈ ಅನಿಷ್ಟ ಪದ್ಧತಿಗೆ ದೂಡಿದರು. ಅಸಹ್ಯ ಎನಿಸಿದ ದಿನವೇ ಯಾರನ್ನೂ ಹತ್ತಿರಕ್ಕೆ ಬಿಟ್ಟುಕೊಳ್ಳಲಿಲ್ಲ. ಹಾಗಾಗಿ, ನನಗೆ ಮಕ್ಕಳಿಲ್ಲ. ಈಚೆಗೆ ತಂಗಿಯ ಮಗುವನ್ನು ದತ್ತು ಪಡೆದಿರುವೆ. ಎಲ್ಲರಂತೆ ನಾನೂ ಮದುವೆಯಾಗಿ ಸಂಸಾರ ನಡೆಸಬೇಕು ಎನ್ನುವ ಬಯಕೆ ಇತ್ತು. ಯಾರೂ ಮುಂದೆ ಬರಲಿಲ್ಲ. ಈಗ ವಯಸ್ಸು 45 ದಾಟಿತು’ ಎಂದು ವಿಜಯಪುರದ ಮಹಿಳೆ ಎದೆಯಾಳದ ನೋವು ತೋಡಿಕೊಂಡರು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಡಾ.ನಿರಂಜನ ವಾನಳ್ಳಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ, ಕಾನೂನು ಸೇವೆಗಳ ಪ್ರಾಧಿಕಾರದ ಉಪ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿಗಾರ್, ಎರ್ಯುಕಲ್ ಕನವಳ್ಳಿ, ಸರ್ಕಾರಿ ಸಂಪರ್ಕ ಅಧಿಕಾರಿ ಎನ್‌.ವಿ. ವಾಸುದೇವ ಶರ್ಮ, ಸ್ನೇಹ ಸಂಸ್ಥೆಯ ರಾಮಾಂಜನೇಯ, ಅಂಜಲಿ ರಾಮಣ್ಣ, ಸಂಘಟಕರಾದ ಟಿ.ವೆಂಕಟೇಶ್, ಜೆನ್ನಿಫರ್ ಉಪಸ್ಥಿತರಿದ್ದರು.

ದೇವದಾಸಿಯರ ಬೇಡಿಕೆಗಳು

- ವಿವಿಧ ದಾಖಲೆಗಳಲ್ಲಿ ತಂದೆಯ ಹೆಸರು ನಮೂದಿಸುವುದನ್ನು ಐಚ್ಛಿಕ ಎಂದು ಪರಿಗಣಿಸಬೇಕು
- ದೇವದಾಸಿ ಕುಟುಂಬದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಮೀಸಲಾತಿ ನಿಗದಿ ಮಾಡಬೇಕು
- ವಯೋಮಿತಿ ತೆಗೆದುಹಾಕಿ (40ರ ಮೇಲಿನವರು), ಹೊಸದಾಗಿ ಸಮೀಕ್ಷೆ ನಡೆಸಬೇಕು
- ಮಾಸಿಕ ಪಿಂಚಣಿ ₹ 3 ಸಾವಿರಕ್ಕೆ ಹೆಚ್ಚಿಸಬೇಕು. ಪ್ರತಿ ತಿಂಗಳು ಖಾತೆಗೆ ಜಮೆ ಮಾಡಬೇಕು
- ವಸತಿ ಯೋಜನೆಗಳಲ್ಲಿ ಪ್ರತ್ಯೇಕ ಕೋಟಾ ನೀಡಬೇಕು
- ದೇವದಾಸಿ ಪದ್ಧತಿ ಆಚರಣೆಗೆ ಕುಮ್ಮಕ್ಕು ನೀಡುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕು

ಅಂಕಿ ಅಂಶ

46,660
ಪ್ರಸ್ತುತ ಇರುವ ದೇವದಾಸಿಯರು

30,299
ಮಾಸಾಶನ ಪಡೆಯುತ್ತಿರುವ ದೇವದಾಸಿಯರು

ಸುದ್ದಿ 2 ನಿಮಿಷ

ಕಾಫಿ ಪುಡಿ ಕಲಬೆರಕೆ: ಶಿಕ್ಷೆ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಕಲಬೆರಕೆ ಕಾಫಿ ಪುಡಿ ಮಾರಾಟ ಮಾಡಿದ್ದ ಪ್ರಕರಣದ ಅಪರಾಧಿಗೆ ಹಾಸನದ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ವಿಧಿಸಿದ್ದ ಜೈಲು ಶಿಕ್ಷೆಯನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಶಿಕ್ಷೆ ರದ್ದು ಕೋರಿ ಸಕಲೇಶಪುರದ ‘ಸೆಲೆಕ್ಟ್ ಕಾಫಿ ವರ್ಕ್ಸ್’ ಮಾಲೀಕ ಸಯ್ಯದ್ ಅಹ್ಮದ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್‌.ಬಿ.ಪ್ರಭಾಕರ ಶಾಸ್ತ್ರಿ ಅವರಿದ್ದ ಏಕಸದಸ್ಯ ಪೀಠ ವಜಾಗೊಳಿಸಿದೆ.

ಪ್ರಕರಣವೇನು?: ಪೊಟ್ಟಣದ ಮೇಲೆ ಬ್ಯಾಚ್ ಸಂಖ್ಯೆ ಹಾಗೂ ಎಕ್ಸ್‌ಪೈರಿ ದಿನಾಂಕ ನಮೂದಿಸದೆ ಕಾಫಿ ಪುಡಿ ಮಾರಿದ್ದ ಹಿನ್ನೆಲೆಯಲ್ಲಿ ವಿಚಾರಣಾ ನ್ಯಾಯಾಲಯ 6 ತಿಂಗಳು ಸಜೆ ಹಾಗೂ ₹ 1 ಸಾವಿರ ದಂಡ ವಿಧಿಸಿತ್ತು. ಈ ಆದೇಶವನ್ನು ಎತ್ತಿ ಹಿಡಿದಿರುವ ನ್ಯಾಯಪೀಠ, ‘ಅರ್ಜಿದಾರರು 45 ದಿನಗಳಲ್ಲಿ ಸಕಲೇಶಪುರದ ಜೆಎಂಎಫ್‌ಸಿ ಕೋರ್ಟ್‌ಗೆ ಶರಣಾಗಿ ಶಿಕ್ಷೆ ಅನುಭವಿಸಬೇಕು’ ಎಂದು ತೀರ್ಪು ನೀಡಿದೆ.

‘ಆಹಾರ ಪದಾರ್ಥಗಳ ಮೇಲೆ ಬ್ಯಾಚ್ ಸಂಖ್ಯೆ, ಎಕ್ಸ್‌ಪೈರಿ ದಿನ, ಸಸ್ಯಾಹಾರ-ಮಾಂಸಾಹಾರ ಚಿಹ್ನೆ ನಮೂದಿಸದೆ ಮಾರುವುದು ಕಾಯ್ದೆಯಡಿ ಶಿಕ್ಷಾರ್ಹ ಅಪರಾಧ’ ಎಂದು ನ್ಯಾಯಪೀಠ ಎಚ್ಚರಿಸಿದೆ.

ಗೌರಿ ಲಂಕೇಶ್ ಹತ್ಯೆ: ಸಾಕ್ಷಿಗೆ ಬೆದರಿಕೆ ಆರೋಪ

ಬೆಂಗಳೂರು: ‘ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಆರೋಪಿ ಪರಶುರಾಮ್ ವಾಗ್ಮೋರೆಯನ್ನು ಗುರುತಿಸಿದ ಸಾಕ್ಷಿಯೊಬ್ಬರಿಗೆ ಫೋನ್ ಮೂಲಕ ಜೀವ ಬೆದರಿಕೆ ಹಾಕಲಾಗಿದೆ’ ಎಂದು ಪ್ರಕರಣದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್‌. ಬಾಲನ್ ವಿಚಾರಣಾ ನ್ಯಾಯಾಲಯದಲ್ಲಿ ಆಪಾದಿಸಿದ್ದಾರೆ.

ನಗರ ಸಿವಿಲ್ ಕೋರ್ಟ್ ಪ್ರಧಾನ ನ್ಯಾಯಾಧೀಶ ರಾಮಚಂದ್ರ ಡಿ.ಹುದ್ದಾರ ಅವರು ಮಂಗಳವಾರ ಗೌರಿ ಹತ್ಯೆ ಪ್ರಕರಣದ ವಿಚಾರಣೆ ನಡೆಸಿದ ವೇಳೆ ಬಾಲನ್ ಈ ಕುರಿತಂತೆ ಆರೋಪಿಸಿದರು.

‘ಪರಶುರಾಮ್ ವಾಗ್ಮೋರೆಯ ಸ್ನೇಹಿತನೊಬ್ಬ ಆರೋಪಿಯನ್ನು ಗುರುತಿಸುವ ಮತ್ತು ಆರೋಪಿಯ ಮೇಲಿರುವ ಇತರ ಪ್ರಕರಣಗಳ ಬಗ್ಗೆ ಸಾಕ್ಷಿ ನುಡಿಯಬೇಕಾಗಿತ್ತು. ಆದರೆ, ಸೋಮವಾರವಷ್ಟೇ (ನ.14) ನಾಲ್ಕು ಜನರು ಈತನ ಮನೆಗೆ ನುಗ್ಗಿ ಸಾಕ್ಷಿ ನುಡಿಯದಂತೆ ಬೆದರಿಕೆ ಒಡ್ಡಿದ್ದಾರೆ. ಮಂಗಳವಾರ (ನ.15) ಬೆಳಿಗ್ಗೆ ಬೆಂಗಳೂರಿನಲ್ಲಿದ್ದಾಗ ಎರಡು ಮೂರು ಬಾರಿ ಫೋನ್ ಮೂಲಕ ಧಮಕಿ ಹಾಕಿದ್ದಾರೆ’ ಎಂದು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು ವಿಡಿಯೊ ಕಾನ್ಫರೆನ್ಸ್ ಮೂಲಕ ಆರೋಪಿಗಳಿಗೆ ಮೌಖಿಕ ಎಚ್ಚರಿಕೆ ನೀಡಿ, ‘ಈ ರೀತಿಯ ಘಟನೆ ಮರುಕಳಿಸಬಾರದು. ಸಾಕ್ಷಿಯನ್ನು ಪೊಲೀಸ್ ಬೆಂಗಾವಲಿನಲ್ಲಿ ಸಿಂಧಗಿಗೆ ತಲುಪಿಸಬೇಕು. ಸ್ಥಳೀಯ ಪೊಲೀಸರು ಸಾಕ್ಷಿಗೆ ಸೂಕ್ತ ಭದ್ರತೆ ಒದಗಿಸಬೇಕು’ ಎಂದು ನಿರ್ದೇಶಿಸಿದರು. ವಿಚಾರಣೆಯನ್ನು ಡಿಸೆಂಬರ್‌ಗೆ ಮುಂದೂಡಲಾಗಿದೆ. ಗೌರಿ ಅವರನ್ನು 2017ರ ಸೆಪ್ಟೆಂಬರ್ 5ರಂದು ರಾಜರಾಜೇಶ್ವರಿ ನಗರದಲ್ಲಿನ ಅವರ ಮನೆಯ ಹೊರಗೆ ಆಗಂತುಕರು ಗುಂಡಿಟ್ಟು ಹತ್ಯೆ ಮಾಡಿದ್ದರು.

ಸ್ಯಾಟಲೈಟ್ ಬಸ್ ನಿಲ್ದಾಣ: ಸ್ಕೈ– ವಾಕ್‌ಗೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಮೈಸೂರು ರಸ್ತೆಯಲ್ಲಿ ಸ್ಯಾಟಲೈಟ್ ಬಸ್ ನಿಲ್ದಾಣದ ಸಮೀಪ ಅಳವಡಿಸಲಾಗುತ್ತಿರುವ ಸ್ಕೈ–ವಾಕ್ ಕಾಮಗಾರಿಯನ್ನು (ಬಿಎಂಟಿಸಿ ಸಬ್ ವೇ ಪ್ರವೇಶ ದ್ವಾರ) ಪೂರ್ಣಗೊಳಿಸಲು ಹೈಕೋರ್ಟ್ ಹಸಿರು ನಿಶಾನೆ ತೋರಿದೆ.

ಸ್ಕೈ–ವಾಕ್ ಅಳವಡಿಕೆ ಕಾಮಗಾರಿಯನ್ನು ನಾಲ್ಕು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಮೆಸರ್ಸ್ ಶಕ್ತಿ ಡೆವಲಪರ್ಸ್ ಲಿಮಿಟೆಡ್ ಕಂಪನಿಗೆ ಹೈಕೋರ್ಟ್ 2022ರ ಜೂನ್ 17ರಂದು ನಿರ್ದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಬಿಬಿಎಂಪಿ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಯನ್ನು ಮಂಗಳವಾರ ವಜಾಗೊಳಿಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಕಾಮಗಾರಿ ಪೂರ್ಣಗೊಳಿಸಲು ಮೆಸರ್ಸ್ ಶಕ್ತಿ ಡೆವಲಪರ್ಸ್ ಲಿಮಿಟೆಡ್ ಕಂಪನಿಗೆ ಅನುಮತಿ ನೀಡಿದೆ.

‘ನಿಗದಿತ ಅವಧಿಯಲ್ಲಿ ಸ್ಕೈ–ವಾಕ್ ಅಳವಡಿಕೆ ಕಾಮಗಾರಿ ಪೂರ್ಣಗೊಳಿಸಿಲ್ಲ ಎಂಬ ಕಾರಣಕ್ಕೆ ಬಿಬಿಎಂಪಿ ಗುತ್ತಿಗೆಯನ್ನು ರದ್ದುಪಡಿಸಿದೆ. ವಾಸ್ತವದಲ್ಲಿ ಸರ್ಕಾರಿ ಪ್ರಾಧಿಕಾರಗಳಿಂದಲೇ ಕಾಮಗಾರಿ ವಿಳಂಬವಾಗಿದೆ. ಈ ಕಾರಣ ಪರಿಗಣಿಸಿಯೇ ಏಕಸದಸ್ಯ ನ್ಯಾಯಪೀಠವು ಸ್ಕೈ–ವಾಕ್ ಅಳವಡಿಕೆಗೆ ಅನುಮತಿ ನೀಡಿದೆ. ಹೈಕೋರ್ಟ್ ಆದೇಶದ ನಂತರ ಗುತ್ತಿಗೆದಾರ ಕಂಪನಿ ಕಾಮಗಾರಿ ಆರಂಭಿಸಿದೆ. ಈ ಹಂತದಲ್ಲಿ ಸ್ಕೈ–ವಾಕ್ ಅಳವಡಿಕೆ ಸ್ಥಗಿತಗೊಳಿಸಬಾರದು’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಚಾಟಿ: ಸಂಚಾರ ದಟ್ಟಣೆ ಇರುವುದರಿಂದ ಪಾದಚಾರಿಗಳು ರಸ್ತೆ ದಾಟಲು ಹರಸಾಹಸ ಪಡಬೇಕಿತ್ತು. ಇದನ್ನು ಪರಿಗಣಿಸಿಯೇ ಬಿಬಿಎಂಪಿ, ಸ್ಯಾಟಲೈಟ್ ಬಸ್ ನಿಲ್ದಾಣದಿಂದ ರಮಣಿ ಟಿಂಬರ್ ಮಾರ್ಕ್‌ವರೆಗೆ ಮತ್ತು ಗಾಳಿ ಆಂಜನೇಯ ದೇವಸ್ಥಾನದ ಬಳಿ ಎರಡು ಪ್ರತ್ಯೇಕ ಸ್ಕೈ–ವಾಕ್ ನಿರ್ಮಿಸಲು 2017ರಲ್ಲಿ ಗುತ್ತಿಗೆ ನೀಡಿತ್ತು. ಸ್ಯಾಟಲೈಟ್ ಬಸ್ ನಿಲ್ದಾಣ-ರಮಣಿ ಟಿಂಬರ್ ಮಾರ್ಕ್ ಸ್ಕೈ–ವಾಕ್‌ಗೆ ಆಕ್ಷೇಪ ವ್ಯಕ್ತಪಡಿಸಿದ್ದ ಕೆಎಸ್‌ಆರ್‌ಟಿಸಿ ಮತ್ತು ಸಂಚಾರ ವಿಭಾಗದ ಪೊಲೀಸರು, ಬಿಎಂಟಿಸಿ ಸಬ್ ವೇ ಪ್ರವೇಶದ್ವಾರದ ಬಳಿ ಸ್ಕೈ–ವಾಕ್ ಅಳವಡಿಕೆಗೆ 2018ರ ಸೆಪ್ಟೆಂಬರ್‌ನಲ್ಲಿ ಅನುಮತಿ ನೀಡಿದ್ದವು. ಅದಕ್ಕೆ ಬಿಬಿಬಿಎಂಪಿ ನಿರಾಕ್ಷೇಪಣಾ ಪತ್ರವನ್ನೂ ನೀಡಿತ್ತು.

ಹದಗೆಟ್ಟ ರಸ್ತೆಯಿಂದ ಸವಾರ ಸಾವು

ಸಾವಿಗೆ ಬಿಬಿಎಂಪಿ, ರಾಜ್ಯ ಸರ್ಕಾರವೇ ಕಾರಣ: ಸ್ಥಳೀಯರ ಆರೋಪ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಸ್ತೆ ಗುಂಡಿಗೆ ಬಿದ್ದು ಮೃತಪಟ್ಟ ಕುಮಾರ್ ಅವರಿಗೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಡಾ. ರಾಜ್‌ಕುಮಾರ್ ರಸ್ತೆಯಲ್ಲಿರುವ ಡಿಸಿಸಿ ಬ್ಯಾಂಕ್ ಹತ್ತಿರದ ರಸ್ತೆಯಲ್ಲಿ ಪ್ರತಿಭಟನೆ ನಡೆಸಿ, ಮೇಣದ ದೀಪ ಬೆಳಗಿಸಿ ಶ್ರದ್ಧಾಂಜಲಿ ಸಲ್ಲಿಸಿದರು. ಅನೂಪ್ ಅಯ್ಯಂಗಾರ್, ಎಸ್‌. ಕೇಶವಮೂರ್ತಿ ಇದ್ದರು

ಬೆಂಗಳೂರು: ‘ರಾಜಾಜಿನಗರ ಎರಡನೇ ಹಂತದ ‘ಡಿ’ ಬ್ಲಾಕ್‌ನ ರಸ್ತೆಗಳು ಹದಗೆಟ್ಟಿದ್ದು, ದ್ವಿಚಕ್ರ ವಾಹನ ಸವಾರ ಕುಮಾರ್ (35) ಸಾವಿಗೆ ಬಿಬಿಎಂಪಿ ಹಾಗೂ ರಾಜ್ಯ ಸರ್ಕಾರವೇ ಕಾರಣ’ ಎಂದು ಆರೋಪಿಸಿ ಸ್ಥಳೀಯರು ಮಂಗಳವಾರ ಪ್ರತಿಭಟನೆ ನಡೆಸಿದರು.

ಅಪಘಾತ ಸ್ಥಳದಲ್ಲಿ ಸೇರಿದ್ದ ಪ್ರತಿಭಟನಕಾರರು, ರಸ್ತೆಯಲ್ಲಿ ಜೆಸಿಬಿ ಯಂತ್ರ ನಿಲ್ಲಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ‘ಕಾಮಗಾರಿ ನೆಪದಲ್ಲಿ ರಸ್ತೆ ಅಗೆದಿರುವ ಹಾಗೂ ರಸ್ತೆ ದುರಸ್ತಿ ಮಾಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ’ ಎಂದು ಒತ್ತಾಯಿಸಿದರು.

‘ಪ್ಲಂಬರ್ ಕೆಲಸ ಮಾಡುತ್ತಿದ್ದ ಕುಮಾರ್, ದ್ವಿಚಕ್ರ ವಾಹನದಲ್ಲಿ ‘ಡಿ’ ಬ್ಲಾಕ್ ರಸ್ತೆಯಲ್ಲಿ ಹೊರಟಿದ್ದರು. ಟ್ರ್ಯಾಕ್ಟರ್ ಹಿಂದಿಕ್ಕುವ ವೇಳೆ ರಸ್ತೆ ಬದಿಯಲ್ಲಿದ್ದ ತಗ್ಗಿನಿಂದಾಗಿ ದ್ವಿಚಕ್ರ ವಾಹನ ಉರುಳಿಬಿದ್ದಿತ್ತು. ಇದೇ ಸಂದರ್ಭದಲ್ಲಿ ಟ್ರ್ಯಾಕ್ಟರ್ ಟ್ರಾಲಿ ತಾಗಿ ಕುಮಾರ್ ಮೃತಪಟ್ಟಿದ್ದಾರೆ. ಅಪಘಾತಕ್ಕೆ ಹದಗೆಟ್ಟ ರಸ್ತೆಯೇ ಕಾರಣವಾಗಿದ್ದು, ಈ ಸಾವಿಗೆ ಬಿಬಿಎಂಪಿ ನೇರ ಹೊಣೆ’ ಎಂದು ಪ್ರತಿಭಟನಕಾರರು ದೂರಿದರು.

‘ರಾಜಾಜಿನಗರ ಮಾತ್ರವಲ್ಲದೇ ಮಲ್ಲೇಶ್ವರ, ಶೇಷಾದ್ರಿಪುರ, ಓಕಳಿಪುರ, ಶ್ರೀರಾಮಪುರ ಹಾಗೂ ಸುತ್ತಮುತ್ತ ರಸ್ತೆಗಳನ್ನು ಕಾಮಗಾರಿ ಹೆಸರಿನಲ್ಲಿ ಅಗೆಯಲಾಗಿದೆ. ಎಲ್ಲ ರಸ್ತೆಗಳು ಹದಗೆಟ್ಟಿದ್ದು, ನಿತ್ಯವೂ ಅಪಘಾತಗಳು ಸಂಭವಿಸುತ್ತಿವೆ. ಇಂಥ ರಸ್ತೆಗಳ ದುರಸ್ತಿಗೆ ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಬಿಬಿಎಂಪಿ ಕಚೇರಿಗಳಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು’ ಎಂದು ಎಚ್ಚರಿಸಿದರು.

ಕೋರ್ಟ್‌ಗೆ ಸುಳ್ಳು ಲೆಕ್ಕ: ‘ಕೆಲ ಪ್ರಮುಖ ರಸ್ತೆಗಳಲ್ಲಿ ಮಾತ್ರ ಗುಂಡಿಗಳಿಲ್ಲ. ಆದರೆ, ಹಲವು ಪ್ರಮುಖ ರಸ್ತೆ ಹಾಗೂ ಒಳರಸ್ತೆಗಳು ಸಂಪೂರ್ಣ ಹದಗೆಟ್ಟಿವೆ. ಗುಂಡಿಯಿಂದಾಗಿ ನಗರದಲ್ಲಿ ನಿತ್ಯವೂ ಅಪಘಾತಗಳು ಸಂಭವಿಸುತ್ತಿವೆ. ಇದೆಲ್ಲ ಗೊತ್ತಿದ್ದರೂ ಬಿಬಿಎಂಪಿ ಅಧಿಕಾರಿಗಳು, ರಸ್ತೆ ಗುಂಡಿಗಳಿಗೆ ಸಂಬಂಧಪಟ್ಟಂತೆ ಹೈಕೋರ್ಟ್‌ಗೆ ಸುಳ್ಳು ಲೆಕ್ಕ ನೀಡುತ್ತಿದ್ದಾರೆ’ ಎಂದು ಪ್ರತಿಭಟನಕಾರರು ದೂರಿದರು.

ರಸ್ತೆ ಗುಂಡಿ: ದುರಸ್ತಿ ಗಡುವು ವಿಸ್ತರಣೆ

ಬೆಂಗಳೂರು: ನಗರದಲ್ಲಿ 33 ಸಾವಿರ ರಸ್ತೆ ಗುಂಡಿಗಳಿದ್ದು, ಒಂದು ಸಾವಿರ ಗುಂಡಿಗಳನ್ನು ಮಾತ್ರ ಮುಚ್ಚಬೇಕಿದೆ. ನ.20ರೊಳಗೆ ಎಲ್ಲವನ್ನೂ ಮುಚ್ಚಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ರಸ್ತೆಗಳ ಗುಂಡಿ ಮುಚ್ಚಲು ಈ ಹಿಂದೆ ನ.10ರ ಗಡುವು ನೀಡಲಾಗಿತ್ತು. ಆದರೆ ಒಂದೆರಡು ದಿನ ಮಳೆ ಹಾಗೂ ಪ್ರತಿಕೂಲ ಹವಾಮಾನ ಇದ್ದುದ್ದರಿಂದ ದುರಸ್ತಿ ಕಾಮಗಾರಿ ನಡೆದಿಲ್ಲ. ಇನ್ನೆರಡು ದಿನ ಮಳೆ ಬರುವ ಮುನ್ಸೂಚನೆ ಇದೆ. ಹೀಗಾಗಿ ಗುಂಡಿ ಮುಚ್ಚುವ ಗಡುವನ್ನು ವಿಸ್ತರಿಸಲಾಗಿದೆ ಎಂದರು.

ಬೀಗ ಮುರಿದು ಕಳ್ಳತನ: ಇಬ್ಬರ ಬಂಧನ

ಬೆಂಗಳೂರು: ಹಾಲು ಉತ್ಪನ್ನ ಮಾರಾಟ ಮಳಿಗೆ ಹಾಗೂ ಕೆಲ ಮನೆಗಳಲ್ಲಿ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಕ್ಸೂದ್ ಖಾನ್ ಹಾಗೂ ಫರಾಜ್ ಅಹ್ಮದ್ ಬಂಧಿತರು. ಇವರಿಂದ ₹ 5 ಲಕ್ಷ ಮೌಲ್ಯದ ಚಿನ್ನಾಭರಣ, ಮೊಬೈಲ್, ದ್ವಿಚಕ್ರ ವಾಹನ ಹಾಗೂ ಕಬ್ಬಿಣದ ರಾಡ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ವಸಂತನಗರ 3ನೇ ಅಡ್ಡರಸ್ತೆಯಲ್ಲಿರುವ ಹಾಲು ಉತ್ಪನ್ನ ಮಾರಾಟ ಮಳಿಗೆ ಹಾಗೂ ತಿಮ್ಮಯ್ಯ ರಸ್ತೆಯ ರೈಲ್ವೆ ಕ್ವಾರ್ಟರ್ಸ್‌ನ ಮನೆಯಲ್ಲಿ ಇತ್ತೀಚೆಗೆ ಕಳ್ಳತನ ಆಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

‘ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದರು. ಕೆಲ ದಿನ ಮನೆ ಬಳಿ ಓಡಾಡುತ್ತಿದ್ದರು. ನಂತರ, ಕಬ್ಬಿಣದ ರಾಡ್‌ನಿಂದ ಬೀಗ ಮುರಿದು ಒಳನುಗ್ಗಿ ಕಳ್ಳತನ ಮಾಡುತ್ತಿದ್ದರು.’

‘ಮಹಾಲಕ್ಷ್ಮಿ ಲೇಔಟ್, ವೈಯಾಲಿ ಕಾವಲ್ ಹಾಗೂ ಶೇಷಾದ್ರಿಪುರ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಚಿತ್ರಾವಳಿ

ಬೆಂಗಳೂರು ಉತ್ತರ ವಲಯದ ಸೊನ್ನಪ್ಪನಹಳ್ಳಿ, ಸುಗ್ಗಟ್ಟಾ ಸರ್ಕಾರಿ ಶಾಲೆಗೆ ಡ್ರಿಂಕ್ಸ್ ಪ್ರೈಮ್ ಸಂಸ್ಥೆ ನೀಡಿದ ನೀರು ಶುದ್ಧೀಕರಣ ಯಂತ್ರದ ಮುಂದೆ ಶಾಲಾ ಮಕ್ಕಳ ಸಂತಸ. ಸಂಸ್ಥೆಯ ಸಿಇಒ ವಿಜೇಂದರ್ ರೆಡ್ಡಿ ಮುತ್ಯಾಲ ಇದ್ದಾರೆ

ಸ್ಪೀಚ್ ಆ್ಯಂಡ್ ಹಿಯರಿಂಗ್ ಟ್ರಸ್ಟ್ ವತಿಯಿಂದ ಶ್ರವಣದೋಷವುಳ್ಳ ಮಕ್ಕಳು ಮತ್ತು ತಾಯಂದಿರ ತರಬೇತಿ ಕೇಂದ್ರದಿಂದ ಸುನಾದ್ ಶ್ರವಣ ದೋಷವುಳ್ಳ ಮಕ್ಕಳ ಶಾಲೆಯಲ್ಲಿ ಮಕ್ಕಳ ದಿನ ಆಚರಿಸಲಾಯಿತು. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಯಮುನಾ ಡಿ., ಡಾ.ಎಸ್‌ಆರ್ ಚಂದ್ರಶೇಖರ್ ವಾಕ್–ಶ್ರವಣ ಸಂಸ್ಥೆಯ ಪ್ರಾಂಶುಪಾಲೆ ರಶ್ಮಿ ಜೆ. ಭಟ್ಟ, ಮಮತಾ ಬಿ.ವಿ., ರತ್ನಾ ಬಿ.ಶೆಟ್ಟಿ, ದ್ರಾಕ್ಷಾಯಿಣಿ ಇದ್ದರು

ಪದ್ಮನಾಭನಗರದಲ್ಲಿ ನಿರ್ಮಾಣಗೊಂಡಿರುವ ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯ ಉನ್ನತೀಕೃತ ಕೇಂದ್ರವನ್ನು ಮಂಗಳವಾರ ಉದ್ಘಾಟಿಸಿದ ಸ್ಥಳೀಯ ಶಾಸಕರೂ ಆಗಿರುವ ಕಂದಾಯ ಸಚಿವ ಆರ್‌. ಅಶೋಕ, ಕಣ್ಣಿನ ತಪಾಸಣೆ ಮಾಡಿಸಿಕೊಂಡರು

ಭ್ರಷ್ಟಾಚಾರ: ದೂರು ನೀಡಿದವರ ಮೊಬೈಲ್ ಸಂಖ್ಯೆ ಕಡ್ಡಾಯ

ನವದೆಹಲಿ (ಪಿಟಿಐ): ಕೇಂದ್ರ ಜಾಗೃತ ಆಯೋಗವು (ಸಿವಿಸಿ) ಭ್ರಷ್ಟಾಚಾರ ಸಂಬಂಧಿತ ದೂರು ನಿರ್ವಹಣೆ ಕಾರ್ಯವಿಧಾನದಲ್ಲಿ ಮಹತ್ವದ ತಿದ್ದುಪಡಿಗಳನ್ನು ಮಾಡಿದ್ದು, ಇನ್ನು ಮುಂದೆ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ದೂರು ನೀಡುವವರು ತಮ್ಮ ಮೊಬೈಲ್ ಸಂಖ್ಯೆ ಒದಗಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಮುಖ್ಯ ಜಾಗೃತ ಅಧಿಕಾರಿಗಳು (ಸಿವಿಒ) ದೂರಿನ ಸ್ಥಿತಿಗತಿ ಕುರಿತು ಆನ್‌ಲೈನ್ ಮೂಲಕ ದೂರುದಾರರಿಗೆ ಮಾಹಿತಿ ಒದಗಿಸುವ ವ್ಯವಸ್ಥೆಯನ್ನೂ ಮಾಡಲಾಗಿದೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಸಂಬಂಧಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ತಲಘಟ್ಟಪುರ ಠಾಣೆ ವ್ಯಾಪ್ತಿಯಲ್ಲಿ ಬಾಲಕಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಆಕೆಯ ಸಂಬಂಧಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಕಟ್ಟಡ ನಿರ್ಮಾಣ ಕಾರ್ಮಿಕರಾಗಿರುವ ತಂದೆ–ತಾಯಿ ಜೊತೆ ಬಾಲಕಿ ನೆಲೆಸಿದ್ದಳು. ಸಂಬಂಧಿಯೇ ಆಗಿರುವ ಆರೋಪಿ, ಬಾಲಕಿಯನ್ನು ಪುಸಲಾಯಿಸಿ ಹಲವು ಬಾರಿ ದೌರ್ಜನ್ಯ ಎಸಗಿರುವ ಆರೋಪವಿದೆ. ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಗಸ್ತು ಪೊಲೀಸರಿಗೆ ಸಿಕ್ಕಿಬಿದ್ದ ಆರೋಪಿ: ‘ಸೋಮವಾರ ರಾತ್ರಿ ಬಾಲಕಿಯನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದಿದ್ದ ಆರೋಪಿ, ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ. ಅದೇ ನಿರ್ಜನ ಪ್ರದೇಶ ಸಮೀಪದ ರಸ್ತೆಯಲ್ಲಿ ಹೊರಟಿದ್ದ ಗಸ್ತು ಸಿಬ್ಬಂದಿ, ಇಬ್ಬರನ್ನೂ ಕಂಡು ಸ್ಥಳಕ್ಕೆ ಹೋಗಿ ವಿಚಾರಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಇಬ್ಬರೂ ಸಂಬಂಧಿಕರೆಂದು ಆರೋಪಿ ಹೇಳಿದ್ದ. ಆದರೆ, ಬಾಲಕಿಯನ್ನು ಮಾತನಾಡಿಸಿದಾಗ ಲೈಂಗಿಕ ದೌರ್ಜನ್ಯದ ವಿಷಯ ಗೊತ್ತಾಗಿತ್ತು. ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತರಲಾಯಿತು. ಬಾಲಕಿಯನ್ನು ರಕ್ಷಿಸಿ, ಪೋಷಕರಿಗೆ ಮಾಹಿತಿ ನೀಡಲಾಯಿತು. ಪೋಷಕರು ನೀಡುವ ದೂರು ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಮೂಲಗಳು ಹೇಳಿವೆ.

ಭಿಕ್ಷಾಟನೆ: 21 ಮಕ್ಕಳ ರಕ್ಷಣೆ, 10 ಮಹಿಳೆಯರು ವಶಕ್ಕೆ

ಬೆಂಗಳೂರು: ನಗರದ ಹಲವೆಡೆ ಭಿಕ್ಷಾಟನೆಗೆಂದು ಬಳಸುತ್ತಿದ್ದ 21 ಮಕ್ಕಳನ್ನು ಸಿಸಿಬಿ ಪೊಲೀಸರು ರಕ್ಷಿಸಿದ್ದು, ಇದಕ್ಕೆ ಸಂಬಂಧಪಟ್ಟಂತೆ 10 ಮಹಿಳೆಯರನ್ನು ವಶಕ್ಕೆ ಪಡೆದಿದ್ದಾರೆ.

‘ಪ್ರಮುಖ ರಸ್ತೆಗಳು, ವೃತ್ತಗಳು, ಸಂಚಾರ ಸಿಗ್ನಲ್‌ಗಳು, ನಿಲ್ದಾಣಗಳು ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಹಲವು ಮಹಿಳೆಯರು ಭಿಕ್ಷಾಟನೆ ಮಾಡುತ್ತಿದ್ದರು. ತಮ್ಮ ಜೊತೆ ಮಕ್ಕಳನ್ನು ಇಟ್ಟುಕೊಂಡು ಭಿಕ್ಷೆ ಕೇಳುತ್ತಿದ್ದರು. ಈ ಬಗ್ಗೆ ದೂರುಗಳು ಬಂದಿದ್ದವು. ವಿಶೇಷ ಕಾರ್ಯಾಚರಣೆ ನಡೆಸಿ ಮಕ್ಕಳನ್ನು ರಕ್ಷಿಸಲಾಗಿದೆ. ಸದ್ಯ ಮಕ್ಕಳು ಪಾಲನಾ ಮಂದಿರಗಳಲ್ಲಿದ್ದಾರೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಕೆಲ ಮಹಿಳೆಯರು ಬಾಡಿಗೆ ಹಾಗೂ ಕಳ್ಳ ಸಾಗಣಿಕೆ ಮೂಲಕ ಮಕ್ಕಳನ್ನು ತರುತ್ತಿದ್ದರು. ಅಂಥ ಮಕ್ಕಳಿಗೆ ಪ್ರಜ್ಞೆ ತಪ್ಪುವ ಔಷಧ ನೀಡಿ, ಮಲಗಿಸುತ್ತಿದ್ದರು. ನಂತರ, ಅದೇ ಮಗುವನ್ನು ಎತ್ತಿಕೊಂಡು ಓಡಾಡಿ ಭಿಕ್ಷೆ ಬೇಡುತ್ತಿದ್ದರು. ತಾಯಿ– ಮಗುವನ್ನು ನೋಡಿ ಕನಿಕರದಿಂದ ಹಲವರು ಭಿಕ್ಷೆ ನೀಡುತ್ತಿದ್ದರು. ಇದು ಮಹಿಳೆಯರಿಗೆ ಮತ್ತಷ್ಟು ಅನುಕೂಲ ಮಾಡಿಕೊಟ್ಟಿತ್ತು’ ಎಂದು ತಿಳಿಸಿವೆ.

‘ವಶಕ್ಕೆ ಪಡೆದಿರುವ ಮಹಿಳೆಯರು ಹೊರ ರಾಜ್ಯದವರು. ಅವರ ಹಿನ್ನೆಲೆ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಮಕ್ಕಳನ್ನು ಎಲ್ಲಿಂದ ಕರೆತಂದಿದ್ದರು? ಅವರ ಪೋಷಕರು ಯಾರು? ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

108 ಆಂಬುಲೆನ್ಸ್: ವೇತನ ಪಾವತಿಗೆ ಗಡುವು

ಬೆಂಗಳೂರು: ಸರ್ಕಾರದ ‘108-ಆರೋಗ್ಯ ಕವಚ’ ಯೋಜನೆಯನ್ನು ನಿರ್ವಹಿಸುತ್ತಿರುವ ಜಿವಿಕೆ–ಇಎಂಆರ್‌ಐ ಸಂಸ್ಥೆಯು ಎರಡು ತಿಂಗಳಿಂದ ವೇತನವನ್ನು ಬಾಕಿ ಉಳಿಸಿಕೊಂಡಿದೆ. ಗುರುವಾರ ಸಂಜೆಯೊಳಗೆ ವೇತನ ಪಾವತಿಸದಿದ್ದಲ್ಲಿ ಸೇವೆಗೆ ಗೈರುಹಾಜರಾಗುವುದಾಗಿ ಸಂಸ್ಥೆಯ ಸಿಬ್ಬಂದಿ ಎಚ್ಚರಿಕೆ ನೀಡಿದ್ದಾರೆ.

ಜಿವಿಕೆ–ಇಎಂಆರ್‌ಐ ಸಂಸ್ಥೆಯಡಿ 2,500 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಸ್ಥೆಯು 2022ರ ಸೆಪ್ಟೆಂಬರ್ ತಿಂಗಳ ಪರಿಷ್ಕೃತ ವೇತನ ಹಾಗೂ ಅಕ್ಟೋಬರ್ ತಿಂಗಳ ವೇತನವನ್ನು ಪಾವತಿಸಿಲ್ಲ. ಈ ಬಗ್ಗೆ ಆರೋಗ್ಯ ಇಲಾಖೆಯು ಸಂಸ್ಥೆಗೆ ಪತ್ರ ಬರೆದು, ವೇತನ ಪಾವತಿಸುವಂತೆ ಸೂಚಿಸಿದೆ. ಮೂರು ದಿನದೊಳಗೆ ವೇತನ ಪಾವತಿಸದಿದ್ದಲ್ಲಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸುವುದಾಗಿ ಎಚ್ಚರಿಸಿದೆ.

‘ವೇತನಕ್ಕೆ ಸಂಬಂಧಿಸಿದಂತೆ ಗುರುವಾರ ಸಂಜೆಯವರೆಗೆ ಕಾದು ನೋಡಲಾಗುವುದು. ಅಷ್ಟರೊಳಗೆ ವೇತನ ಪಾವತಿಯಾಗದಿದ್ದಲ್ಲಿ ಸಾಮೂಹಿಕವಾಗಿ ಸೇವೆ ಸ್ಥಗಿತ ಮಾಡುತ್ತೇವೆ. ಈ ಬಗ್ಗೆ ಸಂಸ್ಥೆ ಹಾಗೂ ಇಲಾಖೆಗೆ ತಿಳಿಸಿದ್ದೇವೆ’ ಎಂದು 108 ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಎನ್‌.ಎಚ್‌. ಪರಮಶಿವ ತಿಳಿಸಿದರು.

ವಿದೇಶಿ ಪ್ರಜೆ ಬೆದರಿಸಿ ಕಾರು ಸುಲಿಗೆ

ಬೆಂಗಳೂರು: ಸುಡಾನ್ ಪ್ರಜೆಯೊಬ್ಬರನ್ನು ಬೆದರಿಸಿ ಕಾರು ಸುಲಿಗೆ ಮಾಡಿದ್ದ ಆರೋಪಿ ಸಯ್ಯದ್ ಯಾಸಿನ್ (26) ಎಂಬಾತನನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

‘ಕೆ.ಆರ್‌.ಪುರ ನಿವಾಸಿ ಯಾಸಿನ್, ಸಹಚರ ಮೊಹಮ್ಮದ್ ಮನ್ಸೂರ್ ಎಂಬಾತನ ಜೊತೆ ಸೇರಿ ಕೃತ್ಯ ಎಸಗಿದ್ದ. ಮನ್ಸೂರ್ ಸದ್ಯ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಇತ್ತೀಚೆಗಷ್ಟೇ ನಗರಕ್ಕೆ ಬಂದಿದ್ದ ಸುಡಾನ್ ಪ್ರಜೆ, ಕೆಲಸ ನಿಮಿತ್ತ ನ. 1ರಂದು ರಾತ್ರಿ ಹುಂಡೈ ಕಾರಿನಲ್ಲಿ ಹೊರಟಿದ್ದರು. ದ್ವಿಚಕ್ರ ವಾಹನದಲ್ಲಿ ಕಾರು ಬೆನ್ನಟ್ಟಿದ್ದ ಆರೋಪಿಗಳು, ಮಾರ್ಗಮಧ್ಯೆ ಅಡ್ಡಗಟ್ಟಿದ್ದರು. ವಿದೇಶಿ ಪ್ರಜೆ, ಕಾರಿನಿಂದ ಇಳಿಯುತ್ತಿದ್ದಂತೆ ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದರು’ ಎಂದು ತಿಳಿಸಿದರು.

ಡ್ರಗ್ಸ್ ಮಾರಾಟ: ಯುವತಿ ಸೇರಿ ಇಬ್ಬರ ಬಂಧನ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತ ಜಾಲದ ಮೂಲಕ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಯುವತಿ ಸೇರಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಎಸ್‌. ವಿಷ್ಣುಪ್ರಿಯಾ ಹಾಗೂ ಸಹಚರ ಸಿಗಿಲ್ ವರ್ಗೀಸ್ ಬಂಧಿತರು. ಇವರಿಂದ 11.37 ಗ್ರಾಂ ತೂಕದ 23 ಎಂಡಿಎಂಎ ಮಾತ್ರೆಗಳು, 0.53 ಗ್ರಾಂ ತೂಕದ ಎಲ್‌ಎಸ್‌ಡಿ ಕಾಗದ ಚೂರುಗಳು, ಎರಡು ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹ 5 ಲಕ್ಷ’ ಎಂದು ಸಿಸಿಬಿ ಪೊಲೀಸರು ಹೇಳಿದರು.

ಮೊಬೈಲ್ ಮಾರಾಟದ ಸೋಗಿನಲ್ಲಿ ವಂಚನೆ: ಬಂಧನ

ಬೆಂಗಳೂರು: ಮೊಬೈಲ್ ಮಾರಾಟ ಮಾಡುವ ಸೋಗಿನಲ್ಲಿ ಗಾಜಿನ ತುಂಡುಗಳನ್ನು ನೀಡಿ ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಮೊಹಮ್ಮದ್ ಜುಬೇರ್ ಹಾಗೂ ಗುಲ್ಜಾರ್ ಬಂಧಿತರು. ಆರೋಪಿಗಳಿಂದ ವಂಚನೆಗೀಡಾಗಿದ್ದ ವ್ಯಕ್ತಿಯೊಬ್ಬರು ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ನಾಯಿ ಕಚ್ಚಿ ಬಾಲಕ ಸಾವು: ಪೋಷಕರ ಪ್ರತಿಭಟನೆ

ಗೌರಿಬಿದನೂರು: ಹದಿನೈದು ದಿನದ ಹಿಂದೆ ನಾಯಿ ಕಚ್ಚಿ ನಂಜು ಮೆದುಳಿಗೆ ಏರಿ ಕೋಟಾಲದಿನ್ನೆ ಗ್ರಾಮದ ಐದುವರ್ಷದ ಬಾಲಕನೊಬ್ಬ ಮೃತಪಟ್ಟಿದ್ದಾನೆ.

ಹೊಸೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ನಾಯಿ ಕಡಿತಕ್ಕೆ ಸೂಕ್ತ ಚುಚ್ಚುಮದ್ದು ನೀಡಿಲ್ಲ ಎಂದು ಆರೋಪಿಸಿ ಮೃತ ಬಾಲಕನ ಪೋಷಕರು ಮತ್ತು ಸಂಬಂಧಿಕರು ಸೋಮವಾರ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು.

ಕೋಟಾಲದಿನ್ನೆಯ ಫೈರೋಜ್ ಹಾಗೂ ಫಾಮೀದಾ ದಂಪತಿ ಪುತ್ರ ಸಮೀರ್‌ಗೆ ಅಕ್ಟೋಬರ್ 30ರಂದು ನಾಯಿ ಕಚ್ಚಿತ್ತು. ಅದೇ ದಿನ ಹೊಸೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚುಚ್ಚುಮದ್ದು ಕೊಡಿಸಿದ್ದಾಗಿ ಪೋಷಕರು ಹೇಳಿದ್ದಾರೆ.

ಅದಾದ ಐದು ದಿನದ ನಂತರ ಬಾಲಕನಿಗೆ ತೀವ್ರ ಜ್ವರ ಕಾಣಿಸಿಕೊಂಡ ಕಾರಣ ಗೌರಿಬಿದನೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದ ಬಾಲಕ ಇದೇ ಭಾನುವಾರ (ನ.13ರಂದು) ಮೃತಪಟ್ಟಿದ್ದಾನೆ.

ಸ್ಥಳಕ್ಕೆ ಬಂದ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಓ. ರತ್ನಮ್ಮ ಅವರು ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ನಂತರ ಪೋಷಕರು ಪ್ರತಿಭಟನೆ ಕೈಬಿಟ್ಟಿದ್ದಾರೆ.

ಯಲಹಂಕ: ಕಡಲೆಕಾಯಿ ಪರಿಷೆಗೆ ಸಂಭ್ರಮದ ತೆರೆ

ಯಲಹಂಕ: ವೆಂಕಟಾಲದ ಅಭಯ ಮಹಾಗಣಪತಿ ದೇವಾಲಯದ 10ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ಕಡಲೆಕಾಯಿ ಪರಿಷೆಗೆ ಸಂಭ್ರಮದ ತೆರೆಬಿತ್ತು.

ಜನರು ಪರಿಷೆಯಲ್ಲಿ ಪಾಲ್ಗೊಂಡು ಗಣಪತಿಯ ದರ್ಶನ ಪಡೆದರು. ಅಲ್ಲದೇ ಸಾಮ್ರಾಟ್, ನಾಟಿ, ಕಾಬೂಲ್ ಸೇರಿದಂತೆ ವಿವಿಧ ತಳಿಗಳ ಹಸಿ ಮತ್ತು ಹುರಿದ ಕಡಲೆಕಾಯಿ ಉತ್ಸಾಹದಿಂದ ಖರೀದಿಸಿದರು.

ಮಕ್ಕಳ ಆಟಿಕೆಗಳು, ಮಣ್ಣಿನ ಮತ್ತು ಪಿಒಪಿ ಬೊಂಬೆಗಳು, ಪಾದರಕ್ಷೆ, ಬಟ್ಟೆ, ತಿಂಡಿ-ತಿನಿಸುಗಳೂ ಸೇರಿ ಗೃಹೋಪಯೋಗಿ ವಸ್ತುಗಳು ಮತ್ತು ಹೆಣ್ಣುಮಕ್ಕಳ ಆಲಂಕಾರಿಕ ಆಭರಣಗಳ ವ್ಯಾಪಾರದ ಭರಾಟೆಯೂ ಜೋರಾಗಿ ನಡೆಯಿತು.

2013ರಲ್ಲಿ ಅಭಯ ಮಹಾಗಣಪತಿ ದೇವಸ್ಥಾನ ನಿರ್ಮಿಸಿದ ನಂತರ ನಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಯಾವುದಾದರೊಂದು ಚಟುವಟಿಕೆ ಅನುಸರಿಸಿಕೊಂಡು ಹೋಗಬೇಕೆಂದು ನಿರ್ಧರಿಸಿ, ಕಳೆದ 10 ವರ್ಷಗಳಿಂದ ಕಡಲೆಕಾಯಿ ಪರಿಷೆಯನ್ನು ಆಯೋಜಿಸಲಾಗುತ್ತಿದೆ. ಇದಕ್ಕೆ ರೈತರು, ಸಾರ್ವಜನಿಕರು ಹಾಗೂ ವ್ಯಾಪಾರಿಗಳಿಂದ ಉತ್ತಮ ಸ್ಪಂದನೆ ದೊರೆಯುತ್ತಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಕೆಂಪೇಗೌಡ ತಿಳಿಸಿದರು.

ಪರಿಷೆಯಲ್ಲಿ ಗ್ರಾಹಕರು ಕಡಲೆಕಾಯಿ ಖರೀದಿಸಿದರು

ಪ್ರೋತ್ಸಾಹಧನ: ಪರಿಷೆಯಲ್ಲಿ ಕಡಲೆಕಾಯಿ ರಾಶಿ ಹಾಕಿ ವ್ಯಾಪಾರ ಮಾಡುವ ವ್ಯಾಪಾರಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದೇವಸ್ಥಾನದ ವತಿಯಿಂದ ಪ್ರತಿಯೊಬ್ಬರಿಗೂ ₹ 500 ಪ್ರೋತ್ಸಾಹಧನ ನೀಡಲಾಗುತ್ತಿದೆ.

ಸಿದ್ದರಾಮಯ್ಯ ವಿರುದ್ಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಕ್ರೋಶ

‘ಅವಿವೇಕ’ ಎಂದು ವಿವೇಕಾನಂದರಿಗೆ ಅವಮಾನ

ಪ್ರಜಾವಾಣಿ ವಾರ್ತೆ

ಆನವಟ್ಟಿ (ಶಿವಮೊಗ್ಗ): ‘ವಿವೇಕ’ ಯೋಜನೆಯನ್ನು ‘ಅವಿವೇಕ’ ಎನ್ನುವ ಮೂಲಕ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸ್ವಾಮಿ ವಿವೇಕಾನಂದರನ್ನು ಅವಮಾನಿಸಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಕ್ರೋಶ ವ್ಯಕ್ತಪಡಿಸಿದರು.

ಸೊರಬ ತಾಲ್ಲೂಕಿನ ಆನವಟ್ಟಿಯಲ್ಲಿ ಮಂಗಳವಾರ ಬಿಜೆಪಿ ಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು, ‘ವಿವೇಕ ಎಂದರೆ ಜ್ಞಾನ. ಆ ಹೆಸರಿನಲ್ಲಿಯೇ ಸರ್ಕಾರಿ ಶಾಲೆಗಳಿಗೆ ಮೂಲಸೌಕರ್ಯ ಒದಗಿಸುವ ಕ್ರಾಂತಿಕಾರಿ ಹೆಜ್ಜೆಯನ್ನು ಸರ್ಕಾರ ಇಟ್ಟಿದೆ. ಅದನ್ನು ಸಹಿಸದೇ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ’ ಎಂದರು.

‘ಸಿದ್ದರಾಮಯ್ಯ ತಮ್ಮ ಅಧಿಕಾರದ ಅವಧಿಯಲ್ಲಿ ಹಿಂದುಳಿದ ವರ್ಗದ ಯಾವುದೇ ನಾಯಕರನ್ನು ಬೆಳೆಯಲು ಬಿಡದೇ ಚೂರು ಚೂರು ಮಾಡಿದರು. ಹಿಂದುಳಿದವರ ಹೃದಯ ಸಾಮ್ರಾಟರು ಅಂದರೆ ಅದು ರಾಜ್ಯದಲ್ಲಿ ದೇವರಾಜ ಅರಸು ಹಾಗೂ ಅವರ ಹಾದಿಯಲ್ಲಿ ನಡೆದು ಬಂದ ಎಸ್.ಬಂಗಾರಪ್ಪ ಮಾತ್ರ’ ಎಂದರು.

ತಕರಾರಿನ ಕಾರಣ ದಂಡಾವತಿ ನೀರಾವರಿ ಯೋಜನೆ ವಿಳಂಬ: ‘ದಂಡಾವತಿ ನೀರಾವರಿ ಯೋಜನೆಯನ್ನು ಆಂಧ್ರಪ್ರದೇಶದ ತಕರಾರಿನ ಕಾರಣ ಸಂಪೂರ್ಣ ಸೊರಬ ತಾಲ್ಲೂಕಿಗೆ ವಿಸ್ತರಿಸಲು ಆಗಿರಲಿಲ್ಲ. ಶಾಸಕ ಕುಮಾರ್ ಬಂಗಾರಪ್ಪ ಅವರ ಮನವಿ ಮೇರೆಗೆ ಈಗ ಬೇರೆ ರೂಪದಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುವುದು’ ಎಂದು ಸಿಎಂ ಭರವಸೆ ನೀಡಿದರು.

‘ತಜ್ಞರು ಹೇಳಿದರೆ ಕೇಸರಿ ಬಣ್ಣ ಬಳಿಸಲು ಸಿದ್ಧ’

ಬೆಂಗಳೂರು: ಶಾಲಾ ಕೊಠಡಿಗಳಿಗೆ ನಿರ್ದಿಷ್ಟ ಬಣ್ಣ ಬಳಿಯುವಂತೆ ಯಾವುದೇ ಸುತ್ತೋಲೆ ಹೊರಡಿಸಿಲ್ಲ. ಆದರೆ, ವಿದ್ಯಾರ್ಜನೆಗೆ ಕೇಸರಿ ಬಣ್ಣ ಪೂರಕ ಎಂಬುದಾಗಿ ತಜ್ಞರು ಶಿಫಾರಸು ಮಾಡಿದರೆ ಅದೇ ಬಣ್ಣ ಬಳಿಯಲು ಸರ್ಕಾರ ಸಿದ್ಧ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಜ್ಞಾನ ಸಂಪಾದನೆಗೆ ವಿವೇಕಾನಂದರನ್ನು ಮಾದರಿಯನ್ನಾಗಿ ಇರಿಸಿಕೊಳ್ಳಬೇಕಿದೆ’ ಎಂದರು.

ಶಾಲಾ ಕೊಠಡಿಗಳ ವಿನ್ಯಾಸ, ಬಣ್ಣ ಮತ್ತಿತರ ವಿಚಾರಗಳಿಗೆ ಸಂಬಂಧಿಸಿದಂತೆ ಇಲಾಖಾ ಹಂತದಲ್ಲಿ ಯಾವುದೇ ನಿರ್ಧಾರವೂ ಆಗಿಲ್ಲ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ’ ಎಂದು ಹೇಳಿದರು.

‘ವಿರೋಧ ಮಾಡುವುದಕ್ಕಾಗಿಯೇ ಕೆಲವರು ಇರುತ್ತಾರೆ. ಕೇಸರಿ ಬಣ್ಣವನ್ನು ಕಾಂಗ್ರೆಸ್‌ನವರು ಏಕೆ ವಿರೋಧ ಮಾಡುತ್ತಾರೆ? ಕೇಸರಿ ಬಣ್ಣದಲ್ಲಿ ಹಿಂದುತ್ವ ಕಾಣಿಸಿತೆ?’ ಎಂದು ನಾಗೇಶ್ ಪ್ರಶ್ನಿಸಿದರು.

‘ಆತುರದ ನಿರ್ಧಾರ ಬೇಕಿರಲಿಲ್ಲ’

ಚಾಮರಾಜನಗರ: ‘ಸರ್ಕಾರಿ ಶಾಲಾ ಕೊಠಡಿಗಳಿಗೆ ಕೇಸರಿ ಬಣ್ಣ ಬಳಿಯುವ ವಿಚಾರದಲ್ಲಿ ಸರ್ಕಾರ ಆತುರದ ನಿರ್ಧಾರ ಕೈಗೊಳ್ಳುವ ಅಗತ್ಯವಿರಲಿಲ್ಲ’ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಮಂಗಳವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ. ಕೇಸರಿ ಬಣ್ಣ ತ್ಯಾಗದ ಪ್ರತೀಕ. ಎಲ್ಲರೂ ಗೌರವ ಕೊಡುತ್ತಾರೆ. ಇದನ್ನು ರಾಜಕೀಯವಾಗಿ ಬಳಸಿಕೊಳ್ಳಬಾರದು’ ಎಂದರು.

ಮೌಲ್ಯಮಾಪನ ಪ್ರಮಾದ: 9 ಉಪನ್ಯಾಸಕರ ಅಮಾನತು

ಒಂದನೇ ಪುಟದಿಂದ...

ವಿದ್ಯಾರ್ಥಿಗಳು ಭೌತವಿಜ್ಞಾನ ಮತ್ತು ಇಂಗ್ಲಿಷ್ ವಿಷಯದ ಉತ್ತರಪತ್ರಿಕೆಯಲ್ಲಿ ಮಧ್ಯದ ಕೆಲವು ಪುಟಗಳನ್ನು ಖಾಲಿ ಬಿಟ್ಟು, ನಂತರ ಪುಟಗಳಲ್ಲಿ ಉತ್ತರ ಬರೆದಿದ್ದರು. ಆದರೆ, ಆರಂಭದ ಪುಟಗಳನ್ನು ಮೌಲ್ಯಮಾಪನ ಮಾಡಿದ್ದ ಉಪನ್ಯಾಸಕರು, ಖಾಲಿ ಪುಟಗಳು ಕಾಣಿಸುತ್ತಲೇ ಮೌಲ್ಯಮಾಪನ ಕೊನೆಗೊಳಿಸಿದ್ದರು. ಅಲ್ಲದೆ, ನಂತರದ ಪುಟಗಳನ್ನು ತಿರುವಿ ಹಾಕಿಲ್ಲ. ಅದರಿಂದ ವಿದ್ಯಾರ್ಥಿಗಳ ಫಲಿತಾಂಶದಲ್ಲಿ ವ್ಯತ್ಯಾಸ ಆಗಿದೆ ಎಂದು ಆರೋಪಿಸಲಾಗಿದೆ.

‘ಆದೇಶ ತಕ್ಷಣ ಹಿಂಪಡೆಯಬೇಕು’: ಇದು ಉಪನ್ಯಾಸಕರ ಕಣ್ತಪ್ಪಿನಿಂದ ಆಗಿರುವ ಪ್ರಮಾದ. ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳನ್ನು ಅನ್ವಯಿಸಿ ಅವರನ್ನು ಅಮಾನತು ಮಾಡಿರುವುದು ಸರಿಯಲ್ಲ. ಆ ಆದೇಶಗಳನ್ನು ತಕ್ಷಣ ಹಿಂಪಡೆಯಬೇಕು’ ಎಂದು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ ಆಗ್ರಹಿಸಿದ್ದಾರೆ. ಈ ಬಗ್ಗೆ ಇಲಾಖೆಯ ನಿರ್ದೇಶಕರಿಗೆ ಸಂಘ ಮನವಿ ಸಲ್ಲಿಸಿದೆ.

ಅಮಾನತುಗೊಂಡ ಉಪನ್ಯಾಸಕರು

- **ಭೌತವಿಜ್ಞಾನ ಉಪನ್ಯಾಸಕರು:** ಎಂ. ಶಂಕರಪ್ಪ;ಸರ್ಕಾರಿ ಪದವಿಪೂರ್ವ ಕಾಲೇಜು, 18ನೇ ಅಡ್ಡ ರಸ್ತೆ, ಮಲ್ಲೇಶ್ವರ, ಕರೂರು ಪ್ರಕಾಶ್;ಸರ್ಕಾರಿ ಪದವಿಪೂರ್ವ ಕಾಲೇಜು, ಮೊಳಕಾಲ್ಮೂರು, ಚಿತ್ರದುರ್ಗ, ಬಿ.ಪಿ. ಕಲ್ಲಪ್ಪ; ಸರ್ಕಾರಿ ಪದವಿಪೂರ್ವ ಕಾಲೇಜು ಬಳ್ಳಾರಿ, ಎಂ.ಚಂದ್ರಶೇಖರ್;ವಿಶ್ವ ಮಾನವ ಪದವಿಪೂರ್ವ ಕಾಲೇಜು, ನಾಗಮಂಗಲ, ಮಂಡ್ಯ.
- **ಶಿಸ್ತು ಕ್ರಮಕ್ಕೆ ಆಡಳಿತ ಮಂಡಳಿಗೆ ಸೂಚನೆ:** ಎಂ.ಪಿ. ಶ್ರುತಿ;ಒಕ್ಕಲಿಗರ ಸಂಘದ ಪದವಿಪೂರ್ವ ಕಾಲೇಜು ಬೆಳಗೊಳ, ಮೂಡಿಗೆರೆ (ಖಾಸಗಿ ಅನುದಾನರಹಿತ)
- **ಇಂಗ್ಲಿಷ್ ಉಪನ್ಯಾಸಕರು:** ಪೋಲಾರ್ ಸಿದ್ಧರಾಮ್ ಚಂದ್ರಮ್; ಸರ್ಕಾರಿ ಪದವಿಪೂರ್ವ ಕಾಲೇಜು, ರೇವಗಿ, ಚಿತ್ತಾಪುರ ತಾಲ್ಲೂಕು, ಕಲಬುರಗಿ, ಬಸವರಾಜು ನಾಗನಾಥ;ವಿವೇಕಾನಂದ ಪದವಿಪೂರ್ವ ಕಾಲೇಜು, ಬಸವಕಲ್ಯಾಣ, ಬೀದರ್, ಡಿ.ಎ. ಯಾಸ್ಮಿನ್ ಜಹಾ;ಸಿದ್ದಾರ್ಥ ಪದವಿಪೂರ್ವ ಕಾಲೇಜು, ಮಧುಗಿರಿ, ತುಮಕೂರು, ಪಿ. ಕರೇಗೌಡ;ಸುವರ್ಣಮುಖಿ ವಿದ್ಯಾಸಂಸ್ಥೆ, ಕಾವನದಾಲ, ಮಧುಗಿರಿ, ತುಮಕೂರು, ಎಸ್.ಸಿ. ದಯಾನಂದ;ಕನಕದಾಸ ಪದವಿಪೂರ್ವ ಕಾಲೇಜು, ಹುಳಿಯಾರು, ಚಿಕ್ಕನಾಯಕಹಳ್ಳಿ, ತುಮಕೂರು.

ಆರು ಸಾಧಕರಿಗೆ ಇನ್ಫೊಸಿಸ್ ಪ್ರಶಸ್ತಿ

ಒಂದನೇ ಪುಟದಿಂದ...

ಸುಮನ್ ಚಕ್ರವರ್ತಿ


ನಿಸ್ಸಿಂ ಕಾನೇಕರ್

ವಿದಿತಾ ವೈದ್ಯ

ರೋಹಿಣಿ ಪಾಂಡೆ

ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ ಖರಗ್‌ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಸುಮನ್ ಚಕ್ರವರ್ತಿ ಅವರಿಗೆ ಪ್ರಶಸ್ತಿ ಸಂದಿದೆ.

ದ್ರವ ವಿಜ್ಞಾನ ಹಾಗೂ ಎಲೆಕ್ಟ್ರೊ ಮೆಕ್ಯಾನಿಕ್ಸ್ ಕ್ಷೇತ್ರಗಳಲ್ಲಿ ಸಂಶೋಧನೆಗಳ ಮೂಲಕ ರೋಗ ಪತ್ತೆಗೆ ಕಡಿಮೆ ವೆಚ್ಚದ ವೈದ್ಯಕೀಯ ಉಪಕರಣಗಳನ್ನು ಅವರು ಆವಿಷ್ಕರಿಸಿದ್ದಾರೆ.

ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆಯಲ್ಲಿ ನ್ಯೂರೊಬಯಾಲಜಿ ಪ್ರೊಫೆಸರ್ ವಿದಿತಾ ವೈದ್ಯ ಅವರಿಗೆ ಜೀವ ವಿಜ್ಞಾನ ವಿಭಾಗದಲ್ಲಿ ಪ್ರಶಸ್ತಿ ಸಂದಿದೆ. ಆತಂಕ, ಖಿನ್ನತೆಯಂತಹ ಮಾನಸಿಕ ಸಮಸ್ಯೆಗಳಿಗೆ ಕಾರಣವಾಗುವ ಮಿದುಳಿನ ಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಅವರು ನೀಡಿರುವ ಕೊಡುಗೆಗೆ ಈ ಪ್ರಶಸ್ತಿ ನೀಡಲಾಗಿದೆ.

ಪುಣೆಯ ನ್ಯಾಷನಲ್ ಸೆಂಟರ್ ಫಾರ್ ರೇಡಿಯೊ ಆಸ್ಟ್ರಾನಮಿಯ ಪ್ರೊಫೆಸರ್ ನಿಸ್ಸಿಂ ಕಾನೇಕರ್ ಅವರಿಗೆ ಭೌತ ವಿಜ್ಞಾನದಲ್ಲಿ ನಕ್ಷತ್ರಗಳು ಅತ್ಯಂತ ಗರಿಷ್ಠ ಪ್ರಮಾಣದಲ್ಲಿ ಸೃಷ್ಟಿಯಾದ ಕಾಲಘಟ್ಟದ ಗ್ಯಾಲಕ್ಸಿಗಳ ಕುರಿತ ಅಧ್ಯಯನಕ್ಕಾಗಿ ಈ ಗೌರವ ಸಂದಿದೆ.

ಯೇಲ್ ವಿಶ್ವವಿದ್ಯಾಲಯದ ಆರ್ಥಿಕ ಬೆಳವಣಿಗೆ ಕೇಂದ್ರದ ನಿರ್ದೇಶಕಿ ರೋಹಿಣಿ ಪಾಂಡೆ ಅವರಿಗೆ ಸಮಾಜ ವಿಜ್ಞಾನ ವಿಭಾಗದ ಪ್ರಶಸ್ತಿ ಸಂದಿದೆ. ಆಡಳಿತ ಮತ್ತು ಉತ್ತರದಾಯಿತ್ವ, ಮಹಿಳೆಯರ ಸಬಲೀಕರಣ, ಬಡವರ ಬದುಕಿನಲ್ಲಿ ಸಾಲದ ಮಹತ್ವ, ಪರಿಸರ ವಿಷಯಗಳ ಕುರಿತು ಅವರು ನಡೆಸಿದ ಸಂಶೋಧನೆಗಳನ್ನು ಗುರುತಿಸಿ ಈ ಪ್ರಶಸ್ತಿ ಪ್ರಕಟಿಸಲಾಗಿದೆ.

ನಾರಾಯಣ ಮೂರ್ತಿ ಮಾತನಾಡಿ, ‘ವಿಜ್ಞಾನ ಮತ್ತು ಸಂಶೋಧನೆ ಮೇಲೆ ಸರ್ಕಾರ ಹಾಗೂ ಖಾಸಗಿ ವಲಯ ಹೆಚ್ಚು ಹೂಡಿಕೆ ಮಾಡಬೇಕಾದ ತುರ್ತು ಇದೆ’ ಎಂದರು.

ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಟ್ರಸ್ಟಿಗಳಾದ ಶ್ರೀನಾಥ್ ಬಾಟ್ನಿ, ಕೆ. ದಿನೇಶ್, ಮೋಹನದಾಸ್ ಪೈ, ಸಲೀಲ್ ಪರೇಖ್ ಮತ್ತು ಎಸ್.ಡಿ. ಶಿಬುಲಾಲ್ ಉಪಸ್ಥಿತರಿದ್ದರು.

ಬಸ್ ನಿಲ್ದಾಣದ ‘ಗುಂಬಜ್’ ತೆರವಿಗೆ ಸಿದ್ಧ

ಸಂಸದ ಪ್ರತಾಪ ಸಿಂಹ ಹೇಳಿಕೆ; ರಾತ್ರೋರಾತ್ರಿ ಕಳಶ ಹೇಗೆ ಬಂತು?

ಪ್ರಜಾವಾಣಿ ವಾರ್ತೆ

ಮೈಸೂರು: ‘ಇಲ್ಲಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು ಬಳಿ ನಿರ್ಮಿಸಿರುವ ಬಸ್ ನಿಲ್ದಾಣದ ಮೇಲಿನ ಗುಂಬಜ್ ತೆರವಿಗೆ ಶತಸಿದ್ಧ’ ಎಂದು ಸಂಸದ ಪ್ರತಾಪ ಸಿಂಹ ಮಂಗಳವಾರ ತಿಳಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿ, ‘ಗುಂಬಜ್ ತೆರವಿಗೆ ನಾನು ನೀಡಿದ್ದ ಗಡುವಿನಲ್ಲಿ 2 ದಿನ ಬಾಕಿ ಇದೆ. ಅಷ್ಟರಲ್ಲಿ ತೆರವುಗೊಳಿಸದಿದ್ದರೆ, ಈಗಾಗಲೇ ಹೇಳಿದಂತೆ ನಾನೇ ತೆರವು ಮಾಡುತ್ತೇನೆ’ ಎಂದರು.

‘ನಾನು ಹೇಳಿಕೆ ಕೊಡುವ ಮುನ್ನ ಗುಂಬಜ್ ಮಾತ್ರ ಇತ್ತು. ರಾತ್ರೋರಾತ್ರಿ ಅದರ ಮೇಲೆ ಕಳಶ ಹೇಗೆ ಬಂತು?’ ಎಂದು ಕೇಳಿದರು. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿನ ಚರ್ಚೆಯನ್ನು ಉಲ್ಲೇಖಿಸಿ ‘ಮೈಸೂರಿನ ಅಂಬಾವಿಲಾಸ ಅರಮನೆಯ ಮೇಲಿನ ಗೋಪುರಕ್ಕೂ, ಮಸೀದಿ ಮೇಲಿನ ಗುಂಬಜ್‌ಗೂ ವ್ಯತ್ಯಾಸ ಇಲ್ಲವೇ? ಹೋಲಿಕೆ ಮಾಡುವ ಮುನ್ನ ವಾಸ್ತುಶಿಲ್ಪ ಕುರಿತು ಓದಿ’ ಎಂದು ಹೇಳಿದರು.

‘ಅರಮನೆಯ ಗೋಪುರ ಇಂಡೋ--ಸಾರ್ಸೆನಿಕ್ ವಾಸ್ತುಶಿಲ್ಪದ್ದು. ಬಸ್ ನಿಲ್ದಾಣದ ಮೇಲೆ ಯಾವ ವಾಸ್ತುಶಿಲ್ಪ ಸೃಷ್ಟಿಸುತ್ತಾರೆ? ನಾನು ಪ್ರಸ್ತಾಪಿಸದಿದ್ದರೆ ಅಲ್ಲಿ ಅರ್ಧಚಂದ್ರ ಆಕೃತಿಯನ್ನೂ ಕಟ್ಟಿಬಿಡುತ್ತಿದ್ದರು. ಶಾಸಕ ಎಸ್.ಎ.ರಾಮದಾಸ್ ಈ ಬಗ್ಗೆ ಮೌನ ವಹಿಸಿದ್ದಾರೆ ಎಂದರೆ ಸಹಮತ ಇದೆ ಎಂದೇ ಅರ್ಥ’ ಎಂದರು.

‘ತೆರವಿಗೆ ಜಿಲ್ಲಾಡಳಿತದ ಅನುಮತಿ ಬೇಡ. ರಾಷ್ಟ್ರೀಯ ಹೆದ್ದಾರಿ ನಿರ್ಮಿಸಿದ್ದು, ಅನುಮತಿ ಪಡೆದಿಲ್ಲ. ತೆರಿಗೆ ಹಣ ನಷ್ಟ ಆಗದಿರಲೆಂದು ನಿಲ್ದಾಣ ಉಳಿಸಿ, ಗುಂಬಜ್ ತೆರವುಗೊಳಿಸಲಾಗುತ್ತದೆ’ ಎಂದು ಹೇಳಿದರು.

‘ಅರಮನೆಯ ಮಾದರಿ, ಧರ್ಮದ ಆಧಾರದ್ದಲ್ಲ’

ರಾಮದಾಸ್

ಮೈಸೂರು: ‘ಪಾರಂಪರಿಕ ನಗರಿಯ ಮಹತ್ವ ಸಾರಲು ಕೃಷ್ಣರಾಜ ಕ್ಷೇತ್ರದಲ್ಲಿ ಬಸ್ ಪ್ರಯಾಣಿಕರ ತಂಗುದಾಣಗಳನ್ನು ಅರಮನೆ ವಿನ್ಯಾಸದ ಮಾದರಿಯಲ್ಲಿ ನಿರ್ಮಿಸಲಾಗುತ್ತಿದೆ. ಯಾವುದೇ ಧರ್ಮದ ಆಧಾರದಲ್ಲಲ್ಲ’ ಎಂದು ಶಾಸಕ ಎಸ್.ಎ.ರಾಮದಾಸ್ ಸ್ಪಷ್ಟಪಡಿಸಿದ್ದಾರೆ.

‘ನಿಲ್ದಾಣದ ಮೇಲೆ ಗುಂಬಜ್ ವಿನ್ಯಾಸ ಮಾಡಲಾಗಿದೆ’ ಎಂಬ ವಿವಾದ ಕುರಿತು ಹೇಳಿಕೆ ನೀಡಿರುವ ಅವರು, ‘ವಿನ್ಯಾಸವನ್ನು ತಪ್ಪಾಗಿ ಅರ್ಥೈಸಿ ಮಸೀದಿಯಂತೆ ನಿರ್ಮಿಸಲಾಗುತ್ತಿದೆ, ಗುತ್ತಿಗೆದಾರ ಮುಸ್ಲಿಂ ಎಂದು ವದಂತಿ ಹಬ್ಬಿಸುವ ಕುರಿತು ಪೊಲೀಸ್ ಆಯುಕ್ತರಿಗೆ ಪತ್ರ ಬರೆದು ದೂರು ನೀಡಿದ್ದೇನೆ’ ಎಂದು ತಿಳಿಸಿದ್ದಾರೆ.

‘ನಗರದಲ್ಲಿ ಈಗಾಗಲೇ ಹಲವೆಡೆ ಇದೇ ಮಾದರಿಯ ತಂಗುದಾಣಗಳಿವೆ. ನಾವು ಅದೇ ಮಾದರಿ ಅನುಸರಿಸಿದ್ದೇವೆ. ಸಂಸದ ಪ್ರತಾಪ ಸಿಂಹ ಹೇಳಿಕೆ ನಂತರ ರಾತ್ರೋರಾತ್ರಿ ಕಳಶ ಅಳವಡಿಸಿಲ್ಲ. ಕಳೆದ ವಾರವೇ ಹಾಕಲಾಗಿದೆ’ ಎಂದು ಸಮರ್ಥಿಸಿಕೊಂಡಿದ್ದಾರೆ.

‘ವಿನ್ಯಾಸವನ್ನು ಪರಿಶೀಲಿಸಲು ತಜ್ಞರ ಸಮಿತಿ ರಚಿಸಲು ಸರ್ಕಾರಕ್ಕೆ ಪತ್ರ ಬರೆದಿದ್ದು, ತಪ್ಪಿದೆ ಎಂದು ಸಮಿತಿ ಹೇಳಿದರೆ ಬದಲಾಯಿಸಲು ನಮ್ಮ ಅಭ್ಯಂತರವೇನಿಲ್ಲ’ ಎಂದು ತಿಳಿಸಿದ್ದಾರೆ.

ಗುಂಬಜ್ ಕೆಡವಲು ಅವನ್ಯಾರು?– ಸಿದ್ದರಾಮಯ್ಯ

ಮೈಸೂರು: ‘ಗುಂಬಜ್ ಕೆಡವಲು ಅವನ್ಯಾರು. ಸಂಸದನಾಗಿ ಸಾಮಾನ್ಯಜ್ಞಾನ ಬೇಡವೇ. ಮನೆ ದುಡ್ಡು ಹಾಕಿ ನಿಲ್ದಾಣ ಕಟ್ಟಿಸಿದ್ದಾನಾ? ಅಧಿಕಾರಿಗಳು ವಿನ್ಯಾಸ ನೀಡಿದಾಗ ಏನು ಮಾಡ್ತಿದ್ದರು’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಬಸ್ ನಿಲ್ದಾಣದ ಮೇಲಿನ ಗುಂಬಜ್ ತೆರವು ಕುರಿತ ಬಿಜೆಪಿ ಸಂಸದ ಪ್ರತಾಪ ಸಿಂಹ ಹೇಳಿಕೆಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ಮತಗಳ ಕ್ರೋಡೀಕರಣ ಮತ್ತು ಅಶಾಂತಿ ಮೂಡಿಸಲು ಹೇಳಿಕೆ ಕೊಡುತ್ತಿದ್ದಾರೆ. ವಿನ್ಯಾಸ ಹೀಗೇ ಇರಬೇಕೆಂಬ ನಿಯಮ ಎಲ್ಲಿದೆ? ಗುಂಬಜ್ ರೀತಿ ಇರುವುದನ್ನೆಲ್ಲಾ ಒಡೆಯುತ್ತೀರಾ? ಎಂದು ಪ್ರಶ್ನಿಸಿದರು.

ಮೂರು ದಿನಗಳ ಬೆಂಗಳೂರು ಟೆಕ್‌ಸಮ್ಮಿಟ್– 25ಕ್ಕೆ ಇಂದು ಮೋದಿ ಚಾಲನೆ

ಭವಿಷ್ಯದ ತಂತ್ರಜ್ಞಾನಗಳ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು ಟೆಕ್‌ಸಮ್ಮಿಟ್‌ನ ಅಂತಿಮ ಹಂತದ ಸಿದ್ಧತೆಯನ್ನು ಉನ್ನತ ಶಿಕ್ಷಣ ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಕೆ.ಅಶ್ವತ್ಥನಾರಾಯಣ, ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಡಾ.ಇ.ವಿ.ರಮಣ ರೆಡ್ಡಿ ವೀಕ್ಷಿಸಿದರು

ಬೆಂಗಳೂರು: ಜಾಗತಿಕವಾಗಿ ಮಹತ್ವ ಪಡೆದಿರುವ ‘ಬೆಂಗಳೂರು ಟೆಕ್‌ಸಮ್ಮಿಟ್’ಗೆ ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಬುಧವಾರ ವರ್ಚುವಲ್ ಮೂಲಕ ಚಾಲನೆ ನೀಡಲಿದ್ದಾರೆ.

ಬೆಂಗಳೂರು ಟೆಕ್‌ಸಮ್ಮಿಟ್‌ಗೆ ಇದೀಗ ರಜತೋತ್ಸವದ ಸಂಭ್ರಮ. ಇದರ ಅಂಗವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮದಲ್ಲಿ ವಿಶೇಷ ಸ್ಮರಣಿಕೆಯೊಂದನ್ನು ಬಿಡುಗಡೆ ಮಾಡಲಿದ್ದಾರೆ. ಮೂರು ದಿನಗಳು ನಡೆಯುವ ಸಮಾವೇಶದಲ್ಲಿ ಮುಂದಿನ ತಲೆಮಾರಿನ ಜಾಗತಿಕ ತಂತ್ರಜ್ಞಾನ ಕ್ರಾಂತಿಯ ಬಗ್ಗೆ 75 ಚಿಂತನಾ ಗೋಷ್ಠಿಗಳು ಮತ್ತು ಸಂವಾದಗಳನ್ನು ಹಮ್ಮಿಕೊಳ್ಳಲಾಗಿದೆ.

ವಂಶವಾಹಿ ತಿದ್ದುಪಡಿ (ಜೀನ್ ಎಡಿಟಿಂಗ್) ಸಾಧನ ‘ಕ್ರಿಸ್ಪಾರ್’ ಅಭಿವೃದ್ಧಿಪಡಿಸಿದ ನೋಬೆಲ್ ಪಾರಿತೋಷಕ ವಿಜೇತೆ ಫ್ರಾನ್ಸ್‌ನ ಇಮ್ಯಾನ್ಯುಯೆಲ್ ಮೇರಿ ಚಾರ್ಪೆಂಟಿಯರ್ ಅವರು ಕ್ರಿಸ್ಪಾರ್ ಅಭಿವೃದ್ಧಿಪಡಿಸಲು ಕ್ರಮಿಸಿದ ಹಾದಿ ಮತ್ತು ಜಿನೋಮ್ ಎಂಜಿನಿಯರಿಂಗ್ ತಂತ್ರಜ್ಞಾನದ ಕುರಿತು ಗುರುವಾರ ಮಾತನಾಡಲಿದ್ದಾರೆ. ಭಾರತದಲ್ಲಿ ತಂತ್ರಜ್ಞಾನದ ಕ್ರಾಂತಿಯ ಬೆಳವಣಿಗೆ ಕುರಿತು ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊ. ಅಜಯ್ ಕೆ ಸೂದ್ ಅವರು ಬುಧವಾರ ವಿಷಯ ಮಂಡಿಸಲಿದ್ದಾರೆ.

ಸ್ಥಳ	ಬೆಂಗಳೂರು ಅರಮನೆ
ದೇಶಗಳು	16
ಪ್ರದರ್ಶಕರು	575
ಅಂತರರಾಷ್ಟ್ರೀಯ ಪರಿಣತರು	375
ಉದ್ಯಮಿಗಳು	5000
ಗೋಷ್ಠಿಗಳು	75

ಕೋವಿಡ್ ಬಳಿಕ ನಡೆಯುತ್ತಿರುವ ಟೆಕ್‌ಸಮ್ಮಿಟ್ ಸಂಪೂರ್ಣ ಭೌತಿಕ ಸ್ವರೂಪದಲ್ಲಿ ನಡೆಯಲಿದೆ. ಈ ಸಮಾವೇಶದಲ್ಲಿ ಕನಿಷ್ಠ 9 ಒಡಂಬಡಿಕೆಗಳಿಗೆ ಸಹಿ ಮಾಡಲಾಗುವುದು ಮತ್ತು 20 ಕ್ಕೂ ಹೆಚ್ಚು ಉತ್ಪನ್ನಗಳ ಬಿಡುಗಡೆಯೂ ಆಗಲಿದೆ ಎಂದು ಐಟಿ–ಬಿಟಿ ಸಚಿವ ಡಾ.ಕೆ.ಅಶ್ವತ್ಥನಾರಾಯಣ ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಅರಬ್ ಸಂಸ್ಥಾನದ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಖಾತೆ ಸಹಾಯಕ ಸಚಿವ ಒಮರ್ ಬಿನ್ ಸುಲ್ತಾನ್ ಅಲ್ ಒಲಾಮಾ, ಆಸ್ಟ್ರೇಲಿಯಾದ ವಿದೇಶಾಂಗ ಖಾತೆ ಸಹಾಯಕ ಸಚಿವ ಟಿಮ್ ವ್ಯಾಟ್ಸ್, ಫಿನ್ಲೆಂಡಿನ ವಿಜ್ಞಾನ ಸಚಿವ ಪೆಟ್ರಿ ಹಾನ್ನೊನೆನ್, ಭಾರತದ ಪ್ರಪ್ರಥಮ ಯೂನಿಕಾರ್ನ್ ಕಂಪನಿ ‘ಇನ್ಮೊಬಿ’ ಸಂಸ್ಥಾಪಕ ನವೀನ್ ತೆವಾರಿ, ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರೋನ್(ವರ್ಚುವಲ್), ಅಮೆರಿಕಾದ ಕಿಂಡ್ರಿಲ್ ಕಂಪನಿಯ ಸಿಇಒ ಮಾರ್ಟಿನ್ ಶ್ರೋಟರ್ ಭಾಗವಹಿಸಲಿದ್ದಾರೆ ಎಂದು ಹೇಳಿದರು.

- **ಯಾವ ವಿಷಯಗಳ ಗೋಷ್ಠಿಗಳು**
ಕೃತಕ ಬುದ್ಧಿಮತ್ತೆ, ಬಿಗ್ ಡೇಟಾ, ಸೆಮಿಕಂಡಕ್ಟರ್, ಮಷೀನ್ ಲರ್ನಿಂಗ್, 5 ಜಿ, ರೋಬೋಟಿಕ್ಸ್, ಫಿನ್ ಟೆಕ್, ಜೀನ್ ಎಡಿಟಿಂಗ್, ಮೆಡಿ ಟೆಕ್, ಸ್ಪೇಸ್ ಟೆಕ್, ಜೈವಿಕ ಇಂಧನ ಸುಸ್ಥಿರತೆ, ಇ–ಸಂಚಾರ ಮುಂತಾದವು.
- **ಪ್ರದರ್ಶನದಲ್ಲಿ ಭಾಗವಹಿಸುವ ದೇಶಗಳು**
ಜಪಾನ್, ಫಿನ್ಲೆಂಡ್, ನೆದರ್ಲೆಂಡ್ಸ್, ಡೆನ್ಮಾರ್ಕ್, ಸ್ವೀಡನ್, ಸ್ವಿಟ್ಜರ್ಲೆಂಡ್, ಜರ್ಮನಿ, ಆಸ್ಟ್ರೇಲಿಯಾ, ಅಮೆರಿಕಾ, ಲಿಥುವೇನಿಯಾ, ಕೆನಡಾ ಮುಂತಾದವು.
- **ಜಾಲತಾಣದ ಮೂಲಕ ಬಿತ್ತರ:**
ಎಲ್ಲಾ ಗೋಷ್ಠಿಗಳು ಸಾಮಾಜಿಕ ಜಾಲತಾಣ www bengalurutech.com ಮೂಲಕ ನೇರವಾಗಿ ಬಿತ್ತರಿಸಲಾಗುವುದು.
- **ಸಾರ್ವಜನಿಕರಿಗೆ ಮುಕ್ತ ಅವಕಾಶ:**
ಮೂರು ದಿನಗಳ ಟೆಕ್‌ಸಮ್ಮಿಟ್‌ಗೆ ಪ್ರತಿ ದಿನ ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗಳನ್ನು ಪ್ರದರ್ಶನಗಳಲ್ಲಿ ವೀಕ್ಷಿಸಬಹುದು.

ಭೋವಿ ನಿಗಮಕ್ಕೆ ಗೂಳಿಹಟ್ಟಿ ಶೇಖರ್ ಅಧ್ಯಕ್ಷ

ಗೂಳಿಹಟ್ಟಿ ಶೇಖರ್

ಬೆಂಗಳೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ದ ಬಿಜೆಪಿ ಶಾಸಕ ಗೂಳಿಹಟ್ಟಿ ಡಿ. ಶೇಖರ್ ಅವರನ್ನು ಸರ್ಕಾರ ನೇಮಿಸಿದೆ.

ನಾಲ್ಕು ವರ್ಷಗಳಿಂದ ಅಧ್ಯಕ್ಷ ಸ್ಥಾನ ಖಾಲಿ ಇತ್ತು. ಸಿದ್ದರಾಮಯ್ಯ ಸರ್ಕಾರ ಅವಧಿಯಲ್ಲಿ ಸೀತಾರಾಮ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಅಧ್ಯಕ್ಷರನ್ನು ನೇಮಿಸುವಂತೆ ಅಖಿಲ ಭಾರತೀಯ ಭೋವಿ ಸಮಾಜದ ಮುಖಂಡರು ಇತ್ತೀಚೆಗೆ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದ್ದರು.

ನಿಗಮದಲ್ಲಿ ಸರ್ಕಾರದ ಅನುದಾನದ ದುರ್ಬಳಕೆ ಮತ್ತು ಫಲಾನುಭವಿಗಳಿಗೆ ವಂಚನೆ ಆರೋಪಕ್ಕೆ ಸಂಬಂಧಿಸಿ ಇತ್ತೀಚೆಗೆ ಎಸಿಬಿ ಹಲವು ಪ್ರಕರಣ ದಾಖಲಿಸಿತ್ತು. ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಲೀಲಾವತಿ ಮತ್ತು ಪ್ರಧಾನ ವ್ಯವಸ್ಥಾಪಕ ನಾಗರಾಜಪ್ಪ ಸೇರಿದಂತೆ ಕೆಲವು ಅಧಿಕಾರಿಗಳ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಡಿಯೂ ಮೊಕದ್ದಮೆ ದಾಖಲಿಸಲಾಗಿದೆ.

ನಿಧನ ವಾರ್ತೆ

ಕೆ.ಆರ್. ಮುರಳಿಕೃಷ್ಣ

ಬೆಂಗಳೂರು: ‘ಸಣ್ಣ ಸತ್ಯ’, ‘ಗರ’ ಚಿತ್ರಗಳ ನಿರ್ದೇಶಕ ಕೆ.ಆರ್. ಮುರಳಿಕೃಷ್ಣ (63) ಅನಾರೋಗ್ಯದಿಂದ ಸೋಮವಾರ ಸಂಜೆ ನಿಧನರಾದರು.

ಬ್ರೈನ್ ಟ್ಯೂಮರ್‌ನಿಂದ ಬಳಲುತ್ತಿದ್ದ ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಆದರೆ, ಹೃದಯಾಘಾತದಿಂದ ಅವರು ನಿಧನರಾದರು ಎಂದು ಕುಟುಂಬದವರು ತಿಳಿಸಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಮೂಲತಃ ವಕೀಲರಾಗಿದ್ದ ಅವರು, ಸಿನಿಮಾವನ್ನು ಪ್ರವೃತ್ತಿಯಾಗಿಸಿಕೊಂಡಿದ್ದರು.

‘ಗರ’ ಸಿನಿಮಾಕ್ಕಾಗಿ ಬಾಲಿವುಡ್ ನಟ ಜಾನಿ ಲಿವರ್ ಅವರನ್ನು ಕನ್ನಡಕ್ಕೆ ಕರೆತಂದಿದ್ದರು. ‘ಬಾಳನೌಕೆ’, ‘ಕರ್ಣನ ಸಂಪತ್ತು’, ‘ಹೃದಯ ಸಾಮ್ರಾಜ್ಯ’, ‘ಮರಳಿ ಗೂಡಿಗೆ’ ಸಿನಿಮಾಗಳನ್ನು ನಿರ್ಮಿಸಿದ್ದರು.

ಸಹಕಾರ ನಗರದ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮಂಗಳವಾರ ಮಧ್ಯಾಹ್ನ 12.30ಕ್ಕೆ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಡಾ. ಆರ್. ಎಸ್. ಮೋಹನ್

ಬೆಂಗಳೂರು: ‘ಅಬೋಟ್’ ವೈದ್ಯಕೀಯ ಕಂಪನಿಯ ಕ್ಲಿನಿಕಲ್ ಹಾಗೂ ವೈದ್ಯಕೀಯ ವ್ಯವಹಾರಗಳ ಏಷ್ಯನ್ ಪೆಸಿಫಿಕ್ ವಲಯದ ನಿರ್ದೇಶಕರಾಗಿದ್ದ ಡಾ. ಆರ್.ಎಸ್. ಮೋಹನ್ (55) ಹೃದಯಾಘಾತದಿಂದ ಸೋಮವಾರ (ನ. 14) ನಿಧನರಾದರು.

ಮೋಹನ್ ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಬೆಂಗಳೂರಿನ ಮೋಹನ್, ಹುಬ್ಬಳ್ಳಿ ಕಿಮ್ಸ್‌ನಲ್ಲಿ ಎಂಬಿಬಿಎಸ್ ಪದವಿ ಪಡೆದಿದ್ದರು. ನಂತರ, ಸಿಂಗಪುರಕ್ಕೆ ಹೋಗಿ ಎಂ.ಎಸ್ ಉನ್ನತ ವ್ಯಾಸಂಗ ಮಾಡಿದ್ದರು. ಬಳಿಕ, ಅಲ್ಲಿಯೇ ನೆಲೆಸಿ ಸಿಂಗಪುರದ ಪೌರತ್ವ ಪಡೆದುಕೊಂಡಿದ್ದರು.

ಬೆಂಗಳೂರಿನಲ್ಲಿರುವ ತಾಯಿಯನ್ನು ನೋಡಲು ಇತ್ತೀಚೆಗಷ್ಟೇ ಬಂದಿದ್ದರು.

ಮೋಹನ್ ಅವರ ಅಂತ್ಯಕ್ರಿಯೆಯನ್ನು ಕೂಡ್ಲುಗೇಟ್ ಸ್ಮಶಾನದಲ್ಲಿ ಬುಧವಾರ ನಡೆಸಲು ತೀರ್ಮಾನಿಸಲಾಗಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಎರಡನೇ ವರ್ಷದ ಪುಣ್ಯ ಸ್ಮರಣೆ

16-11-2022



ದಿ॥ ಬಿ.ವಿ. ಸಂಪತ್‌ರವರು

ಮಾಜಿ ಅಧ್ಯಕ್ಷರು, ಬಿಳೇಕಹಳ್ಳಿ – ಕಾಂಗ್ರೆಸ್ ಮುಖಂಡರು

“ನಿಮ್ಮ ಜೀವನದ ಸರಳತೆ, ಪ್ರೀತಿ, ಔದಾರ್ಯ ಹಾಗೂ ಮೌಲ್ಯಗಳನ್ನು ಸದಾ ಸ್ಮರಿಸುತ್ತಾ ಮುನ್ನಡೆಯುತ್ತಿರುವ”

ಧರ್ಮಪತ್ನಿ: ಶ್ರೀಮತಿ ಕಾಟಮ್ಮ

ಮಕ್ಕಳು: B.S. ನಾಗರಾಜ್– ಮಾಜಿ ಅಧ್ಯಕ್ಷರು, ಸ್ಥಾಯಿ ಸಮಿತಿ CMC ಬೊಮ್ಮನಹಳ್ಳಿ, B.S. ರವಿ, B.S. ರಮೇಶ್, B.S. ಮಂಜುನಾಥ್, B.S. ಬಿಂದು

ಸೊಸೆಯಂದಿರು: ಬಿ.ವಿ. ಮಧು, ಎಮ್. ಸುನೀತ, ಆಶಾ, ರೇಖಾ

ಮೊಮ್ಮಕ್ಕಳು: ವೇದಾಂತ, ನವ್ಯ, ಸುಮಂತ್, ಮಯೂರ್, ಮೋಹಿತ್, ವೈಭವ್, ಲಹರಿ, ಕುಶಾಲ್ ಸೀನು, ವಿವಾನ್ ಸೂರ್ಯ

ಶ್ರೀ ವೇಮನ

ಕುಟುಂಬ ವರ್ಗದವರು ಹಾಗೂ ಬಂಧು ಮಿತ್ರರು

ಉದ್ಯೋಗ ವಾಣಿ

GSSS | GEETHA SHISHU SHIKSHANA SANGHA (R)
INSTITUTE OF ENGINEERING AND TECHNOLOGY FOR WOMEN
KRS Road, Metagalli, Mysuru – 570016

REQUIRED
ASST. TO WARDEN FOR GIRLS HOSTEL

Female Graduate with administrative skills and experience, willing to work in shifts may apply. Free hostel accommodation will be provided. Application, with passport size photo must be sent by post / Courier only to: The Hon. Secretary on or before 25.11.2022.

Dr. M. Jagannatha Shenoi, President
Smt. Vanaja B. Pandit, Hon. Secretary

NEXA | MARUTI SUZUKI ARENA

Varun Motors Pvt. Ltd.
India's No.1 Maruti Suzuki Dealer and 17 times Platinum Award Winner is looking for Career aspired personnel

We are Hiring........In our Varun Motors Private Limited - Bangalore.
ITI - Mechanical / Diploma in Mechanical or Automobile - Freshers or Experience Candidates.
10th Std, PUC & Any Degree Freshers or Experience Candidates.

- Mechanic
- Technician
- Service Advisor
- Technical Advisor
- Sales Executive
- Team Leader
- Trainer
- Accounts Executive
- Customer Care Manager
- Customer Care Executive
- Tele Caller
- Backend Executive

Salary: 15k to 40k - Depending on the Experience.
Benefits: PF, ESI, EL, Leave Encashment Amount, Bonus, Gratuity, Attendance Bonus, Referal Bonus, Group Mediclaim Insurance Policy, Accident Policy etc.
Apart from your salary, you will earn an Annual Bond Policy amount as per the achievement - Minimum Rs.60,000/- to Rs. 2,25,000/-.

Interested Candidate Please walk-in to the below mentioned address.
Timings : Monday to Saturday (9.00am to 5.00pm)

namma VARUN MOTORS PVT. LTD. We don't Sell. We Advise
Varun Motors Pvt Ltd-Head Office
Maruti Suzuki Car Showroom : #41/7, 15th Cross, MES College Road, Malleshwaram, Bangalore - 560003
Contact: 8197788798 / 9513966214 / 9513688422
Email: : varun.blr.hrm@marutidealers.com / jobs.blr@varungroup.com

ಬೇಕಾಗಿದ್ದಾರೆ

ಸಂ : ಎಸ್‌ಕೆಜಿವಿ/ನೇ/01/2022–23 ದಿನಾಂಕ:15/11/2022

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು ಇವರ ಪತ್ರಿಕಾ ಪ್ರಕಟಣೆ ಆದೇಶ ಅನುಮತಿ ಸಂಖ್ಯೆ:ಸಿ8(6)ಸಾ.ಶಿ.ಆ.ಖಾ.ಹು.ಭ. ಅನು/82/2019–20 ದಿನಾಂಕ 05/11/2022 ರ ಆದೇಶದಂತೆ ಶ್ರೀ ಕಲ್ಮರುಡೇಶ್ವರ ಸ್ವಾಮಿ ಗುರುಕುಲಾಶ್ರಮ ವಿದ್ಯಾಪೀಠ (ರಿ) ಕರಡಿಗವಿ ಮಠ ಇದರಡಿಯಲ್ಲಿ ನಡೆಸುತ್ತಿರುವ ಶ್ರೀ ರೇವಣಸಿದ್ದೇಶ್ವರ ಪ್ರೌಢಶಾಲೆ ಸಿಂದಿಗೆರೆ ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ. ಅನುದಾನಕ್ಕೆ ಒಳಪಟ್ಟಿದ್ದು ಸರ್ಕಾದ ನಿಯಮಾನುಸಾರ ವೇತನವನ್ನು ನೀಡಲಾಗುವುದು.

ಇಲ್ಲಿ ಖಾಲಿ ಇರುವ ಈ ಕೆಳಗಿನ ಹುದ್ದೆಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ವಿಷಯ	ಹುದ್ದೆ	ಮೀಸಲಾತಿ	ವಿದ್ಯಾರ್ಹತೆ
1	ಆಂಗ್ಲ ಬಾಷೆ	01	ಪ್ರವರ್ಗ–1(ಬಿಂದು05)	ಬಿಎ/ಎಂ.ಎ ಬಿಎಡಿ(ಐಚ್ಛಿಕ ಆಂಗ್ಲ ಮಾಧ್ಯಮ)

ವಿದ್ಯಾರ್ಹತೆ : ಅಂಗೀಕೃತ ವಿಶ್ವವಿದ್ಯಾಲಯದಿಂದ ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿರುವ ಪ್ರಸ್ತುತ ಪ್ರಚಲಿತದಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಂತೆ ವಿದ್ಯಾರ್ಹತೆಯನ್ನು ಹೊಂದಿರಬೇಕು ಪ್ರಕಟಣೆಯಾದ ದಿನದಿಂದ **21 ದಿನಗಳೊಳಗಾಗಿ** ಅರ್ಜಿಯ 1 ಪ್ರತಿಯನ್ನು ಕಾರ್ಯದರ್ಶಿ : ಶ್ರೀ ಕಲ್ಮರುಡೇಶ್ವರ ಸ್ವಾಮಿ ಗುರುಕುಲಾಶ್ರಮ ವಿದ್ಯಾಪೀಠ (ರಿ) ಕರಡಿಗವಿ ಮಠ, ಸಿಂದಿಗೆರೆ ಮತ್ತು ಅಂಚೆ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ. 577146 ಹಾಗೂ ಮತ್ತೊಂದು ಅರ್ಜಿಯನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕಮಗಳೂರು 577102 ಇವರಿಗೆ ಸಲ್ಲಿಸಬೇಕು ಅರ್ಜಿಯೊಂದಿಗೆ ದೃಢೀಕರಿಸಿದ ಅಂಕಪಟ್ಟಿಗಳ ನಕಲು ಪ್ರತಿಗಳನ್ನು ಲಗತ್ತಿಸಬೇಕು ಮತ್ತು ಮೇಲ್ಕಂಡ ವಿದ್ಯಾಸಂಸ್ಥೆಯ ಹೆಸರಿಗೆ **ರೂ 500/–(ಐದು ನೂರು ರೂ)ಗಳ ಡಿ.ಡಿ**ಯನ್ನು ಲಗತ್ತಿಸುವುದು. ನೊಂದಣಿ ಅಂಚೆ ಮೂಲಕ ಸ್ವೀಕೃತಿಯೊಂದಿಗೆ ಅರ್ಜಿಯನ್ನು ಕಳಿಸುವುದು. ಮೊಬೈಲ್ ನಂ **9900809883, 9740471859, 8296853271.**

ಸಹಿ/–ಕಾರ್ಯದರ್ಶಿ
ಶ್ರೀ ಕಲ್ಮರುಡೇಶ್ವರ ಸ್ವಾಮಿ ಗುರುಕುಲಾಶ್ರಮ ವಿದ್ಯಾಪೀಠ (ರಿ)
ಕರಡಿಗವಿ ಮಠ, ಸಿಂದಿಗೆರೆ –577146,ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ.

ಬಿ.ಎಂ.ಎಸ್. ಶಿಕ್ಷಣ ದತ್ತಿ (ರಿ)
ಬಿ.ಎಂ.ಎಸ್. ಮಹಿಳಾ ಕಾಲೇಜು, ಸ್ವಾಯತ್ತ (ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆ)
ಕಹಳೆ ಬಂಡೆ ರಸ್ತೆ, ಬಸವನಗುಡಿ, ಬೆಂಗಳೂರು–560004
ದೂರವಾಣಿಸಂಖ್ಯೆ:080-26676729, 26601836 e-mail:principal@bmscw.edu.in

ನಂ.: ಬಿ.ಎಂ.ಎಸ್.ಮ.ಕಾ/16/ಬ್ಯಾಕ್‌ಲಾಗ್/2022–23 ದಿನಾಂಕ :16.11.2022

ವಿಶೇಷ ನೇಮಕಾತಿ ಪತ್ರಿಕಾ ಅಧಿಸೂಚನೆ

ಉಲ್ಲೇಖ:ಕಾಶಿಇ/ಪ್ರಾಕಬೆಂ/ಆಂ–1/65/ಬ್ಯಾಕ್‌ಲಾಗ್/2014–15 ದಿನಾಂಕ:30.09.2022

ಬ್ಯಾಕ್‌ಲಾಗ್ ಅಟೆಂಡರ್(ಸಹಾಯಕರ) ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಬಿ.ಎಂ.ಎಸ್ ಎಜುಕೇಷನಲ್ ಟ್ರಸ್ಟ್, ಬಸವನಗುಡಿ ಬೆಂಗಳೂರು ಇವರ ಆಡಳಿತಕ್ಕೆ ಒಳಪಟ್ಟ ಖಾಸಗಿ ಅನುದಾನಿತ ಬಿ.ಎಂ.ಎಸ್.ಮಹಿಳಾ ಪದವಿ ಕಾಲೇಜು(ಸ್ವಾಯತ್ತ), ಬಸವನಗುಡಿ ಬೆಂಗಳೂರು–04, ಇಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಸಂಬಂಧ ಈ ಕೆಳಕಾಣಿಸಿದ ಹುದ್ದೆಗಳನ್ನು ನೇರ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ದ್ವಿಪ್ರತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಲಾದ ಅರ್ಜಿಗಳನ್ನು ವಿದ್ಯಾರ್ಹತೆ, ಮೀಸಲಾತಿ ಮತ್ತು ಇನ್ನಿತರ ದೃಢೀಕೃತ ದಾಖಲೆಗಳೊಂದಿಗೆ ಕಡ್ಡಾಯವಾಗಿ ಒಂದು ಪ್ರತಿಯನ್ನು ಅಧ್ಯಕ್ಷರು, ಬಿ.ಎಂ.ಎಸ್ ಮಹಿಳಾ ಕಾಲೇಜು(ಸ್ವಾಯತ್ತ), ಕಹಳೆ ಬಂಡೆ ರಸ್ತೆ, ಬಸವನಗುಡಿ, ಬೆಂಗಳೂರು–560004 ಹಾಗೂ ಮತ್ತೊಂದು ಪ್ರತಿಯನ್ನು ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಕಾಳಿದಾಸ ರಸ್ತೆ, ಬೆಂಗಳೂರು–560009 ವಿಳಾಸಕ್ಕೆ ನೇರವಾಗಿ ಅಥವಾ ನೋಂದಣಿ ಅಂಚೆ ಮೂಲಕ ದಿನಾಂಕ: 08.12.2022ರ ಸಂಜೆ 5:00 ಗಂಟೆಯೊಳಗೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಲಕೋಟೆಯ ಮೇಲೆ “ಬ್ಯಾಕ್‌ಲಾಗ್ ಅಟೆಂಡರ್ ಹುದ್ದೆಗಾಗಿ ಅರ್ಜಿ” ಎಂದು ನಮೂದಿಸಿರಬೇಕು.

ಕ್ರ.ಸಂ	ಹುದ್ದೆಯ ಹೆಸರು	ಮೀಸಲಾತಿ ಮತ್ತು ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ವಯೋಮಿತಿ
1	ಅಟೆಂಡರ್ (ಸಹಾಯಕರು)	ಪ.ಜಾತಿ–02 ಪ.ಪಂಗಡ –01	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ ಅಥವಾ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆ ಸಂಖ್ಯೆ:ಸಿಆಸುಇ/81/ಸೇವನೆ/2017, ದಿ:27.02.2018ರಲ್ಲಿ ನಿಗದಿಪಡಿಸಿರುವ ತತ್ಸಮಾನ ವಿದ್ಯಾರ್ಹತೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.	ಕನಿಷ್ಠ 18 ವರ್ಷ ಪೂರೈಸಿರಬೇಕು ಮತ್ತು ಗರಿಷ್ಠ 40ವರ್ಷ ಮೀರಿರಕೂಡದು

ವೇತನ ಶ್ರೇಣಿ:ರೂ.18600–32600 ಹಾಗೂ ಅನ್ವಯಿಸುವ ಇತರೆ ಭತ್ಯೆಗಳು. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮತ್ತು ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ನಿಗದಿತ ಅರ್ಜಿ ನಮೂನೆಯನ್ನು ಕಾಲೇಜಿನ website:www.bmscw.edu.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು ನಿಗದಿತ ಸಮಯದೊಳಗೆ ಪೂರಕ ದಾಖಲೆಗಳೊಡನೆ ಸಲ್ಲಿಸುವುದು.

ಸಹಿ/– ಪ್ರಾಂಶುಪಾಲರು, ಬಿ.ಎಂ.ಎಸ್ ಮಹಿಳಾ ಕಾಲೇಜು (ಸ್ವಾಯತ್ತ)
ಸಹಿ/– ಅಧ್ಯಕ್ಷರು, ಬಿ.ಎಂ.ಎಸ್ ಶಿಕ್ಷಣ ಸಂಸ್ಥೆ



EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಅವರ ಔಷಧ ಅವರಿಗಷ್ಟೆ!

ಕೊಳ್ಳೇಗಾಲ ಶರ್ಮ

ವೈದ್ಯರ ಬಳಿಗೆ ಯಾವುದೋ ಕಾಯಿಲೆಯ ಚಿಕಿತ್ಸೆಗೆಂದು ಹೋದಾಗ ಆತಂಕ ಇದ್ದೇ ಇರುತ್ತದೆ. ಯಾವ ಔಷಧ ಕೊಡುತ್ತಾರೋ? ಅದು ಕಾಯಿಲೆಯನ್ನು ಗುಣಪಡಿಸುತ್ತದೆಯೋ ಅಥವಾ ಔಷಧದ ಉಪಟಳವೇ ಕಾಯಿಲೆಗಿಂತ ಜಾಸ್ತಿ ಆಗಬಹುದೋ? ಇನ್ನು. ಈ ಆತಂಕ ಬೇಡವಂತೆ! ನಿಮ್ಮದೇ ದೇಹದಿಂದ ತೆಗೆದ ಔಷಧ, ಇಲ್ಲವೇ ನಿಮ್ಮ ದೇಹಕ್ಕಷ್ಟೆ ಒಗ್ಗುವ ಚಿಕಿತ್ಸೆಯನ್ನು ವೈದ್ಯರು ನೀಡಬಲ್ಲರಂತೆ. ಅಂತಹುದೊಂದು 'ಪರ್ಸನಲೈಸ್ಡ್' ಅಥವಾ 'ವೈಯಕ್ತಿಕ ಚಿಕಿತ್ಸೆ'ಯ ಪರೀಕ್ಷೆಯೊಂದು ಫಲಕಾರಿಯಾಗಿದೆ ಎಂದು ಮೊನ್ನೆ 'ನೇಚರ್' ಪತ್ರಿಕೆ ವರದಿ ಮಾಡಿದೆ. ಕ್ಯಾನ್ಸರ್ ರೋಗಿಗಳಿಗೆ ಅವರವರ ದೇಹದಿಂದಲೇ ಹೆಕ್ಕಿದ ಜೀವಕೋಶಗಳನ್ನು ತಿದ್ದಿ, ಹೊಸದಾಗಿಸಿ ಮರಳಿ ದೇಹಕ್ಕೆ ಚುಚ್ಚಿ ಚಿಕಿತ್ಸೆಯನ್ನು ಅಮೆರಿಕೆಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಕ್ಯಾನ್ಸರ್ ಚಿಕಿತ್ಸಾ ಕೇಂದ್ರದ ವಿಜ್ಞಾನಿಗಳು ಮಾಡಿದ್ದಾರೆ. ಸೂಸನ್ ಫಾಯ್ ಮತ್ತು ಸಂಗಡಿಗರು ನಡೆಸಿರುವ ಈ ಪರೀಕ್ಷೆ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಫಲ ನೀಡಿದೆಯಂತೆ.

'ವೈಯಕ್ತಿಕ ಚಿಕಿತ್ಸೆ' ಎಂದರೆ ಇನ್ನೇನಲ್ಲ; ಪ್ರತಿಯೊಬ್ಬರೂ ಒಬ್ಬ ವಿಶಿಷ್ಟ ವ್ಯಕ್ತಿಯಷ್ಟೆ. ಹೀಗಾಗಿ ಅವರ ದೇಹದಲ್ಲಿನ ಚಯಾಪಚಯ ಕ್ರಿಯೆಗಳಿಗೆ ತಕ್ಕಂತೆ ಇರುವಂತಹ ಔಷಧವನ್ನು ತಯಾರಿಸಿ ನೀಡಿದರೆ ಕಾಯಿಲೆಗಳು ಗುಣವಾಗುವುದು ಸುಲಭ. ಅಲ್ಲದೆ ಕೆಲವರಿಗೆ ಔಷಧದಿಂದಲೇ ಆಗುವ ತೊಂದರೆಯನ್ನು ಕಡಿಮೆ ಮಾಡಬಹುದು ಎನ್ನುವುದು ತರ್ಕ. ಈ ತರ್ಕವನ್ನು ಎಲ್ಲರೂ ಒಪ್ಪುತ್ತಾರಾದರೂ, ಅವರವರಿಗೇ ಒಗ್ಗುವಂತಹ ಔಷಧವನ್ನು ತಯಾರಿಸುವುದು ಬಲು ದುಬಾರಿ ಎನ್ನಿಸಿತ್ತು. ಇದೀಗ ತಳಿತಂತ್ರಜ್ಞರು ಜೀವಕೋಶಗಳ ತಳಿಗುಣಗಳನ್ನು ತಿದ್ದಲು ಬಳಸುವ ಕ್ರಿಸ್ಪರ್ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು, ಎಲ್ಲ ಕಾಯಿಲೆಗಳಿಗೆ ಅಲ್ಲದಿದ್ದರೂ, ರೋಗ ಪ್ರತಿರೋಧಕ ವ್ಯವಸ್ಥೆಯನ್ನು ಬಾಧಿಸುವ ಕ್ಯಾನ್ಸರಿನಂತಹ ಸಮಸ್ಯೆಗಳಿಗೆ ಪರಿಹಾರ ಒದಗಿಸಬಹುದೆನ್ನುವ ಆಸೆಯನ್ನು ಈ ಪರೀಕ್ಷೆ ಹುಟ್ಟಿಸಿದೆ.

> ಪ್ರತಿಯೊಬ್ಬರೂ ಒಬ್ಬ ವಿಶಿಷ್ಟ ವ್ಯಕ್ತಿ. ಅವರ ದೇಹದಲ್ಲಿನ ಚಯಾಪಚಯ ಕ್ರಿಯೆಗಳಿಗೆ ತಕ್ಕಂತೆ ಇರುವಂತಹ ಔಷಧವನ್ನು ತಯಾರಿಸಿ ನೀಡಿದರೆ ಕಾಯಿಲೆಗಳು ಗುಣವಾಗುವುದು ಸುಲಭ.

ರೋಗಪ್ರತಿರೋಧಕ ವ್ಯವಸ್ಥೆ ಎನ್ನುವುದು ದೇಹರಕ್ಷಣೆಗೆ ಇರುವ ವ್ಯವಸ್ಥೆ. ಸಾಮಾನ್ಯವಾಗಿ ರಕ್ತ ಅಥವಾ ದೇಹವನ್ನು ಹೊಕ್ಕ ರೋಗಾಣುಗಳನ್ನು ಕಟ್ಟಿ ಹಾಕಿ ಹೊರಗೆಸೆಯುವ ಬಿಳಿ ರಕ್ತಕೋಶಗಳು ಹಾಗೂ ನಮ್ಮ ದೇಹದ್ದಲ್ಲದ ಯಾವುದೇ ಜೀವಕೋಶಗಳನ್ನೂ ಗುರುತಿಸಿ ಕೊಲ್ಲುವ ಕೆಲಸವನ್ನು ಇದು ಮಾಡುತ್ತದೆ. ಅನ್ಯ ಜೀವಕೋಶಗಳನ್ನು ಗುರುತಿಸುವುದಕ್ಕಾಗಿಯೇ ಟಿ-ಜೀವಕೋಶಗಳೆಂಬ ಕೋಶಪಡೆ ಇದೆ. ಇವು ರೋಗಾಣುಗಳು ಬಚ್ಚಿಟ್ಟುಕೊಂಡಿರುವ ಜೀವಕೋಶಗಳನ್ನು ಹಾಗೂ ಅನ್ಯ ಜೀವಕೋಶಗಳನ್ನು ಗುರುತಿಸಿ, ಅವನ್ನು ಕೊಲ್ಲುತ್ತವೆ. ಇಂತಹ ಕೋಶಗಳನ್ನು ಕ್ಯಾನ್ಸರ್ ಜೀವಕೋಶಗಳನ್ನು ಹುಡುಕಿ ಕೊಲ್ಲುವಂತೆ ಹುರಿದುಂಬಿಸುವ ಕೆಲಸವನ್ನು ಸೂಸನ್ ಫಾಯ್ ತಂಡ ಮಾಡಿದೆ.

ಕ್ಯಾನ್ಸರ್ ರೋಗವಾದರೂ ಅದನ್ನು ನಮ್ಮದೇ ದೇಹದ ದೋಷ ಎನ್ನಬಹುದು. ದೇಹದ ಜೀವಕೋಶಗಳೇ ನಿಯಂತ್ರಣ ಮೀರಿ ಬೆಳೆಯಲು ತೊಡಗಿದಾಗ ಕ್ಯಾನ್ಸರ್ ಉಂಟಾಯಿತು ಎನ್ನುತ್ತಾರೆ. ಟಿ-ಜೀವಕೋಶಗಳು ಇವನ್ನು ಅನ್ಯವೆಂದು ಗ್ರಹಿಸವು. ಹೀಗಾಗಿ ದೇಹ ಇವನ್ನು ಸಹಿಸಿಕೊಳ್ಳುತ್ತದೆ. ಈ ಟಿ-ಕೋಶಗಳು ಕ್ಯಾನ್ಸರ್ ಕೋಶಗಳನ್ನು ಅನ್ಯವೆಂದು ಗ್ರಹಿಸುವಂತೆ ಮಾಡಿದರೆ ಆಗ ಅವು ಕ್ಯಾನ್ಸರ್ ಕೋಶಗಳ ಮೇಲೆ ದಾಳಿ ಮಾಡಬಹುದಲ್ಲವೇ? ಈ ಯೋಚನೆಯಿಂದ ಹದಿನಾರು ರೋಗಿಗಳ ದೇಹದಿಂದ ಹೆಕ್ಕಿದ ಟಿ-ಜೀವಕೋಶಗಳನ್ನು ಸೂಸನ್ ಫಾಯ್ ತಂಡ ತಿದ್ದಿದೆ. ಇದಕ್ಕಾಗಿ ಇತ್ತೀಚೆಗೆ ಸದಾ ಸುದ್ದಿಯಲ್ಲಿರುವ ಕ್ರಿಸ್ಪರ್ ಎನ್ನುವ ತಂತ್ರಜ್ಞಾನವನ್ನು ಬಳಸಿದೆ. ಸಾಮಾನ್ಯವಾಗಿ ಟಿ-ಜೀವಕೋಶಗಳ ಹೊರಮೈಯಲ್ಲಿ ಇರುವ ಕೆಲವು ಪ್ರೊಟೀನುಗಳು ಅವು ಅನ್ಯ ಜೀವಕೋಶಗಳನ್ನು ಗುರುತಿಸಲು ನೆರವಾಗುತ್ತವೆ. ಪ್ರತಿಜನಕ ಅಥವಾ ಆಂಟಿಜನ್ನುಗಳೆನ್ನುವ ಇಂತಹ ಪ್ರೊಟೀನುಗಳನ್ನು ತಯಾರಿಕೆಯನ್ನು ನಿರ್ದೇಶಿಸುವ ಜೀನ್‌ಗಳನ್ನು ಕ್ರಿಸ್ಪರ್ ತಂತ್ರಜ್ಞಾನದಿಂದ ಬದಲಿಸಿ, ಹೊಸ ಪ್ರೊಟೀನುಗಳನ್ನು ತಯಾರಿಸುವ ಜೀನ್‌ಗಳನ್ನು ಫಾಯ್ ತಂಡ ಟಿ-ಜೀವಕೋಶಗಳಲ್ಲಿ ಹುದುಗಿಸಿದೆ. ಅನಂತರ ಮರಳಿ ಈ ತಿದ್ದಿದ ಜೀವಕೋಶಗಳನ್ನು ರೋಗಿಗಳಿಗೆ ಚಿಕಿತ್ಸೆಯಾಗಿ ನೀಡಿದೆ. ಟಿ-ಕೋಶಗಳ ಚಟುವಟಿಕೆಯನ್ನು ಗಮನಿಸಿದೆ.

ಒಟ್ಟು ಹದಿನಾರು ರೋಗಿಗಳಲ್ಲಿ ಈ ಚಿಕಿತ್ಸೆ ನಡೆಸಲಾಗಿದೆ. ಇವರಲ್ಲಿ ಬಹುತೇಕರು ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿದ್ದರೂ ರೋಗ ಉಲ್ಬಣವಾಗುತ್ತಲೇ ಇದ್ದವರು. ಒಬ್ಬರು ಸೈಟೊಕೈನ್ ಸುರಿಮಳೆ ಎನ್ನುವ ಕಾಯಿಲೆಗೆ ಗುರಿಯಾದವರು. ಇಂತಹವರಲ್ಲಿ ರೋಗಪ್ರತಿರೋಧ ವ್ಯವಸ್ಥೆ ಅತ್ಯುತ್ಸಾಹದಿಂದ ದಾಳಿ ಮಾಡುತ್ತದೆ. ಆದರೆ ಅನ್ಯ ಜೀವಕೋಶಗಳನ್ನು ಗುರುತಿಸಲಾಗದೆ ದೇಹದ್ದೇ ಜೀವಕೋಶಗಳಿಗೆ ಬಾಧೆ ತರುತ್ತದೆ. ಕೋವಿಡ್ ಸೋಂಕಿನ ಸಂದರ್ಭದಲ್ಲಿ ಶ್ವಾಸಕೋಶಗಳಿಗೆ ಬಾಧೆ ಉಂಟಾಗಲು ಸೈಟೊಕೈನ್ ಸುರಿಮಳೆಯೇ ಕಾರಣ. ಇನ್ನೂ ಒಬ್ಬ ರೋಗಿಗೆ ಮೆದುಳು ಜ್ವರದ ಅತ್ಯುಲ್ಬಣಾವಸ್ಥೆಯಲ್ಲಿ ಇದ್ದಂಥವರು. ರೋಗಿಗಳ ರಕ್ತದಲ್ಲಿ ಕ್ಯಾನ್ಸರ್ ಕಾಯಿಲೆಯಿಂದಾಗಿಯೇ ಕಂಡು ಬಂದಂತಹ ಆಂಟಿಜನ್ನುಗಳನ್ನು ಗುರುತಿಸಿದ್ದಾರೆ. ಇವು ಪ್ರತಿ ರೋಗಿಯಲ್ಲಿಯೂ ಭಿನ್ನವಾಗಿರಬಹುದು. ಅನಂತರ ಟಿ-ಜೀವಕೋಶಗಳನ್ನು ಹೆಕ್ಕಿ, ಅವುಗಳನ್ನು ಪ್ರನಾಳಗಳಲ್ಲಿ ಬೆಳೆಸಿದ್ದಾರೆ. ಈ ಜೀವಕೋಶಗಳಲ್ಲಿ ಸಾಮಾನ್ಯವಾಗಿರುವ ಟಿಆರ್‌ಸಿ-ಆಲ್ಫ ಹಾಗೂ ಟಿಆರ್‌ಸಿ-ಬೀಟ ಎನ್ನುವ ಆಂಟಿಜೆನ್ನುಗಳ ಜೀನುಗಳನ್ನು ತೆರವು ಮಾಡಿ, ಬದಲಿಗೆ ರೋಗಿಗಳ ದೇಹದಲ್ಲಿ ಹೊಸದಾಗಿ ಗುರುತಿಸಿದ ಆಂಟಿಜೆನ್ನುಗಳ ಜೀನುಗಳನ್ನು ಕೂರಿಸಿದ್ದಾರೆ. ಹೀಗೆ ತಿದ್ದಿದ ಜೀವಕೋಶಗಳನ್ನು ಬೆಳೆಸಿ ವಿವಿಧ ಪ್ರಮಾಣದಲ್ಲಿ ರೋಗಿಗಳಿಗೆ ಮರಳಿ ಚುಚ್ಚಿದ್ದಾರೆ. ಕೆಲವು ದಿನಗಳ ನಂತರ ಕ್ಯಾನ್ಸರ್ ಗೆಡ್ಡೆಗಳನ್ನು ಪರಿಶೀಲಿಸಿದ್ದಾರೆ. ಅಲ್ಲಿ ಈ ಹೊಸ ಜೀನ್ ಕೂರಿಸಿದ ಜೀವಕೋಶಗಳ ಸಂತತಿ ಸಾಮಾನ್ಯಕ್ಕಿಂತಲೂ ಹೆಚ್ಚು ಇದ್ದಿತೆಂದೂ, ಕ್ಯಾನ್ಸರ್ ಕೋಶಗಳಲ್ಲಿ ಸತ್ತವುಗಳ ಸಂಖ್ಯೆಯೂ ಗಣನೀಯವಾಗಿ ಅಧಿಕವಾಗಿತ್ತೆಂದೂ ಇವರು ವರದಿ ಮಾಡಿದ್ದಾರೆ.

ಜೀವಕೋಶಗಳನ್ನು ತಿದ್ದಿ ದೇಹಕ್ಕೆ ಮರಳಿಸುವ ಪ್ರಯತ್ನಗಳು ಈ ಹಿಂದೆಯೂ ನಡೆದಿದ್ದುವು. ಆದರೆ ಹಾಗೆ ತಿದ್ದುವುದಕ್ಕಾಗಿ ವೈರಸ್ಸುಗಳನ್ನು ಬಳಸಲಾಗುತ್ತಿತ್ತು. ಇದರಿಂದಾಗಿ ಇಂತಹ ಚಿಕಿತ್ಸೆಗಳ ಬಗ್ಗೆ ಆತಂಕವೂ ಇತ್ತು. ವೈರಸ್ಸೇ ಹೊಸ ಕಾಯಿಲೆಯನ್ನು ಉಂಟು ಮಾಡಿದರೆ? ಇದೀಗ ಆ ಆತಂಕವಿಲ್ಲದ ಚಿಕಿತ್ಸೆ ದೊರೆತಿದೆ. ಆಯಾ ರೋಗಿಯ ದೇಹದಿಂದಲೇ ಹೆಕ್ಕಿದ ಆಂಟಿಜನ್ನುಗಳನ್ನು ಬಳಸಿದ್ದೂ ಪ್ರಥಮ. ಜೊತೆಗೆ ಒಮ್ಮೆಲೆ ಹಲವು ಜೀನುಗಳನ್ನು ಕಿತ್ತೊಗೆದು ತಿದ್ದಿದ್ದೂ ಇದೇ ಮೊದಲು. ಇಷ್ಟೆಲ್ಲ ಆಗಿಯೂ, ಈ ತಿದ್ದಿದ ಜೀವಕೋಶಗಳು ದೇಹದ ಇತರೆಡೆಗಿಂತಲೂ ಕ್ಯಾನ್ಸರ್ ಗೆಡ್ಡೆಗಳಲ್ಲಿಯೇ ಹೆಚ್ಚು ಇದ್ದವೆನ್ನುವುದು ಚಿಕಿತ್ಸೆಯ ಗುರಿ ಸರಿಯಾಗಿದೆ ಎಂದು ಸೂಚಿಸುತ್ತದೆ ಎನ್ನುತ್ತಾರೆ, ಫಾಯ್.

ಕ್ಯಾನ್ಸರ್ ಗುಣವಾಯಿತೇ – ಎನ್ನಬೇಡಿ. ಅದಕ್ಕಿನ್ನೂ ಉತ್ತರ ಸಿಕ್ಕಿಲ್ಲ. ಆದರೆ ಅವರವರಿಗೆ ತಕ್ಕಂತೆ ಚಿಕಿತ್ಸೆ ಮಾಡಲು ಬೇಕಾದ ತಂತ್ರಗಳು ಈಗ ನಮ್ಮ ಕೈಗೆಟುಕುವಂತಿವೆ ಎಂದು ಈ ಪ್ರಯೋಗ ತಿಳಿಸಿದೆ.

ಈ ಪ್ರಯೋಗಗಳ ವಿವರಗಳನ್ನು ಕಳೆದ ವಾರದ ನೇಚರ್ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ❖

ಸಿಟಿ ಸ್ಕ್ಯಾನ್ ಸಿಕ್ಕ ಕಥೆ

ಶರತ್ ಭಟ್ ಸೇರಾಜೆ

'ರಾಕ್ ಸಂಗೀತದಿಂದ ವಿಜ್ಞಾನಕ್ಕೆ, ತಂತ್ರಜ್ಞಾನಕ್ಕೆ ಏನಾದರೂ ಪ್ರಯೋಜನ ಆಗಿದೆಯೇ?' – ಎಂದೇನಾದರೂ ನಾನು ನನ್ನ ಗೆಳೆಯರ ಹತ್ತಿರ ಕೇಳಿದೆನಾದರೆ, 'ನಿನಗೆ ತಲೆಹರಟೆ ಮಾಡುವುದು ಪ್ರಿಯವಾದ ಹವ್ಯಾಸ ಎಂದು ನಮಗೂ ಗೊತ್ತಿದೆ, ಇದು ಯಾವ ಹೊಸ ವರಸೆ?' ಎಂದು ಭುಜ ಕುಣಿಸಿಯಾರು. ಆದರೆ ದಿಟವಾಗಿಯೂ ಹಾಗೆ ಆದದ್ದುಂಟು ಎಂದು ಅವರಿಗೆ ಮನಗಾಣಿಸಬೇಕಾದರೆ, ಹೇಳಬೇಕಾದ್ದು ಕ್ಯಾಟ್ ಸ್ಕ್ಯಾನ್ ಅಥವಾ ಸಿಟಿ ಸ್ಕ್ಯಾನ್ ಎಂಬುದರ ಆವಿಷ್ಕಾರದ ಪೂರ್ವಚರಿತ್ರೆಯನ್ನು; ಅದನ್ನು ಆಗು ಮಾಡಿದ EMI ಎಂಬ ಸಂಸ್ಥೆಯ ಇತಿಹಾಸವನ್ನು.

'Electric and Musical Industries' – ಎಂಬ ಇಷ್ಟುದ್ದದ ಹೆಸರನ್ನೇ ಹ್ರಸ್ವ ಮಾಡಿ 'EMI' ಎಂದು ಕರೆಸಿಕೊಂಡ ಕಂಪನಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಯಂತ್ರ ಸಾಧನಗಳನ್ನು ಉತ್ಪಾದಿಸುತ್ತಿದ್ದ ಕಂಪನಿ. ಸಂಗೀತದ ಕ್ಷೇತ್ರದಲ್ಲಿಯೂ ವಹಿವಾಟು ನಡೆಸುತ್ತಿದ್ದ ಸಂಸ್ಥೆಯದು. ಪಾಪ್ ಸಂಗೀತದಲ್ಲಿ ಜಗದ್ವಿಖ್ಯಾತನಾಗಿದ್ದ ಎಲ್ವಿಸ್ ಪ್ರೆಸ್ಲಿಯ ಜೊತೆ ಇದರ ವ್ಯವಹಾರ ಒಂದು ಕಾಲದಲ್ಲಿ ಇತ್ತು. ಇಂಥ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದದ್ದು ಗಾಡ್‌ಫ್ರೀ ಹೌನ್ಸ್'ಫೀಲ್ಡ್ ಎಂಬ ಚುರುಕುತಲೆಯ ಇಂಜಿನಿಯರು. ಈಜಿಪ್ಟಿನ ಪಿರಾಮಿಡ್ಡುಗಳು ಅಡಗಿಟ್ಟಿಸಿಟ್ಟುಕೊಂಡಿದ್ದ ರಹಸ್ಯಗಳು ಸಂಶೋಧಕರ ತಲೆ ಕೆಡಿಸಿದ್ದ ಕಾಲದಲ್ಲಿ, ಪಿರಾಮಿಡ್ಡುಗಳ ಮೂಲಕ ತೂರಿಬರುವ ನೈಸರ್ಗಿಕ ಕಿರಣಗಳನ್ನು ಹಿಡಿದಿಟ್ಟು ಅಧ್ಯಯನ ಮಾಡಿದರೆ ಅವುಗಳ ಒಳಗೆ ಇರುವ ಗುಪ್ತವಾದ ರಚನೆಗಳ ಆಕೃತಿ ಗೊತ್ತಾದೀತಲ್ಲವೇ ಎಂದು ಯೋಚಿಸಿದ್ದ. ಕಂಪನಿಯ ಸಂಶೋಧನೆಗಳಲ್ಲಿ ಮುಂದಾಳುವಾಗಿ ಕಾಣಿಸಿಕೊಂಡಿದ್ದ. ಆದರೆ, ಅರವತ್ತರ ದಶಕದಲ್ಲಿ EMI ಸಂಸ್ಥೆ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ, 1962ರಲ್ಲಿ ತನ್ನ ಕಂಪ್ಯೂಟರ್ ವಿಭಾಗಕ್ಕೆ ಬೀಗ ಹಾಕಿಯೂ ಬಿಟ್ಟಿತ್ತು. ಇಂಥ ನಿರಾಶಾದಾಯಕ ಪರಿಸ್ಥಿತಿಯಲ್ಲಿ, ನಮ್ಮ ಹೌನ್ಸ್'ಫೀಲ್ಡ್ ಬಹುಶಃ, ಎಲ್ಲಿಗೆ 'resume' (ವೈಯಕ್ತಿಕ ವಿವರಗಳನ್ನು) ಕಳಿಸುವುದು ಎಂದು ಅಲ್ಲಿ ಇಲ್ಲಿ ಹುಡುಕುತ್ತಿದ್ದನೋ ಏನೋ?

ಅಂಥದ್ದೊಂದು ಕಾಲದಲ್ಲಿ EMIಯ ಉಪಸಂಸ್ಥೆಯೊಂದರ ಜೊತೆ ಬೀಟಲ್ಸ್ ಎಂಬ ರಾಕ್ ಬ್ಯಾಂಡು ಕೆಲಸ ಮಾಡಿತು. ಆಗ ಬಂತು ನೋಡಿ, ಹರಿ ಹರಿಯುತ್ತ ಹಣದ ಹೊನಲು! ಯಾವ ಯಾವ ವಿಭಾಗಗಳಿಗೆ ಜಡಿಯುವುದಕ್ಕೆ ಎಷ್ಟೆಷ್ಟು ಬೀಗಗಳು ಬೇಕು ಎಂದು ಏರ್ಪಾಡು ಮಾಡುತ್ತಿದ್ದವರಿಗೆ, ಚಿನ್ನದ ಬೀಗಗಳನ್ನು ತಂದು, ಅವುಗಳನ್ನು ಬಳಸದೇ ಇಟ್ಟು ದರ್ಬಾರು ಮಾಡಲಿಕ್ಕೆ ಸಾಕಾಗುವಷ್ಟು ದುಡ್ಡು ಬೀಟಲ್ಸಿನ ಕೃಪೆಯಿಂದ ಬಂತು. ವಿಜ್ಞಾನ, ತಂತ್ರಜ್ಞಾನಗಳ ಕ್ಷೇತ್ರಗಳಲ್ಲಿ ಸಂಶೋಧನೆ ಎಂದರೆ ಸುಮ್ಮನೆ ಮಾತಲ್ಲ; ಅದು ಸಾಕಷ್ಟು ಸಮಯವನ್ನು ಬೇಡುತ್ತದೆ. ಬೇಕಾದಷ್ಟು ಖರ್ಚು ಮಾಡಲು ಧೈರ್ಯ ತುಂಬಬಲ್ಲ ಇಡುಗಂಟು ಇದ್ದರೆ ಸಂಶೋಧಕರಿಗೆ ತಮ್ಮ ಕೆಲಸದ ಬಗ್ಗೆ ಗಮನ ಕೊಡುವುದು ಸುಲಭ. 'ದುಡ್ಡಿಗೇನೂ ತೊಂದರೆ ಇಲ್ಲ, ಅದೇನು ಮಾಡ್ತೀಯೋ ಮಾಡು' ಎಂಬ ಇಶಾರೆ ಸಿಕ್ಕಿದಾಗ ಹೌನ್ಸ್'ಫೀಲ್ಡ್ ಯೋಚನೆ ಮಾಡಿದ. 'ಈ ಎಕ್ಸ್ ರೇ ಗಳ ಗುಣಮಟ್ಟ ಏನೂ ಸಾಕಾಗುವುದಿಲ್ಲ ಮಾರಾಯ; ಮೆದುಳಿನ ಎಕ್ಸ್–ರೇಗಳಲ್ಲಿ ಎಲ್ಲವೂ ಅಸ್ಪಷ್ಟವಾಗಿರುತ್ತವೆ' ಎಂದು ವೈದ್ಯನಾಗಿದ್ದ ಗೆಳೆಯನೊಬ್ಬ ಗೊಣಗಿದ್ದು ಅವನ ತಲೆಯಲ್ಲಿತ್ತು. ಪಿರಾಮಿಡ್ಡುಗಳ ಒಳಗೆ ಇಣುಕಿ ನೋಡುವ ಯೋಜನೆ ಹೇಗೂ ಇತ್ತಲ್ಲ. ಈ ಎರಡೂ ಒಂದಕ್ಕೊಂದು ತಳಕು ಹಾಕಿಕೊಂಡು ಏನೋ ಹೊಳೆದಂತಾಯಿತು.

ಎಕ್ಸ್–ರೇ ಚಿತ್ರ ಎಂಬುದು ಒಂದರ್ಥದಲ್ಲಿ ನೆರಳು ಬೆಳಕುಗಳ ಆಟವಿದ್ದಂತೆ. ಒಂದು ವಸ್ತುವಿನ ಮೇಲೆ ಕಿರಣಗಳನ್ನು ಬಿಟ್ಟು, ಮೂಡುವ ನೆರಳನ್ನು ನೋಡಿ, ವಸ್ತುವಿನ ಆಕಾರದ ಪರಿಶೀಲನೆ ಮಾಡಲಿಕ್ಕೆ ಅದು ಸಹಕಾರಿ, ಮೂಳೆ ಮುರಿತ, ಹೊರಮೈಯ ಬಿರುಕು ಇಂಥದ್ದೆಲ್ಲ ನೆರಳಿನಲ್ಲಿ ಗೋಚರಿಸುವುದರಿಂದ, ಅಂಥವನ್ನು ಮೂಡಿದ ನೆರಳಿನ ಚಿತ್ರದಲ್ಲಿ ನಿರೂಪಿಸುವ ಶಕ್ತಿ ಎಕ್ಸ್–ರೇಗೆ ಇದೆ. ಆದರೆ ಮೆದುಳಿನಂಥ ಮುದ್ದೆಯ ಒಳಗೆ ಏನಿದೆ ಎಂಬುದು ನೆರಳಿನಲ್ಲಿ ಹೇಗೆ ಕಾಣಬೇಕು? ಇದು ಸಮಸ್ಯೆಯ ಮೂಲ.

ಹೌನ್ಸ್'ಫೀಲ್ಡ್ ಇದಕ್ಕೊಂದು ಉಪಾಯ ಮಾಡಿದ. ಒಂದೇ ಎಕ್ಸ್–ರೇ ಕಿರಣವನ್ನು ಬಿಟ್ಟು ಕೆಲಸ ಸಾಧಿಸಬೇಕೆಂದು ಯಾರೂ ಹೇಳಿಲ್ಲವಲ್ಲ! ಮೆದುಳನ್ನು ಒಂದಷ್ಟು ಪದರಗಳನ್ನಾಗಿ ವಿಭಾಗಿಸಿಕೊಂಡು, ಒಂದಷ್ಟು ಇಸ್ಪೀಟು ಎಲೆಗಳನ್ನೋ ಹಪ್ಪಳಗಳನ್ನೋ ಒಂದರ ಮೇಲೊಂದು ಇಟ್ಟಂತೆ, ಈ ಪದರಗಳನ್ನು ಒಂದಾದ ಮೇಲೆ ಒಂದರಂತೆ ಜೋಡಿಸಿದರೆ ಪೂರ್ತಿ ಮೆದುಳಾಗುತ್ತದೆ ಅಂದುಕೊಂಡರಾಯಿತು. ಈ ಒಂದೊಂದು ಪದರದ ಚಿತ್ರವನ್ನೂ ಹತ್ತಾರು ಕೋನಗಳಿಂದ ಎಕ್ಸ್–ರೇ ಕಿರಣಗಳನ್ನು ಬಿಟ್ಟು ಚಿತ್ರಿಸಿದರಾಯಿತು. ಹೀಗೆ ತಯಾರಾದ ನೂರಾರು ಛಾಯಾಚಿತ್ರಗಳನ್ನು ವ್ಯವಸ್ಥಿತವಾಗಿ ಜೋಡಿಸಿಕೊಡಲಿಕ್ಕೆ ಗಣಕಯಂತ್ರಗಳು ಹೇಗೂ ಇವೆ. ಕಪ್ಪೆಯೊಂದು ಆನೆಯೊಂದರ ಚಿತ್ರವನ್ನು ಬಿಡಿಸಿದರೆ, ಅದಕ್ಕೆ ಕಂಡಷ್ಟು ಮಾತ್ರ ಸೇರಿ, ಚಿತ್ರವು ಆಂಶಿಕ, ಅಪೂರ್ಣ ಎನ್ನಿಸೀತು. ಆದರೆ ನೂರು ಕಪ್ಪೆಗಳು ನೂರು ಕಡೆಗಳಿಂದ, ನೂರು ದಿಕ್ಕುಗಳಿಂದ, ಬೇರೆ ಬೇರೆ ಕೋನಗಳಿಂದ ಚಿತ್ರ ಬಿಡಿಸಿದರೆ, ಆ ಚಿತ್ರಗಳನ್ನೆಲ್ಲ ಒಬ್ಬ ಬುದ್ಧಿಶಾಲಿಯು ಒಟ್ಟುಗೂಡಿಸಿ ಕ್ರಮಬದ್ಧವಾಗಿ ಜೋಡಿಸಿದರೆ ಆನೆಯ ಸಮಗ್ರ ಚಿತ್ರಣವಿರುವ ಪೂರ್ಣ ಭಾವಚಿತ್ರ ನಿರ್ಮಾಣವಾಗುತ್ತದೆ. ಹೌನ್ಸ್'ಫೀಲ್ಡನ ತಂತ್ರ ಕೆಲಸ ಮಾಡುವುದೂ ಹೆಚ್ಚು ಕಡಿಮೆ ಹೀಗೆಯೇ ಎನ್ನಬೇಕು.

ಬಾಟಲಿಗಳು, ಥರ್ಮೋಪ್ಲಾಸ್ಟಿಕ್ಕಿನ ಜಾಡಿಗಳು – ಇವುಗಳ ಒಳಗೆ ನೀರು, ಲೋಹಗಳನ್ನು ತುಂಬಿಸಿ, ಅವುಗಳಿಗೆ ಗಾಮಾ ಕಿರಣಗಳನ್ನು ಬಿಟ್ಟು ತನ್ನ ಮೊದಲ ಮಾದರಿಯ ಯಂತ್ರದ ಪರೀಕ್ಷೆಯನ್ನು ಹೌನ್ಸ್'ಫೀಲ್ಡ್ ಮಾಡಿದ. ಮೊದಲ ಸ್ಕ್ಯಾನಿಂಗ್ ಮುಗಿಯುವುದಕ್ಕೆ ಒಂಬತ್ತು ದಿನಗಳೇ ಬೇಕಾದವು. 28,000 ಅಳತೆಗಳನ್ನು ದಾಖಲು ಮಾಡಲಾಯಿತು. ಇವುಗಳನ್ನು ಸಂಯೋಜಿಸಲಿಕ್ಕೆ ಆ ಕಾಲದ ಗಣಕಯಂತ್ರ ಎರಡೂವರೆ ಗಂಟೆ ತೆಗೆದುಕೊಂಡಿತು. ಮುಂದಿನದು ನಮಗೆ ಗೊತ್ತೇ ಇದೆ.

ಹೀಗೆ, ರಾಕ್ ಬ್ಯಾಂಡೊಂದು ತಂದುಕೊಟ್ಟ ಹಣದ ಥೈಲಿಗಳಿಂದ ಲಕ್ಷಗಟ್ಟಲೆ ಜನರ ಜೀವವನ್ನು ಉಳಿಸುವ ಯಂತ್ರವೊಂದರ ಶೋಧನೆಯಾಯಿತು. ಯಾರಿಗೆ ಯಾರುಂಟೋ ಬಲ್ಲವರಾರು? ವಿಜ್ಞಾನಕ್ಕೆ ಯಾರ್‍ಯಾರಿದ್ದರೋ ತಿಳಿದವರಾರು? ❖

ಯೂನಿಕೋಡ್‌ನ ಏಕಮುಖಿ

ಕೃಷ್ಣ ಭಟ್

ಯೂನಿಕೋಡ್ ಬಳಸಿ. ನಿಮ್ಮ ಎಲ್ಲ ಸಮಸ್ಯೆ ಬಗೆಹರಿಯುತ್ತದೆ – ಎಂದು ಸಲಹೆ ನೀಡುವವರು ಸೋಶಿಯಲ್ ಮೀಡಿಯಾದಲ್ಲಾಗಲೀ, ಬೇರೆ ಕಡೆಯಲ್ಲಾಗಲೀ ಸಿಗುತ್ತಾರೆ. ಅಷ್ಟಕ್ಕೂ, ಒಂದಷ್ಟು ವರ್ಷಗಳ ಹಿಂದೆ ಯೂನಿಕೋಡ್ ಬಳಸಿಲ್ಲ ಎಂದರೆ ನೀವು ತುಂಬಾ ಹಿಂದುಳಿದಿದ್ದೀರಿ ಎಂಬಂತಾಗಿತ್ತು. ಆದರೆ, ಯೂನಿಕೋಡನ್ನು ಬಳಸಲು ಶುರು ಮಾಡಿದ ಇಷ್ಟು ವರ್ಷಗಳಲ್ಲಿ ಇದರ ಹಲವು ಸಮಸ್ಯೆಗಳು ಕಾಣುವುದಕ್ಕೆ ಶುರುವಾಗಿವೆ!

ಯೂನಿಕೋಡ್ ಎನ್ನುವುದು ಒಂದು ಅಗತ್ಯದ ವ್ಯವಸ್ಥೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ವೆಬ್‌ನಲ್ಲಿ ನಮಗೆ ಬರೆದಿದ್ದನ್ನು ಓದುವುದಕ್ಕೆ ಒಂದು ಯೂನಿವರ್ಸಲ್ ವ್ಯವಸ್ಥೆ ಬೇಕು. ಅದನ್ನು ಯೂನಿಕೋಡ್ ಕೊಡುತ್ತಿದೆ. ಆದರೆ, ಅದರ ಅತಿ ಬಳಕೆಯೂ ಅಪಾಯವೇ! ಬಹುಶಃ ಈ ಹೊತ್ತಿನಲ್ಲಿ ನಾವು ಅದನ್ನು ಅತಿಯಾಗಿ ಬಳಸಲು ತೊಡಗಿದ್ದೇವೆ ಅಥವಾ ಅತಿಯಾಗಿ ಬಳಸುವಂತೆ ಸಲಹೆ ಮಾಡಲು ತೊಡಗಿದ್ದೇವೆ.

ಅಂಥ ಸಮಸ್ಯೆಗಳಲ್ಲಿ ಮುಖ್ಯವಾದ್ದು ಯೂನಿಕೋಡ್ ಲಿಪಿಯ ಬದಲಾವಣೆ, ಬೆಳವಣಿಗೆಗೆ ಪೂರಕವಲ್ಲ. ಅದರಲ್ಲಿ ಅದಾಗಲೇ ಇರುವ ಸಿದ್ಧ ಮಾದರಿಯನ್ನು ಬಳಸಬೇಕೇ ಹೊರತಾಗಿ ಕಾಲಕ್ಕೆ ತಕ್ಕಂತೆ ಬದಲಾಗುವ ಹೊಸ ವ್ಯವಸ್ಥೆಗೆ ಅದು ಹೊಂದಿಕೊಳ್ಳುವುದಿಲ್ಲ. ಆದರೆ, ASCII (ಆ್ಯಸ್ಕಿ)ನಲ್ಲಿ ಹಾಗಿಲ್ಲ. ಡೆವಲಪರ್‌ಗಳು ಹೊಸ ರೀತಿಯ ಬರವಣಿಗೆಗೆ ಅಗತ್ಯ ಬದಲಾವಣೆಗಳನ್ನು ಮಾಡಬಹುದು. ಅದರಿಂದ, ಲಿಪಿಯಲ್ಲಿ ಆಗುವ ಬದಲಾವಣೆಗಳನ್ನು ಸುಲಭವಾಗಿ ಬೆಂಬಲಿಸಬಹುದು.

ಇನ್ನೊಂದು ಮುಖ್ಯ ಸಮಸ್ಯೆ ಫಾಂಟ್‌ಗಳ ಕೊರತೆ. ಮೇಲ್ನೋಟಕ್ಕೆ ಇದೊಂದು ದೊಡ್ಡ ಸಮಸ್ಯೆಯೇ ಅಲ್ಲ ಅನ್ನಿಸಬಹುದು. ಆದರೆ, ಮುಖ್ಯ ಸಮಸ್ಯೆಯೇ ಇದು. ಸಾಮಾನ್ಯವಾಗಿ ASCII ಚಾಲ್ತಿಗೆ ಬಂದಿದ್ದೇ ಫಾಂಟ್‌ಗಳ ವಿನ್ಯಾಸದಿಂದ. ಈಗ ಇರುವ ಎಲ್ಲ ASCII ಮಾದರಿಗಳು – ಉದಾಹರಣೆಗೆ, ನುಡಿ, ಶ್ರೀಲಿಪಿ, ಬರಹ ಎಲ್ಲವೂ ಅವುಗಳಲ್ಲಿರುವ ಫಾಂಟ್‌ಗಳಿಂದಾಗಿ ಬಳಕೆಗೆ ಬಂದವು. ಶ್ರೀಲಿಪಿಯಲ್ಲಿ ನೂರಾರು ಫಾಂಟ್‌ಗಳಿವೆ. ಆ ಫಾಂಟ್‌ಗಳ ವಿನ್ಯಾಸಗಳಿಂದಾಗಿ ಶ್ರೀಲಿಪಿ ಬಳಕೆಗೆ ಬಂತು, ಬಳಕೆದಾರರಿಗೆ ಇಷ್ಟವಾಯಿತು. ಒಂದು ವೇಳೆ ಶ್ರೀಲಿಪಿ ಕೇವಲ ಬರೆಯುವುದಕ್ಕೆ ಅನುಕೂಲ ಕಲ್ಪಿಸುವ ಸಾಫ್ಟ್‌ವೇರ್ ಆಗಿ, ಫಾಂಟ್‌ಗಳು ಇಲ್ಲದಿದ್ದರೆ ಅದನ್ನು ಯಾರೂ ಬಳಸುತ್ತಿರಲಿಲ್ಲ! ಫಾಂಟ್‌ಗಳೂ ಸೇರಿದ ಹಾಗೆ ಇಡೀ ಪ್ಯಾಕೇಜ್ ಅನ್ನು ನಾವು ಖರೀದಿ ಮಾಡಬಹುದು. ಆ ಫಾಂಟ್‌ಗಳನ್ನು ಅವರೇ ಅಭಿವೃದ್ಧಿಪಡಿಸಿದ್ದಾರೆ.

ಆದರೆ, ಯೂನಿಕೋಡ್ ಹಾಗಲ್ಲ. ಇದರ ಕನ್ಸಾರ್ಶಿಯಂ ಫಾಂಟ್‌ಗಳನ್ನು ಅಭಿವೃದ್ಧಿಪಡಿಸುವುದಿಲ್ಲ! ಬದಲಿಗೆ, ಇದರ ಫಾಂಟ್‌ಗಳನ್ನು ಜನರೇ ಸ್ವಯಂಪ್ರೇರಣೆಯಿಂದ ಅಭಿವೃದ್ಧಿಪಡಿಸಬೇಕು. ಫಾಂಟ್‌ಗಳನ್ನು ಅಭಿವೃದ್ಧಿಪಡಿಸಲು ಒಬ್ಬ ವ್ಯಕ್ತಿ ನೂರಾರು ಗಂಟೆಗಳನ್ನು ವ್ಯಯಿಸಬೇಕು. ಫಾಂಟ್‌ಗಳನ್ನು ಡೆವಲಪ್ ಮಾಡುವುದಕ್ಕೆ ಸಾಕಷ್ಟು ಪರಿಣತಿಯೂ ಬೇಕು. ಅಷ್ಟು ಶ್ರಮ ಹಾಕಿದ ಅವನಿಗೆ ಪ್ರತಿಯಾಗಿ ಏನೂ ಸಿಗದು! ಏಕೆಂದರೆ, ಅದು ಬಳಕೆಗೆ ಮುಕ್ತ. ಅವನ ಶ್ರಮಕ್ಕೆ ಪ್ರತಿಫಲ ಇಲ್ಲವೆಂದ ಮೇಲೆ ಯಾರು ಅದನ್ನು ಬಳಸುತ್ತಾರೆ? ಯೂನಿಕೋಡ್‌ನ ಬಳಕೆಯಲ್ಲಿ ಜನಪ್ರಿಯವಾಗಿ ಹತ್ತಿಪ್ಪತ್ತು ವರ್ಷಗಳಾದವು. ಆದರೆ, ಇಂದಿಗೂ ಹತ್ತಿಪ್ಪತ್ತು ಫಾಂಟ್‌ಗಳಿವೆಯಷ್ಟೇ. ASCII ಅಡಿಯಲ್ಲಿ ಕನ್ನಡದಲ್ಲಿ ಬರೆಯುವ ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಿದ ಒಟ್ಟು ಇಷ್ಟು ವರ್ಷಗಳಲ್ಲಿ ನೂರಕ್ಕೂ ಹೆಚ್ಚು ಫಾಂಟ್‌ಗಳು ಲಭ್ಯವಿವೆ.

> ಯೂನಿಕೋಡ್ ಲಿಪಿಯ ಬದಲಾವಣೆ, ಬೆಳವಣಿಗೆಗೆ ಪೂರಕವಲ್ಲ. ಅದರಲ್ಲಿ ಅದಾಗಲೇ ಇರುವ ಸಿದ್ಧ ಮಾದರಿಯನ್ನು ಬಳಸಬೇಕಷ್ಟೆ...

ಯೂನಿಕೋಡ್‌ಗೆ ಹೊಂದುವ ಫಾಂಟ್‌ಗಳನ್ನು ಒಂದೋ ಸಂಸ್ಥೆಗಳು ತಮ್ಮ ಏಕಸ್ವಾಮ್ಯ ಬಳಕೆಗೆ ಅಭಿವೃದ್ಧಿಪಡಿಸಿಕೊಳ್ಳಬೇಕು. ಸಣ್ಣ ಸಂಸ್ಥೆಗಳು ಲಕ್ಷಾಂತರ ಕೊಟ್ಟು ಫಾಂಟ್ ಅಭಿವೃದ್ಧಿಪಡಿಸುವುದು ಸಾಧ್ಯವಿಲ್ಲ. ದೊಡ್ಡ ಸಂಸ್ಥೆಗಳು ಅಭಿವೃದ್ಧಿಪಡಿಸಿಕೊಂಡರೆ ಅವು ಹಕ್ಕುಸ್ವಾಮ್ಯ ಹೊಂದಿರುತ್ತವೆ. ಅವುಗಳನ್ನು ಬೇರೆಯವರು ಉಚಿತವಾಗಿ ಬಳಸಲು ಸಾಧ್ಯವಿಲ್ಲ. ಕನ್ನಡದಲ್ಲಿ ಹೀಗೆ ದೊಡ್ಡ ಸಂಸ್ಥೆಗಳು ಕನ್ನಡ ಫಾಂಟ್ ಅಭಿವೃದ್ಧಿಪಡಿಸಿ ಅದನ್ನು, ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಿದ ಉದಾಹರಣೆ ಇಲ್ಲ.



ಆದರೆ, ASCII ವ್ಯವಸ್ಥೆಯಲ್ಲಿ ಹಾಗಲ್ಲ. ಆರೇಳು ಸಾವಿರ ಕೊಟ್ಟು (ಬರಹವಾದರೆ 3 ಸಾವಿರ ಚಿಲ್ಲರೆ, ಶ್ರೀಲಿಪಿ ಆದರೆ 6 ಸಾವಿರ ಚಿಲ್ಲರೆ ಮೊತ್ತ) ಒಂದು ಸಾಫ್ಟ್‌ವೇರ್ ಖರೀದಿ ಮಾಡಿದರೆ ಅದರ ಜೊತೆಗೆ ನೂರಾರು ಫಾಂಟ್‌ಗಳೂ ಸಿಗುತ್ತವೆ. ಆ ಫಾಂಟ್‌ಗಳನ್ನು ಸಣ್ಣ ಸಂಸ್ಥೆಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಬಹುದು. ಅಷ್ಟೇ ಅಲ್ಲ, ಒಬ್ಬ ಸಾಮಾನ್ಯ ಬಳಕೆಯ ವ್ಯಕ್ತಿ ಕೂಡ ಅದನ್ನು ಖರೀದಿ ಮಾಡಿ ಬಳಸಬಹುದು. ಜೊತೆಗೆ ASCIIಯಲ್ಲಿ ಅವುಗಳ ಬಳಿ ಎಷ್ಟು ಫಾಂಟ್‌ಗಳಿವೆ ಎಂಬುದೇ ಮುಖ್ಯವಾಗುತ್ತವೆ ಮತ್ತು ಅವುಗಳ ಆಧಾರದಲ್ಲೇ ಸಾಫ್ಟ್‌ವೇರ್ ಮಾರಾಟವೂ ನಡೆಯುತ್ತದೆ. ಹೀಗಾಗಿ ಸಹಜವಾಗಿಯೇ, ಫಾಂಟ್‌ಗಳನ್ನೂ, ಬರವಣಿಗೆಗೆ ಅನುಕೂಲವಾಗುವ ಇತರ ಸೌಲಭ್ಯಗಳನ್ನೂ ಮಾಡುತ್ತವೆ. ದೋಷಪರಿಹಾರ ಬೇಗ ಬೇಗ ನಡೆಯುತ್ತವೆ. ಲಿಪಿಯಲ್ಲಿ ಅಗತ್ಯವಿರುವ ಬದಲಾವಣೆಗಳನ್ನು ಬೇಗ ಬೇಗನೆ ಗ್ರಾಹಕರಿಗೆ ತಕ್ಕಂತೆ ಮಾಡಿಕೊಡುತ್ತವೆ.

ಆದರೆ, ಯೂನಿಕೋಡ್ ಕನ್ಸಾರ್ಶಿಯಂ ಹಾಗಲ್ಲ; ಅದು ನಡೆಯುವುದು ಕಾರ್ಪೊರೇಟ್ ದಾನಿಗಳಿಂದ. ಆಗಾಗ ನಡೆಯುವ ಸಭೆಗಳಲ್ಲಿ ಅದರ ಬದಲಾವಣೆಗಳ ಚರ್ಚೆ ನಡೆಯುತ್ತವೆ. ಅದು ಅನುಷ್ಠಾನಕ್ಕೆ ಬರುವುದಕ್ಕೆ ಇನ್ನಷ್ಟು ಸಮಯ ಬೇಡುತ್ತದೆ.

ಹೀಗಾಗಿ, ನಾವು ಎರಡನ್ನೂ ಬಳಸುವುದು ಎಲ್ಲ ದೃಷ್ಟಿಯಿಂದಲೂ ಅನುಕೂಲಕರ. ಸದ್ಯದ ಪರಿಸ್ಥಿತಿಯಲ್ಲಿ ASCIIಯನ್ನು ಮುದ್ರಣದ ಉದ್ದೇಶಕ್ಕೆ ಬಳಸುವುದು ಅತ್ಯಂತ ಉತ್ತಮ. ಏಕೆಂದರೆ, ಅಲ್ಲಿ ಕಂಪ್ಯಾಟಿಬಿಲಿಟಿ ಅಗತ್ಯ ಇಲ್ಲ. ಮುದ್ರಣಕ್ಕೆ ಬೇಕಿರುವುದು ವಿನ್ಯಾಸವಷ್ಟೇ. ASCIIಯಲ್ಲಿ ಫಾಂಟ್‌ಗಳ ವಿನ್ಯಾಸವೇ ಮುಖ್ಯವಾದ್ದರಿಂದ ಅದನ್ನು ಬಳಸಿ, ಬೆಂಬಲಿಸುವುದು ಒಳ್ಳೆಯ ಬೆಳವಣಿಗೆ.

ಪ್ರಕಾಶಕರು, ಡಿಸೈನರುಗಳು ಯುನಿಕೋಡ್ ಬದಲಿಗೆ ASCIIಯನ್ನು ಆರಾಮವಾಗಿ ಬಳಸಬಹುದು. ಆದರೆ, ವೆಬ್‌ಸೈಟ್ ನಿರ್ವಹಣೆ ಮಾಡುತ್ತೀರಿ ಎಂದಾದರೆ ಯೂನಿಕೋಡ್ ಬಳಸಬೇಕು. ಈ ಎರಡೂ ಶಿಷ್ಟತೆಯಲ್ಲಿ ಪಠ್ಯಗಳನ್ನು ಕನ್ವರ್ಟ್ ಮಾಡುವುದು ಈಗ ಶೇ. 100ರಷ್ಟು ನಿಖರವಾಗಿರುವುದರಿಂದ ಯಾವ ಸಮಸ್ಯೆಯೂ ಇಲ್ಲ. ❖

ಟೋಲ್‌ಗೇಟ್ ವಿಲೀನಕ್ಕೆ ಸಂಘಟನೆಗಳ ವಿರೋಧ

ಮಂಗಳೂರು: ಜನರ ಹೋರಾಟದ ಬೆನ್ನಲ್ಲೇ ಸುರತ್ಕಲ್ ಟೋಲ್‌ಗೇಟ್ ರದ್ದುಪಡಿಸಿರುವ ಕೇಂದ್ರ ಭೂಸಾರಿಗೆ ಸಚಿವಾಲಯ, ಸುರತ್ಕಲ್‌ನಿಂದ ನಂತೂರುವರೆಗಿನ ಸಂಚಾರಕ್ಕೆ ಸುಂಕವನ್ನು ಹೆಜಮಾಡಿ ಟೋಲ್‌ಗೇಟ್‌ನಲ್ಲೇ ಸಂಗ್ರಹಿಸಲು ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವಕ್ಕೆ ಸುರತ್ಕಲ್ ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿ, ದಕ್ಷಿಣ ಕನ್ನಡ ಜಿಲ್ಲಾ ಟ್ಯಾಕ್ಸಿ ಮತ್ತು ಮ್ಯಾಕ್ಸಿ ಕ್ಯಾಬ್ ಅಸೋಸಿಯೇಷನ್ ವಿರೋಧ ವ್ಯಕ್ತಪಡಿಸಿವೆ.

'ಸುರತ್ಕಲ್ ಟೋಲ್‌ಗೇಟ್ ರದ್ದಾಗಬೇಕೆಂಬುದು ನಮ್ಮ ಬೇಡಿಕೆ. ಈಗ ಹೆಜಮಾಡಿ ಟೋಲ್‌ನಲ್ಲಿ ಸುಂಕ ಸಂಗ್ರಹಿಸಲು ಅವಕಾಶ ಕಲ್ಪಿಸಿದರೆ ಈ ಬೇಡಿಕೆ ಈಡೇರದು' ಎಂದು ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ಸಂಚಾಲಕ ಮುನೀರ್ ಕಾಟಿಪಳ್ಳ ಹೇಳಿದರು.

ಶಾಸಕ ವೈ.ಭರತ್ ಶೆಟ್ಟಿ, 'ಟೋಲ್‌ಗೇಟ್‌ಗಳ ವಿಲೀನ ಸಂಬಂಧ ಜಿಲ್ಲಾಧಿಕಾರಿ ಪ್ರತ್ಯೇಕ ಅಧಿಸೂಚನೆ ಹೊರಡಿಸುವರು. ಸುರತ್ಕಲ್ ಟೋಲ್‌ಗೇಟ್‌ನಲ್ಲಿ ಸುಂಕ ವಸೂಲಿ ವಾರದಲ್ಲಿ ನಿಲ್ಲಲಿದೆ' ಎಂದರು.

'ನಷ್ಟವಾದರೆ ರಾಜ್ಯ ಸರ್ಕಾರವೇ ಭರಿಸಬೇಕು'

'ಸುರತ್ಕಲ್ ಟೋಲ್ ಪ್ಲಾಜಾವನ್ನು ಹೆಜಮಾಡಿ ಟೋಲ್‌ಪ್ಲಾಜಾದ ಜೊತೆ ವಿಲೀನಗೊಳಿಸಲು ಎನ್‌ಎಚ್‌ಎಐ ಒಪ್ಪಿದೆ' ಎನ್‌ಎಚ್‌ಎಐ ಅಧ್ಯಕ್ಷೆ ಅಲಕಾ ಉಪಾಧ್ಯಾಯ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ಅ.29ರಂದು ಪತ್ರ ಬರೆದಿದ್ದಾರೆ.

'ಎರಡು ಟೋಲ್ ಪ್ಲಾಜಾಗಳ ಸುಂಕಗಳನ್ನು ಒಟ್ಟಿಗೇ ಸಂಗ್ರಹಿಸಲು ವಿರೋಧ ವ್ಯಕ್ತವಾಗದು ಎಂದು ರಾಜ್ಯ ಸರ್ಕಾರ ಭರವಸೆ ನೀಡಬೇಕು. ಒಂದು ವೇಳೆ ಹೆಜಮಾಡಿಯಲ್ಲಿ ಅಡ್ಡಿ ಆದರೆ ಆಗುವ ನಷ್ಟವನ್ನು ರಾಜ್ಯ ಸರ್ಕಾರವೇ ಭರಿಸಬೇಕು' ಎಂದೂ ಷರತ್ತು ವಿಧಿಸಿದ್ದಾರೆ.

ಕೆಪಿಟಿಸಿಎಲ್ ಪರೀಕ್ಷೆ: ಮತ್ತೆ ನಾಲ್ವರ ಬಂಧನ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗಿದ ಆರೋಪದಡಿ ಮತ್ತೆ ನಾಲ್ವರು ಆರೋಪಿಗಳನ್ನು ಮಂಗಳವಾರ ಬಂಧಿಸಲಾಗಿದೆ. ಇದರೊಂದಿಗೆ ಬಂಧಿತರ ಸಂಖ್ಯೆ 33ಕ್ಕೆ ಏರಿದೆ. ಮೂಡಲಗಿಯ ಮಂಜುನಾಥ ರಾಮಪ್ಪ ಮಾಳಿ (23), ಮಹಾದೇವ ಹಣಮಂತ ದಾಸನಾಳ (26), ಮಾರುತಿ ರಾಮಣ್ಣ ಹೊಲದವರ (27), ಅರಭಾವಿಯ ಪುಂಡಲೀಕ ಫಕೀರಪ್ಪ ಬನಾಜ (26) ಬಂಧಿತರು. ಪರೀಕ್ಷಾ ಕೊಠಡಿಯಲ್ಲಿ ಎಲೆಕ್ಟ್ರಾನಿಕ್ ಡಿವೈಸ್, ಮೈಕ್ರೊಚಿಪ್ ಬಳಸಿದ ಆರೋಪದ ಮೇಲೆ ಗೋಕಾಕ ಶಹರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಶವಂತಪುರ ಕ್ಷೇತ್ರಕ್ಕೆ ಭಾವನಾ 'ಕೈ' ಆಕಾಂಕ್ಷಿ!

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿದ್ದ ಗಡುವನ್ನು ಇದೇ 21ರವರೆಗೆ ವಿಸ್ತರಿಸಲಾಗಿದೆ.

ಅರ್ಜಿ ಸಲ್ಲಿಸಲು ಮಂಗಳವಾರ (ನ. 15) ಕೊನೆ ದಿನವಾಗಿತ್ತು.

'ಈ ಅವಧಿ ವಿಸ್ತರಣೆ ಮಾಡುವಂತೆ ರಾಜ್ಯದ ಮೂಲೆ, ಮೂಲೆಗಳಿಂದ ಪಕ್ಷದವರು ಹಾಗೂ ಅನ್ಯ ಪಕ್ಷಗಳಿಂದ ಕಾಂಗ್ರೆಸ್‌ಗೆ ಬರಲು ಇಚ್ಛಿಸಿರುವ ಟಿಕೆಟ್ ಆಕಾಂಕ್ಷಿಗಳಿಂದ ವಿಪರೀತ ಒತ್ತಡವಿದೆ. ಹೀಗಾಗಿ ಈ ಬದಲಾವಣೆ ಮಾಡಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ನ. 5ರಿಂದ ಅರ್ಜಿ ಸ್ವೀಕಾರ ಆರಂಭಿಸಲಾಗಿತ್ತು. 10 ದಿನಗಳಲ್ಲಿ 1,100ಕ್ಕೂ ಹೆಚ್ಚು ಆಕಾಂಕ್ಷಿಗಳು ₹ 5 ಸಾವಿರ ಶುಲ್ಕ ಪಾವತಿಸಿ ಅರ್ಜಿಗಳನ್ನು ಪಡೆದುಕೊಂಡಿದ್ದು, 650ಕ್ಕೂ ಹೆಚ್ಚು ಮಂದಿ ಡಿಡಿ ಸಹಿತ ಅರ್ಜಿ ಸಲ್ಲಿಸಿದ್ದಾರೆ.

'ಎಷ್ಟೇ ಪ್ರಭಾವಿ ನಾಯಕರಾಗಿದ್ದರೂ ಕಾಂಗ್ರೆಸ್‌ನಿಂದ 'ಬಿ' ಫಾರಂ ಪಡೆಯಲು ಅರ್ಜಿ ಸಲ್ಲಿಕೆ ಕಡ್ಡಾಯ. ನನ್ನನ್ನೂ ಸೇರಿದಂತೆ ಎಲ್ಲರೂ ಅರ್ಜಿ ಸಲ್ಲಿಸಬೇಕು' ಎಂದು ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದರು. ಆದರೆ, ಈವರೆಗೆ 40 ಶಾಸಕರು ಮಾತ್ರ ಅರ್ಜಿ ಸಲ್ಲಿಸಿದ್ದಾರೆ. 20ಕ್ಕೂ ಹೆಚ್ಚು ಶಾಸಕರು ಇನ್ನೂ ಅರ್ಜಿ ಸಲ್ಲಿಸಿಲ್ಲ.

ಶಿವಾಜಿನಗರ ಕ್ಷೇತ್ರದಿಂದ ಕಣಕ್ಕಿಳಿಯಲು ಬಯಸಿ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್, ಯಶವಂತಪುರ ಕ್ಷೇತ್ರದಿಂದ ನಟಿ ಭಾವನಾ ಅರ್ಜಿ ಸಲ್ಲಿಸಿದ್ದಾರೆ. 'ಯಶವಂತಪುರ ಕ್ಷೇತ್ರದಿಂದ ಸ್ಪರ್ಧಿಸಬೇಕೆಂದು ಅರ್ಜಿ ಹಾಕಿದ್ದೇನೆ. ಕಾಂಗ್ರೆಸ್ ವರಿಷ್ಠರು ನನಗೆ ಟಿಕೆಟ್ ಕೊಡುವುದೆಂಬ ವಿಶ್ವಾಸವಿದೆ' ಎಂದು ಭಾವನಾ ಪ್ರತಿಕ್ರಿಯಿಸಿದ್ದಾರೆ.

ಶೃಂಗೇರಿ, ತೀರ್ಥಹಳ್ಳಿ, ಚಿಕ್ಕಮಗಳೂರು, ಪಾಂಡವಪುರ (ಮೇಲುಕೋಟೆ) ಹಾಗೂ ದೇವರ ಹಿಪ್ಪರಗಿ ಈ ಐದು ಕ್ಷೇತ್ರಗಳ ಪೈಕಿ ಯಾವುದಾದರೂ ಒಂದರಿಂದ ಟಿಕೆಟ್ ನಿರೀಕ್ಷಿಸಿರುವ ಕರ್ನಾಟಕ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಚಿನ್ ಮೀಗಾ, ಈ ಎಲ್ಲ ಕ್ಷೇತ್ರಗಳಿಗೆ ಅರ್ಜಿ ಸಲ್ಲಿಸಿದ್ದಾರೆ.

ಅಧಿಕ ಶುಲ್ಕ ಸಲ್ಲ: ಹೈಕೋರ್ಟ್

ಬೆಂಗಳೂರು: 'ಖಾಸಗಿ ಕಾಲೇಜುಗಳು ಉನ್ನತ ಶಿಕ್ಷಣದಲ್ಲಿ ಶಾಸನಬದ್ಧ ಅಧಿಕಾರಿಗಳು ನಿಗದಿಪಡಿಸಿದ ಶುಲ್ಕವನ್ನಷ್ಟೇ ಪಡೆಯಬೇಕು. ಅಧಿಕ ಶುಲ್ಕ ಸಂಗ್ರಹಿಸದಂತೆ ಎಲ್ಲಾ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ನಿರ್ದೇಶನ ನೀಡಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

'ಹೆಚ್ಚುವರಿ ಶುಲ್ಕ ಸಂಗ್ರಹ ಮಾಡದಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಜೆ.ಹರೀಶ್ ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವೀರಪ್ಪ, ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಆದೇಶ ನೀಡಿದೆ.

'ಶಿಕ್ಷಣ ಇಂದು ಮಾರುಕಟ್ಟೆಯ ಸರಕಾಗಿ ಮಾರ್ಪಾಡಾಗಿದೆ. ಹಣ ಮಾಡುವ ದಂಧೆಯಾಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕಿದೆ. ರಾಜ್ಯ ಸರ್ಕಾರಕ್ಕೆ ನಿಜವಾಗಿಯೂ ವಿದ್ಯಾರ್ಥಿಗಳ ಹಿತ ರಕ್ಷಣೆಯ ಕಾಳಜಿ ಇದ್ದರೆ ಅಧಿಕ ಶುಲ್ಕ ಸಂಗ್ರಹಿಸದಂತೆ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಅರ್ಜಿ ವಿಲೇವಾರಿ ಮಾಡಿದೆ.

ಗ್ರಾಮ ಲೆಕ್ಕಿಗನಿಗೆ ಬೆದರಿಕೆ ರೇಣುಕಾಚಾರ್ಯ ವಿರುದ್ಧ ದೂರು

ದಾವಣಗೆರೆ: 'ಮಳೆಗೆ ಕುಸಿದಿದ್ದ ದನದ ಕೊಟ್ಟಿಗೆಯನ್ನು ವಾಸದ ಮನೆ ಎಂದು ಪರಿಗಣಿಸಿ, ಮಳೆ ಹಾನಿ ಪರಿಹಾರ ವರದಿ ನೀಡಲು ಶಾಸಕ ಎಂ.ಪಿ.ರೇಣುಕಾಚಾರ್ಯ, ಜಿಲ್ಲೆಯ ನ್ಯಾಮತಿ ತಾಲ್ಲೂಕು ಕೂಗೆನಹಳ್ಳಿಯ ಗ್ರಾಮಲೆಕ್ಕಿಗ ಪ್ರಶಾಂತಕುಮಾರ ಅವರಿಗೆ ಬೆದರಿಕೆ ಒಡ್ಡಿರುವ ವಿಷಯ ತಡವಾಗಿ ಗೊತ್ತಾಗಿದೆ.

'ಅ.30ರಂದು ಹೊನ್ನಾಳಿಯ ನಿವಾಸಕ್ಕೆ ಕರೆಸಿಕೊಂಡ ಶಾಸಕರು, ಕೂಗೆನಹಳ್ಳಿಯ ರೂಪಬಾಯಿ, ಸಾವಿತ್ರಿಬಾಯಿ ಹಾಗೂ ಶಿವರಾಜ ನಾಯ್ಕ ಅವರ ಮನೆಗಳು ಹಾನಿಯಾಗಿವೆ ಎಂಬ ವರದಿ ನೀಡಬೇಕು' ಎಂದು ತಾಕೀತು ಮಾಡಿದ್ದಾಗಿ ಗ್ರಾಮಲೆಕ್ಕಿಗ ನ.12ರಂದು ನ್ಯಾಮತಿ ಠಾಣೆಗೆ ದೂರು ನೀಡಿದ್ದಾರೆ.

'ವಾಸ್ತವ ಇರುವಂತೆ ಮೇಲಧಿಕಾರಿಗೆ ವರದಿ ಸಲ್ಲಿಸಿದ್ದೇನೆ ಎಂದು ತಿಳಿಸಿದೆ. ಆಗ ಹಾಗೇ ಸಲ್ಲಿಸಿದರೆ ಪರಿಹಾರ ಸಿಗುವುದಿಲ್ಲ, ವರದಿ ಬದಲಿಸು ಎಂದರು. ಸಾಧ್ಯವಿಲ್ಲ ಎಂದು ತಿಳಿಸಿದ್ದಕ್ಕೆ, ನಿಕ್ಕಿ ಹೊಡೆಯುತ್ತೇನೆ ಎಂದು ಬೆದರಿಸಿದರು. ಹೇಳಿದಂತೆ ಮಾಡು. ಇಲ್ಲವಾದರೆ ವರ್ಗಾವಣೆ ಮಾಡಿಸಿಕೊಂಡು ಹೋಗು ಎಂದು ಗದರಿದರು' ಎಂದಿದ್ದಾರೆ.

'ವಾಸ್ತವಾಂಶ ಕುರಿತು ಮೇಲಧಿಕಾರಿಗಳಿಗೆ ವರದಿ ಸಲ್ಲಿಸಿದ್ದೇನೆ. ಈ ಕುರಿತು ಜಿಲ್ಲಾಧಿಕಾರಿಗೂ ದೂರು ನೀಡಿದ್ದೇನೆ' ಎಂದು ಪ್ರಶಾಂತಕುಮಾರ 'ಪ್ರಜಾವಾಣಿ'ಗೆ ತಿಳಿಸಿದರು.

'ದೂರುದಾರರು ಸಂಬಂಧಪಟ್ಟ ದಾಖಲೆ ಒದಗಿಸಿದರೆ ತನಿಖೆ ನಡೆಸುತ್ತೇನೆ' ಎಂದು ನ್ಯಾಮತಿ ಠಾಣೆಯ ಪಿಎಸ್‌ಐ ರಮೇಶ್ ಪಿ.ಎಸ್ ಹೇಳಿದರು.

ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001
ಸಂಖ್ಯೆ. ಪ್ರಇಂ/40/ಪಿಆರ್‌ಎಎಂಸಿ/ರಸು/2022–23/814 ದಿನಾಂಕ : 14–11–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚಿತ್ರದುರ್ಗ ಜಿಲ್ಲೆಯ 2 ನಾಲಾಬದಿ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್‌ನಿಂದ (www.eproc.karnataka.gov.in) ದಿನಾಂಕ : 15–11–2022 ಸಂಜೆ 05:30 ರಿಂದ ಪಡೆಯಬಹುದಾಗಿರುತ್ತದೆ.

ವಾಸಾಸಂಇ/ವಾ.ಪ್ರ/3090/ಶ್ರೇಷ್ಠ/2022–23 ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು
ನಂ.: ಕರಾಸ/ಕೆಂಬನಿ/ವಾ–1/1026/2022–23 ದಿನಾಂಕ: 10.11.2022

ಜಾಹೀರಾತು ಇ–ಟೆಂಡರ್ ಪ್ರಕಟಣೆ ಸಂಖ್ಯೆ–05/2022–23

ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಯಲ್ಲಿ ಬರುವ ಶ್ರೀ ಬಸವೇಶ್ವರ ಬಸ್ ನಿಲ್ದಾಣ (ಪೀಣ್ಯ), ಬೆಂಗಳೂರು ಇಲ್ಲಿಗೆ ಸ್ವಚ್ಛತಾ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿ / ವಿವರಗಳಿಗಾಗಿ **https://eproc.karnataka.gov.in** ನಿಂದ ಹಾಗೂ ನಿಗಮದ ವೆಬ್‌ಸೈಟ್ **ksrtc.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560 009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 7760990554, 77609900557 ಮತ್ತು ಹೆಚ್.ಪಿ. ಸಹಾಯವಾಣಿ ಸಂಖ್ಯೆ 8046010000 / 8068948777.

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂ.ಬ.ನಿ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/ಎಲ್‌ಸಿ/3099/2022–23

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ತಿದ್ದುಪಡಿ

ಬೆವಿಕಂ ಅಧಿಸೂಚನೆ ಸಂಖ್ಯೆ:BESCOM/GM(DSM)/BC-51/KUSUM-C/2022-23, ದಿನಾಂಕ: 09.11.2022 ರನ್ವಯ "ಸೌರ ವಿದ್ಯುತ್‌ಉತ್ಪಾದಕರ (SPGs) ಆಯ್ಕೆಗಾಗಿ ಬಿಲ್ಡ್–ಓನ್–ಆಪರೇಟ್ (BOO) ಆಧಾರದ ಮೇಲೆ ಬೆವಿಕಂ ವ್ಯಾಪ್ತಿಯ ಸಬ್ ಸ್ಟೇಷನ್ (SS) ಮಟ್ಟದಲ್ಲಿ 2,62,331 ಕೃಷಿ ಪಂಪ್‌ಸೆಟ್‌ಗಳನ್ನೊಳಗೊಂಡ ಆಯ್ದ ಕೃಷಿ ಫೀಡರ್‌ಗಳ ಸೌರೀಕರಣಕ್ಕಾಗಿ, ವಿಕೇಂದ್ರೀಕೃತ ಸೌರ ಘಟಕಗಳ ವಿನ್ಯಾಸ, ಸಮೀಕ್ಷೆ, ಸರಬರಾಜು, ಸ್ಥಾಪನೆ, ಪರೀಕ್ಷೆ, ಅನುಷ್ಠಾನ, ಕಾರ್ಯಾಚರಣೆ& ನಿರ್ವಹಣೆ, ಅದರ ಸಂಬಂಧಿತ 11ಕೆ.ವಿ ಮಾರ್ಗ ಹಾಗೂ ಸೌರ ವಿದ್ಯುತ್ ಸ್ಥಾವರಗಳ ರಿಮೋಟ್ ಮಾನಿಟರಿಂಗ್ ಸಿಸ್ಟಮ್ (RMS) ನೊಂದಿಗೆ ಸ್ಥಾವರವನ್ನು ರೆಸ್ಕೋ ಮಾದರಿ ಮೂಲಕ 25 ವರ್ಷ ಪಿಪಿಎ ಅವಧಿಯವರೆಗೆ ಸಂಪರ್ಕಿಸಲು ಪಿಎಂ–ಕುಸುಮ್ ಕಾಂಪೊನೆಂಟ್–ಸಿ ಯೋಜನೆಯ ಕೃಷಿ ಫೀಡರ್‌ಗಳ ಸೌರೀಕರಣ" ಕ್ಕೆ ಆಹ್ವಾನಿಸಲಾಗಿದ್ದ ಪ್ರಸ್ತಾವನೆ ವಿನಂತಿಯಲ್ಲಿ(RFP) ಸೂಚಿಸಲಾಗಿದ್ದ ನಿಗದಿತ ದಿನಾಂಕಗಳನ್ನು ತಾಂತ್ರಿಕ ಕಾರಣಾಂತರಗಳಿಂದ ಮುಂದೂಡಲಾಗಿದೆ. ಯಾವುದೇ ತಿದ್ದುಪಡಿ ಹಾಗೂ ಮಾಹಿತಿಗಳನ್ನು ಬೆವಿಕಂ ವೆಬ್‌ಸೈಟ್ **https://bescom.karnataka.gov.in/**ಇಲ್ಲಿ ಸೂಚಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಸಂಪರ್ಕಿಸಿ: ಬೆವಿಕಂ ಸೋಲಾರ್ ಸಹಾಯವಾಣಿ ಸಂಖ್ಯೆ: 080–2234 0816.

ಸಹಿ/– ಪ್ರಧಾನ ವ್ಯವಸ್ಥಾಪಕರು(ವಿ), ಡಿ.ಎಸ್.ಎಂ, ಬೆವಿಕಂ, ಬೆಂಗಳೂರು

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಕೊಪ್ಪಳ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಕೊಪ್ಪಳ–583231. ದೂ.ಸಂ: 08539–221660,
E–Mail: dhokoppal@gmail.com
ಸಂಖ್ಯೆ:ಜಿ.ಸ.ಫ.ಕೊ/375/2022–2023 ದಿನಾಂಕ 09.11.2022

ಇ–ಪ್ರೋಕ್ಯೂರ್‌ಮೆಂಟ ಟೆಂಡರ ಅಧಿಸೂಚನೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೊಪ್ಪಳದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಎನ್.ಎಫ್.ಡಿ.ಎಸ್ ಕಾರ್ಯಕ್ರಮಕ್ಕೆ ಬೇಕಾಗುವ ರೋಗ ಪತ್ತೆ ಕಿಟ್‌ಗಳನ್ನು ರಾಸಾಯನಿಕಗಳನ್ನು ಹಾಗೂ ಪರಿಕರಗಳನ್ನು ಪೂರೈಕೆ ಮಾಡುವ ಕುರಿತು ಕರೆಯಲಾದ ಇ–ಪ್ರೋಕ್ಯೂರ್ ಮೆಂಟ ಟೆಂಡರ.

ಟೆಂಡರ ವೇಳಾಪಟ್ಟಿ: 1)ಇ–ಪ್ರೋಕ್ಯೂರ್‌ಮೆಂಟ ಮುಖಾಂತರ ದರಗಳನ್ನು ನಮೂದಿಸಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ 01.12.2022 ರಂದು ಸಂಜೆ 5.00 ಗಂಟೆಯವರಿಗೆ. 2)ತಾಂತ್ರಿಕ ಬಿಡನ್ನು ತೆರೆಯುವ ದಿನಾಂಕ 03.12.2022 ರಂದು ಬೆಳ್ಳಿಗ್ಗೆ 11.00 ಗಂಟೆ ನಂತರ. 3)ಆರ್ಥಿಕ ಬಿಡನ್ನು ತೆರೆಯುವ ದಿನಾಂಕ 05.12.2022 ರಂದು ಬೆಳ್ಳಿಗ್ಗೆ 11.00 ಗಂಟೆ ನಂತರ

ಹೆಚ್ಚಿನ ವಿವರಗಳಿಗಾಗಿ ಕೆಲಸದ ದಿನದಂದು ಸದರಿ ಸಂಸ್ಥೆಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು. ಅಥವಾ https://eproc.karnataka.gov.in. ಪಡೆಯಬಹುದು.

ಸಹಿ/–ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/437/ಎಂಸಿಎ/2022–23

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ–5
Fax:+91-836-2441188 Epabx:+91-836-2214332/216,444,214
Phone :+ 91-836-2214214 E mail: estateofficer@rediffmail.com
No.EO/DB/TN/e-Proc.T-79/2022-23 Date: 14.11.2022

ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ

ಕೃಷಿ ವಿಶ್ವವಿದ್ಯಾಲಯ ಧಾರವಾಡದ ಮುಖ್ಯ ಆವರಣದಲ್ಲಿ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರಗಳನ್ನು e-procurement portal ಪದ್ಧತಿಯಂತೆ http://eproc.karnataka.gov.in online ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ 0836–2214214/332 ಸಂಪರ್ಕಿಸಬಹುದು.
e-procurement ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 080–46010000.

ಟೆಂಡರ್ ವೇಳಾಪಟ್ಟಿ

1	ವಿಚಾರಣೆಗಳಿಗಾಗಿ ಕೊನೆಯ ದಿನಾಂಕ	19.11.2022	Up to	16.00 Hrs
2	ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ	22.11.2022	Up to	16.00 Hrs
3	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ	23.11.2022	At	16.15 Hrs

ಸೂಚನೆ: ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.
ಸಹಿ/– ಆಸ್ತಿ ಅಧಿಕಾರಿಗಳು
ವಾ.ಸಾ.ಇ./ಧಾ/748/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಜಲಸಾರಿಗೆ ಮಂಡಳಿ
ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಬಂದರು ಮತ್ತು ಮೀನುಗಾರಿಕಾ ವಿಭಾಗ, 'ಶ್ಯಾಮಿಲಿ ಹಾಲ್, 2ನೇ ಮಹಡಿ, ಅಂಬಲಪಾಡಿ, ಉಡುಪಿ –576103
Tel No: 0820-2532961, Fax No: 0820-2532961, Email: pfdudupi@gmail.com
ಸಂ:ಕಾನಿಇಂ:ಬಂಮೀವಿ:ಉಡುಪಿ:ಎಇ:ಟೆಂಡರ್ ಪ್ರಕಟಣೆ–24/2022–23: ದಿ: 14–11–2022

ಅಲ್ಪಾವಧಿ ಟೆಂಡರು ಮುಂದೂಡಿಕಾ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ ದಾಖಲೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು www.eproc.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
ಕಾಮಗಾರಿಯ ಹೆಸರು ಮತ್ತು ಟೆಂಡರ್ ನಂಬರ್: (1) ಉಡುಪಿ ಜಿಲ್ಲೆ ಗಂಗೊಳ್ಳಿ ಕೋಸ್ಟಲ್ ಬರ್ತ್ ಅಭಿವೃದ್ಧಿ ಕಾಮಗಾರಿ. ಟೆಂಡರಿಗಿಟ್ಟ ಮೊತ್ತ **ರೂ. 60,75,62,881.70, ಇಎಂಡಿ ಮೊತ್ತ:** Rs.60.76 lakhs (Rs.1.00 lakh e-payment + Rs.59.76 lakh as mentioned in bid document.) ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ **ವೇಳೆ: 25.11.2022 ರಂದು 16.00** ಗಂಟೆಯವರೆಗೆ, ಟೆಂಡರ್ ಪಡೆಯುವ ದಿನಾಂಕ ಮತ್ತು **ವೇಳೆ: 29.11.2022 ರಂದು 17.00** ಗಂಟೆಯವರೆಗೆ

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ
ವಾಸಾಇ/ಸನಿಉ/ಎಂಸಿಎ/589/22–23 ದಿ: 15.11.2022

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
ದೂರವಾಣಿ: 080–22273511/080–22100077 web site: http://eproc.karnataka.gov.in

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದ ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 29.11.2022 ಸಂಜೆ 4.00 ಗಂಟೆಗೆ

ಕ್ರ. ಸಂ.	ಕಾಮಗಾರಿಯ ಸ್ಥಳ
1	ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲ್ಲೂಕು, ಬೊಮ್ಮನಕಟ್ಟೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸರ್. ಎಂ. ವಿಶ್ವೇಶ್ವರಯ್ಯ ಸರ್ಕಾರಿ ವಿಜ್ಞಾನ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ. (2ನೇ ಕರೆ) Work Indent No: KHB/2022-23/BD/work_indent 1024 & IFT No. 130/2022-23 CALL-2 Date: 15.11.2022.ಟೆಂಡರ್‌ಗಿಟ್ಟ ಮೊತ್ತ ರೂ.73,93,251/–

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಮೇಲ್ಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/VCPL/3093/2022-23

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ರಾಮನಗರ ವಿಶೇಷ ವಿಭಾಗ, ರಾಮನಗರ.
ಟೆಂಡರ್ ಪ್ರಕಟಣೆ ಸಂಖ್ಯೆ : 07/2022–23 ದಿನಾಂಕ : 14–11–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2022–23 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 04 ಸಂಖ್ಯೆಯ ಅಂದಾಜು ಮೊತ್ತ ರೂ. 50.00 ಲಕ್ಷಗಳಿಂದ ರೂ. 250.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು http://www.eproc.karnataka.gov.in. ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ : 15–11–2022 ರಿಂದ 30–11–2022 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 30–11–2022 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು. 3) ಪ್ರೀ ಬಿಡ್ ಸಭೆಯ ದಿನಾಂಕ : 25–11–2022 ರ ವೇಳೆ 11.30 ಗಂಟೆ. 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 01–12–2022 ವೇಳೆ 16.30 ಗಂಟೆ. (ಸಾಧ್ಯವಾದಲ್ಲಿ).

"ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು".

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/334/ಮಣಿಪಾಲ್/2022–23

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
ಮುಖ್ಯ ಕಛೇರಿ, ನಂ–6/13/1, 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು–560072. ದೂ: 080–22202100
ಇ–ಮೇಲ್: kredlmd@gmail.com & agm.sogkredl@gmail.com

ತಿದ್ದುಪಡಿ

ಕೆ.ಆರ್.ಇ.ಡಿ.ಎಲ್ ಅಧಿಸೂಚನೆ ಸಂಖ್ಯೆ: KREDL/07/SOG/F-108/KUSUM-C/2022-23, Date: 09.11.2022, ರನ್ವಯ "**ಸೌರ ವಿದ್ಯುತ್ ಉತ್ಪಾದಕರ (SPG) ಆಯ್ಕೆಗಾಗಿ ಬಿಲ್ಡ್–ಓನ್–ಆಪರೇಟ್ (BOO) ಆಧಾರದ ಮೇಲೆ ಹೆಸ್ಕಾಂ ಮತ್ತು ಸೆಸ್ಕ, ಮೈಸೂರು ವ್ಯಾಪ್ತಿಯ ಸಬ್ ಸ್ಟೇಷನ್ (SS) ಮಟ್ಟದಲ್ಲಿ ಒಟ್ಟು 75,000 ಕೃಷಿ ಪಂಪ್‌ಸೆಟ್‌ಗಳನ್ನೊಳಗೊಂಡ ಆಯ್ದ ಕೃಷಿ ಫೀಡರ್‌ಗಳ ಸೌರೀಕರಣಕ್ಕಾಗಿ, ವಿಕೇಂದ್ರೀಕೃತ ಸೌರ ಘಟಕಗಳ ವಿನ್ಯಾಸ, ಸಮೀಕ್ಷೆ, ಸರಬರಾಜು, ಸ್ಥಾಪನೆ, ಪರೀಕ್ಷೆ, ಅನುಷ್ಠಾನ, ಕಾರ್ಯಾಚರಣೆ & ನಿರ್ವಹಣೆ, ಅದರ ಸಂಬಂಧಿತ 11ಕೆ.ವಿ ಮಾರ್ಗ ಹಾಗೂ ಸೌರ ವಿದ್ಯುತ್ ಸ್ಥಾವರಗಳ ರಿಮೋಟ್ ಮಾನಿಟರಿಂಗ್ ಸಿಸ್ಟಮ್ (RMS) ನೊಂದಿಗೆ ಸ್ಥಾವರವನ್ನು ರೆಸ್ಕೋ ಮಾದರಿ ಮೂಲಕ 25 ವರ್ಷ ಪಿಪಿಎ ಅವಧಿಯವರೆಗೆ ಸಂಪರ್ಕಿಸಲು ಪಿಎಂ–ಕುಸುಮ್ ಕಾಂಪೊನೆಂಟ್–ಸಿ ಯೋಜನೆಯ ಕೃಷಿ ಫೀಡರ್‌ಗಳ ಸೌರೀಕರಣಕ್ಕಾಗಿ**" ಆಹ್ವಾನಿಸಲಾಗಿದ್ದ Request for Proposal(RFP) ರಲ್ಲಿ ಸೂಚಿಸಲಾಗಿದ್ದ ನಿಗದಿತ ದಿನಾಂಕಗಳನ್ನು ತಾಂತ್ರಿಕ ಕಾರಣಾಂತರಗಳಿಂದ ಮುಂದೂಡಲಾಗಿದ್ದು, ಮುಂದಿನ ಪರಿಷ್ಕೃತ ದಿನಾಂಕಗಳನ್ನು ಮತ್ತು ನವೀಕರಣಗಳಿಗಾಗಿ ವೆಬ್‌ಸೈಟ್: **www.kredl.karnataka.gov.in** ಅನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಸಂಪರ್ಕಿಸಿ: ಕೆ.ಆರ್.ಇ.ಡಿ.ಎಲ್ ದೂರವಾಣಿ ಸಂಖ್ಯೆ: 080–22202100.

ಸಹಿ/– ಸ.ಪ್ರ.ವ್ಯ (ಎಸ್.ಓ.ಜಿ), ಕೆ.ಆರ್.ಇ.ಡಿ.ಎಲ್. ಬೆಂಗಳೂರು

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001.
ದೂರವಾಣಿ ಸಂಖ್ಯೆ: 080–22133370 ಫ್ಯಾಕ್ಸ್ ಸಂಖ್ಯೆ: 080–22133365
Email ID: eepwdbngdn@yahoo.com E-Portal : https://eproc.karnataka.gov.in

ಟೆಂಡರ್ ಪ್ರಕಟಣೆ ಸಂಖ್ಯೆ: 28/2022–23
ದಿನಾಂಕ: 14.11.2022

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಒಂದು ಲಕೋಟೆ ಪದ್ದತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.2 ಉತ್ತರ, ನೆಲಮಂಗಲ & ದೇವನಹಳ್ಳಿ ಉಪವಿಭಾಗಕ್ಕೆ ಸಂಬಂಧಿಸಿದಂತೆ 03 ಸಂಖ್ಯೆಯ (ರೂ. 3.30 ಮತ್ತು 150.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್‌ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್‌ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 14.11.2022 ರಿಂದ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್‌ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 29.11.2022 ಸಂಜೆ 4.00 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 30.11.2022 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.
DIPR/CP/3091/Zenkar/2022-23

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2278480, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂಖ್ಯೆ:ತುಮಪಾ/ತಾಂಶಾ/ವಿ&ನೀ/ಟೆಂಡರ್/ಸಿಆರ್/15/2022–23 ದಿನಾಂಕ: 14.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಅಧ್ಯಾದೇಶ 1999–2000 ಪ್ರಕಾರ ಆಕ್ಟ್ 2000ರ ನಿಯಮದಂತೆ 2022–23ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ 02 ಸಂಖ್ಯೆ ಕಾಮಗಾರಿ, 01 ಸಂಖ್ಯೆ ದಾಸ್ತಾನು ಶಾಖೆಗೆ ಸಂಬಂಧಿಸಿದ ಸರಬರಾಜು ಕಾಮಗಾರಿಯ ಮರುಟೆಂಡರ್ ಮತ್ತು 01 ಸಂಖ್ಯೆ ನೀರು ಸರಬರಾಜು ಸಂಬಂಧಿತ Expression of interest ಟೆಂಡರ್ ನಿರ್ವಹಿಸಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕಛೇರಿಯಿಂದ ಆಹ್ವಾನಿಸಲಾಗಿದೆ. ಆಸಕ್ತರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ವಿವರಗಳನ್ನು ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದಾಗಿದೆ.

ಇ– ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಅಲ್ಪಾವಧಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: **15.11.2022** ರಿಂದ **22.11.2022** ಸಂಜೆ 4.30 ಗಂಟೆವರೆಗೆ. 2. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: **22.11.2022** ರಂದು ಸಂಜೆ 4.30 ಗಂಟೆವರೆಗೆ. 3. ಟೆಂಡರ್‌ನ ತೆರೆಯುವ ದಿನಾಂಕ: **23.11.2022** ರಂದು ಸಂಜೆ 4.45 ಗಂಟೆಗೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ತುಮಕೂರು ಮಹಾನಗರ ಪಾಲಿಕೆ, ತುಮಕೂರು
DIPR/TUM/691/MCA/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಎಸ್‌ಡಬ್ಲ್ಯೂಡಿ–ಯಲಹಂಕ ವಲಯ, ಬಿಬಿಎಂಪಿ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011
ಸಂ: ಕಾಪಾಅ/ಎಸ್‌ಡಬ್ಲ್ಯೂಡಿ–ಯವ/ಟೆಂಡರ್/07/2022–23 ದಿನಾಂಕ: 15.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ) (2ನೇ ಕರೆ)

ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ–ಯಲಹಂಕ ವಲಯ ಇವರು ಬೃ.ಬೆಂ.ಮ.ಪಾಲಿಕೆಯಲ್ಲಿ ನೋಂದಾಯಿಸಿರುವ ಅಥವಾ ತತ್ಸಮಾನ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ / ರಾಜ್ಯ ಸರ್ಕಾರದಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಲಕ್ಷಗಳಲ್ಲಿ)
1	ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಯಲಹಂಕ ವಲಯ, ವಾರ್ಡ್ ಸಂಖ್ಯೆ 6 ರ ಮಾನ್ಯತಾ ಟೆಕ್ ಪಾರ್ಕ್‌ನಿಂದ ಎಲಿಮೆಂಟ್ ಮಾಲ್‌ವರೆಗೆ ಡ್ರಾಫ್ಟ್ ಚಾನೆಲ್ (BP-183) ನ ನಿರ್ಮಾಣ / ಮರುರೂಪಿಸುವಿಕೆ ಕಾಮಗಾರಿಗಳು.	824.35	ರೂ. 8.30ಲಕ್ಷಗಳು (ರೂ.1.00 ಲಕ್ಷ ಆನ್‌ಲೈನ್ ಪಾವತಿ ಮೂಲಕ ಹಾಗೂ ರೂ. 7.30 ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಮೂಲಕ)

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ದಿನಾಂಕ: **16.11.2022ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ: **22.11.2022ರ ಸಂಜೆ 4.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.11.2022ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **29.11.2022ರ ಸಂಜೆ 4.30 ಗಂಟೆಗೆ.**
ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–22441076/77ನ್ನು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ–ಯಲಹಂಕ ವಲಯ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ
ನಂ. ಕಾ.ನಿ.ಅ/ಗ್ರಾ.ಕು.ನೀ & ನೈ/ಬೆಳಗಾವಿ/ಪಿಬಿ–2/ಕು.ನೀ.ಸ.ಯೋ/ಕೆಡಬ್ಲ್ಯು–4/ಟೆಂಡರ್–48/2022–23/2520 ದಿ: 10–11–2022

ಪ್ರೊಕ್ಯೂರ್‌ಮೆಂಟ್ ರೀತ್ಯಾ ದ್ವಿ–ಲಕೋಟೆ ಮಾದರಿಯ ಟೆಂಡರ್ ಪ್ರಕಟಣೆ ಸಂಖ್ಯೆ: 48/2022–23

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹಗುತ್ತಿಗೆದಾರರಿಂದ ಸನ್ 2021–22ನೇ ಸಾಲಿನ ಜಲ ಜೀವನ್ ಮೀಷನ್ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ Standard Tender Document KW-4 ರ ನಿಬಂಧನೆಗೊಳಪಟ್ಟಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಇಡೆಂಟ್ ನಂ. 47150.
1) ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ&ನೈ ವಿಭಾಗ, ಬೆಳಗಾವಿ ಇವರ ಕಚೇರಿಯಲ್ಲಿ **ದಿನಾಂಕ: 17–11–2022 ರ ಬೆಳಿಗ್ಗೆ 11:00 ಗಂಟೆಯವರೆಗೆ.** 2) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **12–12–2022ರ ಸಾಯಂಕಾಲ 17:30 ಗಂಟೆಯವರೆಗೆ** 3) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 13–12–2022ರ ಬೆಳಿಗ್ಗೆ 11:00 ಗಂಟೆ ನಂತರ** 4) ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದಿಸಿದ ನಂತರ.
ಸೂಚನೆ: ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ e-procurement portal www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ&ನೈ. ವಿಭಾಗ, ಬೆಳಗಾವಿ
DIPO/RO No. 1167/2022-23

ಬೆಂಗಳೂರು ವಿಶ್ವವಿದ್ಯಾಲಯ
NAAC Accredited with 'A' GRADE
ಜ್ಞಾನಭಾರತಿ, ಬೆಂಗಳೂರು–560 056.
ಸಂಖ್ಯೆ:ಸಿಬ್ಬಂದಿ-2:ಇ9:ಅ.ಉ:ಆರ್ಟ್ಸ್:ಸೈನ್ಸ್:ವಾಣಿಜ್ಯ:ಶಿ:ದೈಶಿ:2022-23 ದಿನಾಂಕ: 15.11.2022

ಪ್ರಕಟಣೆ

2022-23ನೇ ಶೈಕ್ಷಣಿಕ ವರ್ಷಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ರಾಮನಗರದಲ್ಲಿ ಬೋಧಿಸಲು **ಪೂರ್ಣ ಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗೆ** ಅರ್ಜಿಗಳನ್ನು ಆಹ್ವಾನಿಸಲಾಗಿದೆ. UGC ನಿಯಮಗಳ ಪ್ರಕಾರ ಆಯಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ವಿಶ್ವವಿದ್ಯಾಲಯದ ವೆಬ್‌ಸೈಟ್ **www.bangaloreuniversity.ac.in** ನಿಂದ ಡೌನ್‌ಲೋಡ್ ಮಾಡಿಕೊಂಡು ಸಂಬಂಧಿತ ದಾಖಲೆಗಳ ಪ್ರತಿಯೊಂದಿಗೆ ಸಂಬಂಧಪಟ್ಟ **ಸ್ನಾತಕೋತ್ತರ ವಿಭಾಗಗಳ ನಿರ್ದೇಶಕರು / ಪ್ರಾಂಶುಪಾಲರು / ಮುಖ್ಯಸ್ಥರು ಸಮನ್ವಯಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ ಕ್ಯಾಂಪಸ್ ಬೆಂಗಳೂರು–560 056 ಇವರಿಗೆ ದಿನಾಂಕ: 30.11.2022** ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸುವುದು. ಆಯ್ಕೆಯಾದ ಅತಿಥಿ ಉಪನ್ಯಾಸಕರು ಬೋಧಿಸಬೇಕಾದ ವಿಷಯಗಳ ಪಟ್ಟಿಯನ್ನು ಮೇಲ್ಕಂಡ ವಿಶ್ವವಿದ್ಯಾಲಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸಬಹುದು.

ಸಹಿ/–, ಕುಲಸಚಿವರು

ಕರ್ನಾಟಕ ಸರಕಾರ
(ಜಲ ಸಂಪನ್ಮೂಲ ಇಲಾಖೆ)
ನೀರಾವರಿ ಯೋಜನೆಗಳು, ಕಾಡಾ ವಿಭಾಗ, ಕಲಬುರಗಿ
(ವಿಳಾಸ : ಪ್ಲಾಟ ನಂ.21, ಕೋಟನೂರ ಧರಿಯಾಪೂರ ರಸ್ತೆ, ಜಿ. ಡಿ. ಎ. ಲೇಔಟ್, 3ನೇ ಮುಖ್ಯ ರಸ್ತೆ, "ಬಿ" ಬ್ಲಾಕ್, ಕಲಬುರಗಿ–585102), ಇ–ಮೇಲ್: eecadaipglb@gmail.com
ಸಂ.ಕಾ.ನಿ.ಅ./ಕಾಡಾವಿಭಾಗ/ತಾ.ಶಾ–1/4705-BR/2022–23/1021 ದಿನಾಂಕ: 10–11–2022

ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್ಮೆಂಟ್ e-procurement portal ಪದ್ಧತಿಯಲ್ಲಿ ಮಾತ್ರ)

ಮಾನ್ಯ ಆಡಳಿತಾಧಿಕಾರಿಗಳು, ನೀರಾವರಿ ಯೋಜನೆಗಳ ವಲಯ, ಕಾಡಾ, ಕಲಬುರಗಿ ರವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ನೀರಾವರಿ ಯೋಜನೆಗಳು, ಕಾಡಾ. ವಿಭಾಗ ಕಲಬುರಗಿ ಇವರು ಅರ್ಹ ಗುತ್ತಿಗೆದಾರರಿಂದ ಸಿವಿಲ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : **ಕಾಸ್ ವೇ ನಿರ್ಮಾಣ ಹಾಗೂ ಅಪ್ರೋಚ್‌ರಸ್ತೆ ನಿರ್ಮಾಣ ಕಾಮಗಾರಿ,** 2) ಲೆಕ್ಕ ಶೀರ್ಷಿಕೆ : **4705 ವಿಶೇಷ ಅಭಿವೃದ್ಧಿ ಯೋಜನೆ,** 3) ಟೆಂಡರಿಗಿಟ್ಟ ಮೊತ್ತ: ರೂ. 63,48,320.43 + GST, 4) ಗುತ್ತಿಗೆದಾರರ ಅರ್ಹತೆ : ಕೆ.ಪಿ.ಡಬ್ಲ್ಯೂಡಿ 1ನೇ ದರ್ಜೆ, 5) ಈ–ಸಂಗ್ರಹಣೆ ಪೋರ್ಟಲ್‌ಗೆ ಪ್ರವೇಶಕ್ಕಾಗಿ ಕಾಲಾವಧಿ : 15-11-2022 ರಿಂದ 30-11-2022 ಸಾಯಂಕಾಲ 5.00 ಗಂಟೆವರೆಗೆ, 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಟೆಂಡರ್ ಫಾರಂ ಬೆಲೆ ಇ–ಪ್ರೊಕ್ಯೂರ್ಮೆಂಟ್ ನಿಯಮದಂತೆ ಇ– ಪ್ರೊಕ್ಯೂರ್ಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 30-11-2022 ಸಾಯಂಕಾಲ 5.00 ಗಂಟೆವರೆಗೆ, 8) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02-12-2022 ಬೆಳಿಗ್ಗೆ 11.00 ಗಂಟೆಗೆ, 8) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 16-12-2022 ಬೆಳಿಗ್ಗೆ 11.00 ಗಂಟೆಗೆ, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರು, ನೀರಾವರಿ ಯೋಜನೆಗಳು, ಕಾಡಾ ವಿಭಾಗ, ಕಲಬುರಗಿ, 10) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ನೀರಾವರಿ ಯೋಜನೆಗಳು ಕಾಡಾ ವೀಭಾಗ, ಕಲಬುರಗಿ,
ವಾ.ಸಾ.ಸಂ.ಇ/ಕಲಬುರಗಿ/834/ಎಂ.ಸಿ.&ಎ/2022–23

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು–572 103, ದೂರವಾಣಿ : 0816–2254546
ಸಂಖ್ಯೆ:ತುವಿ:ತಾವಿ/ಟೆಂ.ಪ್ರ/2022–23 ದಿನಾಂಕ: 15.11.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ತುಮಕೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗದಿಂದ ಈ ಕೆಳಕಂಡ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ.

ಕ್ರಸಂ.	ಹೊರಗುತ್ತಿಗೆ ಸೇವೆಗಳು/ಸರಕು ಸೇವೆಗಳ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲಿ)	ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
	ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಬಗ್ಗೆ.	262.41	3.94	29.11.2022
	ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಸ್ವಚ್ಚತಾ ಕಾರ್ಯ ಸೇವೆಯನ್ನು ಒದಗಿಸುವ ಬಗ್ಗೆ.	113.63	2.00	29.11.2022
	ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಭದ್ರತಾ ಸೇವೆಯನ್ನು ಒದಗಿಸುವ ಬಗ್ಗೆ.	117.16	2.00	29.11.2022
	ತುಮಕೂರು ವಿಶ್ವವಿದ್ಯಾನಿಲಯಕ್ಕೆ ಯು.ಪಿ.ಎಸ್ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ.	82.00	1.64	30.11.2022
	ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸ್ವಚ್ಚತಾ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ.	15.01	0.38	30.11.2022

ನಿಯಮಾನುಸಾರ ಅರ್ಹ ಏಜೆನ್ಸಿಗಳಿಂದ ಮೇಲ್ಕಾಣಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಟೆಂಡರ್‌ನ್ನು ಸ್ವೀಕರಿಸಲಾಗುವುದು. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ನಲ್ಲಿ ಸಂಪರ್ಕಿಸಬಹುದು ಅಥವಾ ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಸರಳತೆಯು ವೈಯಕ್ತಿಕವಾದ ಮತ್ತು ಪ್ರಪಂಚಕ್ಕೆ ಸೇರಿದ ಬಹುತೇಕ ಸಮಸ್ಯೆಗಳನ್ನು ಪರಿಹರಿಸುತ್ತದೆ.

–ಇಳಾ ಭಟ್

ವಿವೇಕಾನಂದರ ಹೆಸರು, ಕೇಸರಿ ಬಣ್ಣ ರಾಜಕೀಯ ಕಾರಣಗಳಿಗೆ ಬಳಕೆ ಸಲ್ಲ

‘ವಿವೇಕ’ ಹೆಸರಿನಲ್ಲಿ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಕೊಠಡಿಗಳನ್ನು ನಿರ್ಮಿಸುವ ರಾಜ್ಯ ಸರ್ಕಾರದ ಕಾರ್ಯಕ್ರಮ ರಾಜಕೀಯ ವಿವಾದದ ಸ್ವರೂಪ ಪಡೆದುಕೊಂಡಿದೆ. ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ 7,601 ಕೊಠಡಿಗಳಿಗೆ ಸ್ವಾಮಿ ವಿವೇಕಾನಂದರ ಸ್ಮರಣಾರ್ಥ ‘ವಿವೇಕ’ ಎಂದು ಹೆಸರಿಡುವುದಾಗಿ ಸರ್ಕಾರ ಹೇಳಿದೆ. ಕೊಠಡಿಗಳಿಗೆ ಕೇಸರಿ ಬಣ್ಣ ಬಳಿಯುವ ಚಿಂತನೆ ನಡೆದಿದೆ. ‘ವಿವೇಕ’ ಹೆಸರಿನ ಕೊಠಡಿಗಳ ಜೊತೆಗೆ, 2023ರ ಆಗಸ್ಟ್ ವೇಳೆಗೆ ಎಲ್ಲ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಶೌಚಾಲಯ ನಿರ್ಮಿಸಿಕೊಡುವುದಾಗಿ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಕಲಿತ ಶಾಲೆಗಳೊಂದಿಗೆ, ಶತಮಾನ ಪೂರೈಸಿರುವ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವುದಾಗಿ ಸರ್ಕಾರ ಹೇಳಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ 750 ಸರ್ಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೂ ಸರ್ಕಾರ ಮುಂದಾಗಿದೆ. ಕೊಠಡಿಗಳ ನಿರ್ಮಾಣ ಸೇರಿದಂತೆ ಮೂಲಸೌಕರ್ಯ ವೃದ್ಧಿಗೆ ಕೈಗೊಂಡ ಕ್ರಮಗಳು ಸ್ವಾಗತಾರ್ಹ. ಆದರೆ, ಹೊಸದಾಗಿ ನಿರ್ಮಿಸುವ ಶಾಲಾ ಕೊಠಡಿಗಳಿಗೆ ಕೇಸರಿ ಬಣ್ಣ ಬಳಿಸಲು ಸರ್ಕಾರದ ಮಟ್ಟದಲ್ಲಿ ನಡೆದಿರುವ ಪ್ರಯತ್ನದ ಹಿಂದೆ ಮಕ್ಕಳ ಹಿತಾಸಕ್ತಿಗಿಂತಲೂ ರಾಜಕೀಯ ಉದ್ದೇಶಗಳೇ ಸ್ಪಷ್ಟವಾಗಿ ಕಾಣಿಸುತ್ತಿವೆ. ಶಾಲಾ ಕೊಠಡಿಗಳಿಗೆ ಕೇಸರಿ ಬಣ್ಣ ಬಳಿಸುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ನೀಡಿರುವ ಕಾರಣಗಳಲ್ಲಿ ಶೈಕ್ಷಣಿಕ ಕಾಳಜಿ ಕಾಣಿಸುತ್ತಿಲ್ಲ. ಜಗತ್ತಿಗೆ ವಿವೇಕವನ್ನು ನೀಡಿದ ಸ್ವಾಮಿ ವಿವೇಕಾನಂದರನ್ನು ಪ್ರೇರಣೆಯಾಗಿ ಇರಿಸಿಕೊಂಡು ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸಲು ‘ವಿವೇಕ’ ಕೊಠಡಿಗಳ ಪರಿಕಲ್ಪನೆ ರೂಪಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ‘ಕೇಸರಿ ಕಂಡರೆ ಏಕೆ ಸಿಟ್ಟು’ ಎಂದು ವಿರೋಧಪಕ್ಷಗಳ ನಾಯಕರನ್ನು ಪ್ರಶ್ನಿಸಿರುವ ಮುಖ್ಯಮಂತ್ರಿ, ರಾಷ್ಟ್ರಧ್ವಜದಲ್ಲೂ ಕೇಸರಿ ಬಣ್ಣ ಇರುವುದನ್ನು ನೆನಪಿಸಿದ್ದಾರೆ. ಮುಖ್ಯಮಂತ್ರಿ ಹೇಳಿರುವ ಮಾತುಗಳಲ್ಲಿ ಸತ್ಯಾಂಶವಿದೆ. ಕೇಸರಿ ಬಣ್ಣವನ್ನು ಯಾರೂ ಅಸಹನೆ ಅಥವಾ ಅನುಮಾನದಿಂದ ನೋಡಬಾರದು. ಹಾಗೆಯೇ, ರಾಷ್ಟ್ರಧ್ವಜದಲ್ಲಿ ಇರುವ ಬಣ್ಣವನ್ನು ಸಿಕ್ಕಸಿಕ್ಕಲ್ಲೆಲ್ಲ ಬಳಸುವ ಮೂಲಕ ಅದರ ಘನತೆಯನ್ನು ಕಡಿಮೆ ಮಾಡುವ ಪ್ರಯತ್ನಗಳನ್ನೂ ಯಾರೂ ಮಾಡಬಾರದು. ಕೇಸರಿ ಮಾತ್ರವಲ್ಲ, ಯಾವುದೇ ಬಣ್ಣಕ್ಕೆ ಅನಗತ್ಯ ಮಹತ್ವ ನೀಡುವುದು ಇಲ್ಲವೇ ಅನುಮಾನದಿಂದ ನೋಡುವುದು ಸರಿಯಲ್ಲ. ಮಕ್ಕಳು ಶಾಲೆಯಲ್ಲಿ ಕಲಿಯಬೇಕಾದುದು ಎಲ್ಲ ಬಣ್ಣಗಳ ಅಗತ್ಯ ಮತ್ತು ಮಹತ್ವವನ್ನೇ ಹೊರತು, ಯಾವುದೋ ಒಂದು ಬಣ್ಣವನ್ನು ವಿಶೇಷವಾಗಿ ನೋಡುವುದನ್ನಲ್ಲ. ವಿವೇಕಾನಂದರ ಹೆಸರನ್ನು ಕೂಡ ರಾಜಕೀಯ ಕಾರಣಗಳಿಗಾಗಿ ಬಳಸುವುದು ಸರಿಯಲ್ಲ.



ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಳ್ಳುವ ತೀರ್ಮಾನಗಳಲ್ಲಿ ಮಕ್ಕಳ ಹಿತಾಸಕ್ತಿಯೇ ಮುಖ್ಯವಾಗಿರಬೇಕು ಹಾಗೂ ಆ ತೀರ್ಮಾನಗಳು ಎಲ್ಲರನ್ನೂ ಒಳಗೊಳ್ಳುವಂತೆ ಇರಬೇಕು

‘ಗೋಡೆಗಳಿಗೆ ಬಳಿಯುವ ಬಣ್ಣದ ಆಯ್ಕೆ ಕುರಿತು ಇನ್ನೂ ಚರ್ಚಿಸಿಲ್ಲ’ ಎಂದು ಈ ಮೊದಲು ಹೇಳಿದ್ದ ಶಿಕ್ಷಣ ಸಚಿವರು, ಈಗ ಕೇಸರಿ ಬಣ್ಣದ ಮಹತ್ವದ ಕುರಿತು ಮಾತನಾಡುತ್ತಿದ್ದಾರೆ; ಕೊಠಡಿಯೊಂದಕ್ಕೆ ‘ವಿವೇಕ’ ಎನ್ನುವ ಹೆಸರಿಡುವ ಮೂಲಕ ವಿವೇಕಾನಂದರ ಆದರ್ಶವನ್ನು ಮಕ್ಕಳಲ್ಲಿ ರೂಢಿಸುತ್ತೇವೆ ಎಂದು ಹೇಳುತ್ತಿದ್ದಾರೆ. ವಿವೇಕಾನಂದರ ಜೀವನ ಮತ್ತು ಸಾಧನೆಯನ್ನು ಪರಿಚಯಿಸುವ ಪಠ್ಯಗಳನ್ನು ವಿದ್ಯಾರ್ಥಿಗಳು ಈಗಾಗಲೇ ಕಲಿಯುತ್ತಿದ್ದಾರೆ. ಆ ಪಠ್ಯಗಳಿಂದ ಮೈಗೂಡದ ಆದರ್ಶ, ಕೊಠಡಿಯೊಂದರ ಹೆಸರು ಹಾಗೂ ಬಣ್ಣದಿಂದ ಸಾಧ್ಯವಾಗುತ್ತದೆಂದು ನಿರೀಕ್ಷಿಸಲಾಗದು. ಕೊಠಡಿಯೊಂದಕ್ಕೆ ಯಾವುದೋ ಒಂದು ಬಣ್ಣವನ್ನು ಬಳಿಯುವುದರಿಂದಾಗಿ ಶಿಕ್ಷಣದ ಗುಣಮಟ್ಟ ಸುಧಾರಣೆಯಾಗುತ್ತದೆಂದೂ ಹೇಳಲಾಗದು. ಮೂಲಸೌಕರ್ಯಗಳ ಅಭಿವೃದ್ಧಿ, ವೈಜ್ಞಾನಿಕ ನೆಲೆಗಟ್ಟಿನ ಪಠ್ಯಕ್ರಮ ಹಾಗೂ ಪರಿಣಾಮಕಾರಿ ಬೋಧನೆಯಿಂದಷ್ಟೇ ಕಲಿಕೆಯ ಗುಣಮಟ್ಟದಲ್ಲಿ ಸುಧಾರಣೆ ಕಾಣಬಹುದು. ಇಂಥ ಯಾವ ಸುಧಾರಣಾ ಕ್ರಮವನ್ನೂ ಗಂಭೀರವಾಗಿ ಚಿಂತಿಸದೆ, ‘ವಿವೇಕ’ ಹೆಸರು ಮತ್ತು ಕೇಸರಿ ಬಣ್ಣದ ಮೂಲಕ ವಿದ್ಯಾರ್ಥಿಗಳ ಜ್ಞಾನಾರ್ಜನೆಯ ಮಾತುಗಳನ್ನಾಡುವುದು ಜವಾಬ್ದಾರಿಯುತ ಸ್ಥಾನಗಳಲ್ಲಿ ಇರುವವರಿಗೆ ಶೋಭಿಸುವುದಿಲ್ಲ.

ಮಕ್ಕಳ ಕಲಿಕೆಗೆ ಇಡೀ ಶಾಲಾ ಪರಿಸರ ಉತ್ಸಾಹ ತುಂಬುವಂತೆ ರೂಪುಗೊಳ್ಳಬೇಕೇ ವಿನಾ ಯಾವುದೋ ಒಂದು ಕೊಠಡಿಯಲ್ಲ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಳ್ಳುವ ತೀರ್ಮಾನಗಳಲ್ಲಿ ಮಕ್ಕಳ ಹಿತಾಸಕ್ತಿಯೇ ಮುಖ್ಯವಾಗಿರಬೇಕು ಹಾಗೂ ಆ ತೀರ್ಮಾನಗಳು ಎಲ್ಲರನ್ನೂ ಒಳಗೊಳ್ಳುವಂತಿರಬೇಕು. ದುರದೃಷ್ಟವಶಾತ್, ರಾಜ್ಯ ಸರ್ಕಾರದ ಇತ್ತೀಚಿನ ಕೆಲವು ನಿರ್ಧಾರಗಳಲ್ಲಿ ಶೈಕ್ಷಣಿಕ ಕಾಳಜಿ ಮತ್ತು ಮಕ್ಕಳ ಹಿತಾಸಕ್ತಿಗಿಂತಲೂ ರಾಜಕೀಯ ಸಂಗತಿಗಳೇ ಹೆಚ್ಚಾಗಿರುವಂತೆ ಕಾಣಿಸುತ್ತದೆ. ಇದೇ ಸರ್ಕಾರ, ಇಪ್ಪತ್ತೈದಕ್ಕೂ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಮುಚ್ಚುವ ಚಿಂತನೆ ನಡೆಸಿತ್ತು. ಮದರಸಾಗಳಲ್ಲಿನ ಪಠ್ಯಕ್ರಮವನ್ನು ಪರಿಷ್ಕರಿಸಬೇಕೆಂದು ಮುಸ್ಲಿಂ ಸಮುದಾಯದ ಕೆಲವರು ಮನವಿ ಮಾಡಿಕೊಂಡಿದ್ದು, ಆ ಬೇಡಿಕೆಯನ್ನು ಸರ್ಕಾರ ಪರಿಗಣಿಸಲಿದೆ ಎಂದು ಶಿಕ್ಷಣ ಸಚಿವರು ನೀಡಿದ ಹೇಳಿಕೆ ಕೂಡ ತಪ್ಪುಗ್ರಹಿಕೆ ಹಾಗೂ ಅನಗತ್ಯ ಗೊಂದಲಗಳಿಗೆ ಅವಕಾಶ ಕಲ್ಪಿಸಿತ್ತು. ಈಗ ವಿವೇಕಾನಂದರು ಮತ್ತು ಕೇಸರಿ ಬಣ್ಣವನ್ನು ಶಾಲಾ ಅಂಗಳಕ್ಕೆ ಎಳೆತರುವ ಮೂಲಕ, ಶಿಕ್ಷಣದ ಹೆಸರಿನಲ್ಲಿ ಮತ್ತೊಂದು ರಾಜಕೀಯ ಗದ್ದಲವನ್ನು ಸರ್ಕಾರ ಸೃಷ್ಟಿಸಿದೆ. ಈ ಗದ್ದಲದಿಂದ ಮಕ್ಕಳ ಶಿಕ್ಷಣಕ್ಕೆ ಯಾವ ಉಪಯೋಗವೂ ಇಲ್ಲ, ವಿವೇಕಾನಂದರು ಮತ್ತು ಕೇಸರಿ ಬಣ್ಣದ ಘನತೆಯೂ ಹೆಚ್ಚುವುದಿಲ್ಲ.

ದಿನದ ಟ್ವೀಟ್

ಹೊಸ ಹೊರೆ ಅಗತ್ಯವೇ?

ಆರ್‌ಬಿಐನ ಇತ್ತೀಚಿನ ಮಾರ್ಗಸೂಚಿಗಳ ಅನುಸಾರ, ಬ್ಯಾಂಕ್‌ಗಳಲ್ಲಿ ಸುರಕ್ಷತಾ ಲಾಕರ್ ಹೊಂದಿರುವವರು ₹ 200ರ ಛಾಪಾ ಕಾಗದದ ಮೇಲೆ ಹೊಸ ಒಪ್ಪಂದಕ್ಕೆ ಸಹಿ ಹಾಕಬೇಕು. ಹೆಚ್ಚಿನ ಗ್ರಾಹಕರಿಗೆ ಅರ್ಥಮಾಡಿಕೊಳ್ಳಲು ಕಷ್ಟವಾಗುವ ಅತ್ಯಂತ ಸಂಕೀರ್ಣವಾದ ಪಠ್ಯ ಇದರಲ್ಲಿದೆ. ಸಾಮಾನ್ಯವಾದ ಈ ಸೇವೆಗೆ ಇಂತಹದ್ದೊಂದು ದೊಡ್ಡ ದಾಖಲೆ ಮತ್ತು ಶುಲ್ಕದ ಹೊಸ ಹೊರೆ ಏಕೆ?

ಆನಂದ ಗುಂಡೂರಾವ್, ಬಿ-ಪ್ಯಾಕ್ ಸದಸ್ಯ

ಕಿಡಿನುಡಿ

ಕೋವಿಡ್ ಉತ್ತುಂಗದಲ್ಲಿದ್ದಾಗ, ಭಾರತೀಯ ವಿಮಾನ ನಿಲ್ದಾಣಗಳಲ್ಲಿ ಬಂದಿಳಿಯುವವರನ್ನು ಪತ್ತೆ ಹಚ್ಚುವ ಉದ್ದೇಶದೊಂದಿಗೆ ಸ್ವಯಂ ಘೋಷಿತ ನಮೂನೆಯಾದ ಏರ್‌ಸುವಿಧಾವನ್ನು ಜಾರಿಗೆ ತರಲಾಗಿತ್ತು. ಈಗ ಜನಜೀವನ ಸಹಜಸ್ಥಿತಿಗೆ ಬಂದಿರುವಾಗಲೂ ಭಾರತಕ್ಕೆ ಪ್ರಯಾಣಿಸುವವರು ಏರ್‌ಸುವಿಧಾ ಸಲ್ಲಿಸುವುದು ಇನ್ನೂ ಕಡ್ಡಾಯ ಆಗಿರುವುದೇಕೆ? ಈ ಅಗತ್ಯವನ್ನು ಮರುಪರಿಶೀಲಿಸಲು ಮತ್ತು ನಿಷ್ಕ್ರಿಯವಾಗಿರುವ ಅಧಿಕಾರಿಶಾಹಿಯನ್ನು ಚೇತನಗೊಳಿಸಲು ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ಆಗ್ರಹಿಸುತ್ತೇನೆ!

ಶಶಿ ತರೂರ್, ಕಾಂಗ್ರೆಸ್ ಸಂಸದ

25 ವರ್ಷಗಳ ಹಿಂದೆ

ಭಾನುವಾರ, 16-11-1997

• **ಕೃಷ್ಣಾ 2ನೇ ಹಂತಕ್ಕೆ ಅನುಮತಿಗೆ ಮನವಿ**

ನವದೆಹಲಿ, ನ. 15– ಕೃಷ್ಣಾ ನದಿ ನೀರಿನ ಬಗೆಗೆ ಬಚಾವತ್ ಆಯೋಗ ನೀಡಿರುವ ತೀರ್ಪಿನಂತೆ, ಎರಡು ಸಾವಿರ ಇಸವಿಯೊಳಗೆ ಕರ್ನಾಟಕವು ತನ್ನ ಪಾಲಿನ ನೀರಿನ ಬಳಕೆಯನ್ನು ಮಾಡಿಕೊಳ್ಳಲು ಸಹಾಯವಾಗುವಂತೆ ಕೃಷ್ಣಾ ಮೇಲ್ದಂಡೆ ಎರಡನೇ ಹಂತದ ಯೋಜನೆಗಳಿಗೆ ಅನುಮತಿ ನೀಡಬೇಕೆಂದು ಕರ್ನಾಟಕದ ಭಾರಿ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಅವರು ಯೋಜನಾ ಆಯೋಗಕ್ಕೆ ಮನವಿ ಮಾಡಿದ್ದಾರೆ.

• **ಚುನಾವಣೆ ಸುಧಾರಣೆಗಳ ಚರ್ಚೆಗೆ ವಿಶೇಷ ಅಧಿವೇಶನ**

ಕಲ್ಕತ್ತ, ನ. 15– ಚುನಾವಣಾ ಸುಧಾರಣೆಗಳ ಕುರಿತ ಸಮಗ್ರ ಅಧ್ಯಯನ ವರದಿಯೊಂದನ್ನು ಲೋಕಸಭಾಧ್ಯಕ್ಷ ಪಿ.ವಿ. ಸಂಗ್ಮಾ ಅವರು ಸಿದ್ಧ-ಪಡಿಸುತ್ತಿದ್ದು, ಈ ಕುರಿತು ಚರ್ಚೆ ನಡೆಸಲು ಶೀಘ್ರದಲ್ಲಿ ಸಂಸತ್ತಿನ ಎರಡು ದಿನಗಳ ವಿಶೇಷ ಅಧಿವೇಶನ ನಡೆಯಲಿದೆ.

50 ವರ್ಷಗಳ ಹಿಂದೆ

ಗುರುವಾರ, 16-11-1972

• **ಪಾಕಿಸ್ತಾನದ ಬಗೆಗೆ ಭಾರತದ ಸಹಾನುಭೂತಿಗೆ ಭುಟ್ಟೋ ಕರೆ**

ಮುಂಬೈ, ನ. 15– ಪಾಕಿಸ್ತಾನದ ಪರಿಸ್ಥಿತಿಯನ್ನು ಉಭಯ ದೇಶಗಳ ಸೌಹಾರ್ದಯುತ ಸಂಬಂಧದ ದೃಷ್ಟಿಯಿಂದ ಭಾರತವು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಬೇಕು ಎಂದು ಅಧ್ಯಕ್ಷ ಭುಟ್ಟೋ ಮನವಿ ಮಾಡಿಕೊಂಡಿದ್ದಾರೆ.

ಏಕೆಂದರೆ ಪಾಕಿಸ್ತಾನವು ಎರಡು ಅತಿ ಕ್ಲಿಷ್ಟಕರ ನಿರ್ಧಾರಗಳನ್ನು ಕೈಗೊಳ್ಳಬೇಕಾಗಿದೆ ಎಂದೂ ಅವರು ತಿಳಿಸಿದ್ದಾರೆ.

• **ಅರಸು ಸಂಪುಟದ ವಿರುದ್ಧ ಅವಿಶ್ವಾಸ ಸೂಚನೆ ಮಂಡನೆ**

ಕಲ್ಬುರ್ಗಿ, ನ. 15– ರಾಜ್ಯದ ವಿಧಾನ ಮಂಡಲದ ಮುಂಬರುವ ಅಧಿವೇಶನದಲ್ಲಿ ಅರಸು ಮಂತ್ರಿಮಂಡಲದ ವಿರುದ್ಧ ಸಂಸ್ಥಾ ಕಾಂಗ್ರೆಸ್ ಪಕ್ಷ ಅವಿಶ್ವಾಸ ನಿರ್ಣಯ ಮಂಡಿಸುವುದೆಂದು ಪಕ್ಷದ ಮೂಲಗಳು ತಿಳಿಸಿವೆ.

ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಕ್ಷಾಮ ಪರಿಸ್ಥಿತಿ ಎದುರಿಸುವಲ್ಲಿ ಅರಸು ನೇತೃತ್ವದ ಸರ್ಕಾರ ವಿಫಲವಾಗಿದೆಯೆಂದು ಸಂಸ್ಥಾ ಕಾಂಗ್ರೆಸ್ ಭಾವಿಸಿದೆ.

ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ; ಅಣ್ಣನ ಮಾತು ಅರ್ಥವಾದೀತೆಂದು?

ಪ್ರತಿಮಾ ನಾಟಕ: ಓಲೈಕೆಯೇ ಕಾಯಕ

ಗತಿಬಿಂಬ

ವೈ.ಗ.ಜಗದೀಶ್

‘ದೇಶ ಸುತ್ತುವ ಹೊತ್ತಿನಲ್ಲಿ ಕಾಣಸಿಗುವ ಪ್ರತಿಮಾರೂಪದ ರಾಜರ ಕೈಯಲ್ಲಿ ಕತ್ತಿ ರಾರಾಜಿಸುವುದನ್ನು ನೋಡುತ್ತೇವೆ. ಕರ್ನಾಟಕ ರಾಜ್ಯದಲ್ಲಿರುವ ಪ್ರತಿಮೆಗಳ ಪೈಕಿ ನನ್ನ ಮುತ್ತಾತ ಕಿಟೆಲ್ ಅವರ ಪ್ರತಿಮೆಗಳ ಕೈಯಲ್ಲಿ ಮಾತ್ರ ಪುಸ್ತಕ ನೋಡಿದೆ. ಅವರು ಜ್ಞಾನದ ಮೂಲಕ ಎಲ್ಲರನ್ನೂ ಗೆಲ್ಲಲು ಪ್ರಯತ್ನಿಸಿದರು- ಬಹುಶಃ ಅವರು ಬಳಸಿದ ಒಂದೇ ಆಯುಧ ಎಂದರೆ ಅದು ಲೇಖನಿ; ಅದು ಒಂದು ರೆಕ್ಕೆಯ ಪುಕ್ಕವಾಗಿದ್ದಿರಬಹುದು...’

1894ರ ಸುಮಾರಿಗೆ 70 ಸಾವಿರ ಕನ್ನಡ ಪದಗಳು, ಅವುಗಳ ಬಳಕೆಯ ವಿಧಾನದ ವಿವರ ಇರುವ ಕನ್ನಡ-ಇಂಗ್ಲಿಷ್ ನಿಘಂಟನ್ನು ಕನ್ನಡಕ್ಕೆ ಕೊಟ್ಟ ರೆವರೆಂಡ್ ಫರ್ಡಿನಾಂಡ್ ಕಿಟೆಲ್ ಅವರ ಮರಿ ಮೊಮ್ಮಗ ಯುವೆಸ್ ಪ್ಯಾಟ್ರಿಕ್ ಮೇಯರ್ ತಮ್ಮ ಮುತ್ತಜ್ಜನನ್ನು ನೆನಪಿಸಿಕೊಂಡಿದ್ದು ಹೀಗೆ. ಜರ್ಮನಿಯವರಾದ ಕಿಟೆಲ್ ಧರ್ಮಪ್ರಚಾರಕರಾಗಿ ಕನ್ನಡ ನಾಡಿಗೆ ಕಾಲಿಟ್ಟರೂ ಮಾಡಿದ್ದು ಮಾತ್ರ ಕನ್ನಡದ ಕೆಲಸ. ಸಂಚಯ ಹಾಗೂ ಸಂಚಿ ಫೌಂಡೇಷನ್ ಸೇರಿಕೊಂಡು ‘ಕರ್ನಾಟ ಎಫ್-ಕಿಟೆಲ್’ ಎಂಬ ಹೆಸರಿನಡಿ ಕನ್ನಡದ ಹಳೆಯ ಫಾಂಟ್‌ವೊಂದನ್ನು ಮರುವಿನ್ಯಾಸಗೊಳಿಸಿವೆ. ಅದನ್ನು ಬಿಡುಗಡೆ ಮಾಡಲೋಸುಗ ಯುವೆಸ್ ಬೆಂಗಳೂರಿಗೆ ಬಂದಿದ್ದರು. ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣಗೊಂಡ ಎರಡೇ ದಿನಗಳಲ್ಲಿ ಈ ಕಾರ್ಯಕ್ರಮ ನಡೆಯಿತು. ಧರ್ಮಪ್ರಚಾರಕ್ಕೆ ಬಂದಿದ್ದ ಕಿಟೆಲ್ ಹೀಗೆ ಕನ್ನಡದ ಮನಸ್ಸುಗಳನ್ನು ಕಟ್ಟಿ, ಕನ್ನಡದ ಸೊಬಗನ್ನು ಜಗತ್ತಿಗೆ ಪರಿಚಯಿಸುವ ಕೆಲಸ ಮಾಡಿದರು.

‘ಸಂವಿಧಾನದ ಆಶಯಕ್ಕೆ ಅನುಗುಣವಾಗಿ, ಜಾತ್ಯತೀತ- ಧರ್ಮಾತೀತವಾಗಿ ಅಧಿಕಾರ ಚಲಾಯಿಸುತ್ತೇನೆ’ ಎಂದು ಪ್ರತಿಜ್ಞೆ ಸ್ವೀಕರಿಸಿದ ಪ್ರಧಾನಿ ನರೇಂದ್ರ ಮೋದಿಯವರು ಈ ಔದಾರ್ಯ ತೋರಲಿಲ್ಲ. ‘ಜಾತಿ ಹೆಸರಲ್ಲಿ ರಾಜಕಾರಣ ಮಾಡುತ್ತಾರೆ’ ಎಂದು ವಿರೋಧ ಪಕ್ಷಗಳ ನಾಯಕರನ್ನು ಟೀಕಿಸುವ ಮೋದಿಯವರು, ವಿಶಾಲ ದೂರದೃಷ್ಟಿ ಹೊಂದಿದ್ದ ಕೆಂಪೇಗೌಡರನ್ನು ಒಂದು ಜಾತಿಗೆ ಸೀಮಿತವಾಗಿಸುವ ಯತ್ನ ನಡೆಸಿದ್ದು ಅವರ ಘನತೆಗೆ ತಕ್ಕುದಲ್ಲ.

ಚುನಾವಣೆ ಹೊತ್ತಿನೊಳಗೆ ಪ್ರತಿಮೆ ಮುಂದಿಟ್ಟುಕೊಂಡು ಇಂತಹ ನಾಟಕಗಳು ಮೊದಲಾಗುವುದು ಹೊಸತೇನಲ್ಲ. ಬೆಂಗಳೂರನ್ನು ಕಟ್ಟಿದ ಕೀರ್ತಿ ಹೊತ್ತ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಕೂಡ ಮತ ಸೆಳೆಯುವ ಒಂದು ನಾಟಕದ ಭಾಗವಾಗಿದ್ದು ವಿಪರ್ಯಾಸ. ಹಳೆ ಮೈಸೂರು ವ್ಯಾಪ್ತಿಯ ಒಕ್ಕಲಿಗ ಪ್ರಾಬಲ್ಯದ ಮತಕ್ಷೇತ್ರಗಳು ಇವತ್ತಿಗೂ ಜೆಡಿಎಸ್ ಹಾಗೂ ಕಾಂಗ್ರೆಸ್‌ನ ಕೋಟೆಯೇ ಆಗಿವೆ. ಹಾಸನ, ಮಂಡ್ಯ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಬಿಜೆಪಿಗೆ ತಳವೇ ಇಲ್ಲ. ತುಮಕೂರಿನಲ್ಲಿ ಆಯಾ ಕಾಲದ ವಿದ್ಯಮಾನಗಳಿಂದಾಗಿ ಬಿಜೆಪಿ ಗೆದ್ದಿದೆ. 2023ರ ವಿಧಾನಸಭೆ ಚುನಾವಣೆಯಲ್ಲಿ ಈ ಪ್ರದೇಶಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಬೇಕೆಂಬ ಮಹದಾಸೆಯಿಂದ ರೂಪುಗೊಂಡಿದ್ದೇ ‘ಪ್ರತಿಮಾ ನಾಟಕ’. ಕೆಂಪೇಗೌಡರ ಪ್ರತಿಮೆ ಅನಾವರಣದ ಭಾಗವಾಗಿ ಎಲ್ಲ ಜಿಲ್ಲೆಗಳ ಐತಿಹಾಸಿಕ ಕ್ಷೇತ್ರಗಳಿಂದ ಮೃತ್ತಿಕೆ (ಮಣ್ಣು) ಸಂಗ್ರಹಿಸುವ ಯಾತ್ರೆಯನ್ನೂ ಬಿಜೆಪಿ ನೇತೃತ್ವದ ಸರ್ಕಾರವು ಜನರ ದುಡ್ಡಿನಲ್ಲಿ ನಡೆಸಿತು. ಮೃತ್ತಿಕೆ ಹೆಸರಿನಲ್ಲಿ ಮತಬ್ಯಾಂಕ್ ಭದ್ರಪಡಿಸುವ ಪ್ರಯತ್ನವನ್ನೂ ಮಾಡಿತು. ಸರ್ಕಾರ ನಡೆಸುವ ಪಕ್ಷವೊಂದು ಅಧಿಕಾರವನ್ನು ತನ್ನ ಪಕ್ಷದ ಹಿತಕ್ಕೆ, ಸಂಘಟನೆಗೆ ಬಳಸಿಕೊಳ್ಳುವುದು ಇದೇನೂ ಮೊದಲಲ್ಲ.

ಕೆಂಪೇಗೌಡರ ಪ್ರತಿಮೆ ಅನಾವರಣದ ಸರ್ಕಾರಿ ಕಾರ್ಯಕ್ರಮವನ್ನು ಪಕ್ಷದ ವೇದಿಕೆಯಾಗಿ ಬಳಸಿ, ನಾಡು ಕಟ್ಟಿದ್ದೇ ತಾವು ಎಂದು ಬಿಂಬಿಸಿಕೊಳ್ಳಲು ಹೊರಟಿದ್ದನ್ನು ನೋಡಿದರೆ ಇದರಲ್ಲಿ ಬಿಜೆಪಿಯ ರಾಜಕಾರಣದ ನೆರಳು ಕಾಣುತ್ತದೆ. ಬೆಂಗಳೂರು ನಗರದ ನೆಲೆಗಟ್ಟು ಹಾಕಿಕೊಟ್ಟವರೇ ಕೆಂಪೇಗೌಡರು. ಬೆಂಗಳೂರು ವಿಶ್ವಖ್ಯಾತಿ ಪಡೆಯಲು ಇಲ್ಲಿಯ ತಂಪನೆಯ ಹವಾಮಾನದ ಜತೆಗೆ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಾದ ಬೃಹತ್ ನೆಗೆತವೂ ಕಾರಣ. ಮಾಹಿತಿ ತಂತ್ರಜ್ಞಾನಕ್ಕೆ ಮೊದಲು ನೆಲೆ ಒದಗಿಸಿದ್ದು ಎಲೆಕ್ಟ್ರಾನಿಕ್ ಸಿಟಿಯ ಕಲ್ಪನೆ. ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಯೋಜನೆಯ ರೂಪದಲ್ಲಿದ್ದ ‘ಐಟಿ ನಗರ’ಕ್ಕೆ ನಿಜವಾದ ಅಸ್ತಿಭಾರ ಹಾಕಿದವರು ನಂತರ ಮುಖ್ಯಮಂತ್ರಿಯಾದ ಎಚ್.ಡಿ. ದೇವೇಗೌಡರು. ಆ ಬಳಿಕ ಮುಖ್ಯಮಂತ್ರಿಗಳಾದವರೂ ಇದಕ್ಕೆ ಎಲ್ಲ ಸಹಕಾರವನ್ನು ಕೊಟ್ಟರು. ಕೆಂಪೇಗೌಡರ ಪ್ರತಿಮೆ ಇರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಲ್ಪನೆಗೆ ಇಂಬು ದೊರೆತದ್ದು ದೇವೇಗೌಡರು ಪ್ರಧಾನಿ ಆಗಿದ್ದಾಗ. ಎನ್‌ಡಿಎ ಆಳ್ವಿಕೆಯಲ್ಲಿ ಇದಕ್ಕೆ ಒತ್ತಾಸೆಯಾಗಿ ನಿಂತವರು ಕೇಂದ್ರ ಸಚಿವರಾಗಿದ್ದ ಎಚ್.ಎನ್. ಅನಂತಕುಮಾರ್. ಜಾಗ ಕೊಟ್ಟು ಅದನ್ನು ಪೋಷಿಸಿದವರು ಹಾಗೂ ಬೆಂಗಳೂರಿನ ಈ ಪ್ರಮಾಣದ ಹೆಗ್ಗಳಿಕೆಗಳಿಗೆ ಕಾರಣರಾದವರು ಎಸ್.ಎಂ. ಕೃಷ್ಣ. ಪ್ರಧಾನಿ ಮೋದಿಯವರು ಪಾಲ್ಗೊಂಡ ಕಾರ್ಯಕ್ರಮಕ್ಕೆ ಸಂಬಂಧಿಸಿದ ಆಹ್ವಾನ ಪತ್ರಿಕೆಯಲ್ಲಿ ರಾಜ್ಯಸಭಾ ಸದಸ್ಯರೂ ಆಗಿರುವ ದೇವೇಗೌಡ, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್ ಅವರ ಹೆಸರನ್ನು ಶಿಷ್ಟಾಚಾರದ ಅನುಸಾರ ಸೇರಿಸಬೇಕಾಗಿತ್ತು. ದೇವೇಗೌಡರು ವೇದಿಕೆಯೇರಿದರೆ ಒಕ್ಕಲಿಗರ ‘ಹಕ್ಕುಸ್ವಾಮ್ಯ’ ಅವರ ಪಹಣಿಗೆ ಸೇರಿಹೋಗುತ್ತದೆ ಎಂಬ ಭಯದಿಂದ ಅವರನ್ನು ನೆಪಮಾತ್ರಕ್ಕೆ ಕರೆದಂತೆ ಮಾಡಿದ್ದು ಒಪ್ಪುವಂತಹದ್ದಲ್ಲ.



ಜನನಾಯಕರು ಸೃಷ್ಟಿಸಿದ ಆದರ್ಶಗಳು, ಹಾಕಿಕೊಟ್ಟ ಮಾದರಿಗಳನ್ನು ನೆನಪಿಸುವ ಕಾರಣಕ್ಕೆ ಪ್ರತಿಮೆ ಸ್ಥಾಪನೆ ಚಾಲ್ತಿಗೆ ಬಂದಿದೆ. ಆ ಕಾಲಕ್ಕೆ ನವನಗರದ ಪರಿಕಲ್ಪನೆ ಹೊಂದಿದ್ದ ಕೆಂಪೇಗೌಡರು ಸುಸಜ್ಜಿತ ನಗರವನ್ನು ಕಟ್ಟಿದ್ದಲ್ಲದೇ ಕೆರೆಗಳನ್ನು ನಿರ್ಮಿಸಿದ್ದರು. ಆದರೆ, ಕೆರೆಗಳನ್ನು ಒಡೆದು ನೀರು ಬತ್ತಿಸಿ ಕೆರೆ ಅಂಗಳವನ್ನು ಬಡಾವಣೆಗಳನ್ನಾಗಿ ಮಾಡಲಾಗಿದೆ. ನಗರಕ್ಕೆ ಒಂದು ಸುಸಜ್ಜಿತ ವ್ಯವಸ್ಥೆಯೇ ಇಲ್ಲ. ಸಂಚಾರ ಸಮಸ್ಯೆಯಂತೂ ವಿಶ್ವದ ಯಾವುದೇ ನಗರದ ಎದುರು ತಲೆ ತಗ್ಗಿಸುವಂತಿದೆ. ಕೆಂಪೇಗೌಡರ ಪ್ರತಿಮೆಗೆ ನೀಡಿದ ಆದ್ಯತೆಯನ್ನು, ಅವರು ಸೃಜಿಸಿದ ನಗರದ ಮರುಸೃಷ್ಟಿಗೆ ನೀಡದಿದ್ದರೆ ಪ್ರತಿಮೆಯಿಂದಾಗುವ ಪ್ರಯೋಜನವಾದರೂ ಏನು?

ಒಂದು ಮಳೆಗೆ ಬೆಂಗಳೂರು ಹೊಳೆಯಾಗಿ ತೆಪ್ಪದಲ್ಲಿ ಓಡಾಡುವ ಪರಿಸ್ಥಿತಿ ಇದೆ, ಕಾರು-ಬಸ್‌ಗಳೇ ತೇಲಾಡುತ್ತವೆ. ಬೆಂಗಳೂರಿನ ಗುಂಡಿಗಳಿಂದ ಈ ವರ್ಷದಲ್ಲೇ ಏಳು ಜನರ ಜೀವ ಹೋಗಿದೆ. ದೇಶದ ಗಡಿಯಲ್ಲಿ ಬಂದೂಕಿನ ಗುಂಡಿಗೆ ಹೆದರದೇ ಸೇನೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದ ಯೋಧರೊಬ್ಬರು ರಸ್ತೆಗುಂಡಿಗೆ ಬಿದ್ದು ಜೀವ ಕಳೆದುಕೊಂಡ ಘಟನೆ ಮಂಡ್ಯದಲ್ಲಿ ನಡೆದಿದೆ. ನಗರ ನಿರ್ಮಾತೃ ಕೆಂಪೇಗೌಡರ ಆದರ್ಶವನ್ನು ಮೃತ್ತಿಕೆ ಹೆಸರಿನಲ್ಲಿ ಮಂಡ್ಯ-ಮೈಸೂರಿಗೆ ಕೊಂಡೊಯ್ದ ಆಳುವ ಬಿಜೆಪಿ ನಾಯಕರು, ಕೆಂಪೇಗೌಡರ ಆದರ್ಶಮಯ ನಗರ ವಿನ್ಯಾಸಕ್ಕೆ ಒತ್ತುಕೊಡಲಿಲ್ಲವೇಕೆ? ಪ್ರತಿಮೆಗಳು ನೋಡಲು ಚೆಂದವಿದ್ದರೆ ಸಾಲದು, ಅವು ನಮ್ಮ ನಡೆ-ನುಡಿ, ಆಡಳಿತಕ್ಕೆ ಮಾರ್ಗದರ್ಶನವಾದರಷ್ಟೇ ನಾಡವರ ಬದುಕು ಹಸನಾದೀತು.

‘ದೇವಾಲಯಗಳು ಒಂದು ಜಾತಿಯ ಕೇಂದ್ರವಾಗಿದ್ದುಕೊಂಡು, ದೇವರನ್ನು ಜನರಿಂದ ದೂರವಾಗಿಸುವ ಕೆಲಸ ಮಾಡುತ್ತಿವೆ. ಅಸ್ಪೃಶ್ಯತೆ, ಮೇಲು-ಕೀಳಿನ ಶ್ರೇಣೀಕೃತ ವ್ಯವಸ್ಥೆಯ ಜಾಗಗಳಾಗಿವೆ’ ಎಂಬ ಕಾರಣಕ್ಕಾಗಿಯೇ ಬಸವಣ್ಣನವರು, ‘ಎನ್ನ ಕಾಲೇ ಕಂಬ, ದೇಹವೇ ದೇಗುಲ’ದ ಕಲ್ಪನೆ ಕೊಟ್ಟರು. ‘ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ’ ಎಂದೂ ಘೋಷಿಸಿದರು. ಆದರೆ, ಆ ಬಸವಣ್ಣನವರನ್ನೇ ಸ್ಥಾವರವಾಗಿಸಿ, ಅವರ ಜಂಗಮತತ್ವದ ಕಲ್ಪನೆಯನ್ನೇ ಬುಡಮೇಲಾಗಿಸುವ ಕೆಲಸಗಳೂ ನಡೆಯುತ್ತಲೇ ಇವೆ. ಚಿತ್ರದುರ್ಗದ ಐತಿಹಾಸಿಕ ಮುರುಘಾ ಮಠದ ಆವರಣದಲ್ಲಿ 325 ಅಡಿ ಎತ್ತರದ ಬಸವಣ್ಣನವರ ಕಂಚಿನ ಪ್ರತಿಮೆಯನ್ನು ಸ್ಥಾಪಿಸುವ ಯೋಜನೆಯನ್ನು ಪೀಠಾಧಿಪತಿ ಹಾಕಿಕೊಂಡಿದ್ದರು. ಬಸವಣ್ಣನವರ ತತ್ವಾದರ್ಶ ಪಾಲಿಸುವುದಾಗಿ ಹೇಳುತ್ತಿದ್ದ ಶಿವಮೂರ್ತಿ ಅವರು ಈಗ ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾರೆ.

ಅಳಿದುಹೋದವರ ಆದರ್ಶಗಳನ್ನು ಜನರ ಮಧ್ಯೆ ಬಿತ್ತಿ, ಅವುಗಳನ್ನು ಜೀವಂತವಾಗಿ ಇರಿಸಲು ಪ್ರತಿಮೆಗಳು ಬೇಕು. ಆದರೆ, ಅವು 100-200 ಅಡಿಗಳಷ್ಟು ಎತ್ತರವೇ ಇರಬೇಕೆಂದಿಲ್ಲ. ಮೂರ್ತಿ ಚಿಕ್ಕದಾದ ಮಾತ್ರಕ್ಕೆ, ನಾಡು ಬೆಳಗಿದವರ ಆದರ್ಶವೇನೂ ಕುಗ್ಗಿಹೋಗುವುದಿಲ್ಲ. ಎತ್ತರೆತ್ತರಕ್ಕೆ ಪ್ರತಿಮೆ ಸ್ಥಾಪಿಸುವ ಪೈಪೋಟಿಗೆ ಬಿದ್ದವರಿಗೆ ಇದು ಅರ್ಥವಾಗಬೇಕಷ್ಟೆ.

ಚುರುಮುರಿ

ಕೇಸರಿ ಕಳವಳ

• ಮಣ್ಣೆರಾಜು

‘ಶಾಲೆಗಳಿಗೆ ಸುಣ್ಣ, ಬಣ್ಣ ಬಳಿಯುವುದನ್ನೂ ವಿರೋಧ ಪಕ್ಷದವರು ವಿರೋಧಿಸೋದು ಸರಿಯೇನ್ರೀ?’ ಸುಮಿಯ ಆಕ್ಷೇಪ.

‘ಬಳಿಯಲಿ, ಕೇಸರಿ ಬಣ್ಣವನ್ನೇ ಯಾಕೆ ಬಳಿಯಬೇಕು. ಸರ್ಕಾರಕ್ಕೆ ಬೇರೆ ಬಣ್ಣಗಳ ಬರವೇ ಎಂದು ವಿಪಕ್ಷದವರು ಕೇಳ್ತಿದ್ದಾರೆ’ ಅಂದ ಶಂಕ್ರಿ.

‘ಕೇಸರಿ ಬಳಿದರೆ ತಪ್ಪೇನು ಎಂದೂ ಕೇಳಿರುವ ಸಿ.ಎಂ, ವಿವೇಕಾನಂದರ ಕಾವಿ ಕಲರ್, ತ್ರಿವರ್ಣ ಧ್ವಜದ ಕೇಸರಿ ಬಣ್ಣದ ಮಹತ್ವವನ್ನು ಬಣ್ಣನೆ ಮಾಡಿ ಬೆನ್ನು ತಟ್ಟಿಕೊಂಡಿದ್ದಾರೆ’.

‘ಕೇಸರಿ ಬಿಜೆಪಿಯವರ ಒಲವಿನ ಬಣ್ಣ, ಅದು ಪ್ರತಿಪಕ್ಷಗಳ ಕಣ್ಣಿಗೆ ಸುಣ್ಣ ಅಂತೆ. ಹಾಗಾಗಿ ಕೇಸರಿ ಕಂಡರೆ ವಿರೋಧ ಪಕ್ಷದವರು ಕೆರಳಿದ ಕೇಸರಿಯಂತಾಗಿದ್ದಾರೆ. ಬಿಜೆಪಿಯವರು ಬಣ್ಣ ಬದಲಾಯಿಸಲೇಬೇಕು ಎಂದು ಒತ್ತಾಯಿಸಿದ್ದಾರೆ’.

‘ಒಂದೊಂದು ಚುನಾವಣೆಗೆ ಒಂದೊಂದು ಬಣ್ಣ ಬದಲಾಯಿಸುವ ಪಕ್ಷ ನಮ್ಮದಲ್ಲ. ಹಳದಿ ಕಣ್ಣಿನವರಿಗೆ ಕಾಣುವುದೆಲ್ಲಾ ಹಳದಿ ಅನ್ನುವಂತೆ ಪ್ರತಿಪಕ್ಷದವರಿಗೆ ಬಿಜೆಪಿ ಕಾರ್ಯಕ್ರಮಗಳೆಲ್ಲಾ ಕೇಸರಿಯಾಗಿ ಕಂಡರೆ ಅದು ಅವರಿಗಿರುವ ದೃಷ್ಟಿದೋಷ ಅಂತ ಬಿಜೆಪಿಯವರೂ ಬಣ್ಣ ಎರಚಿದ್ದಾರೆ’.

‘ಮಾಸಿಹೋಗುವ ಗೋಡೆ ಬಣ್ಣದ ವಿಚಾರವನ್ನು ಇಷ್ಟೆಲ್ಲಾ ಬಣ್ಣ ಕಟ್ಟಿ ವಿವಾದ ಮಾಡಬೇಕೆ?’

‘ಸರ್ಕಾರ ಶಿಕ್ಷಣವನ್ನು ಕೇಸರೀಕರಣ ಮಾಡಲು ಹೊರಟಿದೆ. ಶಾಲೆಗಳಿಗೆ ಕೇಸರಿ ಬಳಿಯುವುದರ ಹಿಂದೆ ಬಿಜೆಪಿಯ ಚುನಾವಣಾ ತಂತ್ರವೂ ಇದೆ ಅಂತ ವಿರೋಧ ಪಕ್ಷದವರಿಗೆ ಅನುಮಾನ ಬಂದಿರಬಹುದು’.

‘ಶಾಲಾ ಮಕ್ಕಳಿಗೆ ಕೇಸರಿ ಸಮವಸ್ತ್ರ ಜಾರಿಗೆ ತರಬಹುದು ಅಂತನಾ?’

‘ಅಲ್ಲ. ಎಲೆಕ್ಷನ್ ಟೈಮ್‌ನಲ್ಲಿ ಕೇಸರಿ ಬಣ್ಣದ ಶಾಲೆಗಳು ಮತಕೇಂದ್ರಗಳಾದರೆ ಬಿಜೆಪಿ ಬಣ್ಣಕ್ಕೆ ಮತದಾರರು ಮರುಳಾಗಿಬಿಡುತ್ತಾರೇನೋ ಎಂಬ ಆತಂಕ ವಿಪಕ್ಷ ನಾಯಕರಿಗೆ ಇರಬಹುದು...’ ಅಂದ ಶಂಕ್ರಿ.

ಸಂಗತ

ದಿವ್ಯ ಪ್ರಣತಿ: ಪುಸ್ತಕ ಸಂಸ್ಕೃತಿ

ದೇಶದ ಪ್ರತಿಯೊಂದು ಹಳ್ಳಿಯಲ್ಲೂ ಗ್ರಂಥಾಲಯದ ಜೊತೆಗೆ ಅಂತರ್ಜಾಲ ಸೌಲಭ್ಯವನ್ನು ಒದಗಿಸುವುದು ಅತ್ಯಂತ ಜರೂರಿನ ಕರ್ತವ್ಯವಾಗಿದೆ

• ದೊಡ್ಡರಂಗೇಗೌಡ

ಮಾನವನ ಅವತರಣ ಈ ಭುವಿಯ ಮೇಲೆ ಆದ ದಿನದಿಂದಲೂ ಅನ್ವೇಷಣ ಪ್ರವೃತ್ತಿ ಅವನ ಉಸಿರಲ್ಲಿ ಉಸಿರಾಗಿ ಬೆರೆತುಹೋಯಿತು. ಈ ಕಾರಣದಿಂದ ಹುಡುಕಾಟ ಅವನ ನಿರಂತರ ಪ್ರವೃತ್ತಿಯಾಯಿತು.

ಆದಿವಾಸಿಗಳ ಹಿರಿಯರು ತಮ್ಮ ಜೀವನಾನುಭವಗಳಿಂದ ವಯೋವೃದ್ಧರಾಗುವ ಜೊತೆ ಜೊತೆಗೆ ಜ್ಞಾನವೃದ್ಧರೂ ಆಗಿರುತ್ತಿದ್ದರು. ಕಿರಿಯರು ಅಂಥ ಹಿರಿಯರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದರು, ಕಲಿಯುತ್ತಿದ್ದರು, ಬೆಳೆಯುತ್ತಿದ್ದರು. ಆಗೆಲ್ಲಾ ಇನ್ನೂ ಅಕ್ಷರಗಳ ಬರಹವನ್ನು ಮಾನವ ಕಂಡುಕೊಂಡಿರಲಿಲ್ಲ. ಆಗ ಇದ್ದುದ್ದು ಒಂದೇ. ತೋಂಡಿ ಸಂಪ್ರದಾಯ. ಅಂದರೆ, ಮೌಖಿಕ ಕಲಿಕೆ. ಹಿರಿಯರಿಂದ ಕಿರಿಯರಿಗೆ ಬಾಯಿಪಾಠ ಮಾಡಿಸುವ ರೂಢಿ. ಅದೇ ಕಂಠಪಾಠ. ಸ್ಮೃತಿಗಳು ಉಳಿದುಬಂದದ್ದು ಹಾಗೆ. ಬೆಳೆದು ಬಂದದ್ದೂ ಹಾಗೇನೇ.

ಮಾನವ ಎಂದು ಅಕ್ಷರವನ್ನು ಕಲಿತುಕೊಂಡನೋ ಅಂದೇ ಮನುಕುಲದ ಮಹಾದಿನ. ಪರ್ವಕ್ಷಣ. ಅಕ್ಷರವು ಭಾವನಾ ಭಾಷೆಯ ಸಂಕೇತ. ಅಭಿವ್ಯಕ್ತಿ ಮಾಧ್ಯಮದಲ್ಲಿ ಇದು ಮಹತ್ತರ ಮೈಲಿಗಲ್ಲು. ವಾಸ್ತವವಾಗಿ ಇದೂ ಒಂದು ಸಾಧನೆಯ ಪ್ರಮುಖ ಮಜಲು. ಮುಂದಿನ ಪ್ರಗತಿಗೆ ಮೆಟ್ಟಿಲು.

ಜ್ಞಾನಾನ್ವೇಷಕರು ಈ ದಾರಿಯಲ್ಲಿ ಸಾಗಿದರು. ಮಹತ್ವಪೂರ್ಣ ಮಾಹಿತಿಗಳ ಜ್ಞಾನ ಸಂಗ್ರಹ ಸಾಧ್ಯವಾಗಿದ್ದು ಅಧ್ಯಯನದಿಂದ. ಜ್ಞಾನಾಭಿಮುಖಿಗಳಾಗಿ ಗ್ರಂಥಗಳ ಓದಿನಿಂದ ವ್ಯಕ್ತಿತ್ವಗಳನ್ನು ವಿಕಾಸಗೊಳಿಸಿಕೊಂಡರು. ಹಿರಿಯರು ಬರೆದಿಟ್ಟ ಕೃತಿಗಳನ್ನು (ತಾಳೆಗರಿಗಳ ಮೇಲೆ ಲೆಕ್ಕಣಿಕೆಯಿಂದ ಕೊರೆದಿಟ್ಟದ್ದನ್ನು) ಓದಿದ್ದರಿಂದ ವಿಷಯಗಳನ್ನು ಅರಿತುಕೊಂಡರು. ಕೊರೆದದ್ದು ಗ್ರಂಥ! ಕಟ್ಟಿದ್ದು ಗ್ರಂಥ! ಇಂಥ ಗ್ರಂಥ ಸಮುದಾಯವನ್ನು ಒಂದೊಂದಾಗಿ ಪಠಿಸಿದ್ದರಿಂದ ಕಂಠಸ್ಥವಾಯಿತು. ಚಿಂತನೆ ನಡೆಸಿದ್ದರಿಂದ, ಮಂಥನ ಮಾಡಿದ್ದರಿಂದ ಜ್ಞಾನ ವೈಶಾಲ್ಯ ಅರಿಯಲು ನಾಂದಿಯಾಯಿತು. ಪಾಂಡಿತ್ಯಗಳನ್ನು ಹಿರಿಯರು ಗಳಿಸಿದ್ದು ಹೀಗೇನೆ.

ಜನಮನದಲ್ಲಿ ವಾಚನಾಭಿರುಚಿ ಹೆಚ್ಚಿದ್ದರಿಂದ ಪುಸ್ತಕಗಳ ಸಂಖ್ಯೆ ಹೆಚ್ಚುಹೆಚ್ಚಾಗಿ ಬೆಳೆಯಿತು. ಲೇಖಕರ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು.

ಪುಸ್ತಕವು ಜ್ಞಾನದ ಕೈದೀವಿಗೆ. ಹೃದಯದ ಕತ್ತಲೆಯನ್ನು ಓಡಿಸುವ ಬೆಳಕಿನ ದೊಂದಿ. ಸುತ್ತಣ ಪರಿಸರ ಅರಿಯುವ ಅರಿವಿನ ಮನೆಯ ಹೆಬ್ಬಾಗಿಲು. ಪಾಂಡಿತ್ಯದ ಆತ್ಮವು ವ್ಯಕ್ತಿತ್ವ ವಿಕಾಸದ ಸತ್ವ. ಪುಸ್ತಕ ತಿಳಿವಿನ ಗಣಿ. ಬುದ್ಧಿಮತ್ತೆಯ ಭಂಡಾರ. ಎಂಟು ದಿಕ್ಕಿನ ಜ್ಞಾನ ಸಮೀರಸಾರ. ನವಚೈತನ್ಯಕ್ಕೆ ಬರೆಯುವ ಶ್ರೀಕಾರ. ಒಂದು ಹತ್ತಾಗಿ, ಹತ್ತು ನೂರಾಗಿ, ನೂರು ಸಾವಿರವಾಗಿ ಲಕ್ಷಲಕ್ಷವಾಗಿ ಜ್ಞಾನಿಗಳ ಲಕ್ಷ್ಯ ಸೆಳೆಯುವ ಸೂಜಿಗಲ್ಲಾಗಿ ವಿಭುದವರ್ಗಕ್ಕೆ ಸೇರಲು ರಹದಾರಿ.

ಜ್ಞಾನಸೂರ್ಯನ ಹೊಂಗಿರಣಗಳು ಹೊಳೆಯುವುದೇ ಹೊತ್ತಗೆಗಳಲ್ಲಿ. ಅಂದರೆ ಪುಸ್ತಕಗಳಲ್ಲಿ. ಅಂಥ ಜ್ಞಾನನಿಧಿಗಳ ಸಂಸರ್ಗದಿಂದ ಸುಸಂಸ್ಕೃತ ಜನಾಂಗ ನಿರ್ಮಾಣವಾಗಿದೆ. ಅದರ ಫಲವೇ ನಮ್ಮ ನಲಂದಾ, ತಕ್ಷಶಿಲಾ ಬೃಹತ್ ಗ್ರಂಥಾಲಯಗಳು. ಕೋಟಿ ಕೋಟಿ ಜನಮನವು ಕಾಲಗರ್ಭದಲ್ಲಿ ಅವುಗಳ ಸಂಪರ್ಕದಿಂದ ಉದ್ಧಾರವಾಗಿದೆ.

ಪುಸ್ತಕ ಸಂಸ್ಕೃತಿ ಎಂದರೆ ಪಾವನ ಗಂಗೆಯಲ್ಲಿ ಬಂದು ಪುನೀತವಾಗುವುದು. ಹೊಸ ವ್ಯಕ್ತಿತ್ವಗಳನ್ನು ಪಡೆಯುವುದು. ನಡೆ, ನುಡಿ, ಆಚಾರ, ವಿಚಾರ, ಬದುಕಿನ ಶೈಲಿಯಲ್ಲಿ ರೂಕ್ಷತೆಗಳನ್ನು ಕಳೆದುಕೊಂಡು ಮಾರ್ಮಿಕವಾಗುವುದು. ವಾಸ್ತವವಾಗಿ ನಿಜಮಾನವನಾಗುವುದು. ಈಗ ರಾಜ್ಯದಲ್ಲಿ ಗ್ರಂಥಾಲಯ ಸಪ್ತಾಹದ (ನ. 14ರಿಂದ 20ರವರೆಗೆ) ಆಚರಣೆ.

ಹೊಸ ಹುಟ್ಟಿಗೆ ಬುನಾದಿ ಹಾಕುವುದು, ಅರೆಬರೆ ತಿಳಿವಳಿಕೆ ಅಳಿಸಿ ಪರಿಪೂರ್ಣತೆಯ ಕಡೆಗೆ ಅಧ್ಯಯನದ ವಿನೂತನ ಹೆಜ್ಜೆಗುರುತು ಮೂಡಿಸುವುದು ಪುಸ್ತಕ ಸಂಸ್ಕೃತಿ. ಮೂಢರ ಮೈಮನಗಳಲ್ಲಿ ನವ ಜ್ಞಾನವಾಹಿನಿ ಹರಿಸಿ ಎದೆಎದೆಗೆ ನಾಲ್ಕು ಅಕ್ಷರ ಅಮೃತ ಹರಿಸಿ ಪರಿವರ್ತನೆಗೆ ಶ್ರೀಕಾರ ಹಾಕುವುದು ಪುಸ್ತಕ ಸಂಸ್ಕೃತಿ. ವಿಕೃತಿಗಳ ಪೈಶಾಚಿಕ ಪ್ರವೃತ್ತಿ ನಾಶಪಡಿಸಿ ಸಂಸ್ಕೃತಿಯ ಲಕ್ಷಲಕ್ಷ ನಕ್ಷತ್ರಗಳ ಮಿಂಚಿನ ಸಂಚಾರದ ಕ್ಷೀರಪಥ ಈಂಟುವುದು ಪುಸ್ತಕ ಸಂಸ್ಕೃತಿ.

ಜಗತ್ತು ಬೆಸೆಯುವ ಸಾಧನ

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹವು ವಾರ್ಷಿಕ ಆಚರಣೆಯಾಗಿದ್ದು, ಗ್ರಂಥಾಲಯಗಳ ಅಮೂಲ್ಯವಾದ ಪಾತ್ರವನ್ನು ಎತ್ತಿ ತೋರಿಸುತ್ತದೆ. ಕಾಲ, ಭೌಗೋಳಿಕ ಅಂತರದಂತಹ ಎಲ್ಲಾ ಮಿತಿಗಳನ್ನು ಭೇದಿಸುವ ಇ- ಗ್ರಂಥಾಲಯಗಳು, ನಿಜವಾದ ಅರ್ಥದಲ್ಲಿ ಇಡೀ ಜಗತ್ತೇ ಒಂದು ಪುಟ್ಟ ಹಳ್ಳಿ ಎಂಬಂತೆ ನೇರ ಸಂಪರ್ಕಕ್ಕೆ ಅವಕಾಶ ಕಲ್ಪಿಸುತ್ತವೆ.

ದೇಶದ ಪ್ರತಿಯೊಂದು ಹಳ್ಳಿಯಲ್ಲೂ ಗ್ರಂಥಾಲಯದ ಜೊತೆಗೆ ಅಂತರ್ಜಾಲ ಸೌಲಭ್ಯವನ್ನು ಒದಗಿಸುವುದು ಅತ್ಯಂತ ಜರೂರಿನ ಕರ್ತವ್ಯವಾಗಿದೆ. ಜನರಿಗೆ ಬೇಕಾದ ಮಾಹಿತಿ ಅವರವರ ಭಾಷೆಯಲ್ಲಿ ಸಿಗುವಂತೆ ಆಗಬೇಕು.

ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನದ ಪಿತಾಮಹ ಡಾ. ಎಸ್.ಆರ್.ರಂಗನಾಥನ್ ಅವರು ಹಾಕಿಕೊಟ್ಟ ಪಂಚ ಸೂತ್ರಗಳು ಗ್ರಂಥಾಲಯ ಸೇವೆಗೆ ಆಧಾರಸ್ತಂಭಗಳಾಗಿವೆ. ಅವುಗಳೆಂದರೆ: 1. ಗ್ರಂಥಗಳು ಉಪಯೋಗಕ್ಕಾಗಿ ಇವೆ. 2. ಪ್ರತಿಯೊಬ್ಬ ಓದುಗನಿಗೊಂದು ಗ್ರಂಥ. 3. ಪ್ರತೀ ಗ್ರಂಥಕ್ಕೊಬ್ಬ ಓದುಗ. 4. ಓದುಗನ ಸಮಯ ಉಳಿಸಿ. 5. ಗ್ರಂಥಾಲಯ ಸದಾ ಬೆಳೆವ ಶಿಶು.

ಇಂದಿನ ಗ್ರಂಥಪಾಲಕ ಬರೀ ಗ್ರಂಥರಕ್ಷಕನಾಗಿರದೆ ಉತ್ತಮ ಗ್ರಂಥಗಳ ಕ್ರೋಡೀಕರಣಕ್ಕಾಗಿ, ಅವುಗಳ ಉಪಯೋಗಕ್ಕಾಗಿ, ಓದುಗರ ಜ್ಞಾನದಾಹ ತಣಿಸುವುದಕ್ಕಾಗಿ ಹತ್ತು ಹಲವಾರು ಯೋಜನೆಗಳನ್ನು ಒಳಗೊಂಡ ಮಾಹಿತಿ ವಿಜ್ಞಾನಿಯಾಗಿದ್ದಾನೆ.

ಡಾ. ಎಂ.ಕೃಷ್ಣಮೂರ್ತಿ, ಬೆಂಗಳೂರು

ವಾಚಕರ ವಾಣಿ

ಫಾಸ್ಟ್ ಫುಡ್‌ನಂತೆ ಫಾಸ್ಟ್ ವರ್ಕ್‌ನಲ್ಲೂ ಅಪಾಯ

ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನ ಸಾರ್ವಜನಿಕ ಸಮಾರಂಭದಲ್ಲಿ ಸ್ಕೇಲ್ ಹಾಗೂ ಸ್ಪೀಡ್ ಬಗ್ಗೆ ಮಾತನಾಡಿರುವುದು ವಿಚಿತ್ರ ಎನಿಸುತ್ತದೆ. ಕೆಲಸವೊಂದರ ಗುಣಮಟ್ಟ ಮೊದಲು ಚೆನ್ನಾಗಿರಬೇಕು. ಬೃಹತ್ ಯೋಜನೆಯೊಂದು ವೇಗವಾಗಿ ನಡೆದು ಸಮಯಪೂರ್ವ ಮುಗಿಯಿತು ಎಂಬುದು ಅತ್ಯಂತ ಮುಖ್ಯವಲ್ಲ. ಉದಾಹರಣೆಗೆ, ಮೊರ್ಬಿ ಸೇತುವೆಯನ್ನು ತರಾತುರಿಯಲ್ಲಿ ತೆರೆದು ಏನಾಯಿತು? ಫಾಸ್ಟ್ ಫುಡ್‌ನಂತೆ ಫಾಸ್ಟ್ ವರ್ಕ್‌ನಲ್ಲೂ ಅಪಾಯದ ಸಂಭವ ಇದ್ದೇ ಇರುತ್ತದೆ. ಹಾಗೆಯೇ ಗಾತ್ರ ದೊಡ್ಡದಿರುವಾಗ ನಿರ್ವಹಣೆ ಸವಾಲೆನಿಸುತ್ತದೆ. ಉದಾಹರಣೆಗೆ, ನಮ್ಮೂರು ಗೌರಿಬಿದನೂರಿನ ಮೇಲ್ಸೇತುವೆ ಯೋಜನೆಯೊಂದು ಸಂಕೀರ್ಣ ಸಮಸ್ಯೆಗಳ ಕಾರಣ ವರ್ಷಾನುಗಟ್ಟಲೆ ಎಳೆದಿದೆ. ಹಿಂದಿನವರಿಗಿಂತ ನಾವು ಮೇಲು ಎಂಬ ಹಮ್ಮು ಆರೋಗ್ಯಕರ ಅಲ್ಲ. ವಂದೇ ಭಾರತ್ ರೈಲು ಆರಂಭವಾದ ಮಾತ್ರಕ್ಕೆ ಭಾರತದ ಜಡತೆ ಅಳಿಯಿತು ಎನ್ನುವುದು ಉತ್ಪ್ರೇಕ್ಷೆಯ ಮಾತು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಶಾಲಾ ಕೊಠಡಿ ಬಣ್ಣ: ವಿವೇಕದ ಸ್ಪರ್ಶವಿರಲಿ

ರಾಜ್ಯದ ಸರ್ಕಾರಿ ಶಾಲೆಗಳ ನೂತನ ಕೊಠಡಿ ನಿರ್ಮಾಣ ಯೋಜನೆಗೆ ಸ್ವಾಮಿ ವಿವೇಕಾನಂದರ ಸ್ಮರಣಾರ್ಥ ‘ವಿವೇಕ’ ಎಂದು ಹೆಸರಿಡುವುದು ಹಾಗೂ ಕೇಸರಿ ಬಣ್ಣದಿಂದ ಗೋಡೆಗಳನ್ನು ಅಲಂಕರಿಸುವ ಸರ್ಕಾರದ ಚಿಂತನೆಗೆ ಟೀಕೆಗಳು ಕೇಳಿಬರುತ್ತಿವೆ. ವಿಷಯವು ರಾಜಕೀಯ ವಿವಾದದ ಸ್ವರೂಪ ಪಡೆಯುತ್ತಿರುವುದು ಅಪೇಕ್ಷಣೀಯವಲ್ಲ. ಕರ್ನಾಟಕದ ಗ್ರಾಮೀಣ ಭಾಗಗಳಷ್ಟೇ ಅಲ್ಲ, ದೊಡ್ಡ ನಗರಗಳಲ್ಲೂ ಸರ್ಕಾರಿ ಶಾಲೆಗಳ ಸ್ಥಿತಿಗತಿ ಹೇಗಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಎಲ್ಲೋ ಬೆರಳೆಣಿಕೆಯಷ್ಟು ಬಿಟ್ಟರೆ ಉಳಿದಂತೆ ಸರ್ಕಾರಿ ಶಾಲೆಗಳೆಂದರೆ ಪಾಲಕರು ಮತ್ತು ಮಕ್ಕಳು ಹೆದರುವಂತಾಗಿದೆ. ಹಲವಾರು ಶಾಲೆಗಳು ಈಗಲೋ ಆಗಲೋ ಬೀಳುವಂತಿವೆ.

ರಾಜ್ಯದಾದ್ಯಂತ ಏಕಕಾಲಕ್ಕೆ ಸಾವಿರಾರು ಹೊಸ ಕೊಠಡಿಗಳ ನಿರ್ಮಾಣಕ್ಕೆ ಸರ್ಕಾರ ಅಡಿಗಲ್ಲು ಇಡುತ್ತಿರುವ ಸಂಗತಿ ಸಮಾಧಾನಕರ. ಈ ಶಾಲೆಗಳ ಗೋಡೆಗಳಿಗೆ ಉಪಯೋಗಿಸುವ ಬಣ್ಣವು ಪ್ರಧಾನ ಅಂಶವಾಗಬಾರದು. ವಿವೇಕಾನಂದರು ತೊಡುತ್ತಿದ್ದ ಉಡುಗೆಯ ಬಣ್ಣವೆಂಬ ಕಾರಣಕ್ಕೆ ವಿವೇಕ ಯೋಜನೆ ಶಾಲೆಗಳ ಗೋಡೆಗಳು ಕೇಸರಿಮಯ ಆಗಿರಬೇಕೆಂದಿಲ್ಲ. ಹಾಗೆಯೇ ಕೇಸರಿ ಎನ್ನುವ ಕಾರಣಕ್ಕೆ ವಿರೋಧಿಸಬೇಕೆಂದೂ ಇಲ್ಲ. ಮುಖ್ಯವಾಗಿ ಮಕ್ಕಳಿಗೆ ಸುಭದ್ರ, ಸುರಕ್ಷಿತ ವಾತಾವರಣದಲ್ಲಿ ಶಿಕ್ಷಣ ದೊರೆಯಬೇಕಾದ ಸಂದರ್ಭವಿದು. ಇದು ವಿವಾದವಾಗದಂತೆ, ಬಣ್ಣದಿಂದಾಗಿ ಮಕ್ಕಳ ಮನಸ್ಸುಗಳ ನಡುವೆ ಗೋಡೆ ನಿರ್ಮಾಣವಾಗದಂತೆ ನೋಡಿಕೊಳ್ಳಬೇಕು.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

ಮೀಸಲಾತಿ: ಅಶಕ್ತರ ಅಭಿವೃದ್ಧಿಗೆ ಕೈಜೋಡಿಸಿ

ಮೀಸಲಾತಿ ಸೌಲಭ್ಯ ಇರುವುದೇ ಅತ್ಯವಶ್ಯ ಕಾರಣಗಳಿಗಾಗಿ. ಸಹಸ್ರಾರು ವರ್ಷಗಳಿಂದಲೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಬೌದ್ಧಿಕವಾಗಿ ವಂಚಿತರಾದವರು ಮಾನಸಿಕ ವೇದನೆಯ ಶೃಂಖಲೆಗಳಿಂದ ಬಿಡಿಸಿಕೊಳ್ಳಲು, ಪ್ರಜಾಪ್ರಭುತ್ವದ, ಸಂವಿಧಾನದ ಅಡಿಗಲ್ಲಿನ ಮೇಲೆ ‘ಸ್ವಾತಂತ್ರ್ಯ’ವನ್ನು ಸಮನಾಗಿ ಹಂಚಿಕೊಳ್ಳಲು ಪ್ರಬುದ್ಧರು ಚರ್ಚೆಗಳ ನಂತರ ಮೀಸಲಾತಿ ಪದ್ಧತಿಯನ್ನು ಸಂವಿಧಾನದಲ್ಲಿ ಸೇರಿಸಿದರು. ಹೀಗಿರುವಾಗ, ಇದುವರೆಗೂ ಮೀಸಲಾತಿ ವ್ಯಾಪ್ತಿಗೆ ಒಳಪಡದ ಕೆಲವು ಪ್ರಬಲ ಜಾತಿಗಳಲ್ಲಿಯೂ ಆರ್ಥಿಕವಾಗಿ ಅಶಕ್ತರಿದ್ದಾರೆ ಎಂಬ ವಾದದಿಂದಾಗಿ, ಅವರನ್ನೂ ಮೀಸಲಾತಿ ಸಾಲಿನಲ್ಲಿ ನಿಲ್ಲಿಸುವುದು ಮತ್ತೊಬ್ಬರ ಹಕ್ಕನ್ನು ಕಸಿದಂತೆ. ಇದು ಅಮಾನವೀಯ. ಅತ್ಯಂತ ತಳಮಟ್ಟದ ಉದ್ಯೋಗಗಳನ್ನು ನಿರಾಕರಿಸುವ ಆರ್ಥಿಕವಾಗಿ ಹಿಂದುಳಿದ ಈ ವರ್ಗದವರಿಗಿಂತ, ಕೆಳಹಂತದ ಕೆಲಸಗಳಲ್ಲಿ ವಂಶಪಾರಂಪರ್ಯವಾಗಿ ದುಡಿಯುತ್ತಿರುವ, ಆರ್ಥಿಕವಾಗಿಯೂ ವಂಚಿತರಾದ ಸಮಾಜದವರಿಗೆ ಮೀಸಲಾತಿ ಸೌಲಭ್ಯ ಸಲ್ಲಬೇಕಲ್ಲವೇ?

ಆರ್ಥಿಕ ಹಿಂದುಳಿದಿರುವಿಕೆಯನ್ನು ಬದಲಾಯಿಸಬಹುದು, ಆದರೆ, ತುಚ್ಛೀಕರಣದ ಪಿಡುಗಿನಿಂದ ಹೊರಬರುವುದು ಅಸಾಧ್ಯ. ಈಗಾಗಲೇ ಸಹಸ್ರಾರು ವರ್ಷಗಳಿಂದ ಸಮಾಜದ ತುಳಿತಕ್ಕೆ ಒಳಗಾಗಿರುವ ಅಶಕ್ತರನ್ನು ಹಿಂದುಳಿಸಿರುವ ತುಚ್ಛೀಕರಣದ ವಾಸ್ತವವನ್ನು ಕಂಡಾದರೂ ‘ಶಕ್ತರು’ ಮಾನವತೆಯಿಂದ, ಜವಾಬ್ದಾರಿಯಿಂದ ಮುಂದೆ ಬಂದು, ಶೇ 10 ಮೀಸಲಾತಿಯನ್ನು ಸ್ವೀಕರಿಸದೆ, ಅಶಕ್ತರ ಅಭಿವೃದ್ಧಿಗಾಗಿ ಕೈ ಜೋಡಿಸಬೇಕು. ‘ಕೆಳವರ್ಗ’ ಎಂಬ ಪಿಡುಗಿಗೆ ಒಳಗಾಗಿರುವವರು ದೇಶದ ಅಭಿವೃದ್ಧಿಗೆ ನೀಡಿರುವ ಕೊಡುಗೆ ಅಸಾಮಾನ್ಯ ಮತ್ತು ಅಭಿವೃದ್ಧಿಗೆ ತಳಪಾಯ ಹಾಕಿದ ಕೀರ್ತಿ ಅವರಿಗೆ ಸೇರಿದೆ ಎಂಬ ಪ್ರಜ್ಞೆ ಎಲ್ಲರಲ್ಲೂ ಮೂಡಬೇಕಾಗಿದೆ.

ಕೆ.ಎನ್.ಭಗವಾನ್, ಬೆಂಗಳೂರು

ಇ.ಡಿ ಇರುವುದೇ ಬೇಡವಾದವರ ‘ಹಿಡಿ’ಯಲು?

ಮಹಾರಾಷ್ಟ್ರದ ಶಿವಸೇನಾ (ಉದ್ಧವ್ ಠಾಕ್ರೆ) ನಾಯಕ ಸಂಜಯ್ ರಾವುತ್ ಅವರ ಬಂಧನಕ್ಕೆ ವಿಶೇಷ ಕಾರಣಗಳೇ ಇಲ್ಲ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟು ಜಾಮೀನು ಮಂಜೂರು ಮಾಡಿದೆ. ವಿರೋಧ ಪಕ್ಷಗಳು ಆಪಾದಿಸುತ್ತಿರುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ಇರುವುದೇ ಬೇಡವಾದವರನ್ನು ಬಂಧಿಸಲು ಎಂಬಂತಾಗಿದೆ. ಇತ್ತೀಚಿನ ವರ್ಷಗಳಲ್ಲಿ ಆದಾಯ ತೆರಿಗೆ, ತನಿಖಾ ಸಂಸ್ಥೆಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು ವಿರೋಧಿಗಳ ಬಾಯಿ ಮುಚ್ಚಿಸಲು ಪ್ರಯತ್ನಿಸಲಾಗುತ್ತಿದೆ ಎಂಬ ಆರೋಪದಲ್ಲಿ ಹುರುಳಿದೆ ಎನ್ನುವ ಬಲವಾದ ಅಭಿಪ್ರಾಯ ಜನಸಾಮಾನ್ಯರಲ್ಲಿ ಮೂಡುತ್ತಿದೆ. ರಾಜಕೀಯ ವ್ಯವಸ್ಥೆಯಲ್ಲಿ ಕಾಲೆಳೆಯುವ, ಟೀಕಿಸುವ, ವಿರೋಧಿಸುವ ಪ್ರಕ್ರಿಯೆ ಅತಿ ಸಹಜ. ಹಾಗೆಂದು ಅಧಿಕಾರ ದುರ್ಬಳಕೆ ಅಸಮರ್ಥನೀಯ, ಅನಪೇಕ್ಷಣೀಯ.

ಚನ್ನು ಹಿರೇಮಠ, ರಾಣೆಬೆನ್ನೂರು

ಟಿಪ್ಪು ವಿವಾದ: ಇತಿಹಾಸವೇ ಮರೆತಂತಿದೆ

ಇತಿಹಾಸದ ಘಟನೆಗಳ ಬಗ್ಗೆ, ಆ ಕಾಲಘಟ್ಟದ ಪ್ರಮುಖರ ಬಗ್ಗೆ ಈಗಿನ ಮುಖಂಡರು ನೀಡುತ್ತಿರುವ ಬಗೆಬಗೆಯ ಹೇಳಿಕೆಗಳನ್ನು ಕೇಳಿ ಕೇಳಿ ಇತಿಹಾಸವೇ ಮರೆತು ಹೋಗುತ್ತಿದೆಯೇನೋ ಅನಿಸುತ್ತಿದೆ. ಟಿಪ್ಪುವಿನ ಇತಿಹಾಸವನ್ನು ತಿರುಚಲಾಗುತ್ತಿದೆಯೇ, ಬದಲಾಯಿಸಲಾಗುತ್ತಿದೆಯೇ, ಮರೆಮಾಚಲಾಗುತ್ತಿದೆಯೇ, ಒಟ್ಟಾರೆ ಏನು ನಡೆಯುತ್ತಿದೆ ಎಂಬುದೇ ತಿಳಿಯದಂತೆ ಆಗಿದೆ.

ಬೋರೇಗೌಡ ಜೆ.ಬಿ., ಜಕ್ಕನಹಳ್ಳಿ, ಕೆ.ಆರ್.ಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 089-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

800 ಕೋಟಿ ದಾಟಿದ ಜಾಗತಿಕ ಜನಸಂಖ್ಯೆ

800,00,66,279*

* ಪತ್ರಿಕೆ ಮುದ್ರಣಕ್ಕೆ ಹೋಗುವಾಗ ಇದ್ದ ಜಾಗತಿಕ ಜನಸಂಖ್ಯೆ

ಪ್ರಜಾವಾಣಿ ವಾರ್ತೆ

ಜಗತ್ತಿನ ಜನಸಂಖ್ಯೆಯು 800 ಕೋಟಿಯ ಮೈಲುಗಲ್ಲು ದಾಟಿದೆ. ಜಗತ್ತಿನಾದ್ಯಂತ ಫಲವಂತಿಕೆ ಪ್ರಮಾಣವು ಕಡಿಮೆ ಆಗಿದ್ದರೂ ಜನರ ಜೀವಿತಾವಧಿ ಹೆಚ್ಚಳ ಮತ್ತು ಮರಣ ಪ್ರಮಾಣದಲ್ಲಿ ಇಳಿಕೆ ಆಗಿರುವುದರಿಂದ ಜನಸಂಖ್ಯೆ ಹೆಚ್ಚಳವಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಜನರ ನಿರೀಕ್ಷಿತ ಜೀವಿತಾವಧಿಯು 2019ರಲ್ಲಿ 72.8 ವರ್ಷ ಆಗಿತ್ತು. 1990ಕ್ಕೆ ಹೋಲಿಸಿದರೆ ಇದು 9 ವರ್ಷಗಳಷ್ಟು ಹೆಚ್ಚಳವಾಗಿದೆ. 2050ರ ಹೊತ್ತಿಗೆ ನಿರೀಕ್ಷಿತ ಜೀವಿತಾವಧಿಯು 77.2 ವರ್ಷಕ್ಕೆ ಏರಬಹುದು ಎಂದು ಅಂದಾಜಿಸಲಾಗಿದೆ. 2030ರ ಹೊತ್ತಿಗೆ ಜನಸಂಖ್ಯೆಯು 850 ಕೋಟಿಗೆ, 2050ರ ಹೊತ್ತಿಗೆ 970 ಕೋಟಿಗೆ ಮತ್ತು 2100ರ ಹೊತ್ತಿಗೆ 1,040 ಕೋಟಿಗೆ ಏರಿಕೆ ಆಗಬಹುದು ಎಂದು ವಿಶ್ವಸಂಸ್ಥೆಯು ಅಂದಾಜಿಸಿದೆ.

ನಿರೀಕ್ಷಿತ ಜೀವಿತಾವಧಿಯಲ್ಲಿ ಮಹಿಳೆಯರು ಮತ್ತು ಪುರುಷರ ನಡುವೆ ಗಣನೀಯವಾದ ವ್ಯತ್ಯಾಸ ಇದೆ. 2019ರ ಲೆಕ್ಕಾಚಾರ ಪ್ರಕಾರ, ಮಹಿಳೆಯರ ನಿರೀಕ್ಷಿತ ಜೀವಿತಾವಧಿಯು 73.8 ವರ್ಷಗಳಾಗಿದ್ದರೆ ಪುರುಷರ ನಿರೀಕ್ಷಿತ ಜೀವಿತಾವಧಿಯು 68.4 ವರ್ಷ. ಮಹಿಳೆ ಮತ್ತು ಪುರುಷರ ನಡುವೆ 5.4 ವರ್ಷಗಳ ವ್ಯತ್ಯಾಸ ಇದೆ. ಎಲ್ಲ ಪ್ರದೇಶಗಳು ಮತ್ತು ದೇಶಗಳಲ್ಲಿಯೂ ಮಹಿಳೆಯರ ನಿರೀಕ್ಷಿತ ಜೀವಿತಾವಧಿಯು ಹೆಚ್ಚೇ ಆಗಿದೆ.

ಸರಾಸರಿ ಫಲವಂತಿಕೆ ಪ್ರಮಾಣವು ಜಗತ್ತಿನಾದ್ಯಂತ ಇಳಿಕೆಯಾಗುತ್ತಲೇ ಇದೆ. 2021ರಲ್ಲಿ ಜಗತ್ತಿನ ಫಲವಂತಿಕೆಯು 2.3ರಷ್ಟು ಇತ್ತು. 1950ರಲ್ಲಿ ಇದು 5ರಷ್ಟು ಇತ್ತು. 2050ರ ಹೊತ್ತಿಗೆ ಫಲವಂತಿಕೆಯು 2.1ಕ್ಕೆ ಕುಸಿಯಬಹುದು ಎಂದು ಅಂದಾಜಿಸಲಾಗಿದೆ. ಫಲವಂತಿಕೆ ಕುಸಿತದ ಪರಿಣಾಮವಾಗಿ ಜನಸಂಖ್ಯೆ ಏರಿಕೆ ಪ್ರಮಾಣವು ಇಳಿದಿದೆ. 1950ರ ಬಳಿಕ ಇದೇ ಮೊದಲ ಬಾರಿಗೆ 2020ರಲ್ಲಿ ಜನಸಂಖ್ಯೆ ಏರಿಕೆ ಪ್ರಮಾಣವು ಶೇ 1ಕ್ಕಿಂತ ಕಡಿಮೆಗೆ ಇಳಿದಿದೆ. 2080ರ ಹೊತ್ತಿಗೆ ಜಗತ್ತಿನ ಜನಸಂಖ್ಯೆಯು ಗರಿಷ್ಠ ಮಟ್ಟಕ್ಕೆ ಅಂದರೆ 1,040 ಕೋಟಿಗೆ ಏರಲಿದೆ. 2100ರವರೆಗೂ ಜನಸಂಖ್ಯೆಯು ಇಷ್ಟೇ ಇರಲಿದೆ ಎಂದು ಅಂದಾಜಿಸಲಾಗಿದೆ.

ಅತಿ ಹೆಚ್ಚು ಜನಸಂಖ್ಯೆ ಇರುವ ಎರಡೂ ಪ್ರದೇಶಗಳು ಏಷ್ಯಾ ಖಂಡದಲ್ಲಿಯೇ ಇವೆ. ಪೂರ್ವ ಮತ್ತು ಆಗ್ನೇಯ ಏಷ್ಯಾದ ಜನಸಂಖ್ಯೆಯು 230 ಕೋಟಿಯಷ್ಟಿದೆ. ಇದು ಜಗತ್ತಿನ ಒಟ್ಟು ಜನಸಂಖ್ಯೆಯ ಶೇ 29ರಷ್ಟಾಗುತ್ತದೆ. ಮಧ್ಯ ಮತ್ತು ದಕ್ಷಿಣ ಏಷ್ಯಾದ ಜನಸಂಖ್ಯೆಯು 210 ಕೋಟಿಯಷ್ಟಾಗುತ್ತದೆ. ಇದು ಜಗತ್ತಿನ ಒಟ್ಟು ಜನಸಂಖ್ಯೆಯ ಶೇ 26ರಷ್ಟಾಗುತ್ತದೆ. ಚೀನಾ ಮತ್ತು ಭಾರತವು ತಲಾ 140 ಕೋಟಿಗೂ ಹೆಚ್ಚು ಜನಸಂಖ್ಯೆಯೊಂದಿಗೆ ಜಗತ್ತಿನ ಅತಿ ಹೆಚ್ಚು ಜನಸಂಖ್ಯೆ ಇರುವ ದೇಶಗಳು ಎನಿಸಿಕೊಂಡಿವೆ.

2050ರವರೆಗೆ ಜಗತ್ತಿನ ಜನಸಂಖ್ಯೆಯಲ್ಲಿ ಆಗುವ ಹೆಚ್ಚಳದಲ್ಲಿ ಅರ್ಧಕ್ಕಿಂತ ಹೆಚ್ಚು ಎಂಟು ದೇಶಗಳಲ್ಲಿಯೇ ಆಗಲಿದೆ. ಆ ದೇಶಗಳೆಂದರೆ, ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ದಿ ಕಾಂಗೊ, ಈಜಿಪ್ಟ್, ಇಥಿಯೋಪಿಯಾ, ಭಾರತ, ನೈಜೀರಿಯಾ, ಪಾಕಿಸ್ತಾನ, ಫಿಲಿಪ್ಪೀನ್ಸ್ ಮತ್ತು ತಾಂಜಾನಿಯಾ. ಆಫ್ರಿಕಾದ ದೇಶಗಳ ಜನಸಂಖ್ಯೆಯು 2100ರವರೆಗೂ ಹೆಚ್ಚಳ ಆಗುತ್ತಲೇ ಇರಲಿದೆ. 2050ರ ಬಳಿಕ ಜಗತ್ತಿನ ಜನಸಂಖ್ಯೆ ಏರಿಕೆಗೆ ಅರ್ಧಕ್ಕಿಂತ ಹೆಚ್ಚಿನ ಕೊಡುಗೆಯು ಈ ದೇಶಗಳಿಂದಲೇ ಬರಲಿದೆ.



2023ರಲ್ಲಿ ಭಾರತಕ್ಕೆ ಮೊದಲ ಸ್ಥಾನ

ಭಾರತದ ಜನಸಂಖ್ಯೆಯು ಈಗ 141 ಕೋಟಿಯನ್ನು ದಾಟಿ ಮುಂದಕ್ಕೆ ಸಾಗಿದೆ. ಜಗತ್ತಿನ ಜನಸಂಖ್ಯೆಯಲ್ಲಿ ಭಾರತದ ಜನಸಂಖ್ಯೆಯ ಪ್ರಮಾಣವು ಶೇ 17.7ರಷ್ಟಿದೆ. ಅತಿ ಹೆಚ್ಚು ಜನಸಂಖ್ಯೆ ಇರುವ ಎರಡನೇ ದೇಶ ಭಾರತ. ಆದರೆ, 2023ರ ಹೊತ್ತಿಗೆ ಈಗ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾವನ್ನು ಹಿಂದಿಕ್ಕಿ ಭಾರತವು ಮೊದಲ ಸ್ಥಾನ ಪಡೆದುಕೊಳ್ಳಲಿದೆ.

ಭಾರತದಲ್ಲಿ ಜನಸಾಂದ್ರತೆಯೂ ಹೆಚ್ಚು. ಪ್ರತಿ ಚದರ ಕಿಲೋಮೀಟರ್‌ನಲ್ಲಿ ಇರುವ ಜನರ ಸಂಖ್ಯೆ 464. 2020ರ ಅಂದಾಜು ಪ್ರಕಾರ, ಶೇ 35ರಷ್ಟು ಜನರು ನಗರಗಳಲ್ಲಿ ನೆಲೆಸಿದ್ದಾರೆ. ಭಾರತದ ಜನರ ಸರಾಸರಿ ವಯಸ್ಸು 28.4 ವರ್ಷ.

ಉತ್ಪಾದಕತೆ ಹೆಚ್ಚಳ

ಆಫ್ರಿಕಾ, ಏಷ್ಯಾ, ಲ್ಯಾಟಿನ್ ಅಮೆರಿಕ ಮತ್ತು ಕೆರೀಬಿಯನ್ ದೇಶಗಳಲ್ಲಿ ದುಡಿಯುವ ವಯೋಮಾನದ (25ರಿಂದ 64 ವರ್ಷ) ಜನಸಂಖ್ಯೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಳ ಆಗಿದೆ. ಇದು ಒಂದಷ್ಟು ಕಾಲ ಆರ್ಥಿಕ ಪ್ರಗತಿ ಹೆಚ್ಚಳಕ್ಕೆ ಅನುಕೂಲ ಮಾಡಿಕೊಡಲಿದೆ. ಜನಸಂಖ್ಯೆಯಿಂದ ಆಗಬಹುದಾದ ಈ ಅನುಕೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸರ್ಕಾರಗಳು ಯೋಜನೆಗಳನ್ನು ರೂಪಿಸಬೇಕು. ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಹೆಚ್ಚಿನ ಹೂಡಿಕೆ ಮಾಡಬೇಕು.



ಜನಸಂಖ್ಯೆ ಬೆಳವಣಿಗೆಯಲ್ಲಿ ಏರಿಳಿತ

ಜಾಗತಿಕ ಜನಸಂಖ್ಯೆ 800 ಕೋಟಿಯ ಮೈಲುಗಲ್ಲು ಕ್ರಮಿಸುವ ಹಾದಿಯಲ್ಲಿ ಸಾಕಷ್ಟು ಏರುಪೇರು ದಾಖಲಾಗಿದೆ. 1,803ನೇ ಇಸ್ವಿ ವೇಳೆಗೆ ಜಗತ್ತಿನ ಜನಸಂಖ್ಯೆ 100 ಕೋಟಿ ಇತ್ತು ಎನ್ನಲಾಗಿದೆ. ಅದು 200 ಕೋಟಿಗೆ ಹೆಚ್ಚಳವಾಗಲು 124 ವರ್ಷಗಳು ಹಿಡಿದಿದ್ದವು. 300 ಕೋಟಿ ಜನಸಂಖ್ಯೆ ಆಗಲು ಅಲ್ಲಿಂದ 33 ವರ್ಷಗಳು ಮಾತ್ರ ಸಾಕಾದವು. ನಂತರದ ಪ್ರತಿ 100 ಕೋಟಿ ಜನಸಂಖ್ಯೆ ಹೆಚ್ಚಳಕ್ಕೆ 12ರಿಂದ 15 ವರ್ಷಗಳಷ್ಟೇ ಸಾಕಾಯಿತು. ಜನಸಂಖ್ಯೆಯು 400 ಕೋಟಿಯಿಂದ 800 ಕೋಟಿಗೆ ಹೆಚ್ಚಳವಾಗಲು ಕೇವಲ 48 ವರ್ಷಗಳು ಬೇಕಾದವು. ಪ್ರತಿ 12 ವರ್ಷಕ್ಕೊಮ್ಮೆ 100 ಕೋಟಿ ಜನರು ಹೊಸದಾಗಿ ಸೇರ್ಪಡೆಯಾಗಿದ್ದಾರೆ.

1975ರಿಂದ ಇಲ್ಲಿಯವರೆಗೆ ಜನಸಂಖ್ಯಾ ಬೆಳವಣಿಗೆ ಕ್ಷಿಪ್ರವಾಗಿ ಆಗಿರುವುದು ಕಂಡುಬಂದಿದೆ. ಆದರೆ, ಇಲ್ಲಿಂದ ಮುಂದಕ್ಕೆ ಸೇರ್ಪಡೆಯಾಗುವ ಪ್ರತಿ ನೂರು ಕೋಟಿ ಜನಸಂಖ್ಯೆಯ ಬೆಳವಣಿಗೆ ನಿಧಾನವಾಗಿ ಇರಲಿದೆ ಎಂದು ಅಂದಾಜಿಸಲಾಗಿದೆ. ಅಂದರೆ, 800ರಿಂದ 900 ಕೋಟಿ ಆಗಲು 15 ವರ್ಷ ಬೇಕಾಗುತ್ತದೆ. ನಂತರದ ನೂರು ಕೋಟಿಗೆ 18 ವರ್ಷ ಹಾಗೂ ಬಳಿಕ 32 ವರ್ಷ ಬೇಕಾಗುತ್ತದೆ ಎಂದು ವರದಿ ಅಭಿಪ್ರಾಯಪಟ್ಟಿದೆ

ಹಿರಿಯರ ಸಂಖ್ಯೆ ಹೆಚ್ಚಳ

ಜನಸಂಖ್ಯೆ ಹೆಚ್ಚುವುದರೊಂದಿಗೆ ಹಿರಿಯ ನಾಗರಿಕರ ಸಂಖ್ಯೆಯಲ್ಲಿಯೂ ಹೆಚ್ಚಳವಾಗಿದೆ. 2022ರಲ್ಲಿ ಜಗತ್ತಿನಲ್ಲಿ 65 ವರ್ಷ ದಾಟಿದ ವ್ಯಕ್ತಿಗಳ ಪ್ರಮಾಣವು ಶೇ 10ರಷ್ಟಿದ್ದರೆ, 2050ರ ಹೊತ್ತಿಗೆ ಅದು ಶೇ 16ಕ್ಕೆ ಏರಬಹುದು ಎಂದು ಅಂದಾಜಿಸಲಾಗಿದೆ. 2050ರ ಹೊತ್ತಿಗೆ ಜಗತ್ತಿನಲ್ಲಿ ಇರುವ 65 ವರ್ಷ ದಾಟಿದ ವ್ಯಕ್ತಿಗಳ ಸಂಖ್ಯೆಯು 5 ವರ್ಷದೊಳಗಿನ ಮಕ್ಕಳ ಸಂಖ್ಯೆಯ ಎರಡರಷ್ಟಿರುತ್ತದೆ. 12 ವರ್ಷದೊಳಗಿನ ಮಕ್ಕಳ ಸಂಖ್ಯೆಗೆ 65 ದಾಟಿದವರ ಸಂಖ್ಯೆಯು ಸಮನಾಗಿರುತ್ತದೆ.

ಅಕಾಲ ಮರಣ ಪ್ರಮಾಣದಲ್ಲಿ ಗಮನಾರ್ಹವಾದ ಇಳಿಕೆ, ಫಲವಂತಿಕೆಯ ಕುಸಿತದ ಕಾರಣಕ್ಕೆ ಹಿರಿಯ ನಾಗರಿಕರ ಸಂಖ್ಯೆ ಹೆಚ್ಚಳವಾಗಿ, ಮಕ್ಕಳ ಸಂಖ್ಯೆ ಕಡಿಮೆ ಆಗುತ್ತದೆ.

ಹಿರಿಯ ನಾಗರಿಕರಲ್ಲಿ ಮಹಿಳೆಯರ ಪ್ರಮಾಣವು ಹೆಚ್ಚಳವಾಗಲಿದೆ. ಮಹಿಳೆಯರ ನಿರೀಕ್ಷಿತ ಜೀವಿತಾವಧಿಯು ಪುರುಷರಿಗಿಂತ ಹೆಚ್ಚು ಇರುವುದು ಇದಕ್ಕೆ ಕಾರಣ. 2022ರಲ್ಲಿ 65 ವರ್ಷ ಮೀರಿದವರಲ್ಲಿ ಮಹಿಳೆಯರ ಪ್ರಮಾಣವು ಶೇ 55.7ರಷ್ಟಿದೆ. ಆದರೆ, 2050ರ ಹೊತ್ತಿಗೆ ಇದು ಶೇ 54.5ರಷ್ಟಕ್ಕೆ ಕುಸಿಯಬಹುದು ಎಂದು ಅಂದಾಜಿಸಲಾಗಿದೆ.

ಜಗತ್ತು, ಭಾರತದಲ್ಲಿ ಜನಸಂಖ್ಯೆ ಬೆಳವಣಿಗೆ ದರ (ಶೇಕಡವಾರು)

ಕುಸಿಯುತ್ತಿದೆ ಬೆಳವಣಿಗೆ ದರ

ಜಾಗತಿಕ ಜನಸಂಖ್ಯೆ 800 ಕೋಟಿಗೆ ಬಂದು ತಲುಪಿದ್ದರೂ, ಅದರ ಬೆಳವಣಿಗೆ ದರ ಮಾತ್ರ ಕುಸಿಯುತ್ತಿದೆ ಎಂದು ದತ್ತಾಂಶಗಳು ಹೇಳುತ್ತಿವೆ. 1950ರಲ್ಲಿ ಶೇ 1.73ರ ದರದಲ್ಲಿ ಬೆಳವಣಿಗೆ ಕಾಣುತ್ತಿದ್ದ ಜನಸಂಖ್ಯೆಯು ಕಳೆದ ವರ್ಷ ಶೇ 0.82ಕ್ಕೆ ಇಳಿಕೆಯಾಗಿದೆ. ಜನಸಂಖ್ಯಾ ಬೆಳವಣಿಗೆ ವೇಗವು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವ ಪ್ರವೃತ್ತಿ ಕಂಡುಬರುತ್ತಿದ್ದು, ಇದು ಮುಂದುವರಿಯುವ ಸಾಧ್ಯತೆಗಳಿವೆ



ಭಾರತದಲ್ಲೂ ಇಳಿಮುಖ ಪ್ರವೃತ್ತಿ

ಭಾರತದ ಜನಸಂಖ್ಯೆ ಏರುತ್ತಿದ್ದರೂ, ಬೆಳವಣಿಗೆ ದರದಲ್ಲಿ ಇಳಿಮುಖ ಪ್ರವೃತ್ತಿ ಕಂಡುಬಂದಿದೆ. ಎಪ್ಪತ್ತು ವರ್ಷಗಳ ಹಿಂದೆ ಶೇ 1.61ರಷ್ಟು ದರದಲ್ಲಿ ಜನಸಂಖ್ಯೆ ಬೆಳವಣಿಗೆ ಕಾಣುತ್ತಿತ್ತು. 2020ರ ಹೊತ್ತಿಗೆ ಇದು ಶೇ 1ಕ್ಕಿಂತಲೂ ಕಡಿಮೆಯಾಗಿದೆ. ಮುಂದಿನ ವರ್ಷಗಳಲ್ಲಿ ಈ ದರ ಮತ್ತಷ್ಟು ಇಳಿಯುವ ಅಂದಾಜು ಮಾಡಲಾಗಿದೆ

ಆಧಾರ: ವಿಶ್ವಸಂಸ್ಥೆಯ ಜಾಗತಿಕ ಜನಸಂಖ್ಯೆ ಅಂದಾಜು 2022 ವರದಿ, ವರ್ಲ್ಡೋಮೀಟರ್, ಅವರ್ ವರ್ಲ್ಡ್ ಇನ್ ಡಾಟಾ ಜಾಲತಾಣ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಹೌದು 77%

ಅಲ್ಲ 23%

ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ಕೊಠಡಿಗಳಿಗೆ ಕೇಸರಿ ಬಣ್ಣ ಬಳಿಯಲು ಸರ್ಕಾರ ನಿರ್ಧರಿಸಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 276

ಬ್ರಹ್ಮನ ಕೊಲ್ಲಲು ಮುಂದಾದ ಶಿವ

ಅಗ್ನಿಯ ಮುಂದೆ ಕುಳಿತ ಶಿವ, ಪಾರ್ವತಿಯನ್ನು ತನ್ನ ಬಲಭಾಗದ ತೊಡೆಯಲ್ಲಿ ಕುಳ್ಳಿರಿಸಿಕೊಂಡ. ನಂತರ ವಿವಾಹಹೋಮವನ್ನು ನೆರವೇರಿಸಿದ. ಗಿರಿಜೆಯ ಸಹೋದರನಾದ ಮೈನಾಕ ಲಾಜಾಂಜಲಿಯನ್ನು ಪಾರ್ವತಿಯ ಕೈಗೆ ಕೊಡುತ್ತಿದ್ದ. ಲಾಜಾಹೋಮವನ್ನು ಮುಗಿಸಿ, ಪಾರ್ವತೀ-ಪರಮೇಶ್ವರರು ಸಂತೋಷದಿಂದ ಅಗ್ನಿಗೆ ಪ್ರದಕ್ಷಿಣೆಯನ್ನು ಮಾಡಿದರು. ಈ ಸಂದರ್ಭದಲ್ಲಿ ಬ್ರಹ್ಮನಿಂದ ಅಚಾತುರ್ಯವೊಂದು ನಡೆದು ಶಿವನ ಕೋಪಕ್ಕೆ ತುತ್ತಾದ.

ವಿವಾಹ ಸಂದರ್ಭದಲ್ಲಿ ಪಾರ್ವತೀದೇವಿಯ ಸುಂದರವಾದ ಚರಣಗಳಲ್ಲಿ ಚಂದ್ರನಂತೆ ಹೊಳೆಯುತ್ತಿದ್ದ ನಖಗಳನ್ನು ನೋಡಿದ ಬ್ರಹ್ಮನ ಮನಸ್ಸಿನಲ್ಲಿ ಮನ್ಮಥವಿಕಾರ ಉಂಟಾಯಿತು. ಇದರಿಂದ ಅವನ ಶರೀರದಿಂದ ವೀರ್ಯವು ಸ್ಖಲನವಾಗಿ ಕೆಳಗೆ ಬಿದ್ದಿತು. ಹೀಗೆ ಬಿದ್ದ ರೇತಸ್ಸನ್ನು ಬ್ರಹ್ಮ ತುಂಬಾ ನಾಚಿಕೆ-ಭಯಗಳಿಂದ ಕಾಲುಗಳಿಂದ ಮುಚ್ಚಲು ಯತ್ನಿಸಿದ. ಇದನ್ನು ಗಮನಿಸಿದ ಮಹಾದೇವನಿಗೆ ತುಂಬಾ ಕೋಪ ಬಂದು, ಕಾಮವಶನಾದ ಬ್ರಹ್ಮನನ್ನು ಕೊಲ್ಲಲು ಉದ್ಯುಕ್ತನಾದ.

ಆಗ ಅಲ್ಲಿ ಸೇರಿದ್ದವರೆಲ್ಲರೂ ಶಿವನ ಕೋಪ ನೋಡಿ ಭಯದಿಂದ ಹಾಹಾಕಾರ ಮಾಡಿದರು. ಉರಿಕೋಪದಿಂದ ಕುದಿಯುತ್ತಾ ಬ್ರಹ್ಮನನ್ನು ಸಂಹರಿಸಲು ಮುಂದಾದ ಶಿವನನ್ನು ಹರಿ ಮೊದಲಾದ ದೇವತೆಗಳು ತಡೆದು, ಶಾಂತನಾಗುವಂತೆ ಅನೇಕ ಬಗೆಯಲ್ಲಿ ಸ್ತುತಿಸಿದರು. 'ಜಗದ್ರೂಪನಾದ ನೀನು ಎಲ್ಲಾ ವಸ್ತುಗಳಿಗೂ ಭಾವನೆಗಳಿಗೂ ಕಾರಣಕರ್ತ. ಸೃಷ್ಟಿಯ ಚರಾಚರವೆಲ್ಲವೂ ನಿನ್ನ ಅಂಶವೇ ಆಗಿವೆ. ನಿನಗೆ ಜನ್ಮನಾಶ ಮೊದಲಾದ ವಿಕಾರಗಳಿಲ್ಲ. ನೀನು ನಿತ್ಯನು, ನಿರ್ಗುಣನು. ನಿನಗೆ ಆದಿ ಮತ್ತು ಅಂತ್ಯಗಳಿಲ್ಲ, ಮಧ್ಯವೂ ಇಲ್ಲ. ಒಳಗೆ ಹೊರಗೆ ಎಂಬ ಭೇದವೂ ನಿನಗಿಲ್ಲ. ನೀನು ನಾಶವಿಲ್ಲದ ಅವಿನಾಶಿ. ಸತ್ವಸ್ವರೂಪವಾದ, ಜ್ಞಾನಸ್ವರೂಪವಾದ ಸುಖರೂಪವೂ ಆದ ಬ್ರಹ್ಮವಸ್ತುವೇ ನೀನು. ಜಿತೇಂದ್ರಿಯರಾದ ಮುನಿಗಳು ಮುಕ್ತಿಯನ್ನು ಪಡೆಯಲು ನಿನ್ನ ಚರಣಕಮಲವನ್ನು ಆರಾಧಿಸುವರು. ನೀನು ಪರಿಪೂರ್ಣವೂ ಸತ್ಯವೂ ನಿರ್ಗುಣವೂ ಆನಂದಸ್ವರೂಪವೂ ಅಗೋಚರವೂ ನಿರ್ವಿಕಾರವೂ ಜಗದ್ರೂಪವೂ ಆದ ಪರಬ್ರಹ್ಮವಸ್ತುವಾಗಿರುವೆ. ನೀನು ಜಗತ್ತನ್ನು ಸೃಷ್ಟಿಸುತ್ತಾ, ಪಾಲಿಸುತ್ತಾ, ಸಂಹರಿಸುತ್ತಾ ಇರುವೆ.

ಈ ಜಗತ್ತಿನ ಜನರ ದೃಷ್ಟಿಯಲ್ಲಿ ನೀನು ಈಶ್ವರ. ವಸ್ತುತಃ ನೀನು ನಿರ್ಗುಣನಾದ ಪರಬ್ರಹ್ಮವಸ್ತು. ಪ್ರಪಂಚದಲ್ಲಿ ನಿನ್ನನ್ನು ಬಿಟ್ಟು ಬೇರೆ ವಸ್ತುವಿಲ್ಲ. ಸತ್-ಅಸತ್ ಎಂದು, ವ್ಯಕ್ತ-ಅವ್ಯಕ್ತ ಎಂದು ಹೇಳಲ್ಪಡುವ ನಿನಗೆ ಸಮಾನವಾದ ವಸ್ತುವು ಬೇರೊಂದಿಲ್ಲ. ಆದುದರಿಂದಲೇ ನಿನ್ನನ್ನು ಅದ್ವಿತೀಯನೆನ್ನುವರು. ಚಿನ್ನದಿಂದಾದ ಆಭರಣಗಳು ಚಿನ್ನದಿಂದ ಹೊರತಾದವುಗಳು ಅಂತ ಹೇಗೆ ಹೇಳಲು ಸಾಧ್ಯವಿಲ್ಲವೋ, ಹಾಗೆಯೇ ನಿನ್ನಿಂದಾದ ಈ ಜಗತ್ತು ನಿನ್ನ ಹೊರತು ಬೇರೆಯದೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಅಜ್ಞಾನದಿಂದ ಕೆಲವರು ನಿನ್ನನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆ. ಆದಕಾರಣ ಜನರಲ್ಲಿರುವ ನಿನ್ನ ವಿಷಯಕವಾದ ಭ್ರಮೆಯನ್ನು ತೊಲಗಿಸಬೇಕು. ಪರಿಶುದ್ಧನಾದ ನಿನ್ನಲ್ಲಿ ವಸ್ತುತಃ ಅಜ್ಞಾನಭ್ರಮೆಗಳು ಇಲ್ಲವೇ ಇಲ್ಲ. ನೀನು ಈ ಜಗತ್ತಿಗೆ ಆದಿಯಾದರೂ, ನಿನಗೆ ಆದಿಯಿಲ್ಲ. ಅಂತ್ಯ ಎಂಬುದು ಇಲ್ಲವೇ ಇಲ್ಲ. ನೀನು ಪ್ರಕೃತಿಗಿಂತಲೂ ಉತ್ತಮವಾದ ಪರಮಪುರುಷ. ಜಗದೊಡೆಯನಾದ ಪರಮೇಶ್ವರ, ನಿರ್ವಿಕಾರವಾದ ಪರವಸ್ತು. ನಿನ್ನ ದರ್ಶನದಿಂದಲೇ ನಾವು ಧನ್ಯರಾದೆವು ಪ್ರಭು. ಅನುಗ್ರಹ ಮಾಡಿ, ಬ್ರಹ್ಮನ ತಪ್ಪನ್ನು ಕ್ಷಮಿಸು' ಎಂದು ಬೇಡಿಕೊಂಡರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ 133ನೇ ಜನ್ಮದಿನದ ಹಿನ್ನೆಲೆಯಲ್ಲಿ ಅವರ ಕೆಲವು ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಜನರು ಹಂಚಿಕೊಂಡಿದ್ದಾರೆ. ಪ್ರತಿ ಚಿತ್ರಕ್ಕೂ ನೀಡಲಾಗಿದ್ದ ಅಡಿಬರಹಗಳು ವಿಚಿತ್ರವಾಗಿದ್ದವು. 'ಮಹಿಳೆಯೊಬ್ಬರ ಜೊತೆ ನೆಹರೂ ರೊಮ್ಯಾಂಟಿಕ್ ಆಗಿ ಕಾಣಿಸಿರುವ ಅಪರೂಪದ ದೃಶ್ಯ ಇದು' ಎಂದು ಸಂಜೀತ್ ಎಂಬುವರು ಬರೆದಿದ್ದಾರೆ. ವಿಮಾನ ನಿಲ್ದಾಣದಲ್ಲಿ ಮಹಿಳೆಯೊಬ್ಬರಿಗೆ ಮುತ್ತಿಕ್ಕುವ, ಮಹಿಳೆಯೊಬ್ಬರು ಬಂದು ಆಲಂಗಿಸುವ ಹಾಗೂ ನರ್ತಕಿಯರ ಜೊತೆ ಅವರು ನಿಂತಿರುವ ಚಿತ್ರಗಳ ಬಗ್ಗೆಯೂ ಸಾಕಷ್ಟು ಚರ್ಚೆಯಾಗಿದ್ದು, ನೆಹರೂ ಅವರು ಅಪಮಾರ್ಗದಲ್ಲಿ ನಡೆದಿದ್ದರು ಎಂಬ ಅರ್ಥದಲ್ಲಿ ಬಳಕೆದಾರರು ಪೋಸ್ಟ್ ಮಾಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯಾಗಿರುವ ಎಲ್ಲ ಚಿತ್ರಗಳನ್ನೂ ಲಾಜಿಕಲ್ ಇಂಡಿಯನ್ ತಾಣ ಪರಿಶೀಲಿಸಿದ್ದು, ಇವೆಲ್ಲವೂ ನೆಹರೂ ಅವರ ವರ್ಚಸ್ಸಿಗೆ ಮಸಿ ಬಳಿಯುವ ಯತ್ನ ಎಂದು ತಿಳಿಸಿದೆ. ನೆಹರೂ ರೊಮ್ಯಾಂಟಿಕ್ ಆಗಿದ್ದಾರೆ ಎಂದು ಹೇಳಲಾಗುವ ಚಿತ್ರವು ಹೋವರ್ಡ್ ಬ್ರೆಂಟನ್ ಅವರ 'ಡ್ರಾಯಿಂಗ್ ದಿ ಲೈನ್' ನಾಟಕದ ದೃಶ್ಯವೇ ಹೊರತು ನೈಜ ಚಿತ್ರವಲ್ಲ. ವಿಮಾನ ನಿಲ್ದಾಣದಲ್ಲಿ ನೆಹರೂ ಅವರ ಜೊತೆ ಕಾಣಿಸಿಕೊಂಡ ಮಹಿಳೆ, ಅವರ ಸಹೋದರಿ ವಿಜಯಲಕ್ಷ್ಮಿ ಪಂಡಿತ್. ಮತ್ತೊಂದು ಚಿತ್ರದಲ್ಲೂ ವಿಜಯಲಕ್ಷ್ಮಿ ಅವರೇ ಇದ್ದಾರೆ. ಈ ಹಿಂದೆಯೂ ಈ ಚಿತ್ರಗಳನ್ನು ಇಟ್ಟುಕೊಂಡು ನೆಹರೂ ಅವರ ತೇಜೋವಧೆ ಮಾಡುವಂತಹ ಅಡಿಬರಹಗಳನ್ನು ನೀಡಲಾಗಿತ್ತು ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅಗತ್ಯವಾದ ಸೌಮ್ಯಭಾವ

ವ್ಯಾಮೋಹವಿಲ್ಲದ ಪ್ರೇಮ ನಿರ್ಭರವಿರಲಿ |
ಭೀಮಸಾಹಸವಿರಲಿ ಹಗೆತನವನುಳಿದು ||
ನೇಮನಿಷ್ಠೆಗಳಿರಲಿ ಡಂಭ ಕಠಿಣತೆ ಬಿಟ್ಟು |
ಸೌಮ್ಯವೆಲ್ಲೆಡೆಯಿರಲಿ - ಮಂಕುತಿಮ್ಮ || 757 ||

ಪದ-ಅರ್ಥ: ನಿರ್ಭರವಿರಲಿ = ತುಂಬಿರಲಿ, ಹಗೆತನವನುಳಿದು = ಹಗೆತನವನು + ಉಳಿದು(ಬಿಟ್ಟು), ಡಂಭ = ಡಂಭಾಚಾರ, ತೋರಿಕೆ, ಸೌಮ್ಯವೆಲ್ಲೆಡೆಯಿರಲಿ = ಸೌಮ್ಯ (ಶಾಂತತೆ) + ಎಲ್ಲೆಡೆ + ಇರಲಿ.

ವಾಚ್ಯಾರ್ಥ: ಪ್ರೇಮ ವ್ಯಾಮೋಹವಾಗದೆ ತುಂಬಿರಲಿ, ಅಸಾಧ್ಯ ಸಾಹಸವಿರಲಿ ಆದರೆ ದ್ವೇಷ ಬೇಡ. ಆಚರಣೆಗಳಲ್ಲಿ ನೇಮನಿಷ್ಠೆಗಳು ಇರಲಿ, ಅವು ಕಠಿಣವೂ, ತೋರಿಕೆಯೂ ಆಗದಿರಲಿ. ಎಲ್ಲೆಡೆಯಲ್ಲಿ ಸೌಮ್ಯತೆ ಇರಲಿ.

ವಿವರಣೆ: ಮನುಷ್ಯನ ಜೀವನದಲ್ಲಿ ಸಾಧನೆಗೆ ಅನೇಕ ಗುಣಗಳಿವೆ. ಆದರೆ ಆ ಗುಣಗಳಿಗೆ ಕಸರು ಸೇರುವ ಸಾಧ್ಯತೆ ಹೆಚ್ಚು. ಹಾಗೆ ಆದಾಗ ಒಳ್ಳೆಯ ಗುಣವೇ ದೋಷವಾಗುತ್ತದೆ. ಪ್ರೇಮ ಅತ್ಯಂತ ಮಧುರವಾದ ಮತ್ತು ಅವಶ್ಯಕವಾದ ಭಾವ. ಅದು ಜೀವ-ಜೀವಗಳನ್ನು ಬೆಸೆಯುವ ಕೊಂಡಿ. ಅದು ಸಂಪರ್ಕವನ್ನು ಸಂಬಂಧವನ್ನಾಗಿಸುತ್ತದೆ. ಆದರೆ ಉತ್ಕಟವಾದಾಗ ವ್ಯಾಮೋಹವಾಗುತ್ತದೆ. ವ್ಯಾಮೋಹ ಒಂದು ಬಂಧನ. ಅದು ಕಣ್ಣು ಕಟ್ಟಿಸುತ್ತದೆ. ತನ್ನವರ ದೋಷಗಳನ್ನು ಮುಚ್ಚಿಡುತ್ತದೆ. ಅವರ ಏಳ್ಗೆಗಾಗಿ, ಕಾಪಾಡುವುದಕ್ಕಾಗಿ ಅನ್ಯಾಯಗಳನ್ನು ಮಾಡಿಸುತ್ತದೆ. ಮಕ್ಕಳ ಮೇಲೆ ಪ್ರೇಮವಿರುವುದು ನ್ಯಾಯ ಮತ್ತು ಸಹಜ. ಆದರೆ ಮಗ ದುರ್ಯೋಧನ ಮಾಡಿದ ಪಾಪಕಾರ್ಯಗಳನ್ನು ಅನುಮೋದಿಸುತ್ತ ವಂಶಹಾನಿಗೆ ಕಾರಣವಾದದ್ದು ಧೃತರಾಷ್ಟ್ರನ ವ್ಯಾಮೋಹ. ಕಗ್ಗದ ಮೊದಲನೆಯ ಸಾಲಿನ ಆಶಯ ಇದು. ವ್ಯಾಮೋಹವಾಗದ ಪ್ರೇಮ ತುಂಬಿರಲಿ. ಮನುಷ್ಯನಲ್ಲಿರುವ ಉತ್ಸಾಹ, ಕುತೂಹಲ ಮತ್ತು ಅದಮ್ಯ ಶಕ್ತಿಗಳು ಅನೇಕ ಸಾಹಸಕಾರ್ಯಗಳಿಗೆ ಪ್ರೇರಕವಾಗಿವೆ. ಸಾಹಸವೂ ಒಂದು ಮನೋಧರ್ಮ, ಪರಿಶುದ್ಧ ರೂಪದಲ್ಲಿ. ಅದು ಮನುಷ್ಯನನ್ನು ಅಂತರಿಕ್ಷಕ್ಕೆ ಹಾರಿಸುತ್ತದೆ, ಸಮುದ್ರದ ತಳವನ್ನು ಸವರುವಂತೆ ಮಾಡುತ್ತದೆ, ಪರ್ವತದ ಶಿಖರಗಳನ್ನು ಏರಿಸುತ್ತದೆ. ಇವೆಲ್ಲ ಒಳ್ಳೆಯವೆ. ಆದರೆ ಸಾಹಸವೃತ್ತಿಯಲ್ಲಿ ದ್ವೇಷ ಸೇರಿಕೊಂಡರೆ ಅನಾಹುತವನ್ನು ಉಂಟುಮಾಡುತ್ತದೆ. ದೊಡ್ಡ ದೊಡ್ಡ ವ್ಯವಹಾರಗಳನ್ನು ನಡೆಸುವುದು ಸಾಹಸ. ಆದರೆ ತಮ್ಮ ಉದ್ಯಮ ದೊಡ್ಡದಾಗಲಿಯೆಂದು ಪ್ರತಿಸ್ಪರ್ಧಿಗಳನ್ನು ನಾಶಮಾಡುವುದು ಅಪಚಾರ. ಸಂಶೋಧನೆ ಒಂದು ಸಾಹಸ ಆದರೆ ಆ ಸಂಶೋಧನೆಯಿಂದ ಇತರರನ್ನು ನಾಶಮಾಡುವುದು ನೀಚತನ. ಭೀಮಸಾಹಸವೆಂದರೆ ಅಪರಿಮಿತವಾದ, ಅನೂಹ್ಯವಾದ ಸಾಹಸ. ಅದರಲ್ಲಿ ದ್ವೇಷವಿಲ್ಲದಿದ್ದರೆ ಅದು ಲೋಕೋಪಕಾರಿ.ನೇಮನಿಷ್ಠೆಗಳು ಬದುಕಿನ ಅಲಂಕಾರಗಳು. ಅವುಬದುಕಿನ ನಡೆಯನ್ನು ನೇರಗೊಳಿಸುವ ಸಾಧನಗಳು.ಆದರೆ ಅವು ತೋರಿಕೆಯವಾದರೆ, ಕೇವಲ ಪ್ರದರ್ಶನಕ್ಕೆಸೀಮಿತವಾದರೆ, ಮುಖವಾಡಗಳಾಗುತ್ತವೆ. ನಮ್ಮ ನೇಮನಿಷ್ಠೆಗಳಲ್ಲಿ ಕಠಿಣತೆ, ಜಡತೆ ಬೇಡ, ಅವುಗಳಲ್ಲಿ ಡಂಭಾಚಾರ ಬೇಡ. ನಮಗೆ ಬೇಕಾದದ್ದು ಸೌಮ್ಯತೆ. ಸೌಮ್ಯತೆಯೆಂದರೆ ಅಶಕ್ತತೆಯಲ್ಲ, ಹೇಡಿತನವಲ್ಲ. ಶಕ್ತಿ ಇದ್ದೂ ಅದರ ದುರ್ಬಳಕೆಯಾಗದಂತೆ ನೋಡಿಕೊಳ್ಳುವ ಸಂಯಮವೇ ಸೌಮ್ಯಭಾವ. ಅದು ಯಾವುದರಲ್ಲಿಯೂ ಅತಿಯಾಗಬಾರದು. ಈ ಸೌಮ್ಯಭಾವ ಎಲ್ಲೆಡೆಗೆ ಹರಡಿದಾಗಲೇ ಬಾಳಿಗೊಂದು ಸುಗಂಧ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ನವೆಂಬರ್ 16, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಅಷ್ಟಮಿ ಅಹೋರಾತ್ರ ನಕ್ಷತ್ರ: ಆಶ್ಲೇಷ ಗಂ. 18-59 ಯೋಗ: ಬ್ರಹ್ಮ ಗಂ. 25-07, ಕರಣ: ಬಾಲವ ಗಂ. 18-57, ತುಲಾ ಮಾಸದ 29 ನೇ ದಿನ.

ರಾಹುಕಾಲ: ಮಧ್ಯಾಹ್ನ 12-00 – 01-30

ಸೂರ್ಯೋದಯ: 06-34 ಸೂರ್ಯಾಸ್ತ : 05-57, ಮುಸ್ಲಿಂ ದಿನಾಂಕ : 20 ರಬಿಯುಸ್ಸಾನಿ

ದಿನ ವಿಶೇಷ: ಕಾಲಾಷ್ಟಮಿ, ಪ್ರಥಮಾಷ್ಟಮಿ (ಒರಿಸ್ಸಾ)

ಅದೃಷ್ಟ ಸಂಖ್ಯೆ: 2, 5

ಮೇಷ: ಧಾರ್ಮಿಕ ಕೆಲಸಗಳಲ್ಲಿ ಹೆಚ್ಚಿನ ಆಸಕ್ತಿ ಮೂಡುತ್ತದೆ. ಶಿಕ್ಷಣ ವೃತ್ತಿಯಲ್ಲಿರುವವರಿಗೆ ಈ ದಿನ ಹೊಸ ಅನುಭವ ಸಿಗುವಂತಾಗಬಹುದು. ಸಜ್ಜನರ ಭೇಟಿಯಿಂದ ಜ್ಞಾನಾರ್ಜನೆ ಮತ್ತು ಸಂತೋಷ ಉಂಟಾಗಲಿದೆ.

ವೃಷಭ: ಅಧಿಕಾರಿಗಳ ಒಪ್ಪಂದದಿಂದ ನಿಮ್ಮ ಕಾರ್ಯಭಾರ ಅಧಿಕವಾಗಬಹುದು. ಕಟ್ಟಡದ ರಿಪೇರಿ ಅಥವಾ ನಿರ್ಮಾಣದ ಸಾಮಗ್ರಿಗಳ ಖರೀದಿಗಾಗಿ ಹೆಚ್ಚಿನ ಖರ್ಚು ಉಂಟಾಗುತ್ತದೆ. ಅನವಶ್ಯಕವಾಗಿ ಕಾಲಹರಣ ಮಾಡಬೇಕಾಗುವುದು.

ಮಿಥುನ: ನಿರುದ್ಯೋಗಿಗಳಿಗೆ ಸಾಮಾಜಿಕ ಬದುಕಿನಲ್ಲಿ ಹೊಸ ತಿರುವು ಮೂಡುತ್ತದೆ. ಸಹೋದ್ಯೋಗಿಗಳಲ್ಲಿನ ವಿಚಾರ ವಿನಿಮಯ ಅಸೂಯೆ ಅಥವಾ ದ್ವೇಷ ಹುಟ್ಟಲು ಕಾರಣವಾಗಬಹುದು. ಅಧ್ಯಯನದಲ್ಲಿ ಆಸಕ್ತಿ ಮೂಡುವುದು.

ಕರ್ಕಾಟಕ: ದೊಡ್ಡ ಮಟ್ಟದಲ್ಲಿ ವ್ಯವಹಾರ ನಡೆಸುವವರು ಪಾಲುದಾರರನ್ನು ಹುಡುಕುವ ಪ್ರಯತ್ನ ನಡೆಸಬಹುದು. ದೇಹದಲ್ಲಿ ವಾತ ಪಿತ್ತದ ಅಂಶ ಅಧಿಕವಾಗುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕ.

ಸಿಂಹ: ಒಂಟಿತನವು ಈ ದಿನ ನಿಮ್ಮನ್ನು ಕಾಡಲಿದೆ. ವ್ಯಾವಹಾರಿಕವಾಗಿ ಕೆಲವರು ನಿಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನವನ್ನು ನಡೆಸಲಿದ್ದಾರೆ. ಜಾಗ್ರತರಾಗಿರಿ. ಮಕ್ಕಳ ಮೊಮ್ಮಕ್ಕಳ ಭೇಟಿ ಮನಸ್ಸಿಗೆ ಸಂತಸ ತರುವುದು.

ಕನ್ಯಾ: ಈ ದಿನದಂದು ಕೆಲಸವು ನಿಧಾನಗತಿಯಲ್ಲಿ ಸಾಗುವಕಾರಣದಿಂದ ಯೋಜಿತ ಕಾರ್ಯ ಬಾಕಿ ಉಳಿಯಲಿದೆ. ಮುಂದೆ ಎದುರಾಗುವ ತೊಂದರೆಯನ್ನು ಮೊದಲೇ ಊಹಿಸಿಕೊಂಡು ಪರಿಹಾರ ಕಂಡುಕೊಳ್ಳಿ.

ತುಲಾ: ಯಂತ್ರೋಪಕರಣದ ಕ್ರಿಯೆಯ ಬಗ್ಗೆ ಅತೀವ ಆಸಕ್ತಿ ಮೂಡುವುದು. ನೀರಿನ ವ್ಯತ್ಯಾಸದಿಂದ ಕೆಮ್ಮು, ಕಫದಂತಹ ಸಮಸ್ಯೆಗಳಿಂದ ನರಳಬೇಕಾಗಬಹುದು. ಮನೆಮದ್ದನ್ನು ಮಾಡುವುದರಿಂದ ಶಮನವಾಗಲಿದೆ.

ವೃಶ್ಚಿಕ: ನ್ಯಾಯಾಲಯದಲ್ಲಿದ್ದ ಸಮಸ್ಯೆಗಳಿಗೆ ಉತ್ತರ ಸಿಗಲಿದೆ. ಕುಶಲ ಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯ ಸಿಗುವುದು. ಇಂದಿನ ಅವಧಿಯಲ್ಲಿ ಹಿರಿಯರ ಆರೋಗ್ಯ ತಪಾಸಣೆಗೆ ಗಮನಹರಿಸಿ.

ಧನು: ಸರ್ಕಾರಿ ಕಾಮಗಾರಿಯ ಗುತ್ತಿಗೆದಾರರಿಗೆ ದೊಡ್ಡ ಯೋಜನೆಯೊಂದು ಹುಡುಕಿಕೊಂಡು ಬರಲಿದೆ.ಬುದ್ಧಿವಂತಿಕೆಯಿಂದ ಕೆಲಸವನ್ನು ನಿಮ್ಮದಾಗಿಸಿಕೊಳ್ಳಿರಿ. ರಿಯಲ್ ಎಸ್ಟೇಟ್‌ದಾರರು ವ್ಯವಹಾರ ವೃದ್ಧಿಸಿಕೊಳ್ಳಬಹುದು.

ಮಕರ: ಲೇವಾದೇವಿ ವ್ಯವಹಾರವನ್ನು ಅಲೋಚನೆ ಮಾಡಿ ಕೈಗೂಳ್ಳುವುದು ಒಳ್ಳೆಯದು. ಮದುವೆ ಸಮಾರಂಭ ಜರುಗುವ ಸಾಧ್ಯತೆಗಳಿವೆ. ಕೌಟುಂಬಿಕ ಜೀವನದಲ್ಲಿ ಬದಲಾವಣೆ ಕಾಣುವಿರಿ.

ಕುಂಭ: ಎಷ್ಟೇ ಚಾಣಾಕ್ಷತನ ತೋರಿದರೂ ಮಾತುಗಾರಿಕೆಯಲ್ಲಿ ನೀವು ಈ ದಿನ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಾನಾ ಕಡೆಗಳಿಂದ ಸಂಪಾದನೆ ಇರುವುದು. ಬರಬೇಕಿದ್ದ ಹಣ ಅಡಚಣೆಗಳಿಲ್ಲದೆ ಶೀಘ್ರ ಬರುವುದು.

ಮೀನ: ಆದರ್ಶ ಹಾಗೂ ತತ್ವಗಳ ಜೊತೆಗೆ ಹಿರಿಯರ ಉತ್ತಮ ಅನುಭವ ಹಾಗೂ ಸಲಹೆಗಳನ್ನುಅಳವಡಿಸಿಕೊಂಡಲ್ಲಿ ಯೋಚಿಸಿದ ಕೆಲಸ ಸಂಪೂರ್ಣವಾಗುವುದು. ಸಿದ್ಧ ಉಡುಪುಗಳ ವ್ಯಾಪಾರದಿಂದ ಹೇರಳ ಲಾಭ ಹೊಂದುವಿರಿ.

ಪದಬಂಧ 5140

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆನೆಗಳ ಒಡೆಯ (4)
3.ಗಾಳಿಪಟದ ಕೆಳಗೆ ಸಮತೋಲನಕ್ಕಾಗಿ ಕಟ್ಟುವ ಕುಚ್ಚು (4)
5.ರಾಮನ ಮಗ ಹಿಡಿದಿರುವ ಉಪ್ಪು (3)
7.ಶರಣ ಹಿಡಿದಿರುವ ಬಾಣ (2)
9.ನೀನೊಲಿದರೆ ಕೊರಡು ಹೀಗೆ ಚಿಗುರೀತು! (3)
10.ಮುಷ್ಟಿಯಿಂದ ಹೊಡೆಯುವಿಕೆ (2)
11.ಸೂರು ಅಥವಾ ಕಪಾಟು (2)
12.ಕತ್ತು ಕೊನೆಗಿಟ್ಟು ತೋರಿದ ಬಲ (3)
14.ರಭಸದಲ್ಲಿ ಚಲ್ಲಿರುವ ದ್ರವ ! (2)
16.ಸ್ಲೇಟಿನ ಮೇಲೆ ಬರೆಯುವ ಸಾಧನ (3)
18.ಕಲೆಯೊಳಡಗಿರುವ ಆಹ್ವಾನ (4)
19.ಹಣ್ಣಿನಿಂದ ಮಾಡಿದ ಖಾದ್ಯ (4)

ಮೇಲಿಂದ ಕೆಳಕ್ಕೆ

1.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
2.ತಿರುಮಲದಲ್ಲಿ ಖರೀದಿಸಿರುವ ಎಳ್ಳು (2)
3.ಬಾದಾರಾಯಣ ಕಾಲದ ಶರ (2)
4.ಕನ್ನಡಿಗ ಹಿಡಿದಿರುವ ಡೈನಮೈಟ್! (4)
6.ವನದಲ್ಲಿ ನೀಡಿರುವ ವಾಗ್ದಾನ (3)
8.ಉತ್ತರದ ಕಡೆಯವರ ವಿಪುಲತೆ! (3)
10.ಗುಡಾಣವಿರುವ ಡೇರೆ (3)
11.ಮನಸ್ಸಿಗೆ ಸಂಬಂಧಿಸಿದ್ದು (4)
13.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ! (3)
15.ನೆಮ್ಮದಿ ಹೀಗೆ ಬಂದಿದೆ (4)
16.ಅಬಲೆ ಬೀಸಿದ ಗಾಳ (2)
17.ವಿರೋಧದ ವಿರುದ್ಧ ಪದ (2)

5139ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅಂಟು 4.ಪರಾವಲಂಬಿ 5.ಉಮ್ಮಳ 6.ಪರಾಗ 8.ಮಂಡೂಕ 9.ಮರ್ಮಭೇದಕ 10.ನಿಧಾನ 11.ರಿಕಾಪು 14.ಕುಶಲ 15.ಕತಚಿಂತಹಿ 16.ಬಂಡಿ

ಮೇಲಿಂದ ಕೆಳಕ್ಕೆ:
1.ಅಪರೂಪ 2.ಅಂಬಿಗ 3.ನಳಪಾಕ 7.ಗಮನ 8.ಮಂಕರಿ 10.ನಿರಂಕುಶ 12.ಪುರೋಹಿತ 13.ತುಕಡಿ

ಸುಡೊಕು 5526

	4					8	2	
8		9						5
	6					3		7
	8			1			5	
9		3	5	2	8	4		6
	5			3			8	
5		4		8			7	
2	9		1		7	5		4
		6		4			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5525 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18329
ಇಂದಿನ ಅಂತ್ಯ	18403
▼	74
ದಿನದ ಕನಿಷ್ಠ	18,427

ವಿನಿಮಯ ದರ

$ ಡಾಲರ್	80.91
£ ಪೌಂಡ್	95.92
€ ಯುರೊ	84.36
¥ ಯೆನ್ (100ಕ್ಕೆ)	58.23

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹540

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550(1520)
ಸೋಯಾ (ರಿಫೈನ್ಡ್)	₹1370(1380)
ಸೂರ್ಯಕಾಂತಿ (ರಿಫೈನ್ಡ್)	₹1550(1550)
ಪಾಮೋಲಿನ್	₹975(980)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2000-2500
ಮಧ್ಯಮ	₹1200-2000
ಸಣ್ಣ	₹500-1200

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146,50
ಆರ್‌ಎಸ್‌ಎಸ್-5	₹ 138
ಗುಡ್ ಲಾಟ್	₹131

ರೆಪೊ ದರದಲ್ಲಿ ಅಲ್ಪ ಏರಿಕೆ ಸಾಧ್ಯತೆ

ಮುಂಬೈ (ರಾಯಿಟರ್ಸ್): ಚಿಲ್ಲರೆ ಹಣದುಬ್ಬರ ಪ್ರಮಾಣವು ತುಸು ಕಡಿಮೆ ಆಗಿರುವ ಕಾರಣ, ಡಿಸೆಂಬರ್‌ನಲ್ಲಿ ನಡೆಯಲಿರುವ ಸಭೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ರೆಪೊ ದರವನ್ನು ಶೇಕಡ 0.35ರಷ್ಟು ಮಾತ್ರ ಹೆಚ್ಚಿಸುವ ತೀರ್ಮಾನ ಕೈಗೊಳ್ಳಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಮುಂದಿನ ದಿನಗಳಲ್ಲಿ ಇನ್ನಷ್ಟು ತಗ್ಗುವ ನಿರೀಕ್ಷೆ ಇದೆ. ಹಣದುಬ್ಬರ ನಿಯಂತ್ರಿಸುವ ಉದ್ದೇಶದಿಂದ, ಮೇ ತಿಂಗಳ ನಂತರದಲ್ಲಿ ಆರ್‌ಬಿಐ ರೆಪೊ ದರವನ್ನು ಶೇ 1.90ರಷ್ಟು ಹೆಚ್ಚಿಸಿದೆ. ರೆಪೊ ದರದ ಕುರಿತು ತೀರ್ಮಾನ ಕೈಗೊಳ್ಳುವ ಹಣಕಾಸು ನೀತಿ ಸಮಿತಿಯು ಡಿಸೆಂಬರ್‌ನಲ್ಲಿ ಸಭೆ ಸೇರಲಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಅಕ್ಟೋಬರ್‌ನಲ್ಲಿ ಶೇ 6.77ಕ್ಕೆ ಇಳಿಕೆಯಾಗಿದೆ. 'ರೆಪೊ ದರವು ಡಿಸೆಂಬರ್‌ನಲ್ಲಿ ಶೇ 0.35ರಷ್ಟು ಹಾಗೂ ಫೆಬ್ರುವರಿಯಲ್ಲಿ ಶೇ 0.25ರಷ್ಟು ಹೆಚ್ಚಾಗಬಹುದು ಎಂಬುದು ನಮ್ಮ ಅಂದಾಜು' ಎಂದು ನೊಮುರ ಸಂಸ್ಥೆಯ ಅರ್ಥಶಾಸ್ತ್ರಜ್ಞರಾದ ಸೋನಲ್ ವರ್ಮ ಮತ್ತು ಆರೊದೀಪ್ ನಂದಿ ಹೇಳಿದ್ದಾರೆ.

ಡಿಸೆಂಬರ್‌ನಲ್ಲಿ ಆರ್‌ಬಿಐ ರೆಪೊ ದರ ಹೆಚ್ಚು ಮಾಡದೆ ಇರುವ ಸಾಧ್ಯತೆಯೂ ಇದೆ ಎಂದು ಇಂಡಿಯಾ ರೇಟಿಂಗ್ಸ್ ಸಂಸ್ಥೆ ಹೇಳಿದೆ.

ಬ್ಯಾಂಕಿಂಗ್, ಇಂಧನ ವಲಯದಲ್ಲಿ ಹೆಚ್ಚಿದ ಹೂಡಿಕೆ

ದಾಖಲೆ ಮಟ್ಟ ತಲುಪಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರದ ವಹಿವಾಟಿನಲ್ಲಿ 248 ಅಂಶ ಏರಿಕೆ ಆಗಿ, ಸಾರ್ವಕಾಲಿಕ ಗರಿಷ್ಠ ಮಟ್ಟವಾದ 61,872 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದೆ. ದಿನದ ಕೊನೆಯಲ್ಲಿ ಬ್ಯಾಂಕಿಂಗ್, ಇಂಧನ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿಸಿದ್ದು ಸೂಚ್ಯಂಕದ ಏರಿಕೆಗೆ ನೆರವಾಯಿತು.

ಜಾಗತಿಕ ಮಾರುಕಟ್ಟೆಗಳಲ್ಲಿನ ಸಕಾರಾತ್ಮಕ ವಹಿವಾಟು ಕೂಡ ದೇಶಿ ಮಾರುಕಟ್ಟೆಯ ಮೇಲೆ ಪ್ರಭಾವ ಬೀರಿತು. ರೂಪಾಯಿ ಬಲವರ್ಧನೆ ಹಾಗೂ ಚಿಲ್ಲರೆ ಹಣದುಬ್ಬರ ತುಸು ಇಳಿಕೆ, ವಿದೇಶಿ ಹೂಡಿಕೆಯ ಹರಿವು ಕೂಡ ಮಾರುಕಟ್ಟೆಯಲ್ಲಿ ತೇಜಿ ವಹಿವಾಟು ನಡೆಯಲು ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.



ಸೆನ್ಸೆಕ್ಸ್ ನವೆಂಬರ್ 11ರಂದು 61,795 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದ್ದು ಇದುವರೆಗಿನ ಗರಿಷ್ಠವಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 74 ಅಂಶ ಏರಿಕೆ ದಾಖಲಿಸಿತು. 'ಬ್ಯಾಂಕಿಂಗ್ ವಲಯದ ಷೇರುಗಳು ಸೂಚ್ಯಂಕಗಳ ಚೇತರಿಕೆಗೆ ಕಾರಣವಾದವು. ಚಿಲ್ಲರೆ ಹಣದುಬ್ಬರ ದರವು ಶೇ 6ಕ್ಕಿಂತ ಹೆಚ್ಚಿದ್ದರೂ, ಜನವರಿಯಿಂದ ಅದು ಶೇ 6ರ ಮಟ್ಟಕ್ಕಿಂತ ಕೆಳಕ್ಕೆ ಬರುವ ನಿರೀಕ್ಷೆ ಇದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ದೇಶದಲ್ಲಿ ಚಿಲ್ಲರೆ ಹಣದುಬ್ಬರ ತಗ್ಗುತ್ತಿರುವ ಕಾರಣ ಆರ್‌ಬಿಐ ಮುಂದಿನ ಹಣಕಾಸು ನೀತಿ ಸಭೆಯಲ್ಲಿ ರೆಪೊ ದರವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲಿಕ್ಕಿಲ್ಲ ಎಂಬ ಲೆಕ್ಕಾಚಾರ ಹೂಡಿಕೆದಾರರಲ್ಲಿ ಇದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಸಣ್ಣ ಹೂಡಿಕೆಗಳ (ಈಕ್ವಿಟಿ) ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳಲ್ಲಿ ಚೇತರಿಕೆ ದಾಖಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1.62ರಷ್ಟು ಕಡಿಮೆ ಆಗಿದ್ದು ಪ್ರತಿ ಬ್ಯಾರೆಲ್‌ಗೆ 91.63 ಡಾಲರ್‌ಗೆ ತಲುಪಿದೆ.

ಉಕ್ರೇನ್ ಮೇಲೆ ರಷ್ಯಾ ವೈಮಾನಿಕ ದಾಳಿ

ಕೀವ್ (ಎಪಿ): ಉಕ್ರೇನ್‌ನ ನಗರಗಳು, ವಿದ್ಯುತ್ ಉತ್ಪಾದನಾ ಘಟಕಗಳು ಸೇರಿದಂತೆ ವಿವಿಧ ಸೌಲಭ್ಯಗಳನ್ನು ಗುರಿಯಾಗಿಸಿ ರಷ್ಯಾ ಪಡೆಗಳು ಮಂಗಳವಾರ ವೈಮಾನಿಕ ದಾಳಿ ನಡೆಸಿವೆ.

'ದೇಶದಾದ್ಯಂತ ರಷ್ಯಾ ಪಡೆಗಳು 100ಕ್ಕೂ ಅಧಿಕ ಕ್ಷಿಪಣಿಗಳಿಂದ ದಾಳಿ ನಡೆಸಿವೆ' ಎಂದು ಉಕ್ರೇನ್‌ನ ವಾಯುಪಡೆ ವಕ್ತಾರ ರೊಬ್ಬರು ತಿಳಿಸಿದ್ದಾರೆ.

ರಾಜಧಾನಿ ಕೀವ್ ಸೇರಿದಂತೆ, ದೇಶದಾದ್ಯಂತ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ತುರ್ತುಪರಿಸ್ಥಿತಿ ಘೋಷಿಸಲಾಗಿದೆ. ಜನರು ಕತ್ತಲಲ್ಲೇ ಕಾಲ ಕಳೆಯುವಂತಾಗಿದೆ.

ಪ್ರಯಾಣಿಕರಿಗೆ ₹981 ಕೋಟಿ ಮರುಪಾವತಿ: ಏರ್ ಇಂಡಿಯಾಗೆ ಅಮೆರಿಕ ಆದೇಶ

ವಾಷಿಂಗ್ಟನ್ (ಪಿಟಿಐ) : ವಿಮಾನಗಳ ಹಾರಾಟ ರದ್ದು ಅಥವಾ ಬದಲಾವಣೆಯಾಗಿರುವುದಕ್ಕೆ ಸಂಬಂಧಿಸಿ, ಪ್ರಯಾಣಿಕರಿಗೆ ₹ 981 ಕೋಟಿ ಮರುಪಾವತಿಸುವಂತೆ ಟಾಟಾ ಸಮೂಹ ಮಾಲೀಕತ್ವದ ಏರ್ ಇಂಡಿಯಾಗೆ ಅಮೆರಿಕದ ಸಾರಿಗೆ ಸಚಿವಾಲಯ ಆದೇಶಿಸಿದೆ.

ಅಲ್ಲದೇ, ಪ್ರಯಾಣಿಕರಿಗೆ ಹಣ ಮರುಪಾವತಿಸುವಲ್ಲಿ ವಿಪರೀತ ವಿಳಂಬವಾಗಿದ್ದು, ಇದಕ್ಕಾಗಿ ₹ 11 ಕೋಟಿಯಷ್ಟು ದಂಡ ಪಾವತಿಸುವಂತೆಯೂ ಸಚಿವಾಲಯ ಆದೇಶಿಸಿದೆ.

ಕೋವಿಡ್ ಪಿಡುಗಿನ ಸಮಯವೂ ಸೇರಿ ವಿವಿಧ ಸಂದರ್ಭಗಳಲ್ಲಿ ಹೆಚ್ಚಿನ ಸಂಖ್ಯೆಯ ವಿಮಾನಗಳ ಹಾರಾಟವನ್ನು ರದ್ದು ಮಾಡಲಾಗಿತ್ತು, ಇಲ್ಲವೇ, ವಿಮಾನಗಳನ್ನು ಬದಲಾಯಿಸಲಾಗಿತ್ತು. ಇದಕ್ಕೆ ಸಂಬಂಧಿಸಿ, ವಿಮಾನಯಾನ ಕಂಪನಿಗಳು ಪ್ರಯಾಣಿಕರಿಗೆ ಟಿಕೆಟ್ ಮೊತ್ತವನ್ನು ಮರುಪಾವತಿಸಬೇಕಿತ್ತು.

ಏರ್ ಇಂಡಿಯಾ ಸೇರಿ ಒಟ್ಟು 6 ವಿಮಾನಯಾನ ಕಂಪನಿಗಳು, ಪ್ರಯಾಣಿಕರಿಗೆ ₹ 4,848 ಕೋಟಿಗೂ ಅಧಿಕ ಮೊತ್ತವನ್ನು ಮರುಪಾವತಿಸುವುದಾಗಿ ಒಪ್ಪಿದ್ದವು ಎಂದು ಸಚಿವಾಲಯ ತಿಳಿಸಿದೆ.

ಮರುಪಾವತಿ ಕೋರಿ 1,900 ದೂರುಗಳು ಸಲ್ಲಿಕೆಯಾಗಿದ್ದವು. ಇವುಗಳ ಪೈಕಿ ಶೇ 50ಕ್ಕೂ ಅಧಿಕ ಸಂಖ್ಯೆಯ ದೂರುಗಳಿಗೆ ಸಂಬಂಧಿಸಿ ಹಣ ಮರುಪಾವತಿ ಕುರಿತ ಪ್ರಕ್ರಿಯೆಗೆ ಏರ್ ಇಂಡಿಯಾ 100ಕ್ಕೂ ಹೆಚ್ಚು ದಿನಗಳನ್ನು ತೆಗೆದುಕೊಂಡಿತ್ತು ಎಂಬುದು ತನಿಖೆಯಿಂದ ಗೊತ್ತಾಗಿತ್ತು.

ರಫ್ತು ತೀವ್ರ ಇಳಿಕೆ

ನವದೆಹಲಿ (ಪಿಟಿಐ): ದೇಶದ ರಫ್ತು ಚಟುವಟಿಕೆಗಳು ಎರಡು ವರ್ಷಗಳ ನಂತರದಲ್ಲಿ ನಕಾರಾತ್ಮಕ ಮಟ್ಟವನ್ನು ತಲುಪಿವೆ. ಅಕ್ಟೋಬರ್‌ನಲ್ಲಿ ರಫ್ತು ಪ್ರಮಾಣವು ಶೇಕಡ 16.65ರಷ್ಟು ಕುಸಿದಿದ್ದು, 29.78 ಬಿಲಿಯನ್ ಡಾಲರ್‌ಗೆ (₹ 2.40 ಲಕ್ಷ ಕೋಟಿ) ತಲುಪಿದೆ. ಜಾಗತಿಕ ಮಟ್ಟದಲ್ಲಿ ಬೇಡಿಕೆ ಕಡಿಮೆ ಆಗಿದ್ದು ಈ ಕುಸಿತಕ್ಕೆ ಪ್ರಮುಖ ಕಾರಣ.

ಅಕ್ಟೋಬರ್‌ನಲ್ಲಿ ದೇಶದ ವ್ಯಾಪಾರ ಕೊರತೆಯು 26.91 ಬಿಲಿಯನ್ ಡಾಲರ್‌ಗೆ (₹ 2.17 ಲಕ್ಷ ಕೋಟಿ) ಹಿಗ್ಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳಿವೆ.

ಮುತ್ತು ಮತ್ತು ಆಭರಣ, ಎಂಜಿನಿಯರಿಂಗ್, ಪೆಟ್ರೋಲಿಯಂ ಉತ್ಪನ್ನಗಳು, ಸಿದ್ಧ ಉಡುಪುಗಳು ಮತ್ತು ಜವಳಿ, ರಾಸಾಯನಿಕಗಳು, ಔಷಧ, ಸಮುದ್ರ ಉತ್ಪನ್ನಗಳು, ಚರ್ಮ ರಫ್ತು ಅಕ್ಟೋಬರ್‌ನಲ್ಲಿ ಕುಸಿತ ಕಂಡಿದೆ.

ಅಕ್ಟೋಬರ್‌ನಲ್ಲಿ ಆಮದು ಪ್ರಮಾಣವು ಶೇ 6ರಷ್ಟು ಹೆಚ್ಚಾಗಿ, ₹ 4.58 ಲಕ್ಷ ಕೋಟಿ ತಲುಪಿದೆ. ಕಚ್ಚಾ ತೈಲ, ಹತ್ತಿ, ರಸಗೊಬ್ಬರ ಮತ್ತು ಯಂತ್ರಗಳ ಆಮದು ಹೆಚ್ಚಾಗಿದ್ದು ಇದಕ್ಕೆ ಕಾರಣ. ಏಪ್ರಿಲ್‌ನಿಂದ ಅಕ್ಟೋಬರ್ ಅಂತ್ಯದವರೆಗಿನ ಅವಧಿಯಲ್ಲಿ ರಫ್ತು ಪ್ರಮಾಣ ಶೇ 12.55ರಷ್ಟು, ಆಮದು ಪ್ರಮಾಣ ಶೇ 33.12ರಷ್ಟು ಹೆಚ್ಚಾಗಿದೆ.

ಹಿಂದೆ 2020ರ ನವೆಂಬರ್ ತಿಂಗಳಲ್ಲಿ ರಫ್ತು ಪ್ರಮಾಣವು ಶೇ 8.74ರಷ್ಟು ಕುಸಿತ ಕಂಡಿತ್ತು. 'ಜಾಗತಿಕ ಮಟ್ಟದಲ್ಲಿನ ಸವಾಲುಗಳು ಬೇಡಿಕೆಯ ಮೇಲೆ ಪರಿಣಾಮ ಬೀರುತ್ತಿವೆ. ಅದು ಭಾರತದ ರಫ್ತು ವಹಿವಾಟನ್ನು ಕೂಡ ಪ್ರಭಾವಿಸುತ್ತದೆ' ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಬಾರ್ತ್‌ವಾಲ್ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

15-11-2022

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560(1530)
ಒಂದು ವಾರದ ಡೆಲಿವರಿ	1555(1525)
ಸೋಯಾ ಕಚ್ಚಾ	1345(1350)
ಪಾಮ್ ವಾರದ ಡೆಲಿವರಿ	973(978)
ಸೂರ್ಯಕಾಂತಿ ಎಣ್ಣೆ ಕಚ್ಚಾ	00

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52750 (52300)
ಬೆಳ್ಳಿ ಕೆ.ಜಿ 62300 (61600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

ಅರಸೀಕೆರೆ	₹12000-12606
ತುರುವೇಕೆರೆ	₹12600-12600

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹485-666
ದ್ವಿತಳಿ (ಬಿ.ವಿ) ₹350-844

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸಂಜೀವ್, ಊರು ಬೇಡ

- **ಪ್ರಶ್ನೆ:** ನಾನು ಅಧಿಕಾರಿಯಾಗಿ ಕೇಂದ್ರ ಸರ್ಕಾರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಸಂಬಳ ಮತ್ತು ಉಳಿತಾಯ ಹೀಗಿದೆ: ಒಟ್ಟು ವೇತನ ₹ 71,000, ನಿವ್ವಳ ₹ 50,000. ಸೆಕ್ಷನ್ 80ಸಿ ಅಡಿ ಬರುವ ಹೂಡಿಕೆಗಳನ್ನು (ಎನ್‌ಪಿಎಸ್, ಅವಧಿ ವಿಮೆ, ಪಿಪಿಎಫ್, ವೈದ್ಯಕೀಯ ವಿಮೆ) ಈಗಾಗಲೇ ಪೂರ್ತಿಯಾಗಿ ಬಳಸಿಕೊಂಡಿದ್ದೇನೆ. ಈಗ ₹ 7,000ವನ್ನು ಆದಾಯ ತೆರಿಗೆಯಾಗಿ ನನ್ನ ಸಂಬಳದಿಂದ ಪ್ರತಿ ತಿಂಗಳು ಕಡಿತಗೊಳಿಸಲಾಗುತ್ತಿದೆ. ನಮಗೆ ಮನೆ ಕಟ್ಟಲು ನನ್ನ ಬಳಿ ಸಾಕಷ್ಟು ಉಳಿತಾಯ ಇರುವುದರಿಂದ ತೆರಿಗೆ ಉಳಿಸಲು ಗೃಹ ಸಾಲ ಉತ್ತಮ ಆಯ್ಕೆಯೇ ಎಂಬುದನ್ನು ತಿಳಿಸಿ.

ಉತ್ತರ: ನಿಮ್ಮ ಆದಾಯವು, ಆದಾಯ ತೆರಿಗೆಯ ಶೇ 5 ಹಾಗೂ ಶೇ 20ರ ಸ್ಲ್ಯಾಬ್ ದರಗಳಲ್ಲಿ ಇರಬಹುದು. ಯಾವುದೇ ವ್ಯಕ್ತಿ ಮನೆ ಕಟ್ಟಿಸಲು ಅಥವಾ ಖರೀದಿಸಲು ಪಾವತಿಸುವ ಇಎಂಐ ಮೊತ್ತದಲ್ಲಿ ಅಸಲು ಮತ್ತು ಬಡ್ಡಿ ಬೇರ್ಪಡಿಸಲಾಗುತ್ತದೆ. ಪಾವತಿಸುವ ಅಸಲು ಮೊತ್ತ ನೀವು ಪ್ರಶ್ನೆಯಲ್ಲಿ ಹೇಳಿರುವ ಸೆಕ್ಷನ್ 80 ಸಿ ಅಡಿ ಬರುತ್ತದೆ. ನೀವು ₹ 1.50 ಲಕ್ಷದಷ್ಟು ಹೂಡಿಕೆಯನ್ನು ಈಗಾಗಲೇ ಮಾಡುತ್ತಿದ್ದೀರಿ. ಹೀಗಾಗಿ ಅಸಲು ಪಾವತಿಯಿಂದ ನಿಮ್ಮ ತೆರಿಗೆ ಪಾವತಿಯ ಮೇಲೆ ಯಾವುದೇ ಲಾಭವಿಲ್ಲ.

ಸೆಕ್ಷನ್ 24ರ ಪ್ರಕಾರ, ಸ್ವಂತ ವಾಸಕ್ಕೆ ನಿರ್ಮಿಸಲಾಗುವ ಮನೆಯ ಸಾಲದ ಮೇಲೆ ಕಟ್ಟುವ ಬಡ್ಡಿ ಮೊತ್ತಕ್ಕೆ ವಾರ್ಷಿಕವಾಗಿ ₹ 2 ಲಕ್ಷದವರೆಗೆ, ಆದಾಯದೊಡನೆ ಬಡ್ಡಿ ವಜಾ ಮಾಡುವ ಅವಕಾಶವಿದೆ. ನೀವು ₹ 2 ಲಕ್ಷದ ಮೇಲೆ ಪಾವತಿಸುವ ವಾರ್ಷಿಕ ಬಡ್ಡಿ ಮೊತ್ತಕ್ಕೆ ನಿಮಗೆ ಅನ್ವಯವಾಗುವ ಶೇ 20.8ರ ತೆರಿಗೆ ದರದಲ್ಲಿ ಹೆಚ್ಚೆಂದರೆ ₹ 41,600 ವಾರ್ಷಿಕ ತೆರಿಗೆ ಉಳಿತಾಯವಾಗುತ್ತದೆ. ಆದರೆ, ಈ ತೆರಿಗೆ ಉಳಿಸಲು ನೀವು ಸುಮಾರು ₹ 2 ಲಕ್ಷದವರೆಗೆ ಬಡ್ಡಿ ಪಾವತಿಸುತ್ತೀರಿ ಎನ್ನುವುದು ನೆನಪಿರಲಿ. ಇಲ್ಲಿ ಗಮನಿಸಬೇಕಾದ ಇನ್ನೂ ಒಂದು ಅಂಶವೆಂದರೆ, ನಿಮ್ಮ ಉಳಿತಾಯದ ಮೊತ್ತ ಮನೆ ಕಟ್ಟಲು ಬಳಸಿದಾಗ ಬ್ಯಾಂಕಿನಿಂದ ಬರುವ ಶೇ 6ರ ಬಡ್ಡಿ ನಷ್ಟವಾಗಬಹುದು. ಆದರೆ ಅದೇ ಮೊತ್ತವನ್ನು ಗೃಹ ಸಾಲವಾಗಿ ಪಡೆದಾಗ ನೀವು ಶೇ 8.5ರಷ್ಟು ಬಡ್ಡಿ ತೆರಬೇಕಾಗುತ್ತದೆ.

ಇದಕ್ಕಾಗಿ ನೀವು ಮೊದಲು ನಿಮ್ಮ ಮನೆ ನಿರ್ಮಾಣಕ್ಕೆ ಆಗಬಹುದಾದ ವೆಚ್ಚ, ನಿರ್ಮಾಣದ ಅವಧಿ ಹಾಗೂ ನಿಮ್ಮ ಉಳಿತಾಯದಿಂದ ಮನೆ ಕಟ್ಟಲು ಎಷ್ಟು ಮೊತ್ತ ಸರಿದೂಗಿಸಬಹುದು ಎಂಬುದನ್ನು ನಿರ್ಧರಿಸಿ. ಇರುವ ಸಂಪೂರ್ಣ ಉಳಿತಾಯ ಮೊತ್ತ ಮನೆ ಕಟ್ಟಲು ಬಳಸಿ ಮುಂದೆ ಯಾವುದೇ ಆರ್ಥಿಕ ಅಡಚಣೆಯಾದಾಗ ಖಾಸಗಿ ಸಾಲಗಳಿಗೆ ಮೊರೆ ಹೋಗುವುದು ದುಬಾರಿಯಾಗಬಹುದು. ಹೀಗಾಗಿ ಆರ್ಥಿಕ ಸಂದಿಗ್ಧತೆ ನಿವಾರಿಸಲು ಒಂದಿಷ್ಟು ಉತ್ತಮ ಮೊತ್ತವನ್ನು ಭದ್ರವಾಗಿಟ್ಟು ಉಳಿದ ಸಂಪೂರ್ಣ ಮೊತ್ತವನ್ನು ಮನೆಗೆ ಬಳಸಿ. ಮತ್ತೂ ಕೊರತೆಯಾಗುವ ಮೊತ್ತವನ್ನಷ್ಟೇ ನೀವು ಗೃಹ ಸಾಲವಾಗಿ ಪಡೆಯಿರಿ ಹಾಗೂ ಅದರ ಮೇಲೆ ಸಿಗುವ ತೆರಿಗೆ ರಿಯಾಯಿತಿಗಳನ್ನು ಉಪಯೋಗಿಸಿಕೊಳ್ಳಿ.

ವಿಶ್ವನಾಥ್, ಆರ್.ಟಿ. ನಗರ, ಬೆಂಗಳೂರು

- **ಪ್ರಶ್ನೆ:** ನಾನು ಷೇರುಗಳಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಅವುಗಳಿಂದ ಡಿವಿಡೆಂಡ್ ಬರುತ್ತಿರುತ್ತದೆ. ಕಳೆದ ಒಂದೆರಡು ವರ್ಷಗಳ ಹಿಂದೆ ಬಜೆಟ್‌ನಲ್ಲಿ ಇದಕ್ಕೆ ಹೂಡಿಕೆದಾರರೇ ತೆರಿಗೆ ಪಾವತಿಸಬೇಕೆಂದು ಹೇಳಲಾಗಿತ್ತು. ಆದರೆ ಡಿವಿಡೆಂಡ್ ಪಾವತಿಸುವಾಗ ತೆರಿಗೆ ಕಡಿತ ಮಾಡಿ ನಮಗೆ ಹಣ ಪಾವತಿಸಲಾಗಿದೆ ಎಂಬ ಮಾಹಿತಿಯನ್ನು ಕಂಪನಿಗಳು ಇಮೇಲ್ ಮೂಲಕ ತಿಳಿಸುತ್ತಿವೆ. ತೆರಿಗೆ ಕಡಿತ ಮಾಡಿ ಉಳಿದ ಮೊತ್ತ ಪಾವತಿಸುವ ಕ್ರಮ ಸರಿಯೇ? ನಾವೂ ತೆರಿಗೆ ಪಾವತಿಸುತ್ತಿರುವಾಗ ಕಂಪನಿಗಳು ಹೀಗೆ ಮಾಡುವ ಔಚಿತ್ಯವೇನು?

ಸಂದೇಶ್ ಎನ್., ರಾಜಾಜಿನಗರ, ಬೆಂಗಳೂರು

- **ಪ್ರಶ್ನೆ:** ನನಗೆ ಡಿವಿಡೆಂಡ್ ಪಾವತಿ ಆಗುವಾಗ ತೆರಿಗೆ ಕಡಿತ ಆಗುತ್ತಿಲ್ಲ. ನಾನು ವಾರ್ಷಿಕ ತೆರಿಗೆ ವಿವರ ಸಲ್ಲಿಸುವಾಗ ಡಿವಿಡೆಂಡ್ ಆದಾಯವನ್ನು ತೆರಿಗೆ ಇಲಾಖೆಗೆ ಘೋಷಿಸಿ, ತೆರಿಗೆ ಪಾವತಿ ಮಾಡುತ್ತಿದ್ದೇನೆ. ನನಗೆ ಏಕೆ ತೆರಿಗೆ ಕಡಿತ ಮಾಡುತ್ತಿಲ್ಲ?

ಉತ್ತರ: ಹೂಡಿಕೆದಾರರು ಷೇರು ಅಥವಾ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ, ಅವರಿಗೆ ಕಂಪನಿಗಳ ಲಾಭದ ಒಂದಷ್ಟು ಮೊತ್ತವನ್ನು ಡಿವಿಡೆಂಡ್ ರೂಪದಲ್ಲಿ ನೀಡಲಾಗುತ್ತದೆ. ಆರ್ಥಿಕ ವರ್ಷ 2019-20ರವರೆಗೆ, ಷೇರುದಾರರು ದೇಶೀಯ ಕಂಪನಿಯಿಂದ ಲಾಭಾಂಶ ಪಡೆದರೆ, ಅಂತಹ ಲಾಭಾಂಶದ ಮೇಲೆ ಯಾವುದೇ ತೆರಿಗೆಯನ್ನು ಪಾವತಿಸುವ ಅಗತ್ಯವಿರಲಿಲ್ಲ. ಏಕೆಂದರೆ, ಇದಕ್ಕೆ ಆದಾಯ ತೆರಿಗೆಯ ಸೆಕ್ಷನ್ 10(34), (35)ರ ಅಡಿಯಲ್ಲಿ ವಿನಾಯಿತಿ ಇತ್ತು ಹಾಗೂ ಆಗ ದೇಶಿ ಕಂಪನಿಗಳು ಡಿವಿಡೆಂಡ್ ವಿತರಿಸುವ ಮೊದಲು ನಿಗದಿತ ದರದಲ್ಲಿ ಡಿವಿಡೆಂಡ್ ವಿತರಣಾ ತೆರಿಗೆ ಪಾವತಿಸಬೇಕಾಗಿತ್ತು.

ಆದರೆ, 2020ರ ಹಣಕಾಸು ಕಾಯ್ದೆಯಲ್ಲಿ ಮಾಡಲಾದ ಕೆಲವು ಬದಲಾವಣೆಗಳ ಪ್ರಕಾರ, ಸಾಂಪ್ರದಾಯಿಕ ತೆರಿಗೆ ವಿಧಾನವನ್ನು ಮತ್ತೆ ಜಾರಿಗೊಳಿಸಲಾಯಿತು. ಅದರ ಅನ್ವಯ, ಪ್ರಸ್ತುತ ಹೂಡಿಕೆದಾರರ ಕೈಯಲ್ಲಿ ಲಾಭಾಂಶವನ್ನು ತೆರಿಗೆಗೆ ಒಳಪಡಿಸಲಾಗುತ್ತಿದೆ. ಪರಿಣಾಮವಾಗಿ, ಡಿವಿಡೆಂಡ್ ಆದಾಯವು ಈಗ ವೈಯಕ್ತಿಕವಾಗಿ ಅನ್ವಯವಾಗುವ ಆದಾಯ ತೆರಿಗೆ ಸ್ಲ್ಯಾಬ್ ದರಕ್ಕೆ ಅನುಗುಣವಾಗಿ ತೆರಿಗೆಗೊಳಪಡುತ್ತದೆ. ಡಿವಿಡೆಂಡ್ ಮೇಲೆ ಸಂಪೂರ್ಣ ತೆರಿಗೆ ಪಾವತಿಸುವ ಜವಾಬ್ದಾರಿ ತೆರಿಗೆದಾರರದ್ದಾದರೂ, ಡಿವಿಡೆಂಡ್ ವಿತರಿಸುವಾಗ ಸೆಕ್ಷನ್ 194ರ ಪ್ರಕಾರ, 2020ರ ಏಪ್ರಿಲ್ 1ರ ನಂತರ ಯಾವುದೇ ಭಾರತೀಯ ಕಂಪನಿಗಳು ನಿವಾಸಿ ಷೇರುದಾರರಿಗೆ ಒಂದು ಹಣಕಾಸು ವರ್ಷದಲ್ಲಿ ₹ 5,000ಕ್ಕಿಂತ ಅಧಿಕ ಮೊತ್ತವನ್ನು ಪಾವತಿಸುವುದಿದ್ದರೆ, ಅಂತಹ ಲಾಭಾಂಶದಿಂದ ಶೇ 10ರ ದರದಲ್ಲಿ ತೆರಿಗೆಯನ್ನು ಕಡಿತ ಮಾಡಬೇಕೆನ್ನುವ ಹೊಸ ನಿಯಮವನ್ನೂ ತರಲಾಯಿತು. ವಾರ್ಷಿಕ ತೆರಿಗೆ ವಿವರ ಸಲ್ಲಿಸುವಾಗ ಈ ಮೊತ್ತವನ್ನು ಅಂತಿಮ ತೆರಿಗೆಯೊಡನೆ ಸರಿದೂಗಿಸುವ ಅವಕಾಶವಿದೆ. ಒಂದು ವೇಳೆ ಒಂದೇ ಹಣಕಾಸು ವರ್ಷದಲ್ಲಿ ₹ 5,000ಕ್ಕಿಂತ ಕಡಿಮೆ ಡಿವಿಡೆಂಡ್ ಒಂದು ಕಂಪನಿಯಿಂದ ಪಡೆದಿದ್ದರೆ, ಅಂಥ ವೇಳೆ ಕಂಪನಿಗಳು ತೆರಿಗೆ ಕಡಿತ ಮಾಡುವ ಅಗತ್ಯವಿಲ್ಲ. ಆಗ ಸಂಪೂರ್ಣ ತೆರಿಗೆ ಮೊತ್ತವನ್ನು ತೆರಿಗೆದಾರರೇ ತಮ್ಮ ಕಡೆಯಿಂದ ಪಾವತಿಸಬೇಕಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001 ಇ-ಮೇಲ್: businessdesk@prajavani.co.in

ಭಾರತೀಯ ಸಮುದಾಯದೊಂದಿಗೆ ಸಂವಾದ

ಮೋದಿ–ಜಿನ್‌ಪಿಂಗ್ ಹಸ್ತಲಾಘವ

ಬಾಲಿ, ಇಂಡೊನೇಷ್ಯಾ (ಪಿಟಿಐ):ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಜಿ–20 ಶೃಂಗಸಭೆ ಬಳಿಕ ರಾತ್ರಿ ಭೋಜನಕ್ಕೆ ತೆರಳುವ ವೇಳೆ ಪರಸ್ಪರ ಕೈಕುಲುಕಿ ಯೋಗಕ್ಷೇಮ ವಿಚಾರಿಸಿದರು.

ಲಡಾಖ್‌ನ ಪೂರ್ವ ಗಡಿಯಲ್ಲಿ ಉಭಯ ದೇಶಗಳ ಸೇನೆಗಳ ನಡುವೆ ಸಂಘರ್ಷ ಆರಂಭವಾಗಿ ಎರಡು ವರ್ಷಗಳು ಗತಿಸಿವೆ. ಈ ಹಿನ್ನೆಲೆಯಲ್ಲಿ, ಉಭಯ ನಾಯಕರು ಮುಖಾಮುಖಿಯಾಗಿದ್ದು ಗಮನ ಸೆಳೆದಿತ್ತು.

ಆರ್ಥಿಕತೆಗೆ ವೇಗ: ' 2014ಕ್ಕೂ ಮುಂಚಿನ ಹಾಗೂ ನಂತರದ ಭಾರತಕ್ಕೆ ಭಾರಿ ವ್ಯತ್ಯಾಸವಿದೆ. ಈಗ ದೇಶವು ಜಗತ್ತಿನಲ್ಲಿಯೇ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದ್ದು, ಎಲ್ಲ ಕ್ಷೇತ್ರಗಳಲ್ಲಿ ಅಭೂತಪೂರ್ವ ವೇಗದೊಂದಿಗೆ ಬೆಳೆಯುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

ಜಿ–20 ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಬಂದಿರುವ ಅವರು, ಇಲ್ಲಿರುವ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದರು. 'ಡಿಜಿಟಲ್ ವ್ಯವಹಾರ, ಫಿನ್‌ಟೆಕ್ ಕ್ಷೇತ್ರ, ಐಟಿ ವಲಯದಲ್ಲಿ ಹೊರಗುತ್ತಿಗೆ, ಸ್ಮಾರ್ಟ್‌ಫೋನ್ ಡೇಟಾ ಬಳಕೆ ಹಾಗೂ ಲಸಿಕೆ ಉತ್ಪಾದನೆಯಲ್ಲಿ ಭಾರತ ಈಗ ಮೊದಲ ಸ್ಥಾನದಲ್ಲಿದೆ' ಎಂದರು.

ಭರ್ಜರಿ ಸ್ವಾಗತ: ಸಭಾಗೃಹಕ್ಕೆ ಮೋದಿ ಅವರು ಪ್ರವೇಶಿಸುತ್ತಿದ್ದಂತೆಯೇ ಭಾರತೀಯರಿಂದ ಭಾರಿ ಕರತಾಡನ, ಹರ್ಷೋದ್ಗಾರ ಕಂಡುಬಂತು. 'ಭಾರತ್ ಮಾತಾ ಕಿ ಜೈ' ಎಂಬ ಘೋಷಣೆಗಳು ಮಾರ್ದನಿಸಿದವು.

ದ್ವಿಪಕ್ಷೀಯ ಬಾಂಧವ್ಯ: ಪ್ರಧಾನಿ ಮೋದಿ ಅವರು, ಅಮೆರಿಕ ಅಧ್ಯಕ್ಷ ಜೋ ಬೈಡನ್, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರೊಂದಿಗೆ ಚರ್ಚಿಸಿದರು ಎಂದು ಪಿಎಂಒ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಪರಸ್ಪರ ಕೈಕುಲುಕಿದರು –ಪಿಟಿಐ ಚಿತ್ರ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480- 500
ರಾಶಿ ಉತ್ತಮ	550-600
ಜರಡಿ	700 - 750
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,250-1,350
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-55000
ಭದ್ರಾವತಿ	
ರಾಶಿ	45199-46629
ಚನ್ನಗಿರಿ	
ರಾಶಿ	45199-47300
ಕಾರ್ಕಳ	
ಹೊಸತು	25000-37500
ಹಳತು	40000-55500
ಪುತ್ತೂರು	
ಹೊಸತು	32000-38000
ಸಾಗರ	
ಬಿಳಿಗೋಟು	29219-29853
ಚಾಲಿ	36299-37099
ಕೋಕ	32989-32989
ರಾಶಿ	44889-46710
ಸಿಪ್ಪೆಗೋಟು	18299-19389
ಶಿಕಾರಿಪುರ	
ಆಪಿ	40500-44500
ಶಿವಮೊಗ್ಗ	
ಬೆಟ್ಟೆ	48089-50569
ಗೊರಬಲು	18009-35899
ಹೊಸತು	45299-46509
ರಾಶಿ	44009-47819
ಸರಕು	53000-77500
ಸಿದ್ದಾಪುರ	
ಬಿಳಿಗೋಟು	26699-36619
ಚಾಲಿ	36549-40509
ಕೋಕ	26099-32282
ಕೆಂಪುಗೋಟು	24699-32699
ರಾಶಿ	45699-46459
ತಟ್ಟಿಬೆಟ್ಟೆ	38019-42609
ಶಿರಸಿ	
ಬೆಟ್ಟೆ	36099-45899
ಬಿಳಿಗೋಟು	18899-35878
ಚಾಲಿ	33333-42039
ರಾಶಿ	42699-47099
ಯಲ್ಲಾಪುರ	
ಆಪಿ	53499-56795
ಬಿಳಿಗೋಟು	25019-34969
ಚಾಲಿ	37675-40899
ಕೋಕ	17650-30296
ಕೆಂಪುಗೋಟು	25299-35719
ರಾಶಿ	46119-51555
ತಟ್ಟಿಬೆಟ್ಟೆ	37399-45967

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14300	13800	13800	166.20 ಸೆಂಟ್ಸ್
ಎಸಿ	7000	7000	6900	
ಆರ್‌ಪಿ	8500	8000	8400	ಲಂಡನ್
ಆರ್‌ಸಿ	45300	4150	4000	1824 ಡಾಲರ್ಸ್

ಲಂಚ: ಕೆಎಎಸ್ ಅಧಿಕಾರಿ ವರ್ಷಾ ಒಡೆಯರ್ ಬಂಧನ

ಒಂದನೇ ಪುಟದಿಂದ...

ಈ ಬಗ್ಗೆ ಅರ್ಜಿದಾರರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. 'ಮಂಗಳವಾರ ಸಂಜೆ ಸೇಂಟ್ ಮಾರ್ಥಾಸ್ ಆಸ್ಪತ್ರೆ ವಾಹನ ನಿಲುಗಡೆ ತಾಣದ ಬಳಿ ಬಂದು ಹಣ ತಲುಪಿಸುವಂತೆ ಮಧ್ಯವರ್ತಿ ಸೂಚಿಸಿದ್ದರು. ಅಲ್ಲಿಗೆ ತೆರಳಿದ ಕಾಂತರಾಜು ₹ 5 ಲಕ್ಷ ನೀಡಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು, ರಮೇಶ್ ಅವರನ್ನು ಬಂಧಿಸಿದರು. 'ನನ್ನದೇನೂ ತಪ್ಪಿಲ್ಲ. ತಹಶೀಲ್ದಾರ್ ವರ್ಷಾ ಅವರ ಸೂಚನೆಯಂತೆ ಹಣ ಪಡೆದಿದ್ದೇನೆ' ಎಂದು ಮಧ್ಯವರ್ತಿ ತನಿಖಾ ತಂಡಕ್ಕೆ ಉತ್ತರಿಸಿದರು. ಅಲ್ಲಿಂದ ವಾಪಸ್ ವಿಶೇಷ ತಹಶೀಲ್ದಾರ್ ಕಚೇರಿಗೆ ಬಂದ ರಮೇಶ್, 'ಮೇಡಂ ವ್ಯವಹಾರ ಮುಗಿದಿದೆ' ಎಂದರು. 'ಹಣ ಕೊಡು' ಎಂದು ವರ್ಷಾ ₹ 5 ಲಕ್ಷ ಪಡೆದುಕೊಂಡರು' ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು

ನಿಮ್ಮ ಜೊತೆಗೆ ಕಳೆದ ದಿನಗಳ ಕುರುಹುಗಳು ಬಾರದಿದ್ದರು, ನೀವು ನಡೆದ ದಾರಿಯಲ್ಲೇ ಸದಾ ಕಾಲವೂ ನಡೆಯುತ್ತಿರುವೆವು.
ಜಿ.ರಾಮಯ್ಯ ಮರಣ: 16-11-1996 ಮಾಜಿ ಮುಖಂಡರ ... ಸದಸ್ಯರು, ಮತ್ತಿಕೆರೆ
ವೆಂಕಟಮ್ಮ ಮರಣ: 05-02-2014
ಸದಾ ನಿಮ್ಮ ಸ್ಮರಣೆಯಲ್ಲಿರುವ
ಶ್ರೀಮತಿ ರಾಧಮ್ಮ, ಶ್ರೀ ಶ್ರೀನಿವಾಸಯ್ಯ, (ಮಾಜಿ ಬಿಬಿಎಂಪಿ ಸದಸ್ಯರು) ಶ್ರೀಮತಿ ಶೈಲಜಾ, ಶ್ರೀ ಜಯರಾಮ್, ಶ್ರೀಮತಿ ನರಸಮ್ಮ, ಶ್ರೀ ವೈ.ಬಿ.ಕೇಶವ್ ಶ್ರೀಮತಿ ನಾಗರತ್ನ, ಶ್ರೀ ನಾಗರಾಜು ಹಾಗೂ ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಬೇಕಾಗಿದ್ದಾರೆ! ಬೈಕ್ ಚಾಲಕರು (Full Time & Part Time) ಬೇಕಾಗಿರುವ ದಾಖಲೆಗಳು – Bike, Valid DL, RC ಹಾಗು Android Phone ನೀವು ಬೈಕ್ ಹೊಂದಿದ್ದೀರಾ? ಕೆಲಸ ಹುಡುಕುತ್ತಿದ್ದೀರಾ? ಸಮಯ ಸಿಕ್ಕಾಗ ಬೈಕ್ ಚಲಾಯಿಸಿ ಹಾಗು 4 ಗಂಟೆಗಳಲ್ಲಿ Rs.1000/- ಸಂಪಾದಿಸಿ! ಈಗಲೇ ಕರೆ ಮಾಡಿ: 080-45686913

General

ತೋಟದ ಕೆಲಸಕ್ಕೆ, ಹಸು, ಮೇಕೆ ಸಾಕಲು ಫ್ಯಾಮಿಲಿ ಕಾರ್ಮಿಕರು, ಟ್ರ್ಯಾಕ್ಟರ್ ಡ್ರೈವರ್ ಬೇಕಾಗಿದ್ದಾರೆ. ಊಟ-ವಸತಿ ಸೌಲಭ್ಯವಿದೆ. ಕುಣಿಗಲ್: 7259578999, 9141519186

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಅಕ್ಕಿ ಅಂಗಡಿಗೆ ಸಿಬ್ಬಂದಿ ಬೇಕಾಗಿದ್ದಾರೆ. ಕಂಪ್ಯೂಟರ್ ಅನುಭವ ಇರಬೇಕು. ವಿಳಾಸ: ಎಪಿಎಂಸಿ, ಯಶವಂತಪುರ, ಬೆಂಗಳೂರು. ಸಂಪರ್ಕಿಸಿ: 9972375009

ತಕ್ಷಣ ಬೇಕಾಗಿದ್ದಾರೆ: ಗೋಬಿ ಮಂಚೂರಿ, ಪಾನಿಪೂರಿ ಮಾಡಲು ಮತ್ತು ಬೇಕರಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಸತಿ ಮತ್ತು ಊಟದ ಸೌಲಭ್ಯವಿರುತ್ತದೆ. ಸ್ಥಳ: ಊಟಿ/ಗುಡಲೂರು. ಸಂಪರ್ಕಿಸಿ: 9159914859, 9738413559

Marketing & Sales

CANDIDATE WITH Three Years Experience And Two-Wheeler May Apply To Market Thermal Insulation Products For A Private Ltd Company. Contact 9480056374 / 9448143883

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000 ಗಳಿಸಿ.(ಕೊರಿಯರ್ ಇದೆ). 8884686860, 8884686861.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಬೇಕಾಗಿದ್ದಾರೆ: ಪುತ್ತೂರು ಸಮೀಪ ಬ್ರಾಹ್ಮಣ ಕುಟುಂಬಕ್ಕೆ ಸಸ್ಯಾಹಾರಿ ಅಡುಗೆ ತಿಳಿದಿರುವ ಶುದ್ಧ ಸಸ್ಯಾಹಾರಿ ಹೆಂಗಸು ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ. 9986066160

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620985000, 9620557000, 080-41115200. ಮೆರಿಟ್ಟಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

'ರಾಜಕೀಯ ವಿಶ್ಲೇಷಕ ಸಂಸ್ಥೆಯಲ್ಲಿ ಗ್ಯೂಗಲ್ ಸೂಟ್ ತಂತ್ರಜ್ಞಾನದಲ್ಲಿ ಅನುಭವವಿರುವ ಕ್ಷೇತ್ರ ಸಹವರ್ತಿಗಳ (Field Associates) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಕನ್ನಡ ಮತ್ತು ಇಂಗ್ಲೀಷ್ ಜ್ಞಾನವಿರುವವರಿಗೆ ಪ್ರಥಮ ಆದ್ಯತೆ. ಆಕರ್ಷಕ ಸಂಬಳವಿದೆ. ನಿಮ್ಮ ಸಂಪೂರ್ಣ ವಿವರಗಳನ್ನು 88679 80874ಗೆ ಕಳುಹಿಸಿ.'

ರಿಯಲ್ ಎಸ್ಟೇಟ್ ಬೈಯಿಂಗ್

Sites

General

WANTED FOR immediate purchase site near KIA Bengaluru airport or Bengaluru North for NRI call 7483651933

ವ್ಯಾಪಾರ

Business Offers

Finance

SUYAMB MANAGEMENT, A Genuine Share Market Trading Company offers Genuine and Principle Safe Returns for your investment. 6% a Month Fixed Returns. Office in Koramangla. Successful 5th Year. All Investments supported with Legal Document. Call 90709 90709

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಭವಿಷ್ಯ

Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಶ್ರೀ ದುರ್ಗಾದೇವಿ ಆರಾಧನೆಯಿಂದ ಆರೋಗ್ಯ, ಸಂತಾನ, ಶತ್ರುಕಾಟ, ಲೈಂಗಿಕ ಸಮಸ್ಯೆ ಹಾಗೂ ಸ್ತ್ರೀ ಪುರುಷ ವಶೀಕರಣ 3 ದಿನದಲ್ಲಿ ಮಾಡಿಕೊಡುತ್ತಾರೆ. ಫೋನಿನ ಮೂಲಕ ನೇರ ಪರಿಹಾರ. ಶ್ರೀ ಆಚಾರ್ಯ: 9945995681

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಸ್ತ್ರೀ ಪುರುಷ, ಶತ್ರುಕಾಟ, ಗಂಡಹೆಂಡತಿ ದೂರವಾಗಿದ್ದರೆ, ನಿಮ್ಮಂತೆ ಆಗಲು. 2 ದಿನದಲ್ಲಿ ಪರಿಹಾರ 9611968471

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ವಿಮಾನ/ A/C ರೂಂ/ A/C ಬಸ್ಸಿನಲ್ಲಿ 15.12.2022 ಸೋಮನಾಥ ಕಚ್‌ಬುಜ್ ಓಂಕಾರೇಶ್ವರ್ ಮಂಹಾಕಾಳೇಶ್ವರ್ ಹಾಗೂ ಪೂರಿಜಗನ್ನಾಥ್ ಕಲ್ಕತ್ತ,ಗ್ಯಾಂಗ್‌ಟಕ್,ಡಾರ್ಜಲಿಂಗ್ ಇತ್ಯಾದಿ. ಹೈದ್ರಾಬಾದ್ ಭದ್ರಾಚಲಂ,ಪಂಚರಾಮ ಕ್ಷೇತ್ರ 14 ದಿನಗಳು. 24.12.2022 ಕಾಶಿ,ಬುದ್ದಗಯಾ ಅಲಹಾಬಾದ್ ಇತ್ಯಾದಿ. ಶಿರಡಿ ಪ್ರವಾಸ 6 ದಿನಗಳು. ರಾಮೇಶ್ವರ,ಮದುರೈ ಕನ್ಯಾಕುಮಾರಿ 9 ದಿನಗಳು. ಮಹಾಶಿವರಾತ್ರಿ ಪ್ರಯುಕ್ತ 11.02.2023 ನೇಪಾಳ.ಪೋಖ್ರಾ ವಾರಣಾಸಿ ಅಯೋಧ್ಯ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ 26574131 8317446683 9448508708

18.11.2022`ಮತ್ತು 9.01.23ರಿಂದ 13/16ದಿನಗಳು ವಿಮಾನ`ಮತ್ತು ಏಸಿ.ಬಸ್ಸಿನಲ್ಲಿ ಪಶುಪತಿನಾಥ್,ಮುಕ್ತಿನಾಥ್, ಪೋಕ್ರ,ಪುರಿ,ಜನಕಪುರಿ,ನೇಪಾಳ, ಕಾಶಿ,ಕೋಲ್ಕತ್ತ ಹಾಗು 9.12.2022ರಿಂದ `ಮಹಾಶಿವರಾತ್ರಿ`ಪ್ರಯುಕ್ತ ಪಶುಪತಿನಾಥ`ದರ್ಶನ: ಏಷ್ಯನ್`ಟ್ರಾವೆಲ್`ಲೈನ್ಸ್. 164/3`ಅರ್.ವಿ.ರಸ್ತೆ, ಬೆಂಗಳೂರು~04. ಸಂಪರ್ಕಿಸಿ:`ಷಣ್ಮುಗಾನಂದ~ 8105657052/ 9480182865

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA
PRAJAVANI ALL KARNATAKA
@ 750/-* Per Sqcm
Single Column
conditions apply*
For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

ಶ್ರದ್ಧಾ ವಾಲಕರ್ ಶವದ ತುಂಡುಗಳ ಬಿಸಾಡಿದ್ದ ಅರಣ್ಯದಲ್ಲಿ ಪೊಲೀಸರ ಶೋಧ

ಅಪರಾಧ ದೃಶ್ಯ ಮರುಸೃಷ್ಟಿಸಿದ ತನಿಖಾ ತಂಡ

ನವದೆಹಲಿ (ಪಿಟಿಐ): ಕಾಲ್‌ಸೆಂಟರ್ ಉದ್ಯೋಗಿ, ಮುಂಬೈ ಮೂಲದ ಶ್ರದ್ಧಾ ವಾಲಕರ್ ಎಂಬ ಯುವತಿಯನ್ನು ಭೀಕರವಾಗಿ ಕೊಲೆ ಮಾಡಿರುವ ಆಕೆಯ ಸಹ ಜೀವನದ (ಲೀವ್ ಇನ್ ರಿಲೇಷನ್‌ಶಿಪ್) ಸಂಗಾತಿ, ಹಂತಕ ಅಫ್ತಾಬ್ ಅಮೀನ್ ಪೂನಾವಾಲಾನನ್ನು (28) ದೆಹಲಿ ಪೊಲೀಸರು, ಮಂಗಳವಾರ ದಕ್ಷಿಣ ದೆಹಲಿಯ ಛತರ್‌ಪುರದ ಅರಣ್ಯಕ್ಕೆ ಕರೆದೊಯ್ದು ಪರಿಶೀಲನೆ ನಡೆಸಿದರು.

ಕತ್ತರಿಸಿದ್ದ ಶವದ 35 ತುಂಡುಗಳ ಪೈಕಿ ಕೆಲವನ್ನು ಎಸೆದಿದ್ದ ಅರಣ್ಯದಲ್ಲಿನ ಜಾಗ ಗುರುತಿಸಲು ಪೊಲೀಸರಿಗೆ ಮೂರು ತಾಸು ಹಿಡಿಯಿತು. ಅಪರಾಧ ಕೃತ್ಯದ ದೃಶ್ಯ ಮರುಸೃಷ್ಟಿ ಮುಗಿಸಿದ ನಂತರ ಆರೋಪಿಯನ್ನು ತನಿಖಾ ತಂಡ ಪುನಃ ಠಾಣೆಗೆ ಕರೆತಂದಿತು.

ಆರೋಪಿ ತನಿಖೆ ವೇಳೆ, ಅಮೆರಿಕದ ಕ್ರೈಮ್ ಶೋ 'ಡೆಕ್ಸ್‌ಟರ್' ಎಂಬ ಸರಣಿ ಹಂತಕನ ಕಥೆ ಆಧರಿತ ಧಾರಾವಾಹಿಯಿಂದ ಪ್ರೇರಿತನಾಗಿದ್ದಾಗಿ ಹೇಳಿದ್ದಾನೆ. ಶ್ರದ್ಧಾ ಮತ್ತು ಅಫ್ತಾಬ್ ಅವರನ್ನು ಬೆಸೆದ ಅಮೆರಿಕ ಮೂಲದ ಆನ್‌ಲೈನ್ ಡೇಟಿಂಗ್ ಆ್ಯಪ್ 'ಬಂಬಲ್'ನ ಅಧಿಕಾರಿಗಳನ್ನೂ ತನಿಖೆಯ ಭಾಗವಾಗಿ ಸಂಪರ್ಕಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.



ದೆಹಲಿ ಪೊಲೀಸರು ಮಂಗಳವಾರ ದಕ್ಷಿಣ ದೆಹಲಿಯ ಛತರ್‌ಪುರದ ಅರಣ್ಯದಲ್ಲಿ ಪರಿಶೀಲನೆ ನಡೆಸಿದರು–ಪಿಟಿಐ ಚಿತ್ರ

'ಶ್ರದ್ಧಾ ಶವದ ತುಂಡುಗಳು ಫ್ರಿಜ್ ನಲ್ಲಿರುವಾಗಲೇ ಮತ್ತೊಬ್ಬಳನ್ನು ಪರಿಚಯಿಸಿಕೊಂಡು ಅದೇ ಮನೆಗೆ ಕರೆತಂದಿದ್ದ. ಆಕೆಯೊಂದಿಗೂ ಕೆಲವು ದಿನಗಳು ಒಟ್ಟಿಗಿದ್ದ ಎನ್ನುವ ಮಾಹಿತಿ ಇದೆ. ಈವರೆಗೆ ಶ್ರದ್ಧಾ ದೇಹದ 13 ತುಂಡುಗಳು ಸಿಕ್ಕಿವೆ. ಹಂತಕ ಕೃತ್ಯಕ್ಕೆ ಬಳಸಿದ ಆಯುಧ ಪತ್ತೆಯಾಗಿಲ್ಲ. ಸ್ವತಃ ಬಾಣಸಿಗನ ತರಬೇತಿ ಪಡೆದಿದ್ದ ಆರೋಪಿ, ಶವ ತುಂಡು ಮಾಡಲು ಮಾಂಸ ಕತ್ತರಿಸುವ ಆಯುಧವನ್ನು ಆತ ಖರೀದಿಸಿದ ಮಾಹಿತಿಯೂ ಸಿಕ್ಕಿದೆ' ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

'ಲವ್ ಜಿಹಾದ್' ಆಯಾಮದ ತನಿಖೆಗೆ ಆಗ್ರಹ (ಮುಂಬೈ ವರದಿ): ಶ್ರದ್ಧಾ ವಾಲಕರ್ ಕೊಲೆ ಪ್ರಕರಣವನ್ನು 'ಲವ್ ಜಿಹಾದ್' ಆಯಾಮದಲ್ಲಿ ತನಿಖೆ ನಡೆಸುವಂತೆ ಒತ್ತಾಯಿಸಿ ಬಿಜೆಪಿ ಶಾಸಕ ರಾಮ್ ಕದಮ್ ಮಂಗಳವಾರ ದೆಹಲಿ ಪೊಲೀಸರಿಗೆ ಪತ್ರ ಬರೆದಿದ್ದಾರೆ. ಘಾಟ್ಕೋಪರ್ ಪ್ರದೇಶದಲ್ಲಿ ಮುಂಬೈ ಶಾಸಕ ಕದಮ್ ಮತ್ತು ಅವರ ಬೆಂಬಲಿಗರು ಪ್ರತಿಭಟನೆ ನಡೆಸಿದರು.

ಕೊಲೆಯ ಹಿಂದೆ ದೊಡ್ಡ ಸಂಚು

ಶ್ರದ್ಧಾ ಅವರ ಹತ್ತಿರದ ಒಬ್ಬ ಸ್ನೇಹಿತರು 'ಆಕೆಯ ಕೊಲೆ ಹಿಂದೆ ದೊಡ್ಡ ಸಂಚು ಇದೆ' ಎಂದು ಸಂಶಯಿಸಿದರೆ, ಮತ್ತೊಬ್ಬ ಸ್ನೇಹಿತ 'ಆಕೆ ಒಮ್ಮೆ ನನಗೆ ಮೊಬೈಲ್ ಕರೆ ಮಾಡಿ, ಪೂನಾವಾಲಾ ತನ್ನನ್ನು ಕೊಲೆ ಮಾಡಲಿದ್ದಾನೆ' ಎಂದು ಹೇಳಿಕೊಂಡಿದ್ದಳು ಎಂದು ತಿಳಿಸಿದ್ದಾರೆ.

'ಸಮೂಹ ಮಾಧ್ಯಮದಲ್ಲಿ ಪದವಿ ಪಡೆದಿದ್ದ ಶ್ರದ್ಧಾ ಪತ್ರಕರ್ತೆಯಾಗಲು ಬಯಸಿದ್ದಳು. ರಂಗಭೂಮಿಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಆಕೆಗೆ ನಟನೆ ಎಂದರೆ ಬಹಳ ಇಷ್ಟ. ಆಕೆಯದು ಸದಾ ಉತ್ಸಾಹದಿಂದ ಪುಟಿಯುತ್ತಿದ್ದ ವ್ಯಕ್ತಿತ್ವ. ಆದರೆ ಅಫ್ತಾಬ್ ಆಕೆಯ ಬದುಕಿನಲ್ಲಿ ಪ್ರವೇಶಿಸಿದ ಮೇಲೆ ಎಲ್ಲವೂ ಬದಲಾಯಿತು' ಎಂದು ಮುಂಬೈನ ವಸೈ ಪ್ರದೇಶದ ಶ್ರದ್ಧಾ ಸ್ನೇಹಿತರು ಹೇಳಿದ್ದಾರೆ.

ವೈದ್ಯರನ್ನು ಭೇಟಿಯಾಗಿದ್ದ ಹಂತಕ

ಶ್ರದ್ಧಾಳನ್ನು ಹತ್ಯೆ ಮಾಡಿದ ಅದೇ ತಿಂಗಳಿನಲ್ಲಿ (ಮೇ) ಚಾಕುವಿನಿಂದ ಆದ ಗಾಯದ ಚಿಕಿತ್ಸೆಗೆ ಆರೋಪಿ ಅಫ್ತಾಬ್ ವೈದ್ಯರನ್ನು ಭೇಟಿ ಮಾಡಿರುವ ಸಂಗತಿ ಹೊರಬಿದ್ದಿದೆ.

'ಎರಡು ದಿನಗಳ ಹಿಂದೆ, ಪೊಲೀಸರು ಆರೋಪಿಯನ್ನು ನನ್ನ ಆಸ್ಪತ್ರೆಗೆ ಕರೆತಂದು, ಈ ವ್ಯಕ್ತಿಗೆ ಮೇ ತಿಂಗಳಲ್ಲಿ ಚಿಕಿತ್ಸೆ ನೀಡಲಾಗಿತ್ತೇ ಎಂದು ಕೇಳಿದರು. ಆತನ ಗುರುತು ಹಿಡಿದು, ಹೌದು ಎಂದೆ. ಚಿಕಿತ್ಸೆ ವೇಳೆ ಆತ ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದ. ಗಾಯ ಹೇಗಾಯಿತೆಂದು ಕೇಳಿದಾಗ ಹಣ್ಣು ಕತ್ತರಿಸುವಾಗ ಸಣ್ಣ ಗಾಯವಾಯಿತು ಎಂದಿದ್ದ. ತನ್ನದು ಮುಂಬೈ ಮೂಲ, ಉದ್ಯೋಗ ನಿಮಿತ್ತ ದೆಹಲಿಗೆ ಬಂದಿರುವೆ ಎಂದಿದ್ದ' ಎಂದು ವೈದ್ಯ ಡಾ. ಅನಿಲ್ ಕುಮಾರ್ ತಿಳಿಸಿದ್ದಾರೆ.

ಭಾರತ ಸೇರಿ ಹಲವು ದೇಶಗಳಲ್ಲಿ ವೀರ್ಯಾಣು ಸಂಖ್ಯೆ ಗಣನೀಯ ಇಳಿಕೆ

ನವದೆಹಲಿ (ಪಿಟಿಐ): ಭಾರತ ಸೇರಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಹಲವು ವರ್ಷಗಳಿಂದ ವೀರ್ಯಾಣುಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿರುವುದನ್ನು ಅಂತರರಾಷ್ಟ್ರೀಯ ಸಂಶೋಧಕರ ತಂಡವೊಂದು ಪತ್ತೆ ಹಚ್ಚಿದೆ.

'ವೀರ್ಯಾಣುಗಳ ಸಂಖ್ಯೆ ಮಾನವನ ಫಲವತ್ತತೆಯ ಸೂಚಕವಷ್ಟೇ ಅಲ್ಲ, ಅವು ಪುರುಷರ ಆರೋಗ್ಯದ ಸಂಕೇತ ಕೂಡ. ವೀರ್ಯಾಣುಗಳ ಸಂಖ್ಯೆಯಲ್ಲಿನ ಇಳಿಕೆಯು ದೀರ್ಘಕಾಲದ ಕಾಯಿಲೆ, ವೃಷಣ ಕ್ಯಾನ್ಸರ್ ಮತ್ತು ಜೀವಿತಾವಧಿ ಕಡಿಮೆಯಾಗುವುದಕ್ಕೆ ದಾರಿ ಮಾಡಿಕೊಡುತ್ತದೆ' ಎಂದು ಸಂಶೋಧಕರು ಹೇಳಿದ್ದಾರೆ.

53 ರಾಷ್ಟ್ರಗಳಲ್ಲಿ ಲಭ್ಯವಿದ್ದ ದತ್ತಾಂಶದ ಆಧಾರದಲ್ಲಿ ಸಿದ್ಧಪಡಿಸಲಾಗಿರುವ ಈ ಸಂಶೋಧನಾ ವರದಿಯು 'ಹ್ಯೂಮನ್ ರೀಪ್ರೊಡಕ್ಷನ್ ಅಪ್‌ಡೇಟ್' ನಿಯತಕಾಲಿಕೆಯಲ್ಲಿ ಮಂಗಳವಾರ ಪ್ರಕಟಗೊಂಡಿದೆ. ದಕ್ಷಿಣ ಅಮೆರಿಕ, ಏಷ್ಯಾ ಮತ್ತು ಆಫ್ರಿಕಾದ ರಾಷ್ಟ್ರಗಳಲ್ಲಿನ ಪುರುಷರ ವೀರ್ಯಾಣು ಸಂಖ್ಯೆಯ ಪ್ರವೃತ್ತಿಗಳನ್ನು ಕೇಂದ್ರೀಕರಿಸಿ ಸಂಶೋಧನೆ ನಡೆಸಲಾಗಿದೆ. ಈ ಭಾಗದಲ್ಲಿನ ಪುರುಷರಲ್ಲಿನ ಒಟ್ಟಾರೆ ವೀರ್ಯಾಣು ಸಂಖ್ಯೆ ಹಾಗೂ ವೀರ್ಯಾಣು ಸಾಂದ್ರತೆಯು ಇದೇ ಮೊದಲ ಬಾರಿಗೆ ಕುಸಿತ ಕಂಡಿರುವುದು ಸಂಶೋಧನೆಯಿಂದ ಬೆಳಕಿಗೆ ಬಂದಿದೆ.

'46 ವರ್ಷಗಳಲ್ಲಿ ಜಗತ್ತಿನಾದ್ಯಂತ ವೀರ್ಯಾಣು ಸಂಖ್ಯೆಯಲ್ಲಿ ಶೇ 50ರಷ್ಟು ಕುಸಿತ ಕಂಡಿರುವುದನ್ನು ನಾವು ಕಾಣಬಹುದಾಗಿದೆ. ಈಗ ಮತ್ತಷ್ಟು ವೇಗ ಪಡೆದುಕೊಂಡಿದೆ' ಎಂದು ತಂಡದ ಸದಸ್ಯ ಪ್ರೊ.ಹಗಾಯ್ ಲಿವೈನ್ ಹೇಳಿದ್ದಾರೆ.

ಹವಾಮಾನ ಬದಲಾವಣೆ ಸೂಚ್ಯಂಕ

ಭಾರತವು ಹಸಿರುಮನೆ ಅನಿಲ ಹೊರಸೂಸುವಿಕೆ ಹಾಗೂ ಇಂಧನ ಬಳಕೆ ವಿಭಾಗಗಳಲ್ಲಿ ಗರಿಷ್ಠ ರೇಟಿಂಗ್ ಪಡೆದಿದೆ. ಚೀನಾ ಪಟ್ಟಿಯಲ್ಲಿ 13 ಸ್ಥಾನ ಕುಸಿತ ಕಂಡಿದೆ.

8ನೇ ಸ್ಥಾನಕ್ಕೇರಿದ ಭಾರತ

ನವದೆಹಲಿ (ಪಿಟಿಐ): ಭಾರತವು 2023ನೇ ಸಾಲಿನ ಹವಾಮಾನ ಬದಲಾವಣೆ ಕಾರ್ಯಕ್ಷಮತೆ ಸೂಚ್ಯಂಕದಲ್ಲಿ (ಸಿಸಿಪಿಐ) ಎಂಟನೇ ಸ್ಥಾನಕ್ಕೇರಿದೆ.

ಇಂಧನಗಳ ಗರಿಷ್ಠ ಬಳಕೆ, ಹಸಿರುಮನೆ ಅನಿಲದ ಹೊರಸೂಸುವಿಕೆಯ ತಗ್ಗಿಸುವಿಕೆ ಹಾಗೂ ಇನ್ನಿತರ ಉಪಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಈ ಪಟ್ಟಿಯಲ್ಲಿ ಭಾರತವು ಎರಡು ಸ್ಥಾನ ಪ್ರಗತಿ ಕಂಡಿದೆ ಎಂದು ಸೋಮವಾರ ಪ್ರಕಟಿಸಲಾಗಿರುವ ವರದಿಯಲ್ಲಿ ತಿಳಿಸಲಾಗಿದೆ.

2030ರ ವೇಳೆಗೆ ಹಸಿರುಮನೆ ಅನಿಲದ ಹೊರಸೂಸುವಿಕೆಯನ್ನು ಅರ್ಧಕ್ಕೆ ತಗ್ಗಿಸುವ ದಿಸೆಯಲ್ಲಿ ರಾಷ್ಟ್ರಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದರ ಆಧಾರದಲ್ಲಿ ಜರ್ಮನ್‌ವಾಚ್, ನ್ಯೂಕ್ಲೈಮೇಟ್ ಇನ್‌ಸ್ಟಿಟ್ಯೂಟ್ ಮತ್ತು ಕ್ಲೈಮೇಟ್ ಆ್ಯಕ್ಷನ್ ನೆಟ್‌ವರ್ಕ್ ಎಂಬ ಸರ್ಕಾರೇತರ ಸಂಸ್ಥೆಗಳು ಈ ವರದಿ ಸಿದ್ಧಪಡಿಸಿವೆ.

'ಎಲ್ಲಾ ಸೂಚ್ಯಂಕ ವಿಭಾಗಗಳಲ್ಲಿ ಯಾವ ರಾಷ್ಟ್ರವೂ ಉತ್ತಮ ಸಾಮರ್ಥ್ಯ ತೋರಿಲ್ಲ. ಹೀಗಾಗಿ ಪಟ್ಟಿಯಲ್ಲಿನ ಮೊದಲ ಮೂರು ಸ್ಥಾನಗಳನ್ನು ಖಾಲಿ ಬಿಡಲಾಗಿದೆ. ಡೆನ್ಮಾರ್ಕ್ ನಾಲ್ಕನೇ ಸ್ಥಾನದಲ್ಲಿದ್ದು, ಸ್ವೀಡನ್ ಹಾಗೂ ಚಿಲಿ ದೇಶಗಳು ಕ್ರಮವಾಗಿ 5 ಮತ್ತು 6ನೇ ಸ್ಥಾನಗಳನ್ನು ಪಡೆದಿವೆ' ಎಂದು ತಿಳಿಸಲಾಗಿದೆ.

'ಬಲವಂತದ ಮತಾಂತರ ತಡೆಗೆ ಶೀಘ್ರ ಕಾನೂನು ಜಾರಿಗೆ ಬರಲಿ'

ನವದೆಹಲಿ: 'ಬಲವಂತದ ಧಾರ್ಮಿಕ ಮತಾಂತರದ ವಿರುದ್ಧ ಕೇಂದ್ರ ಸರ್ಕಾರವು ಶೀಘ್ರವಾಗಿ ಕಾನೂನನ್ನು ಜಾರಿಗೆ ತರಬೇಕು' ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮಂಗಳವಾರ ವಿಎಚ್‌ಪಿಯ ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್ ಒತ್ತಾಯಿಸಿದ್ದಾರೆ.

'ಬಲವಂತದ ಮತಾಂತರವು ಅತ್ಯಂತ ಗಂಭೀರವಾದ ವಿಚಾರ. ಇದನ್ನು ತಡೆಯದೇ ಇದ್ದರೆ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿ ಎದುರಾಗಲಿದೆ' ಎಂದು ಸುಪ್ರೀಂ ಕೋರ್ಟ್ ಹೇಳಿತ್ತು.

ಅದರ ಮರು ದಿನವೇ ಅವರು ಈ ರೀತಿಯಾಗಿ ಹೇಳಿದ್ದಾರೆ.

ವಿಚಾರಣೆಗೆ ನೆರವಾಗಲು 'ಅಮಿಕಸ್ ಕ್ಯೂರಿ' ನೇಮಕ

ನವದೆಹಲಿ (ಪಿಟಿಐ): ಸಂಸದರು, ಶಾಸಕರು ಶಾಸನಸಭೆಗಳಲ್ಲಿ ಮಾತನಾಡಲು, ಮತ ಚಲಾಯಿಸಲು ಲಂಚ ಪಡೆದ ಪ್ರಕರಣದಲ್ಲಿ ಕ್ರಿಮಿನಲ್ ವಿಚಾರಣೆಯಿಂದ ವಿನಾಯಿತಿ ಪಡೆಯುತ್ತಾರೆಯೇ ಎಂಬ ವಿಷಯ ಕುರಿತ ವಿಚಾರಣೆಯಲ್ಲಿ ಜನಪ್ರತಿನಿಧಿಗಳಿಗೆ ನೆರವಾಗಲು ಸುಪ್ರೀಂ ಕೋರ್ಟ್ 'ಅಮಿಕಸ್ ಕ್ಯೂರಿ' ನೇಮಿಸಿದೆ.

ಹಿರಿಯ ವಕೀಲ ಪಿ.ಎಸ್. ಪಟ್ವಾಲಿಯಾ ಅವರನ್ನು ಅಮಿಕಸ್ ಕ್ಯೂರಿ ಆಗಿ ನೇಮಿಸಲಾಗಿದೆ. ಇವರಿಗೆ ಅಗತ್ಯ ನೆರವು ನೀಡಬೇಕು ಎಂದು ವಕೀಲ ಗೌರವ್ ಅಗರವಾಲ್ ಅವರಿಗೂ ಇದೇ ಸಂದರ್ಭದಲ್ಲಿ ನ್ಯಾಯಮೂರ್ತಿ ಎಸ್.ಎ.ನಜೀರ್ ನೇತೃತ್ವದ ಐದು ಸದಸ್ಯರ ಸಂವಿಧಾನ ಪೀಠವು ಸೂಚಿಸಿತು.

ಗುಜರಾತ್ ಚುನಾವಣೆ: ಖರ್ಗೆ, ಸೋನಿಯಾ, ರಾಹುಲ್ ಸೇರಿ 40 ತಾರಾ ಪ್ರಚಾರಕರು

ನವದೆಹಲಿ (ಪಿಟಿಐ): ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ 40 ಗಣ್ಯರ ಹೆಸರನ್ನು ಗುಜರಾತ್ ಚುನಾವಣಾ ತಾರಾ ಪ್ರಚಾರಕರಾಗಿ ಕಾಂಗ್ರೆಸ್ ಘೋಷಿಸಿದೆ.

ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಛತ್ತೀಸಗಡದ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರೂ ತಾರಾ ಪ್ರಚಾರಕರಾಗಿದ್ದಾರೆ. ಗುಜರಾತ್ ವಿಧಾನಸಭೆಗೆ ಡಿಸೆಂಬರ್ 1 ಮತ್ತು 5ರಂದು ಚುನಾವಣೆ ನಡೆಯಲಿದೆ.

ಪ್ರಧಾನಿ ಮೋದಿ ಅವರ ತವರು ರಾಜ್ಯವಾಗಿರುವ ಗುಜರಾತ್‌ನಲ್ಲಿ ಬಿಜೆಪಿ 27 ವರ್ಷಗಳಿಂದ ಅಧಿಕಾರದಲ್ಲಿದೆ. 2017ರ ಚುನಾವಣೆಯಲ್ಲಿ ಕಾಂಗ್ರೆಸ್ ಉತ್ತಮ ಸ್ಪರ್ಧೆ ನೀಡಿತ್ತು.

ನೀಟ್–ಪಿಜಿ: ಪ್ರಮಾಣ ಪತ್ರ ಸಲ್ಲಿಸಲು ಕೇಂದ್ರಕ್ಕೆ ಸೂಚನೆ

ಪ್ರತಿಭಾನ್ವಿತರನ್ನು ಮೀಸಲು ಪ್ರವರ್ಗದಲ್ಲಿಯೇ ಪರಿಗಣಿಸಲಾಗುತ್ತದೆಯೇ: 'ಸುಪ್ರೀಂ' ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನಡೆದ 'ನೀಟ್(ಪಿಜಿ) 2022'ರಲ್ಲಿ ಮೀಸಲು ಪ್ರವರ್ಗದ ಅಭ್ಯರ್ಥಿಗಳು ಸಾಮಾನ್ಯ ಪ್ರವರ್ಗದಲ್ಲಿ ಸ್ಪರ್ಧಿಸುವುದಾದಷ್ಟು ಅಂಕಗಳನ್ನು ಗಳಿಸಿದ್ದರೂ ಅವರನ್ನು ಅಖಿಲ ಭಾರತ ಕೋಟಾದ ಮೀಸಲು ಪ್ರವರ್ಗದ ಅಭ್ಯರ್ಥಿಗಳು ಎಂದೇ ಪರಿಗಣಿಸಲಾಗುತ್ತದೆಯೇ ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ಹಿಮಾ ಕೊಹ್ಲಿ, ಜೆ.ಬಿ. ಪಾರ್ದಿವಾಲಾ ಅವರನ್ನೊಳಗೊಂಡ ಪೀಠವು, ಈ ಕುರಿತು ಮೂರು ದಿನಗಳಲ್ಲಿ ಪ್ರಮಾಣ ಪತ್ರ ಸಲ್ಲಿಸುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರಿಗೆ ಮಂಗಳವಾರ ಸೂಚಿಸಿತು.

ಇದಕ್ಕೂ ಮುನ್ನ ಐಶ್ವರ್ಯ ಭಾಟಿ ಅವರು, ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಅನುಸರಿಸುವ ಮೀಸಲಾತಿ ಮತ್ತು ರೋಸ್ಟರ್ ವಿಧಾನ ಕುರಿತ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು. 'ಅಧಿಸೂಚನೆ/ಬ್ರೋಷರ್‌ನ ಪ್ಯಾರಾ 3.1 ಮತ್ತು 3.2ರ ಪ್ರಕಾರವೇ ನೀಟ್–ಪಿಜಿಯ ಅಖಿಲ ಭಾರತ ಕೋಟಾದ ಕೌನ್ಸೆಲಿಂಗ್‌ನಲ್ಲಿ ಸೀಟುಗಳು ಹಂಚಿಕೆಯಾಗಲಿವೆ' ಎಂದು ಅವರು ಅದರಲ್ಲಿ ತಿಳಿಸಿದ್ದಾರೆ.

ಪಂಕಜ್ ಕುಮಾರ್ ಮಂಡಲ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ ಪೀಠವು, ಈ ಕುರಿತು ಪ್ರಮಾಣ ಪತ್ರ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಪ್ರಶಾಂತ್ ಭೂಷಣ್ ಅವರು, ಅತ್ಯುತ್ತಮ ಅಂಕಗಳನ್ನು ಪಡೆದಿರುವ ಮೀಸಲು ಪ್ರವರ್ಗದ ಅಭ್ಯರ್ಥಿಗಳು ಸಾಮಾನ್ಯ ಪ್ರವರ್ಗದಲ್ಲಿ ಸೀಟು ಪಡೆಯಲು ಅರ್ಹತೆ ಪಡೆದಿರುತ್ತಾರೆ. ಆದರೂ ಅವರನ್ನು ಮೀಸಲು ಪ್ರವರ್ಗದಲ್ಲಿಯೇ ಗುರುತಿಸಲಾಗುತ್ತಿದೆ. ಇದು ಮೀಸಲು ನಿಯಮಕ್ಕೆ ವಿರುದ್ಧವಾದುದು ಎಂದು ಪ್ರತಿಪಾದಿಸಿದರು.

'73ನೇ ರ‍್ಯಾಂಕ್ ಪಡೆದಿರುವ ಒಬಿಸಿ ಅಭ್ಯರ್ಥಿಯು ಸಾಮಾನ್ಯ ಪ್ರವರ್ಗದಡಿ ಸೀಟು ಪಡೆಯಲು ಅರ್ಹರಾಗಿದ್ದಾರೆ. ಆದರೆ ಅವರನ್ನು ಮೀಸಲು ಅಭ್ಯರ್ಥಿಯೆಂದೇ ಪರಿಗಣಿಸಲಾಗಿದೆ. 'ಇದು ಮತ್ತೊಬ್ಬ ಮೀಸಲು ಅಭ್ಯರ್ಥಿಯ ಮೇಲೆ ಪರಿಣಾಮ ಬೀರುತ್ತದೆ' ಎಂದು ಭೂಷಣ್ ಉದಾಹರಣೆ ಸಹಿತ ವಾದಿಸಿದರು.

ವೈದ್ಯಕೀಯ ಕೌನ್ಸೆಲಿಂಗ್ ಸಮಿತಿ ಹೊರಡಿಸಿರುವ ಸೀಟ್ ಮ್ಯಾಟ್ರಿಕ್ಸ್ ಪ್ರಕಟಣೆ ಪ್ರಕಾರ ಅಖಿಲ ಭಾರತ ಕೋಟಾದಡಿ 10,954 ಸೀಟುಗಳು ಲಭ್ಯವಿವೆ.

ರಸಗೊಬ್ಬರ ಕೊರತೆಯಿಂದ ಆಹಾರ ಬಿಕ್ಕಟ್ಟು

ಒಂದನೇ ಪುಟದಿಂದ...

ರಷ್ಯಾ–ಉಕ್ರೇನ್ ಯುದ್ಧದಿಂದಾಗಿ ಜಗತ್ತಿನ ಹಲವು ದೇಶಗಳು ಈಗಾಗಲೇ ಆಹಾರದ ಕೊರತೆ ಎದುರಿಸುತ್ತಿವೆ. ಉಕ್ರೇನ್ ಗೋಧಿ ಉತ್ಪಾದಿಸುವ ಪ್ರಮುಖ ದೇಶವಾಗಿದೆ. ಆದರೆ, ಯುದ್ಧದ ಕಾರಣದಿಂದಾಗಿ ಆ ದೇಶವು ಗೋಧಿ ರಫ್ತನ್ನು ನಿಲ್ಲಿಸಿದೆ.

ಯುದ್ಧ ಮತ್ತು ಇತರ ಕಾರಣಗಳಿಂದಾಗಿ ರಸಗೊಬ್ಬರ ಉತ್ಪಾದನೆಯಲ್ಲಿ ಇಳಿಕೆಯಾಗಿದೆ. ಯುದ್ಧದಿಂದಾಗಿ ನೈಸರ್ಗಿಕ ಅನಿಲದ ದರದಲ್ಲಿ ಭಾರಿ ಏರಿಕೆ ಆಗಿದೆ. ಪೂರೈಕೆಯಲ್ಲಿಯೂ ವ್ಯತ್ಯಯ ಆಗಿದೆ. ಹಾಗಾಗಿ ಯುರೋಪ್‌ನ ರಸಗೊಬ್ಬರ ಉತ್ಪಾದಿಸುವ ಹಲವು ಕಾರ್ಖಾನೆಗಳು ನೈಟ್ರೋಜನ್ ಆಧಾರಿತವಾದ ರಸಗೊಬ್ಬರ ತಯಾರಿಕೆಯನ್ನು ನಿಲ್ಲಿಸಿವೆ. ರಸಗೊಬ್ಬರ ತಯಾರಿಕೆಗೆ ಬೇಕಾದ ಕಚ್ಚಾವಸ್ತುಗಳ ಪೂರೈಕೆಯೂ ಸುಲಲಿತವಾಗಿ ಆಗುತ್ತಿಲ್ಲ. ಹಲವು ಕಾರ್ಖಾನೆಗಳು ತಯಾರಿಕೆ ನಿಲ್ಲಿಸಲು ಇದು ಕಾರಣವಾಗಿದೆ.

ಜಗತ್ತಿನಲ್ಲಿಯೇ ಅತಿ ಹೆಚ್ಚು ರಸಗೊಬ್ಬರ ರಫ್ತು ಮಾಡುವ ದೇಶ ರಷ್ಯಾ. ಆದರೆ, ರಷ್ಯಾದಿಂದ ರಸಗೊಬ್ಬರ ಸರಾಗವಾಗಿ ಪೂರೈಕೆ ಆಗುತ್ತಿಲ್ಲ.

ಯುದ್ಧವಿರೋಧಿ ಘೋಷಣೆ ಸಾಧ್ಯತೆ: 'ಈಗಿನದ್ದು ಯುದ್ಧದ ಯುಗ ಆಗಬಾರದು' ಎಂಬ ಘೋಷಣೆ ಹೊರಡಿಸಲು ಜಿ–20 ನಾಯಕರು ಸಜ್ಜಾಗಿದ್ದಾರೆ ಎಂದು ಬ್ರಿಟನ್‌ನ ಪತ್ರಿಕೆ ಫೈನಾನ್ಶಿಯಲ್ ಟೈಮ್ಸ್ ವರದಿ ಮಾಡಿದೆ. ಈ ಕುರಿತ ಕರಡು ಹೇಳಿಕೆ ಸಿದ್ಧವಾಗಿದೆ. ಅದನ್ನು ಅಂತಿಮಗೊಳಿಸಲು ಮಾತುಕತೆ ನಡೆಯುತ್ತಿದೆ ಎಂದು ವರದಿಯಲ್ಲಿ ಇದೆ.

ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಇದೇ ಅರ್ಥ ಬರುವ ಮಾತನ್ನು ಸೆಪ್ಟೆಂಬರ್‌ನಲ್ಲಿ ಹೇಳಿದ್ದರು.

ಮೋದಿ ಮತ್ತು ಪುಟಿನ್ ಅವರು ಉಜ್ಬೆಕಿಸ್ತಾನದಲ್ಲಿ ಸೆಪ್ಟೆಂಬರ್‌ನಲ್ಲಿ ಭೇಟಿಯಾಗಿದ್ದರು. ಸಂಘರ್ಷ ಕೊನೆಗೊಳಿಸುವಂತೆ ಮೋದಿ ಅವರು ಪುಟಿನ್ ಅವರನ್ನು ಆಗ ಒತ್ತಾಯಿಸಿದ್ದರು.

'ಇದು ಯುದ್ಧದ ಯುಗವಲ್ಲ' ಎಂಬ ಘೋಷಣೆ ಸಿದ್ಧಪಡಿಸುವ ವಿಚಾರದಲ್ಲಿಯೂ ಭಾರತದ ನಿಯೋಗವು ಮಹತ್ವದ ಪಾತ್ರ ವಹಿಸಿದೆ ಎಂದು ಫೈನಾನ್ಶಿಯಲ್ ಟೈಮ್ಸ್ ವರದಿ ಹೇಳಿದೆ.

ತೊಡಕು ನಿವಾರಿಸಿ: ವಿಶ್ವಸಂಸ್ಥೆ ಪತ್ರ

ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರೆಸ್ ಅವರು ಈ ಕುರಿತು ತಮಗೆ ಭರವಸೆ ನೀಡಿದ್ದಾರೆ ಎಂದೂ ಲಾವ್ರೊವ್ ತಿಳಿಸಿದ್ದಾರೆ.

ರಷ್ಯಾದ ಆಹಾರ ಧಾನ್ಯಗಳು ಮತ್ತು ರಸಗೊಬ್ಬರಗಳ ಮೇಲೆ ಪಶ್ಚಿಮದ ದೇಶಗಳು ನೇರ ನಿರ್ಬಂಧ ಹೇರಿಲ್ಲ. ಆದರೆ, ಬಂದರುಗಳ ಸಂಪರ್ಕ, ಹಣಕಾಸು ಮತ್ತು ವಿಮಾ ನಿರ್ಬಂಧದ ಕಾರಣಕ್ಕೆ ಧಾನ್ಯಗಳು ಮತ್ತು ರಸಗೊಬ್ಬರಗಳ ಪೂರೈಕೆ ಸಾಧ್ಯವಾಗುತ್ತಿಲ್ಲ ಎಂದು ರಷ್ಯಾ ದೂರಿದೆ. ರಷ್ಯಾದ ಧಾನ್ಯಗಳ ವ್ಯಾಪಾರ ನಡೆಸುತ್ತಿರುವವರ ಮೇಲೆ ನಿರ್ಬಂಧ ಹೇರುವುದಿಲ್ಲ ಎಂಬ ಭರವಸೆಯನ್ನು ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ದೇಶಗಳು ಲಿಖಿತವಾಗಿ ನೀಡಿವೆ ಎಂದೂ ಗುಟೆರೆಸ್ ಹೇಳಿದ್ದಾಗಿ ಲಾವ್ರೊವ್ ತಿಳಿಸಿದ್ದಾರೆ.

ಈ ಭರವಸೆ ಈಡೇರಿಕೆಯಾದರೆ ರಸಗೊಬ್ಬರ ಮತ್ತು ಧಾನ್ಯ ಪೂರೈಕೆಗೆ ಇರುವ ಎಲ್ಲ ತೊಡಕುಗಳು ನಿವಾರಣೆ ಆಗಲಿವೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಅನರ್ಹರಿಗೆ ಎಸ್‌ಟಿ ಪ್ರಮಾಣಪತ್ರ: ಕಲಬುರಗಿ, ಬೀದರ್‌ನಲ್ಲಿ ಪ್ರತಿಭಟನೆ

ಒಂದನೇ ಪುಟದಿಂದ...

ಇಂಥವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

'ವೀರಶೈವ, ಲಿಂಗಾಯತ ಜಂಗಮರು ತಮ್ಮನ್ನು ತಾವೇ ಬುಡ್ಗ ಜಂಗಮರು ಎಂದು ಹೇಳಿಕೊಳ್ಳುತ್ತಾರೆ. ಕೇಂದ್ರ ಸರ್ಕಾರದ ಅಧೀನದಲ್ಲಿರುವ ಮಾನವ ಶಾಸ್ತ್ರ ಸರ್ವೇಕ್ಷಣ ಸಂಸ್ಥೆಯು ಬೇಡ ಜಂಗಮರು ವೀರಶೈವ ಜಂಗಮರಲ್ಲವೆಂದು ಸ್ಪಷ್ಟಪಡಿಸಿದೆ. ಸುಳ್ಳು ಜಾತಿ ಪ್ರಮಾಣಪತ್ರದ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಪ್ರತಿ ಜಿಲ್ಲೆಯಲ್ಲಿಯೂ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕು' ಎಂದು ಅವರು ಒತ್ತಾಯಿಸಿದರು.

ಗೋಲಪಲ್ಲಿಯ ವಾಲ್ಮೀಕಿ ಆಶ್ರಮದ ವರನಂದೇಶ್ವರ ಸ್ವಾಮೀಜಿ, ಕಲ್ಯಾಣ ಕರ್ನಾಟಕ ಮಹರ್ಷಿ ವಾಲ್ಮೀಕಿ ನಾಯಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶ್ರವಣಕುಮಾರ ಡಿ.ನಾಯಕ ನೇತೃತ್ವದಲ್ಲಿ ಕಲಬುರಗಿಯಲ್ಲಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು. ಸಮಿತಿಯ ಜಿಲ್ಲಾ ಘಟಕದ ಅಧ್ಯಕ್ಷ ರಾಜಕುಮಾರ ಮೂಲಭಾರತಿ ನೇತೃತ್ವದಲ್ಲಿ ಬೀದರ್‌ನಲ್ಲಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಬಾಕಿ ಚುಕ್ತಾ ಮಾಡದಿದ್ದರೆ ಜಿಎಸ್‌ಟಿ ಪಾವತಿ ಸ್ಥಗಿತ: ಮಮತಾ ಎಚ್ಚರಿಕೆ

ಜಾಡಗ್ರಾಮ, ಪಶ್ಚಿಮ ಬಂಗಾಳ (ಪಿಟಿಐ): 'ಕೇಂದ್ರ ಸರ್ಕಾರವು ರಾಜ್ಯಗಳ ಪಾಲಿನ ಬಾಕಿ ಮೊತ್ತವನ್ನು ಚುಕ್ತಾ ಮಾಡದಿದ್ದರೆ ಜಿಎಸ್‌ಟಿ ಪಾವತಿಯನ್ನು ನಿಲ್ಲಿಸಬೇಕಾಗುತ್ತದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ಹೇಳಿದ್ದಾರೆ.

ಬುಡಕಟ್ಟು ಸಮುದಾಯದವರ ಪ್ರಾಬಲ್ಯ ಹೆಚ್ಚಿರುವ ಜಾಡಗ್ರಾಮ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಕೇಂದ್ರವು ರಾಜ್ಯಗಳ ಪಾಲಿನ ಬಾಕಿ ಮೊತ್ತವನ್ನು ಚುಕ್ತಾ ಮಾಡಲಿ. ಇಲ್ಲದಿದ್ದರೆ ಅಧಿಕಾರದಿಂದ ಕೆಳಗಿಳಿಯಲಿ' ಎಂದು ಹರಿಹಾಯ್ದಿದ್ದಾರೆ. 'ನಮ್ಮ ಪಾಲಿನ ಮೊತ್ತವನ್ನು ಪಡೆಯಲು ಕೇಂದ್ರದ ಎದುರು ಭಿಕ್ಷೆ ಬೇಡಬೇಕೆ' ಎಂದು ಟೀಕಿಸಿದ್ದಾರೆ.

ತೆಲುಗು ನಟ ಕೃಷ್ಣ ನಿಧನ



ಹೈದರಾಬಾದ್ (ಪಿಟಿಐ): ತೆಲುಗಿನ ಜನಪ್ರಿಯ ನಟ ಪ್ರಿನ್ಸ್ ಮಹೇಶ್ ಬಾಬು ಅವರ ತಂದೆ, ಸೂಪರ್ ಸ್ಟಾರ್ ಖ್ಯಾತಿಯ ನಟ ಕೃಷ್ಣ (79) ಮಂಗಳವಾರ ಬೆಳಗಿನ ಜಾವ ನಿಧನರಾದರು.

ಕೃಷ್ಣ ಅವರಿಗೆ ಭಾನುವಾರ ಬೆಳಗಿನ ಜಾವ ಹೃದಯಾಘಾತವಾಗಿತ್ತು. ಕೂಡಲೇ ಹೈದರಾಬಾದ್‌ನ ಕಾಂಟಿನೆಂಟಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮಂಗಳವಾರ ಬೆಳಿಗ್ಗೆ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು.

ಸೂಪರ್ ಸ್ಟಾರ್ ಎಂದೇ ಜನಪ್ರಿಯತೆ ಗಳಿಸಿದ್ದ ಕೃಷ್ಣ ಅವರು ಗುಂಟೂರು ಜಿಲ್ಲೆಯ ಬುರ್ರಿಪಾಲೆಂನಲ್ಲಿ 1943ರಲ್ಲಿ ಜನಿಸಿದರು. 1965ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟು, 340ಕ್ಕೂ ಹೆಚ್ಚಿನ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ನಿರ್ದೇಶಕ ಹಾಗೂ ನಿರ್ಮಾಪಕರಾಗಿಯೂ ಕಾರ್ಯನಿರ್ವಹಿಸಿದ ಇವರಿಗೆ 2009ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಸರ್ಕಾರ ಗೌರವಿಸಿದೆ.

ಮೊರ್ಬಿ ತೂಗುಸೇತುವೆ ದುರಂತ: ಸರ್ಕಾರಕ್ಕೆ ಗುಜರಾತ್ ಹೈಕೋರ್ಟ್ ಪ್ರಶ್ನೆ

'ನಿರ್ವಹಣೆಯ 'ಇನಾಮು' ಏಕೆ ನೀಡಲಾಯಿತು?'

ಅಹಮದಾಬಾದ್ (ಪಿಟಿಐ): 135 ಜನರನ್ನು ಬಲಿತೆಗೆದುಕೊಂಡ ಮೊರ್ಬಿ ತೂಗುಸೇತುವೆ ಕುಸಿದ ದುರಂತದ ಬಗ್ಗೆ ಎದುರಾಗಿರುವ ಪ್ರಶ್ನೆಗಳಿಗೆ ನಿರ್ಣಾಯಕ ಉತ್ತರ ಹುಡುಕುತ್ತಿರುವ ರಾಜ್ಯ ಸರ್ಕಾರಕ್ಕೆ ಮಂಗಳವಾರ ಗುಜರಾತ್ ಹೈಕೋರ್ಟ್ ಚಾಟಿ ಬೀಸಿದೆ.

ಸೇತುವೆ ನಿರ್ವಹಣೆಯ ಗುತ್ತಿಗೆ ಅವಧಿ ಮೂರು ವರ್ಷಗಳ ಹಿಂದೆಯೇ ಪೂರ್ಣಗೊಂಡರೂ ಟೆಂಡರ್ ಕರೆಯದೆ, ಮತ್ತೆ ಒರೆವಾ ಸಮೂಹದ (ಗಡಿಯಾರ ತಯಾರಿಕೆಯ ಅಜಂತಾ ಕಂಪನಿ) ಕಂಪನಿಗೆ ಸೇತುವೆ ನಿರ್ವಹಣೆಯ ಜವಾಬ್ದಾರಿ ಏಕೆ ನೀಡಲಾಯಿತು? ಸರ್ಕಾರವು ಯಾಕಾಗಿ ಇಷ್ಟು ವರ್ಷ ಒಬ್ಬನೇ ವ್ಯಕ್ತಿಗೆ ಸೇತುವೆ ನಿರ್ವಹಣೆ ಹೆಸರಿನ 'ಇನಾಮು' ನೀಡಿತು ಎಂದು ಕಟುವಾಗಿ ಪ್ರಶ್ನಿಸಿದೆ.

ಮೊರ್ಬಿ ತೂಗು ಸೇತುವೆ ದುರಂತದ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ಆರಂಭಿಸಿರುವ ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಅಶುತೋಷ್ ಜೆ. ಶಾಸ್ತ್ರಿ ಅವರಿದ್ದ ಪೀಠವು, ಅಜಂತಾಗೆ ನೀಡಲಾದ ಗುತ್ತಿಗೆ ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ನವೆಂಬರ್ 18ರೊಳಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು. ಎರಡು ವಾರಗಳ ಬಳಿಕ ಮುಂದಿನ ವಿಚಾರಣೆ ನಡೆಸುವುದಾಗಿ ಪೀಠ ಹೇಳಿತು.

ಮೊರ್ಬಿ ಪುರಸಭೆ ಮತ್ತು ಗುತ್ತಿಗೆ ಪಡೆದ ಅಜಂತಾ ಸಂಸ್ಥೆ ನಡುವೆ ಮಾಡಿಕೊಂಡಿರುವ ಕರಾರು ಪತ್ರವನ್ನು ಗಮನಿಸಿದ ವಿಭಾಗೀಯ ಪೀಠವು, 'ನಿಮ್ಮ ಒಪ್ಪಂದದ ಪತ್ರ ಒಂದೂಕಾಲು ಪುಟ ಇದೆ. ಒಪ್ಪಂದದಲ್ಲಿ ಒಂದೇ ಒಂದು ಷರತ್ತನ್ನೂ ವಿಧಿಸಿಲ್ಲ. ಟೆಂಡರ್ ಪ್ರಕ್ರಿಯೆ ಪಾಲಿಸಿಲ್ಲ. ಆಸಕ್ತಿ ವ್ಯಕ್ತಪಡಿಸುವ ಪತ್ರವನ್ನೂ ಕೇಳಿಲ್ಲ. ಇಬ್ಬರ ನಡುವೆ 'ಇನಾಮು' ನೀಡುವ, ಪಡೆಯುವ ಹೊಂದಾಣಿಕೆ ನಡೆದಿತ್ತೇ' ಎಂದು ಖಾರವಾಗಿ ಪ್ರಶ್ನಿಸಿತು.

ದುರಂತಕ್ಕೆ ಕಾರಣವಾದ ಪುರಸಭೆಯನ್ನು ಸೂಪರ್ ಸೀಡ್ ಮಾಡಲು 1963ರ ಗುಜರಾತ್ ಪುರಸಭೆಗಳ ಕಾಯ್ದೆಯ ಸೆಕ್ಷನ್ 263ರ ಅಡಿಯಲ್ಲಿ ಏಕೆ ಅಧಿಕಾರ ಚಲಾಯಿಸಲಿಲ್ಲ ಎಂಬುದರ ಬಗ್ಗೆ ಪ್ರತಿಕ್ರಿಯಿಸುವಂತೆ ಪೀಠವು ಸರ್ಕಾರಕ್ಕೆ ಸೂಚಿಸಿತು.

ಪೀಠವು ಸರ್ಕಾರದ ಮುಂದಿಟ್ಟ ಪ್ರಶ್ನೆಗಳು

- 2017ರ ಜೂನ್ 15ರಂದು ಗುತ್ತಿಗೆ ಒಪ್ಪಂದದ ಅವಧಿ ಪೂರ್ಣಗೊಂಡಿತ್ತು. ಇದಾದ ಬಳಿಕ, ಯಾವ ಕ್ರಮ ಕೈಗೊಂಡಿದ್ದೀರಿ?
- ಪುರಸಭೆ ಮುಖ್ಯಾಧಿಕಾರಿ ವಿರುದ್ಧ ಶಿಸ್ತುಕ್ರಮವನ್ನು ಯಾಕಾಗಿ ಇನ್ನೂ ಕೈಗೊಂಡಿಲ್ಲ?
- ಒಪ್ಪಂದದ ಅವಧಿ ಮುಗಿದರೂ ಗುತ್ತಿಗೆದಾರ ಹೇಗೆ ಸೇತುವೆ ನಿರ್ವಹಿಸುತ್ತಿದ್ದರು? ಒಪ್ಪಂದ ಜಾರಿ ಮಾಡದಿದ್ದರೆ ದುರಸ್ತಿ ಕೆಲಸ ಮಾಡುವುದಿಲ್ಲ ಎಂದು ಫೆಬ್ರುವರಿ 2020ರ ಬಳಿಕ ಗುತ್ತಿಗೆದಾರ ಜಿಲ್ಲಾಧಿಕಾರಿಗೆ ಹಲವು ಬಾರಿ ಹೇಳಿದ್ದರು. ಆದರೂ ಪ್ರವಾಸಿಗರಿಂದ ಬರುವ ಹಣವನ್ನು ಗುತ್ತಿಗೆದಾರನೇ ಪಡೆದುಕೊಳ್ಳುತ್ತಿದ್ದ. ಇದಕ್ಕೆ ಯಾರು ಅವಕಾಶ ಕೊಟ್ಟಿದ್ದು?
- ದುಡಿಯುವ ಆಧಾರಸ್ತಂಭ ಕಳೆದುಕೊಂಡ ಸಂತ್ರಸ್ತ ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವ ಬಗ್ಗೆ ಸರ್ಕಾರದ ನಿರ್ಧಾರ ಏನು?



ಮೊರ್ಬಿ ಸೇತುವೆ– ಸಾಂದರ್ಭಿಕ ಚಿತ್ರ

ಪುರಸಭೆ ವಿರುದ್ಧ ಕೋರ್ಟ್ ಆಕ್ರೋಶ: ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಿದ್ದರೂ ಮೊರ್ಬಿ ಪುರಸಭೆ ಅಧಿಕಾರಿಗಳು ನ್ಯಾಯಾಲಯಕ್ಕೆ ಹಾಜರಾಗಲಿಲ್ಲ. ಇದನ್ನು ಗಮನಿಸಿದ ನ್ಯಾಯಮೂರ್ತಿ ಕುಮಾರ್, 'ಹಾಗಾದರೆ ಅವರು ಈಗ ಜಾಣ ನಟನೆ ಮಾಡುತ್ತಿದ್ದಾರೆ' ಎಂದರು.

'ವಿಚಾರಣೆಗೆ ಹಾಜರಾಗುವಂತೆ ಪುರಸಭೆಗೆ ನೋಟಿಸ್ ನೀಡಿ' ಎಂದು ಜಿಲ್ಲಾ ನ್ಯಾಯಾಧೀಶರಿಗೆ, ನ್ಯಾಯಮೂರ್ತಿ ಕುಮಾರ್ ಅವರು ಆದೇಶಿಸಿದರು.

'ಪುರಸಭೆಯ ಅಧಿಕಾರಿಗಳು ಪ್ರಕರಣದ ಬಗ್ಗೆ ಏನು ಹೇಳುತ್ತಾರೆ ಎಂದು ಕೇಳುವುದಕ್ಕಾಗಿಯೇ ಬುಧವಾರ ವಿಚಾರಣೆ ನಡೆಸಲಾಗುವುದು. ಈ ವೇಳೆ ಎಲ್ಲರೂ ಹಾಜರಿರಲೇಬೇಕು' ಎಂದೂ ಅವರು ಕಟ್ಟಪ್ಪಣೆ ವಿಧಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
ಫೋನ್:080–22865401/22868870/22867097/22865747/22865194/22861986

ಸಂಖ್ಯೆ: ADCL/GKS/OTH/18/2022-DVLPMT/2022-23 ದಿನಾಂಕ:15.11.2022

ಅಲ್ಪಾವಧಿ RFP(Request For Proposal) ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (2ನೇ ಕರೆ)

ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಗಂಗಾಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಯಡಿ ಕೊರೆಯುವ ಕೊಳವೆ ಬಾವಿಗಳ ಆಳ, ಅಳವಡಿಸಿರುವ ಕೇಸಿಂಗ್ ಪೈಪ್‌ನ ಉದ್ದ, ವ್ಯಾಸ ಹಾಗೂ ದಪ್ಪ ಮತ್ತು ಸರಬರಾಜು ಮಾಡಲಾದ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳನ್ನು Specification & Bill Of Quantities ನಂತೆ ತಪಾಸಣೆ ಮಾಡಲು ಅನುಭವವುಳ್ಳ 3ನೇ ತಪಾಸಣಾ ಸಂಸ್ಥೆಯನ್ನು ನೇಮಕಮಾಡಿಕೊಳ್ಳಲು, ಇ–ಪೋರ್ಟಲ್ ಮುಖಾಂತರ ಅಲ್ಪಾವಧಿ RFP (Request For Proposal) ಯನ್ನು (2ನೇ ಕರೆ) ಆಹ್ವಾನಿಸಲಾಗಿದೆ. ಆಸಕ್ತ 3ನೇ ತಪಾಸಣಾ ಸಂಸ್ಥೆಗಳು ಸದರಿ RFP (Request For Proposal) ಯಲ್ಲಿ ಭಾಗವಹಿಸಲು ಬೇಕಾದ ಅರ್ಹತೆ, ಖಿಈಹ ಸಲ್ಲಿಸುವ ವಿಧಾನ, ನಿಬಂಧನೆಗಳು, ಇ.ಎಂ.ಡಿ ಮೊತ್ತ ಹಾಗೂ ಇತರೆ ಹೆಚ್ಚಿನ ಮಾಹಿತಿಗಾಗಿ https://eproc.karnataka.gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

1. ಇ–ಪೋರ್ಟಲ್‌ನಲ್ಲಿ RFP ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 15.11.2022 ರಿಂದ.
2. ಪ್ರಿ–ಬಿಡ್ ಸಭೆಯ ದಿನಾಂಕ: 19.11.2022 ಬೆಳಿಗ್ಗೆ 11:00 ಗಂಟೆಗೆ.
3. ಪ್ರಿ–ಬಿಡ್ ಪ್ರಶ್ನೆಗಳನ್ನು (Queries) ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ: 19.11.2022 ರ ಸಂಜೆ 5:30 ಗಂಟೆಯವರೆಗೆ.
4. ಇ–ಪೋರ್ಟಲ್ ಮುಖಾಂತರ RFP ಬಿಡ್ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 24.11.2022 ರ ಸಂಜೆ 5:30 ಗಂಟೆಯವರೆಗೆ.
5. RFP ಗೆ ಸಂಬಂಧಿಸಿದಂತೆ ಮುಂದೂಡಿಕೆ / ತಿದ್ದುಪಡಿಗಳು ಏನಾದರೂ ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
6. ಕಂಡಿಷನಲ್ RFP ಗಳನ್ನು ಮಾನ್ಯ ಮಾಡಲಾಗುವುದಿಲ್ಲ.
7. ಸದರಿ RFP ಪ್ರಕಟಣೆಯನ್ನು ತಿರಸ್ಕರಿಸುವ/ರದ್ದುಪಡಿಸುವ ಪೂರ್ಣ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾಪ್ರ/ಜಿಎ/3097/2022–23

PUBLIC WORKS DEPARTMENT
Office of the Executive Engineer,
No. 1, Buildings Division, S.J.P. Campus, Bangalore
Ph.: 080-22255210 Email : eebld1@kpwd.gov.in eebld1@yahoo.com

IFT No. EE/Bld1/AE-1 & AE-3/33/2022-23 Date : 10-11-2022

INVITATION FOR SHORT TERM TENDER (IFT)

The Executive Engineer No 1, Buildings Division, Bangalore invites tenders from eligible tenderers, for the construction of works detailed in the Table below. The tenderers have to submit the tender for the work given in the Table through e-procurement portal of the Government of Karnataka **(viz http://eproc.karnataka.gov.in)**. The Tenderers are advised to note the minimum qualification criteria specified in Clause 3 of the Instructions to Tenderers to qualify for award of the contract. (Standard Tender Document KW2,KW3)

(1) Name of work : Providing Housekeeping works in 3rd stage East & west wings, 4th stage and 5th Stage all floors (except the floor area which are undertaken by DPAR) including terrace roof external cleaning of rear side concrete path ways, premises and passages, External Sweeping of Double road from M.S.Building 5th Stage to Vidhana Soudha West Gate and other allied works at M.S. Building premises, Bengaluru, KPWD/2022-23/BD/WORK_INDENT158153. **Approximate value of work (Rs.in Lakhs) :** 87.15. **Earnest Money Deposit (in Rs.) :** 1.75 Lakhs (Rs.1,00,000/- through E payment and Rs.0.75 Lakhs through Bank Guarantee. **Cost of document (in Rs.) :** As per e-portal. **Period of completion :** 5 Months 15 days Including rainy season. **(2) Name of work :** Annual Maintenance of Vidhana Soudha including cleaning of corridors, porticos, staircase, common passages, and terrace, corridors, Garden area, Cleaning chejja, open areas and Replacement of damages water supply and sanitary fittings Maintenance of doors and windows including replacement of damaged hardware fittings and broken glasses and other allied works at Vidhana Soudha, Bangalore. KPWD/2022-23/BD/WORK_INDENT158423. **Approximate value of work (Rs.in Lakhs) :** 52.46. **Earnest Money Deposit (in Rs.) :** 1,05,000.00 **Cost of document (in Rs.) :** As per e-portal. **Period of completion :** 5 Months 15 days Including rainy season. **(3) Name of work :** Annual maintenance for Fire Fighting Equipments, Smoke Detectors, Refilling of existing Fire Extinguishers and other allied works at 1st Stage, 2nd Stage, 3rd Stage (East & West wing), 4th Stage, 5th Stage and Karnataka Information Commission Building in M.S. Building Premises, Bengaluru KPWD/2022-23/BD/WORK_ INDENT158016. **Approximate value of work (Rs.in Lakhs) :** 41.59. **Earnest Money Deposit (in Rs.) :** 83,500.00 **Cost of document (in Rs.) :** As per e-portal. **Period of completion :** 5 Months 15 days Including rainy season. **(4) Name of work :** House keeping for Inside and outside premises, Providing and other necessary maintenance and other allied works at Karnataka Public Service Commission Building and Park house building No. 1. Building Division Office and No. 4. Building Sub-Division, SJP Campus, Bengaluru KPWD/2022-23/BD/WORK_INDENT158080. **Approximate value of work (Rs.in Lakhs) :** 44.88. **Earnest Money Deposit (in Rs.) :** 89,800.00 **Cost of document (in Rs.) :** As per e-portal. **Period of completion :** 5 Months 15 days Including rainy season. **(5) Name of work :** Providing Stone washing, cleaning of the terrace, cleaning of overhead tanks, sump tanks, surface drains, subsurface drains, external premises, quadrangle chejjas, Maintenance for fire fighting equipments system, fire hydrants, sprinkler system, repairs to fire fighting pumps and refilling of fire Extinguishers and Providing essential waters supply and Sanitary fittings, painting, polishing, maintenance of water filters and other regular maintenance work to Vikasa Soudha, Bangalore KPWD/2022-23/BD/WORK_INDENT 159295. **Approximate value of work (Rs.in Lakhs) :** 72.63. **Earnest Money Deposit (in Rs.) :** 1,45,300/- (Rs.1,00,000/- through E payment and Rs.0.453 Lakhs through Bank Guarantee **Cost of document (in Rs.) :** As per e-portal. **Period of completion :** 5 Months 15 days Including rainy season. **(6) Name of work :** Annual maintenance to quadrangle garden, Medical plantation, 5th stage garden and fountain and alround garden by providing garden & periodical watering, manure, medicine to lawn, shrubs, plants & trees (watering with available water) in Legislature Home, Bangalore KPWD/2022-23/BD/WORK_INDENT159984. **Approximate value of work (Rs.in Lakhs) :** 7.21. **Earnest Money Deposit (in Rs.) :** 18,025/- **Cost of document (in Rs.) :** As per e-portal. **Period of completion :** 5 Months 15 days Including rainy season.

(1) Tender documents may be downloaded from the e-procurement portal of the Government of Karnataka up to **18.11.2022**. **(2)** Tenders must be submitted online through e-procurement portal on or before 1600 hours on **18.11.2022** and the opening of tenders will be as per the e-procurement portal guidelines. **(3)** Other details can be seen in the tender documents.

Sd/-
Executive Engineer
No 1, Buildings Division, Bangalore

DIPR/CP/3085/Sreshta/2022-23

ಇಂಡಿಯನ್ ಪ್ರೀಮಿಯರ್ ಲೀಗ್: ಡ್ವೇನ್ ಬ್ರಾವೊ ಕೈಬಿಟ್ಟ ಚೆನ್ನೈ ಸೂಪರ್ ಕಿಂಗ್ಸ್

ಪ್ರಮುಖರ ಉಳಿಸಿಕೊಂಡ ಆರ್‌ಸಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರಾಟ್ ಕೊಹ್ಲಿ, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಫಾಫ್ ಡುಪ್ಲೆಸಿ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ (ಆರ್‌ಸಿಬಿ) ನಿರೀಕ್ಷೆಯಂತೆಯೇ ತನ್ನಲ್ಲಿ ಉಳಿಸಿಕೊಂಡಿದೆ.

ವಿದೇಶಿ ಆಟಗಾರರಲ್ಲಿ ಮ್ಯಾಕ್ಸ್‌ವೆಲ್ ಮತ್ತು ಡುಪ್ಲೆಸಿ ಅಲ್ಲದೆ ಶ್ರೀಲಂಕಾದ ಆಲ್‌ರೌಂಡರ್ ವಣಿಂದು ಹಸರಂಗ, ಆಸ್ಟ್ರೇಲಿಯಾದ ವೇಗಿ ಜೋಶ್ ಹ್ಯಾಜೆಲ್‌ವುಡ್, ನ್ಯೂಜಿಲೆಂಡ್‌ನ ವಿಕೆಟ್‌ಕೀಪರ್ ಬ್ಯಾಟರ್ ಫಿನ್ ಅಲೆನ್ ಮತ್ತು ಇಂಗ್ಲೆಂಡ್‌ನ ಆಲ್‌ರೌಂಡರ್ ಡೇವಿಡ್ ವಿಲಿ ಅವರನ್ನೂ ಉಳಿಸಿಕೊಂಡಿದೆ.

ದಿನೇಶ್ ಕಾರ್ತಿಕ್, ಮೊಹಮ್ಮದ್ ಸಿರಾಜ್ ಮತ್ತು ಹರ್ಷಲ್ ಪಟೇಲ್ ಅವರನ್ನು ಉಳಿಸಿಕೊಳ್ಳಲು ತೀರ್ಮಾನಿಸಿದೆ. ಕರ್ನಾಟಕದ ಇಬ್ಬರು ಆಟಗಾರರಾದ ಲವನೀತ್ ಸಿಸೋಡಿಯಾ ಮತ್ತು ಅನೀಶ್ವರ್ ಗೌತಮ್ ಸೇರಿದಂತೆ ಐವರು ಆಟಗಾರರನ್ನು ಆರ್‌ಸಿಬಿ ಕೈಬಿಟ್ಟಿದೆ.

ಡಿ.23 ರಂದು ಕೊಚ್ಚಿಯಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಮಿನಿ ಹರಾಜಿಗೆ ಮುನ್ನ ಫ್ರಾಂಚೈಸಿಗಳು ತಂಡದಲ್ಲಿ ಉಳಿಸಿಕೊಳ್ಳುವ ಮತ್ತು ಬಿಟ್ಟುಕೊಡುವ ಆಟಗಾರರ ಪಟ್ಟಿಯನ್ನು ನೀಡಲು ಮಂಗಳವಾರ ಕೊನೆಯ ದಿನವಾಗಿತ್ತು. ಮಿನಿ ಹರಾಜಿನಲ್ಲಿ ಹೊಸ ಆಟಗಾರರನ್ನು ತಂಡಕ್ಕೆ ಸೇರಿಸಲು ಆರ್‌ಸಿಬಿ ಬಳಿ ಈಗ ₹ 8.75 ಕೋಟಿ ಉಳಿದುಕೊಂಡಿದೆ.

ಬ್ರಾವೊ ಕೈಬಿಟ್ಟ ಚೆನ್ನೈ: ಚೆನ್ನೈ ಸೂಪರ್ ಕಿಂಗ್ಸ್ ತಂಡ ಡ್ವೇನ್ ಬ್ರಾವೊ ಅವರನ್ನು ಕೈಬಿಟ್ಟಿದೆ. ಇದರೊಂದಿಗೆ ವೆಸ್ಟ್ ಇಂಡೀಸ್‌ನ ಆಲ್‌ರೌಂಡರ್ ತಂಡದ ಜತೆಗೆ ಹೊಂದಿದ್ದ 11 ವರ್ಷಗಳ ನಂಟು ಕೊನೆಗೊಂಡಿದೆ. ಇಂಗ್ಲೆಂಡ್‌ನ ಕ್ರಿಸ್ ಜೋರ್ಡನ್ ಅವರನ್ನೂ ತಂಡ ಹರಾಜಿಗೆ ಬಿಟ್ಟುಕೊಟ್ಟಿದೆ.

ಸನ್‌ರೈಸರ್ಸ್ ಹೈದರಾಬಾದ್ ತಂಡ ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಮತ್ತು ನಿಕೊಲಸ್ ಪೂರನ್ ಒಳಗೊಂಡಂತೆ 12 ಆಟಗಾರರನ್ನು ಕೈಬಿಡಲು ತೀರ್ಮಾನಿಸಿದೆ. ಈ ತಂಡ ಅತಿಹೆಚ್ಚು ಅಂದರೆ ₹ 42.25 ಕೋಟಿ ಮೊತ್ತದೊಂದಿಗೆ ಮಿನಿ ಹರಾಜಿನಲ್ಲಿ ಪಾಲ್ಗೊಳ್ಳಲಿದೆ.

ಪಂಜಾಬ್ ಕಿಂಗ್ಸ್ ಫ್ರಾಂಚೈಸ್, ಕಳೆದ ಋತುವಿನಲ್ಲಿ ತಂಡವನ್ನು ಮುನ್ನಡೆಸಿದ್ದ ಕರ್ನಾಟಕದ ಆರಂಭಿಕ ಬ್ಯಾಟರ್ ಮಯಂಕ್ ಅಗರವಾಲ್ ಅವರನ್ನು ಕೈಬಿಟ್ಟಿದೆ. ಪಂಜಾಬ್ ಕಿಂಗ್ಸ್ ₹32.2 ಕೋಟಿ ಮತ್ತು ಲಖನೌ ಸೂಪರ್ ಜೈಂಟ್ಸ್ ಹರಾಜಿನಲ್ಲಿ ₹ 23.35 ಕೋಟಿ ಖರ್ಚು ಮಾಡಬಹುದು.

ವಿವಿಧ ತಂಡಗಳು ಬಿಟ್ಟುಕೊಟ್ಟ ಪ್ರಮುಖ ಆಟಗಾರರು: ಮುಂಬೈ ಇಂಡಿಯನ್ಸ್: ಕೀರನ್ ಪೊಲಾರ್ಡ್, ಅನ್ಮೋಲ್‌ಪ್ರೀತ್ ಸಿಂಗ್, ಆರ್ಯನ್ ಜುಯೆಲ್, ಬಸಿಲ್ ಥಂಪಿ, ಡೇನಿಯಲ್ ಸ್ಯಾಮ್ಸ್, ಫ್ಯಾಬಿಯನ್ ಅಲೆನ್, ಜಯದೇವ್ ಉನದ್ಕತ್, ಮಯಂಕ್ ಮಾರ್ಕಂಡೆ, ಮುರುಗನ್ ಅಶ್ವಿನ್, ರಾಹುಲ್ ಬುದ್ಧಿ, ಟೈಮಲ್ ಮಿಲ್ಸ್

ಚೆನ್ನೈ ಸೂಪರ್‌ಕಿಂಗ್ಸ್: ಡ್ವೇನ್ ಬ್ರಾವೊ, ರಾಬಿನ್ ಉತ್ತಪ್ಪ, ಆ್ಯಡಮ್ ಮಿಲ್ನೆ, ಕ್ರಿಸ್ ಜೋರ್ಡನ್

ಕೋಲ್ಕತ್ತ ನೈಟ್ ರೈಡರ್ಸ್: ಪ್ಯಾಟ್ ಕಮಿನ್ಸ್, ಸ್ಯಾಮ್ ಬಿಲಿಂಗ್ಸ್, ಅಮನ್ ಖಾನ್, ಶಿವಂ ಮಾವಿ, ಮೊಹಮ್ಮದ್ ನಬಿ, ಚಾಮಿಕ ಕರಣರತ್ನೆ, ಆ್ಯರನ್ ಫಿಂಚ್, ಅಲೆಕ್ಸ್ ಹೇಲ್ಸ್, ಅಭಿಜೀತ್ ತೋಮರ್, ಅಜಿಂಕ್ಯಾ ರಹಾನೆ, ಬಾಬಾ ಇಂದ್ರಜಿತ್, ಶೆಲ್ಡನ್ ಜಾಕ್ಸನ್

ಸನ್‌ರೈಸರ್ಸ್ ಹೈದರಾಬಾದ್: ಕೇನ್ ವಿಲಿಯಮ್ಸನ್, ನಿಕೊಲಸ್ ಪೂರನ್, ಜೆ.ಸುಚಿತ್, ಪ್ರಿಯಂ ಗರ್ಗ್, ಆರ್.ಸಮರ್ಥ್, ರೊಮಾರಿಯೊ ಶೆಫರ್ಡ್, ಸೌರಭ್ ದುಬೆ, ಸೀನ್ ಅಬಾಟ್, ಶ್ರೇಯಸ್ ಗೋಪಾಲ್.

ಪಂಜಾಬ್ ಕಿಂಗ್ಸ್: ಮಯಂಕ್ ಅಗರವಾಲ್, ಒಡೇನ್ ಸ್ಮಿತ್, ವೈಭವ್ ಅರೋರಾ, ಇಶಾನ್ ಪೊರೆಲ್, ಲಖನೌ ಸೂಪರ್ ಜೈಂಟ್ಸ್: ಆ್ಯಂಡ್ರ್ಯೂ ಟೈ, ಅಂಕಿತ್ ರಜಪೂತ್, ದುಷ್ಮಂತ್ ಚಮೀರ, ಎವಿನ್ ಲೆವಿಸ್, ಜೇಸನ್ ಹೋಲ್ಡರ್, ಮನೀಷ್ ಪಾಂಡೆ, ಶಹಬಾಜ್ ನದೀಂ.

ಗುಜರಾತ್ ಜೈಂಟ್ಸ್: ರಹಮಾನುಲ್ಲಾ ಗುರ್ಬಾಜ್, ಲಾಕಿ ಫರ್ಗ್ಯುಸನ್, ಜೇಸನ್ ರಾಯ್, ವರುಣ್ ಆ್ಯರನ್

ಡೆಲ್ಲಿ ಕ್ಯಾಪಿಟಲ್ಸ್: ಟಿಮ್ ಸೀಫರ್ಟ್, ಮಂದೀಪ್ ಸಿಂಗ್, ಕೆ.ಎಸ್.ಭರತ್, ಅಶ್ವಿನ್ ಹೆಬ್ಬಾರ್

ರಾಜಸ್ತಾನ ರಾಯಲ್ಸ್: ಕರುಣ್ ನಾಯರ್, ಜೇಮ್ಸ್ ನೀಶಮ್, ಡೆರಿಲ್ ಮಿಚೆಲ್, ನೇಥನ್ ಕೌಲ್ಟರ್ ನೈಲ್, ರಸೀ ವಾನ್ ಡೆರ್ ಡಸೆನ್, ಕಾರ್ಬಿನ್ ಬಾಷ್

ಆರ್‌ಸಿಬಿ ಆಟಗಾರರು

ಫಾಫ್ ಡುಪ್ಲೆಸಿ, ವಿರಾಟ್ ಕೊಹ್ಲಿ, ಸುಯೇಶ್ ಪ್ರಭುದೇಸಾಯಿ, ರಜತ್ ಪಾಟೀದಾರ್, ದಿನೇಶ್ ಕಾರ್ತಿಕ್, ಅನುಜ್ ರಾವತ್, ಫಿನ್ ಅಲೆನ್, ಗ್ಲೆನ್ ಮ್ಯಾಕ್ಸ್‌ವೆಲ್, ವಣಿಂದು ಹಸರಂಗ, ಶಹಬಾಜ್ ಅಹ್ಮದ್, ಹರ್ಷಲ್ ಪಟೇಲ್, ಡೇವಿಡ್ ವಿಲೆ, ಕರ್ಣ್ ಶರ್ಮ, ಮಹಿಪಾಲ್ ಲೊಮ್ರೊರ್, ಮೊಹಮ್ಮದ್ ಸಿರಾಜ್, ಜೋಶ್ ಹ್ಯಾಜೆಲ್‌ವುಡ್, ಸಿದ್ಧಾರ್ಥ್ ಕೌಲ್, ಆಕಾಶ್ ದೀಪ್

ಕೈಬಿಟ್ಟ ಆಟಗಾರರು: ಜೇಸನ್ ಬೆಹೆರೆನ್‌ಡ್ರಾಫ್, ಅನೀಶ್ವರ್ ಗೌತಮ್, ಚಮಾ ಮಿಲಿಂದ್, ಲವನೀತ್ ಸಿಸೋಡಿಯಾ, ಶೆರ್ಫೇನ್ ರುದರ್‌ಫರ್ಡ್

ಫ್ರಾಂಚೈಸ್ ಹೊಂದಿರುವ ಮೊತ್ತ: ₹ 8.75ಕೋಟಿ

ವಿರಾಟ್ ಕೊಹ್ಲಿ

ಅರ್ಜೆಂಟೀನಾ ತಂಡದ ಲಯೊನೆಲ್ ಮೆಸ್ಸಿ (ಮಧ್ಯ) ಅವರು ಅಬುಧಾಬಿಯಲ್ಲಿ ಸಹ ಆಟಗಾರರ ಜತೆ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ಕತಾರ್‌ಗೆ ಪ್ರಮುಖ ತಂಡಗಳು



ದೋಹಾ (ಎಎಫ್‌ಪಿ): ಫಿಫಾ ವಿಶ್ವಕಪ್ ಟೂರ್ನಿಯ ಆರಂಭಕ್ಕೆ ಕೆಲವೇ ದಿನಗಳು ಬಾಕಿಯಿದ್ದು, ಫುಟ್‌ಬಾಲ್ ಪ್ರೇಮಿಗಳ ಚಿತ್ತ ಪುಟ್ಟ ಅರಬ್ ರಾಷ್ಟ್ರ ಕತಾರ್‌ನತ್ತ ನೆಟ್ಟಿದೆ.

ನ.20 ರಂದು ಆರಂಭವಾಗುವ ಟೂರ್ನಿಯಲ್ಲಿ ಪಾಲ್ಗೊಳ್ಳಲು ಒಂದೊಂದೇ ತಂಡಗಳು ದೋಹಾಕ್ಕೆ ಬಂದಿಳಿಯುತ್ತಿವೆ. ಪ್ರಮುಖ ತಂಡಗಳಾದ ಇಂಗ್ಲೆಂಡ್ ಮತ್ತು ನೆದರ್ಲೆಂಡ್ಸ್‌ನ ಆಟಗಾರರು ಮಂಗಳವಾರ ಕತಾರ್‌ಗೆ ಪ್ರಯಾಣ ಬೆಳೆಸಿದ್ದಾರೆ.

ವಲಸೆ ಕಾರ್ಮಿಕರು ಮತ್ತು ಎಲ್‌ಜಿಬಿಟಿ ಸಮುದಾಯದವರ ಬಗ್ಗೆ ಕತಾರ್ ತಳೆದಿರುವ ಧೋರಣೆಗೆ ಟೂರ್ನಿಯಲ್ಲಿ ಪಾಲ್ಗೊಳ್ಳುವ ಕೆಲವು ತಂಡಗಳು ಈಗಾಗಲೇ ಆಕ್ಷೇಪ ವ್ಯಕ್ತಪಡಿಸಿವೆ. ಮಹಿಳೆಯರ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ.

ಆದರೆ ಟೂರ್ನಿ ಆರಂಭವಾಗುವುದರೊಂದಿಗೆ ವಿವಾದಗಳು ತಣ್ಣಗಾಗಬಹುದು ಎಂಬ ವಿಶ್ವಾಸದಲ್ಲಿ ಸಂಘಟಕರು ಇದ್ದಾರೆ. ಜಪಾನ್, ಆಸ್ಟ್ರೇಲಿಯಾ ಮತ್ತು ಸ್ವಿಟ್ಜರ್ಲೆಂಡ್ ತಂಡಗಳು ಈಗಾಗಲೇ ದೋಹಾಕ್ಕೆ ಬಂದಿವೆ. ಕೆಲವು ತಂಡಗಳು ಕತಾರ್‌ನ ನೆರೆಯ ದೇಶ ಗಳಾದ ಬಹರೇನ್, ಯುಎಇಗೆ ಬಂದಿಳಿದಿವೆ. ಅರ್ಜೆಂಟೀನಾ ತಂಡದ ಆಟಗಾರರು ಅಬುಧಾಬಿಯಲ್ಲಿದ್ದು, ಅಭ್ಯಾಸ ನಡೆಸಿದ್ದಾರೆ. ಸ್ಟಾರ್ ಆಟಗಾರ ಲಯೊನೆಲ್ ಮೆಸ್ಸಿ ಅವರು ಸೋಮವಾರ ತಂಡವನ್ನು ಸೇರಿಕೊಂಡಿದ್ದಾರೆ.

'ನಮ್ಮ ತಂಡ ಸಮತೋಲನದಿಂದ ಕೂಡಿದೆ. ವಿಶ್ವಕಪ್‌ನಂತಹ ಪ್ರಮುಖ ಟೂರ್ನಿಯಲ್ಲಿ ಎಚ್ಚರಿಕೆಯ ಆಟ ಅಗತ್ಯ. ಹಂತ ಹಂತವಾಗಿ ಮೇಲಕ್ಕೇರುವುದು ನಮ್ಮ ಗುರಿ' ಎಂದು ಮೆಸ್ಸಿ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಫಿಫಾ ಅಭಿಯಾನ: 'ವಿಶ್ವವನ್ನು ಫುಟ್‌ಬಾಲ್ ಒಗ್ಗೂಡಿಸುತ್ತದೆ' ಎಂಬ ಹೆಸರಿನ ಅಭಿಯಾನವನ್ನು ಫಿಫಾ ಆರಂಭಿಸಿದ್ದು, ಖ್ಯಾತ ಆಟಗಾರರಾದ ನೇಮರ್, ಕರೀಂ ಬೆಂಜೆಮಾ ಮತ್ತು ಎಡ್ವರ್ಡ್ ಮೆಂಡಿ ಇರುವ ವಿಡಿಯೊವನ್ನು ಬಿಡುಗಡೆಗೊಳಿಸಿದೆ.

ಬೆಲ್ಜಿಯಂ ತಂಡದಲ್ಲಿ ಭಾರತದ ವಿನಯ್

ನವದೆಹಲಿ (ಪಿಟಿಐ): ಭಾರತದ ವಿನಯ್ ಮೆನನ್ ಈ ಬಾರಿಯ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಬೆಲ್ಜಿಯಂ ತಂಡದ ಭಾಗವಾಗಿದ್ದಾರೆ.

ಕೇರಳದ ವಿನಯ್, ಆಟಗಾರರ ದೈಹಿಕ ಮತ್ತು ಮಾನಸಿಕ ಆರೋಗ್ಯ ನೋಡಿಕೊಳ್ಳುವ 'ವೆಲ್‌ನೆಸ್ ಕೋಚ್' ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

'ವಿಶ್ವಕಪ್‌ನಲ್ಲಿ ಭಾಗವಹಿಸುವ ಮೂಲಕ ನನ್ನದೇ ರೀತಿಯಲ್ಲಿ ಭಾರತಕ್ಕೆ ಹೆಮ್ಮೆ ತರುವ ಕೆಲಸ ಮಾಡುತ್ತಿದ್ದು, ಖುಷಿಯಾಗುತ್ತಿದೆ' ಎಂದು ವಿನಯ್ ಹೇಳಿದ್ದಾರೆ.

ಮುಂಬೈ ಇಂಡಿಯನ್ಸ್ ಬ್ಯಾಟಿಂಗ್ ಕೋಚ್ ಆಗಿ ನೇಮಕ

ಐಪಿಎಲ್: ಪೊಲಾರ್ಡ್ ನಿವೃತ್ತಿ

ನವದೆಹಲಿ (ಪಿಟಿಐ): ಟಿ20 ಕ್ರಿಕೆಟ್‌ನ ಪ್ರಮುಖ ಆಟಗಾರರಲ್ಲಿ ಒಬ್ಬರಾಗಿರುವ ವೆಸ್ಟ್ ಇಂಡೀಸ್‌ನ ಆಲ್‌ರೌಂಡರ್ ಕೀರನ್ ಪೊಲಾರ್ಡ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್‌ಗೆ (ಐಪಿಎಲ್) 'ಗುಡ್‌ಬೈ' ಹೇಳಿದ್ದಾರೆ.

ಇದರೊಂದಿಗೆ ಒಬ್ಬ ಆಟಗಾರನಾಗಿ ಮುಂಬೈ ಇಂಡಿಯನ್ಸ್ ತಂಡದ ಜತೆಗಿನ 13 ವರ್ಷಗಳ ಅವರ ನಂಟು ಕೊನೆಗೊಂಡಂತಾಗಿದೆ. ಆದರೆ ಮುಂಬೈ ಇಂಡಿಯನ್ಸ್ ಫ್ರಾಂಚೈಸ್ ಅವರನ್ನು ಬ್ಯಾಟಿಂಗ್ ಕೋಚ್ ಆಗಿ ನೇಮಿಸಿದ್ದು, ಮುಂದಿನ ಋತುವಿನಿಂದ ಹೊಸ ಜವಾಬ್ದಾರಿ ನಿಭಾಯಿಸಲಿದ್ದಾರೆ.

ಪೊಲಾರ್ಡ್ ಅವರು 2010 ರಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಸೇರಿಕೊಂಡಿದ್ದರು. ಅಲ್ಲಿಂದ ಕಳೆದ ಋತುವಿನವರೆಗೆ ಒಟ್ಟು 189 ಪಂದ್ಯಗಳನ್ನು ಆಡಿದ್ದಾರೆ.

35 ವರ್ಷದ ಪೊಲಾರ್ಡ್ ಐಪಿಎಲ್‌ನಲ್ಲಿ ಇನ್ನೂ ಒಂದೆರಡು ವರ್ಷ ಆಡಲು ಬಯಸಿದ್ದರು. ಆದರೆ ತಂಡದ ಆಡಳಿತ ಮಂಡಳಿ ಜತೆಗಿನ ಮಾತುಕತೆಯ ಬಳಿಕ ನಿವೃತ್ತಿಯ ತೀರ್ಮಾನ ತೆಗೆದುಕೊಂಡಿದ್ದಾರೆ.

'ಇದು ಸುಲಭ ನಿರ್ಧಾರ ಅಲ್ಲ. ಇನ್ನೂ ಕೆಲವು ವರ್ಷ ಆಡುವ ಇಂಗಿತವನ್ನು ವ್ಯಕ್ತಪಡಿಸಿದ್ದೆ. ಆದರೆ ತಂಡದ ಜತೆಗಿನ ಸಮಾಲೋಚನೆ ಬಳಿಕ ಐಪಿಎಲ್‌ನಿಂದ ನಿವೃತ್ತಿಯಾಗಲು ನಿರ್ಧರಿಸಿದೆ' ಎಂದು ಪೊಲಾರ್ಡ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ತಂಡದ ಜತೆಗಿನ ನನ್ನ ಸಂಬಂಧ ಕೊನೆಗೊಳ್ಳದು. ಬ್ಯಾಟಿಂಗ್ ಕೋಚ್ ಆಗಲು ಒಪ್ಪಿಕೊಂಡಿದ್ದೇನೆ. ಅದೇ ರೀತಿ ಯುಎಇನಲ್ಲಿ ನಡೆಯಲಿರುವ ಚೊಚ್ಚಲ ಇಂಟರ್‌ನ್ಯಾಷನಲ್ ಟಿ20 ಲೀಗ್‌ನಲ್ಲಿ ಮುಂಬೈ ಎಮಿರೇಟ್ಸ್ ತಂಡದ ಪರ ಆಡುವೆ' ಎಂದು ಅವರು ಹೇಳಿದ್ದಾರೆ.



ಪ್ರೊ ಕಬಡ್ಡಿ ಲೀಗ್: ಮಿಂಚಿದ ಭರತ್, ನೀರಜ್

ಬುಲ್ಸ್‌ಗೆ ಭರ್ಜರಿ ಗೆಲುವು

ಪುಣೆ: ರೇಡರ್‌ಗಳಾದ ಭರತ್ ಮತ್ತು ನೀರಜ್ ನರ್ವಾಲ್ ಅವರ ಅಮೋಘ ಆಟದ ನೆರವಿನಿಂದ ಬೆಂಗಳೂರು ಬುಲ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಭರ್ಜರಿ ಗೆಲುವು ಪಡೆದರು.

ಬಾಲೇವಾಡಿಯ ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬುಲ್ಸ್ 49–38 ರಲ್ಲಿ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

ಸತತ ಮೂರನೇ ಗೆಲುವು ಪಡೆದ ಬೆಂಗಳೂರಿನ ತಂಡ ಪಾಯಿಂಟ್ಸ್‌ಗಳನ್ನು ಅರ್ಧಶತಕದ ಗಡಿ ದಾಟಿಸಿತು. ಒಟ್ಟು 51 ಪಾಯಿಂಟ್ಸ್‌ಗಳೊಂದಿಗೆ ಮತ್ತೆ ಅಗ್ರಸ್ಥಾನಕ್ಕೇರಿತು.

ರೇಡಿಂಗ್‌ನಲ್ಲಿ ಒಂದರ ಮೇಲೊಂದರಂತೆ ಪಾಯಿಂಟ್ಸ್ ಕಲೆಹಾಕಿದ ಭರತ್ (17 ಪಾಯಿಂಟ್ಸ್), ಬುಲ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರಿಗೆ ಉತ್ತಮ ಸಾಥ್ ನೀಡಿದ ನೀರಜ್ 13 ಪಾಯಿಂಟ್ಸ್ ಗಳಿಸಿದರು.

ಟೈಟನ್ಸ್ ತಂಡದ ಸಿದ್ಧಾರ್ಥ್ ಅವರು 18 ಪಾಯಿಂಟ್ಸ್ ಗಳಿಸಿ ಸೋಲಿನ ನಡುವೆಯೂ ಮಿಂಚಿದರು. ಎರಡನೇ ಅವಧಿಯಲ್ಲಿ ಅವರಿಗೆ ಇತರರಿಂದ ತಕ್ಕ ಸಾಥ್ ಸಿಗಲಿಲ್ಲ.

ಪ್ಯಾಂಥರ್ಸ್‌ಗೆ ಜಯ: ದಿನದ ಮೊದಲ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 32-22 ರಲ್ಲಿ ಯು ಮುಂಬಾ ತಂಡವನ್ನು ಪರಾಭವಗೊಳಿಸಿತು.

ಪ್ರಥಮಾರ್ಧದಲ್ಲಿ 19–11 ರಲ್ಲಿ ಮುನ್ನಡೆಯಲ್ಲಿದ್ದ ಜೈಪುರ ತಂಡದ ಪರ ಅರ್ಜುಲ್ ದೇಶ್ವಾಲ್ ಅವರು 13 ಪಾಯಿಂಟ್ಸ್ ಗಳಿಸಿ ಮಿಂಚಿದರು.

ಇಂದಿನ ಪಂದ್ಯಗಳು

ಪಟ್ನಾ ಪೈರೇಟ್ಸ್– ತಮಿಳ್ ತಲೈವಾಸ್

ದಬಾಂಗ್ ಡೆಲ್ಲಿ– ಯು.ಪಿ. ಯೋಧಾಸ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು	14	9	4	1	51
ಪುಣೇರಿ	14	8	4	2	49
ಜೈಪುರ	14	9	5	0	48
ಮುಂಬಾ	14	8	6	0	43
ಯುಪಿ	13	6	5	2	40
ಪಟ್ನಾ	13	6	5	2	38

ಶಸ್ತ್ರಚಿಕಿತ್ಸೆಯಲ್ಲಿ ನಿರ್ಲಕ್ಷ್ಯದಿಂದ ಫುಟ್‌ಬಾಲ್ ಆಟಗಾರ್ತಿ ಸಾವು?

• ಇ.ಟಿ.ಬಿ. ಶಿವಪ್ರಿಯನ್

ಚೆನ್ನೈ: 'ಆಟ ನನ್ನಿಂದ ಯಾವತ್ತೂ ದೂರವಾಗದು' ಎಂದು 17 ವರ್ಷದ ಫುಟ್‌ಬಾಲ್ ಆಟಗಾರ್ತಿ ಆರ್. ಪ್ರಿಯಾ ವಾರದ ಹಿಂದೆ ವಾಟ್ಸ್‌ಆ್ಯಪ್ ಸ್ಟೇಟಸ್ ಹಾಕಿಕೊಂಡಿದ್ದರು. ಈ ವೇಳೆ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಿ ಆಸ್ಪತ್ರೆಯಲ್ಲಿ ಸಾವು– ಬದುಕಿನ ಮಧ್ಯೆ ಹೋರಾಟವನ್ನು ನಡೆಸಿದ್ದರು.

ಫುಟ್‌ಬಾಲ್ ಕುರಿತು ಅದಮ್ಯ ಪ್ರೀತಿ ಇಟ್ಟುಕೊಂಡಿದ್ದ ಪ್ರಿಯಾ ಅವರು ಮಂಗಳವಾರ ಸಾವನ್ನಪ್ಪಿದ್ದಾರೆ. ವೈದ್ಯರ ಅರೆಬರೆ ಶಸ್ತ್ರಚಿಕಿತ್ಸೆಯಿಂದಾಗಿ ಈ ಸಾವು ಸಂಭವಿಸಿದೆ ಎಂಬ ಶಂಕೆ ವ್ಯಕ್ತವಾಗಿದೆ.

ಬಿಪಿಎಸ್‌ಸಿ (ದೈಹಿಕ ಶಿಕ್ಷಣ) ವ್ಯಾಸಂಗ ಮಾಡುತ್ತಿದ್ದ ಪ್ರಿಯಾ ನವೆಂಬರ್ 7ರಂದು ಮೊಣಕಾಲಿನ ಅಸ್ಥಿರಜ್ಜು ಗಾಯದ ಚಿಕಿತ್ಸೆಗಾಗಿ ಚೆನ್ನೈನಲ್ಲಿರುವ ಪೆರಿಯಾರ್ ನಗರದ ಸರ್ಕಾರಿ ಪೆರಿಫೆರಲ್ ಆಸ್ಪತ್ರೆಗೆ ದಾಖಲಾಗಿದ್ದರು.

ಈ ವೇಳೆ ಕಾಲಿಗೆ ಸೂಕ್ತವಾಗಿ ಪಟ್ಟಿಯನ್ನು ಕಟ್ಟದ ಕಾರಣ ರಕ್ತಚಲನೆಯಲ್ಲಿ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಹೀಗಾಗಿ ಪ್ರಿಯಾ ಅವರ ಬಲಗಾಲನ್ನು ಕತ್ತರಿಸಬೇಕಾಗಿ ಬಂದಿತ್ತು

ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ರಾಜೀವ್ ಗಾಂಧಿ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಬೆಳಗಿನ ಜಾವ ಅವರು ಸಾವನ್ನಪ್ಪಿದ್ದಾರೆ.

ಚಿಕಿತ್ಸೆಯಲ್ಲಿ ನಿರ್ಲಕ್ಷ್ಯ ತೋರಿದ ಹಿನ್ನೆಲೆಯಲ್ಲಿ ಇಬ್ಬರು ವೈದ್ಯರನ್ನು ಸರ್ಕಾರ ಅಮಾನತು ಮಾಡಿದೆ. ಅವರ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆ.

ಶೂಟಿಂಗ್: ಭಾರತಕ್ಕೆ ಮತ್ತೆ ನಾಲ್ಕು ಚಿನ್ನ

ನವದೆಹಲಿ (ಪಿಟಿಐ): ಭಾರತ ತಂಡದವರು ಕೊರಿಯಾದ ಡೇಗುನಲ್ಲಿ ನಡೆಯುತ್ತಿರುವ ಏಷ್ಯನ್ ಏರ್‌ಗನ್ ಚಾಂಪಿಯನ್‌ಷಿಪ್‌ನ ಏರ್ ಪಿಸ್ತೂಲ್ ವಿಭಾಗದ ಎಲ್ಲ ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು.

ಪುರುಷರ 10 ಮೀಟರ್ಸ್ ಏರ್ ಪಿಸ್ತೂಲ್‌ನಲ್ಲಿ ಶಿವ ನರ್ವಾಲ್ ಮತ್ತು ಜೂನಿಯರ್ ಪುರುಷರ ವಿಭಾಗದಲ್ಲಿ ಸಾಗರ್ ಡಾಂಗಿ ಅಗ್ರಸ್ಥಾನ ಗಳಿಸಿದರು.

ಸಂದೀಪ್ ಬಿಷ್ಣೋಯಿ, ಸಾಹಿಲ್ ಮತ್ತು ಅಮಿತ್ ಶರ್ಮಾ ಅವರನ್ನೊಳಗೊಂಡ ಯೂತ್ ಪುರುಷರ ತಂಡವು 10 ಮೀ. ಏರ್ ಪಿಸ್ತೂಲ್ ಫೈನಲ್‌ನಲ್ಲಿ 16–8ರಿಂದ ಕೊರಿಯಾ ತಂಡವನ್ನು ಸೋಲಿಸಿ ಚಿನ್ನಕ್ಕೆ ಮುತ್ತಿಟ್ಟಿತು.

ಇದೇ ಸ್ಪರ್ಧೆಯಲ್ಲಿ ಕನಿಷ್ಕಾ ದಾಗರ್, ಯಶವಿ ಜೋಷಿ ಮತ್ತು ಹರ್ನವದೀಪ್ ಕೌರ್ ಅವರಿದ್ದ ಭಾರತದ ಯೂತ್ ಮಹಿಳಾ ತಂಡವೂ ಚಿನ್ನ ಜಯಿಸಿತು.

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ರಾಜೇಶ್ವರಿಗೆ ಗೌರವ ಡಾಕ್ಟರೇಟ್

ವಿಜಯಪುರ: ಭಾರತ ಮಹಿಳಾ ಕ್ರಿಕೆಟ್ ತಂಡದ ಸ್ಪಿನ್ನರ್ ಕರ್ನಾಟಕದ ರಾಜೇಶ್ವರಿ ಗಾಯಕವಾಡ ಅವರಿಗೆ ರಾಜಸ್ಥಾನದ ಉದಯಪುರದ ಶ್ರೀಪದಮಪತ ಸಿಂಘಾನಿಯಾ ವಿಶ್ವವಿದ್ಯಾಲಯ (ಎಸ್.ಪಿ.ಎಸ್.ಯು) ಗೌರವ ಡಾಕ್ಟರೇಟ್ ನೀಡಿದೆ.

ಉದಯಪುರ ವಿ.ವಿಯಲ್ಲಿ ಇತ್ತೀಚೆಗೆ ನಡೆದ ಘಟಿಕೋತ್ಸವದಲ್ಲಿ ಎಸ್.ಪಿ.ಎಸ್.ಯು ಅಧ್ಯಕ್ಷ ಡಾ.ಪದ್ಮಕಲಿ ಬ್ಯಾನರ್ಜಿ ಹಾಗೂ ಡಾ.ನಿಧಿಪತಿ ಸಿಂಘಾನಿಯಾ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ಸದರ್ನ್ ಅಲ್ಫಾ ಸ್ಪೋರ್ಟ್ಸ್‌ಗೆ ಜಯ

ಬೆಂಗಳೂರು: ಉತ್ತಮ ಆಟವಾಡಿದ ಸದರ್ನ್ ಅಲ್ಫಾ ಸ್ಪೋರ್ಟ್ಸ್ ಅಕಾಡೆಮಿ ತಂಡದವರು ಕರ್ನಾಟಕ ರಾಜ್ಯ ಸಿ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಜಯ ಗಳಿಸಿತು.ಮಂಗಳವಾರ ನಡೆದ ಪಂದ್ಯದಲ್ಲಿ 2–1ರಿಂದ ಗರುಡ ಹಾಕಿ ಕ್ಲಬ್ ತಂಡವನ್ನು ಸೋಲಿಸಿತು. ವಿಜೇತ ತಂಡಕ್ಕಾಗಿ ಗೋವಿಂದರಾಜು (9ನೇ ನಿಮಿಷ) ಮತ್ತು ಸುರೇಶ್ (36ನೇ ನಿ.) ಗೋಲು ಹೊಡೆದರು.

ಉನ್ನತಿ ಶ್ರೇಷ್ಠ ಅಥ್ಲೀಟ್

ಬೆಂಗಳೂರು: ಕರ್ನಾಟಕದ ಉನ್ನತಿ ಅಯ್ಯಪ್ಪ ಅವರು ಅಸ್ಸಾಂನ ಗುವಾಹಟಿಯಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್‌ನ 18 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಶ್ರೇಷ್ಠ ಅಥ್ಲೀಟ್ ಎನಿಸಿಕೊಂಡರು.

ಶ್ರೀಯಾ ಆರ್. ಮತ್ತು ಅಖಿಲೇಶ್ ಕೂಟದಲ್ಲಿ ಮಂಗಳವಾರ ಚಿನ್ನದ ಪದಕ ಗೆದ್ದುಕೊಂಡರು. ಶ್ರೀಯಾ ಬಾಲಕಿಯರ 400 ಮೀ. ಹರ್ಡಲ್ಸ್‌ನಲ್ಲಿ 1 ನಿ. 2.12 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಪಡೆದರು. ಅಖಿಲೇಶ್, 20 ವರ್ಷದೊಳಗಿನವರ ಟ್ರಿಪಲ್ ಜಂಪ್‌ನಲ್ಲಿ 15.99 ಮೀ. ಸಾಧನೆಯೊಂದಿಗೆ ಸ್ವರ್ಣ ತಮ್ಮದಾಗಿಸಿಕೊಂಡರು. 5000 ಮೀ.ನಲ್ಲಿ ನರಸಿಂಗ್ ಪಟೇಲ್ ಬೆಳ್ಳಿ, ಇದೇ ವಿಭಾಗದಲ್ಲಿ ಅರುಣ್ ಎಸ್.ಎಂ. ಕಂಚು ತಮ್ಮದಾಗಿಸಿಕೊಂಡರು. ಬಾಲಕಿಯರ 2000 ಮೀ. ಓಟದಲ್ಲಿ ಪ್ರಣತಿ ಕಂಚು, 800 ಮೀ. ವಿಭಾಗದಲ್ಲಿ ರಿತುಶ್ರೀ ಕಂಚು ಜಯಿಸಿದರು. ಹೈಜಂಪ್‌ನಲ್ಲಿ ಗೌತಮಿ ಮತ್ತು 200 ಮೀ. ಓಟದಲ್ಲಿ ನಯನ್ ಜಿ.ಕೆ. ಬೆಳ್ಳಿ ಜಯಿಸಿದರು.

ಹರ್ಮನ್‌ಪ್ರೀತ್‌ಗೆ ಹಾಕಿ ನಾಯಕತ್ವ

ನವದೆಹಲಿ (ಪಿಟಿಐ): ಅನುಭವಿ ಡ್ರ್ಯಾಗ್‌ಫ್ಲಿಕರ್ ಹರ್ಮನ್‌ಪ್ರೀತ್ ಸಿಂಗ್ ಅವರು ಆಸ್ಟ್ರೇಲಿಯಾ ಪ್ರವಾಸಕ್ಕೆ ತೆರಳಲಿರುವ ಭಾರತ ಹಾಕಿ ತಂಡಕ್ಕೆ ನಾಯಕರಾಗಿ ನೇಮಕಗೊಂಡಿದ್ದಾರೆ. ನವೆಂಬರ್ 26ರಿಂದ ನಡೆಯಲಿರುವ ಸರಣಿಗೆ 23 ಮಂದಿಯ ತಂಡವನ್ನು ಮಂಗಳವಾರ ಹಾಕಿ ಇಂಡಿಯಾ ಪ್ರಕಟಿಸಿದೆ.

ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಟೂರ್ನಿಯ ಪೂರ್ವಸಿದ್ಧತೆಯಾಗಿ ಈ ಸರಣಿ ನಡೆಯಲಿದ್ದು, ಐದು ಪಂದ್ಯಗಳು ನಿಗದಿಯಾಗಿವೆ. ಜನವರಿ 13ರಿಂದ 29ರವರೆಗೆ ಭುವನೇಶ್ವರ ಮತ್ತು ರೂರ್ಕೆಲಾದಲ್ಲಿ ವಿಶ್ವಕಪ್ ನಡೆಯಲಿದೆ.

ಭಾರತ ತಂಡ: ಗೋಲ್‌ಕೀಪರ್ಸ್: ಕೃಷ್ಣ ಬಹದ್ದೂರ್ ಪಾಠಕ್, ಶ್ರೀಜೇಶ್ ಪಿ.ಆರ್. **ಡಿಫೆಂಡರ್ಸ್:** ಜರ್ಮನ್‌ಪ್ರೀತ್ ಸಿಂಗ್, ಸುರೇಂದರ್ ಕುಮಾರ್, ಹರ್ಮನ್ ಪ್ರೀತ್ ಸಿಂಗ್ (ನಾಯಕ), ಅಮಿತ್ ರೋಹಿದಾಸ್ (ಉಪನಾಯಕ), ಜುಗರಾಜ್ ಸಿಂಗ್, ಮನದೀಪ್ ಮೋರ್, ನೀಲಮ್ ಕ್ಸೆಸ್, ವರುಣ್ ಕುಮಾರ್ **ಮಿಡ್‌ಫೀಲ್ಡರ್ಸ್:** ಸುಮಿತ್, ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ಶಂಶೇರ್ ಸಿಂಗ್, ನೀಲಕಂಠ ಶರ್ಮಾ, ರಾಜ್‌ಕುಮಾರ್ ಪಾಲ್, ಮೊಹಮ್ಮದ್ ರಾಹೀಲ್ ಮೌಸೀನ್, ಆಕಾಶದೀಪ್ ಸಿಂಗ್, ಗುರ್ಜಂತ್ ಸಿಂಗ್ **ಫಾರ್ವರ್ಡ್ಸ್:** ಮನ್‌ದೀಪ್ ಸಿಂಗ್, ಅಭಿಷೇಕ್, ದಿಲ್‌ಪ್ರೀತ್, ಸುಖಜೀತ್ ಸಿಂಗ್.

ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಸ್ಥಳಾಂತರ

ನವದೆಹಲಿ (ಪಿಟಿಐ): ಚೀನಾದ ಗುವಾಂಗ್‌ಜುನಲ್ಲಿ ನಿಗದಿಯಾಗಿದ್ದ ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿಯನ್ನು ಕೊರೊನಾ ಪ್ರಕರಣಗಳಲ್ಲಿ ಏರಿಕೆಯ ಕಾರಣ ಬ್ಯಾಂಕಾಕ್‌ಗೆ ಸ್ಥಳಾಂತರಿಸಲಾಗಿದೆ. ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಮಂಗಳವಾರ ಈ ವಿಷಯ ತಿಳಿಸಿದೆ.

ಡಿ. 7ರಿಂದ ಟೂರ್ನಿಯು ಬ್ಯಾಂಕಾಕ್‌ನ ನಿಮಿಬುತರ್ ಅರೆನಾದಲ್ಲಿ ನಡೆಯಲಿದೆ. ಟೂರ್ನಿಯಲ್ಲಿ ಸ್ಪರ್ಧಿಸುವ ಕ್ರೀಡಾಪಟುಗಳ ಹೆಸರನ್ನು ಆಸ್ಟ್ರೇಲಿಯಾ ಓಪನ್ ಟೂರ್ನಿಯ ನಂತರ ಅಂತಿಮಗೊಳಿಸಲಾಗುವುದು ಎಂದು ಬಿಡಬ್ಲ್ಯುಎಫ್ ತಿಳಿಸಿದೆ.

ಯೂತ್ ಬಾಕ್ಸಿಂಗ್: ವಿಶ್ವನಾಥ್‌ಗೆ ಜಯ

ನವದೆಹಲಿ (ಪಿಟಿಐ): ಭಾರತದ ವಿಶ್ವನಾಥ್ ಸುರೇಶ್ ಅವರು ಸ್ಪೇನ್‌ನಲ್ಲಿ ನಡೆಯುತ್ತಿರುವ ಐಬಿಎ ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಮಂಗಳವಾರ ನಡೆದ ಪುರುಷರ 48 ಕೆ.ಜಿ. ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ ಅವರು 3–2 ರಲ್ಲಿ ಐರ್ಲೆಂಡ್‌ನ ಪಾಟ್ಸ್ ಜಾಯ್ಸ್ ವಿರುದ್ಧ ಗೆದ್ದರು.

ವಿಶ್ವನಾಥ್ ಈ ವರ್ಷದ ಆರಂಭದಲ್ಲಿ ಜೋರ್ಡಾನ್‌ನಲ್ಲಿ ನಡೆದಿದ್ದ ಎಎಸ್‌ಬಿಸಿ ಏಷ್ಯನ್ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರು.

13 ಪುರುಷರು ಮತ್ತು 12 ಮಹಿಳೆಯರು ಸೇರಿದಂತೆ ಭಾರತದ ಒಟ್ಟು 25 ಬಾಕ್ಸರ್‌ಗಳು ಈ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿದ್ದಾರೆ.

ಪೋರ್ಚುಗಲ್ ಫುಟ್‌ಬಾಲ್ ತಂಡದ ಹೆಮ್ಮೆಯ ಪ್ರಾದೇಶಿಕ ಪ್ರಾಯೋಜಕರು ಅಮುಲ್

ವಿಜಯ್ ಹಜಾರೆ ಕ್ರಿಕೆಟ್: ಕರ್ನಾಟಕ ಜಯದ 'ಹ್ಯಾಟ್ರಿಕ್'

ವಾಸುಕಿ ಕೌಶಿಕ್

ಕೋಲ್ಕತ್ತ: ವಾಸುಕಿ ಕೌಶಿಕ್ (18ಕ್ಕೆ 3) ಮತ್ತು ವಿದ್ವತ್ ಕಾವೇರಪ್ಪ (17ಕ್ಕೆ 2) ಅವರ ಅಮೋಘ ಬೌಲಿಂಗ್ ಹಾಗೂ ನಾಯಕ ಮಯಂಕ್ ಅಗರವಾಲ್ (53) ಅವರ ಅರ್ಧಶತಕದ ಬಲದಿಂದ ಕರ್ನಾಟಕ ತಂಡವು ಜಯ ಸಾಧಿಸಿತು.

ಮಂಗಳವಾರ ಇಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಎಲೀಟ್ ಬಿ ಗುಂಪಿನ ಪಂದ್ಯದಲ್ಲಿ ಕರ್ನಾಟಕ ಆರು ವಿಕೆಟ್‌ಗಳಿಂದ ಜಾರ್ಖಂಡ್ ತಂಡಕ್ಕೆ ಸೋಲುಣಿಸಿತು. ಇದರೊಂದಿಗೆ ಟೂರ್ನಿಯಲ್ಲಿ 'ಹ್ಯಾಟ್ರಿಕ್' ಜಯ ಸಾಧಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಜಾರ್ಖಂಡ್ ತಂಡ 40.4 ಓವರ್‌ಗಳಲ್ಲಿ ಕೇವಲ 107 ರನ್ ಗಳಿಗೆ ಎಲ್ಲ ವಿಕೆಟ್ ಒಪ್ಪಿಸಿತು. ಕರ್ನಾಟಕ ಈ ಗುರಿಯನ್ನು 26.3 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ತಲುಪಿತು.

ಜಾರ್ಖಂಡ್ ತಂಡದ ಆರಂಭ ಉತ್ತಮವಾಗಿರಲಿಲ್ಲ. 10 ರನ್‌ಗಳಾಗುವಷ್ಟರಲ್ಲಿ 4 ವಿಕೆಟ್‌ಗಳು ಪತನವಾಗಿದ್ದವು. ಮಧ್ಯಮ ಕ್ರಮಾಂಕದಲ್ಲಿ ಕುಮಾರ್ ಕುಶಾಗ್ರ (56) ಆಸರೆಯಾಗದಿದ್ದರೆ ತಂಡವು ಇನ್ನೂ ಕಳಪೆ ಮೊತ್ತಕ್ಕೆ ಕುಸಿಯುವ ಸಾಧ್ಯತೆಯಿತ್ತು. ಸೌರಭ್ ತಿವಾರಿ (11) ಎರಡಂಕಿ ದಾಟಿದ ಇನ್ನೊಬ್ಬ ಆಟಗಾರ. ಕರ್ನಾಟಕದ ಮನೋಜ್ ಭಾಂಡಗೆ (25ಕ್ಕೆ 2) ಕೂಡ ಬೌಲಿಂಗ್‌ನಲ್ಲಿ ಮಿಂಚಿದರು.

ಗುರಿ ಬೆನ್ನತ್ತಿದ ಕರ್ನಾಟಕಕ್ಕೆ ಈ ಮೊತ್ತ ಸವಾಲೆನಿಸಲೇ ಇಲ್ಲ. ಆರ್. ಸಮರ್ಥ್ (1) ಬೇಗನೇ ವಿಕೆಟ್ ಒಪ್ಪಿಸಿದರೂ ಎರಡನೇ ವಿಕೆಟ್ ಜೊತೆಯಾಟದಲ್ಲಿ ಮಯಂಕ್ ಮತ್ತು ನಿಕಿನ್ ಜೋಸ್ (24) 63 ರನ್ ಸೇರಿಸಿ ಆಸರೆಯಾದರು. ಮನೀಷ್ ಪಾಂಡೆ (15) ಮತ್ತು ಮನೋಜ್ (ಔಟಾಗದೆ 13) ಗೆಲುವಿಗೆ ಕೊಡುಗೆ ನೀಡಿದರು.

ಕರ್ನಾಟಕ ತನ್ನ ಮುಂದಿನ ಪಂದ್ಯವನ್ನು ಗುರುವಾರ ದೆಹಲಿ ಎದುರು ಆಡಲಿದೆ.

ಸಂಕ್ಷಿಪ್ತ ಸ್ಕೋರು: ಜಾರ್ಖಂಡ್: 40.4 ಓವರ್‌ಗಳಲ್ಲಿ 107 (ಸೌರಭ್ ತಿವಾರಿ 11, ಕುಮಾರ್ ಕುಶಾಗ್ರ 56; ವಿದ್ವತ್ ಕಾವೇರಪ್ಪ 17ಕ್ಕೆ 2, ವಾಸುಕಿ ಕೌಶಿಕ್ 18ಕ್ಕೆ 3, ರೋನಿತ್ ಮೋರೆ 17ಕ್ಕೆ 1, ಮನೋಜ್ ಭಾಂಡಗೆ 25ಕ್ಕೆ 2, ಕೃಷ್ಣಪ್ಪ ಗೌತಮ್ 19ಕ್ಕೆ 1) ಕರ್ನಾಟಕ: 26.3 ಓವರ್‌ಗಳಲ್ಲಿ 4 ವಿಕೆಟ್‌ಗೆ 108 (ಮಯಂಕ್ ಅಗರವಾಲ್ 53, ನಿಕಿನ್ ಜೋಸ್ 24, ಮನೀಷ್ ಪಾಂಡೆ 15, ಮನೋಜ್ ಭಾಂಡಗೆ ಔಟಾಗದೆ 13; ರಾಹುಲ್ ಶುಕ್ಲಾ 11ಕ್ಕೆ 1, ಶಹಬಾಜ್ ನದೀಂ 38ಕ್ಕೆ 2, ಅನುಕೂಲ್ ರಾಯ್ 19ಕ್ಕೆ 1). ಫಲಿತಾಂಶ: ಕರ್ನಾಟಕ ತಂಡಕ್ಕೆ ಆರು ವಿಕೆಟ್‌ಗಳ ಜಯ